HITABODHINI

From october 1884 to April 1885

ಗೃಹಸ್ಥಾಶ್ರಮ.

ಇಲಿಗೆ ಹೆದರಿ ಹುಲೀ ಬಾಯಲ್ಲಿ ಬಿದ್ದ.

ಜರ್ಮನ್ ದೇಶಜರು ೨೫ ವರ್ಷಗಳವರಿಗೂ ಕಠಿಣವಾದ ಬ್ರಹ್ಮಚರ್ಯಾಶ್ರಮವನ್ನು ಆಚರಿಸಿ ಅನಂತರದಲ್ಲಿ ವಿವಾಹ ಮಾಡಿಕೊಳ್ಳುವರು. ನಮ್ಮ ದೇಶದಲ್ಲಿಯೂ ಪೂರ್ವಿಕರು ೩೦ ವರ್ಷಗಳವರಿಗೂ ಬ್ರಹ್ಮಚಾರಿಗಳಾಗಿದ್ದು ಆಮೇಲೆ ಮದುವೆಯಾಗುತ್ತಿದ್ದರು. ಈ ಕಾರಣದಿಂದಲೇ ಅವರು ದೃಢಕಾಯರಾಗಿಯೂ ಆರೋಗ್ಯಭಾಗ್ಯವುಳ್ಳವರಾಗಿಯೂ ಇರುತ್ತಿದ್ದರು. ಈ ಕಾಲದಲ್ಲಾದರೂ ಸರಿಯಾದ ಪ್ರಾಯಬರುವದಕ್ಕೆ ಮುಂಚೆಯೇ ಇವರಿಗೆ ತಂದೆತಾಯಿಗಳು ಮದುವೆಮಾಡುವರು. ಇಂಥಾ ದಂಪತಿಗಳು ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುವದಲ್ಲದೆ ರೋಗಿಗಳೂ ದುರ್ಬಲರೂ ಆದ ಮಕ್ಕಳನ್ನು ಪಡೆಯುವರು. ಅನಂತರದಲ್ಲಿ ಈ ಮಕ್ಕಳೂ ಕೂಡ ಹೀಗೆಯೇ ತಮಗಿಂತಲೂ ದುರ್ಬಲರೂ ರೋಗಿಗಳೂ ಆದ ಮಕ್ಕಳನ್ನು ಪಡೆಯುವರು. ಹೀಗೆ ಸ್ತ್ರೀಪುರುಷ ಜಾತಿಗಳೇ ಕ್ರಮೇಣ ಕ್ಷಯಿಸುತ್ತಾ ಬರುವವು. ಈ ಕಾರಣದಿಂದಲೇ ಈ ಕಾಲದ ಜನರೆಲ್ಲರೂ ನಮ್ಮ ಹಿರಿಯರಿಗಿದ್ದ ಶಕ್ತಿಯು ನಮಗಿಲ್ಲವೆಂಬದಾಗಿ ಹೇಳಿಕೊಳ್ಳುವರು.

ವಯಸ್ಸಿನಲ್ಲಿ ಅತ್ಯಂತ ತಾರತಮ್ಯವುಳ್ಳ ಸ್ತ್ರೀಪುರುಷರು ಗೃಹಸ್ಥಾಶ್ರಮಧರ್ಮಕ್ಕೆ ಅಯೋಗ್ಯರು. ಇಂಥಾ ದಾಂಪತ್ಯಗಳು ನಡೆದರೆ ಅವರಿಗೆ ಪರಸ್ಪರಾನುರಾಗವಿಲ್ಲದೆ ಕಲಹಗಳೂ ದುಃಖಗಳೂ ಉಂಟಾಗಿ ನಾನಾಸಂಕಟಗಳು ಪ್ರಾಪ್ತವಾಗುವವು. ಇದಲ್ಲದೆ ಇವರಿಗಾಗುವ ಮಕ್ಕಳೂ ಕೂಡ ದೇಹ ದಾರ್ಢ್ಯವಿಲ್ಲದವರಾಗಿಯೂ ಬುದ್ಧಿ ಹೀನರಾಗಿಯೂ ಇರುವರು. ಆದದರಿಂದ ಆರೋಗ್ಯವನ್ನೂ ಸುಖವನ್ನೂ ಅಪೇಕ್ಷಿಸತಕ್ಕವರು ಉಷ್ಣ ಬಂದೊಂದು ೨೫ ಸ ೩೫ ವರ್ಷಗಳೊಳಗಾಗಿ ಗೃಹಸ್ಥಾಶ್ರಮಧರ್ಮವನ್ನು ಳು ೩೬ ಸೇರು ನೀರನ್ನು ಕಾದಗಳ ವರಿಗೂ ತಡೆದು ಅನಂತರದಲ್ಲಿ ಆ ಅಲ್ಪವಾದ ನೀರನ್ನೇ ಕುಡಿಸಬೇಕು. ಇವ್ವ ೧೦೦ ವರ್ಷಗಳ ವರಿಗೂ ಕಾಯಗಳನ್ನು ಬೇಯಿಸದೆ ತಿನ್ನಿಸುವ ಪಕ್ಷದಲ್ಲಿ ಗ್ಯಾಪ್ರೂ ಅವಿಚ್ಛಿನ್ನವಾಗಿ ಇರು ಪ್ರಕಾರ ನೀರನ್ನು ಹೆಚ್ಚಿಸುತ್ತಾ ಬರಬೇಕು. ಮೇಲೆ ಹೇಳಿದ ಹಾಗೆ ಸುಖಿ

ಗಳಾಗಿ ಇರಬೇಕಾದರೆ ೨೧ ವರ್ಷಗಳವರೆಗೂ ಗೃಹಸ್ಥಾಶ್ರಮಧರ್ಮದಲ್ಲಿ ಪ್ರವರ್ತಕರಾಗಬಾರದು ; ೨೪ ವರ್ಷಗಳವರೆಗೂ ತಡೆದರೆ ಮತ್ತೂ ಉತ್ತಮ.

ವಿವಾಹವಮಾಡಿಕೊಳ್ಳುವ ಗಂಡಹೆಂಡರಿಗೆ ೬ ವರ್ಷಗಳಿಗಿಂತಲೂ ಹೆಚ್ಚಾದ ತಾರತಮ್ಯವು ಇರಬಾರದು ಅಂದರೆ : ೩೦ ವರ್ಷ ವಯಸ್ಸುಳ್ಳ ಗಂಡಸು ೨೪ ವರ್ಷ ವಯಸ್ಸುಳ್ಳ ಹೆಂಗಸನ್ನು ಸ್ವೀಕರಿಸಿದರೆ ಇವರಿಗೆ ಆರೋಗ್ಯವೇ ಮೊದಲಾದ ಮೇಲೆ ಹೇಳಿದ ಸಂಪತ್ತುಗಳೆಲ್ಲಾ ಪ್ರಾಪ್ತವಾಗುವವು. ಇವರಿಗೆ ಹುಟ್ಟಿದ ಮಕ್ಕಳೆಲ್ಲಾ ಕೋಮಲವಾಗಿ ಬೆಳೆದು ಅಪರಿಮಿತವಾದ ಬುದ್ಧಿಶಕ್ತಿಯನ್ನೂ ಕಾಯಶಕ್ತಿಯನ್ನೂ ಹೊಂದುವರು. ಈ ರೀತಿಯಾಗಿ ವೈದ್ಯಶಾಸ್ತ್ರಜ್ಞರು ಸಿದ್ಧಾಂತವನ್ನು ಮಾಡಿ ಇದ್ದಾರೆ. ಈ ಸಿದ್ಧಾಂತವು ವೈದ್ಯಶಾಸ್ತ್ರಸಂಮತವಾದದ್ದಾದಾಗ್ಯೂ ಧರ್ಮಶಾಸ್ತ್ರದಿಂದ ಬದ್ಧರಾದ ನಾವು ಇದನ್ನು ಅನುಸರಿಸುವದು ಬಹು ಕಷ್ಟ. ಆದರೂ ಮೇಲಿನ ಸಿದ್ಧಾಂತಕ್ಕೆ ಸರಿಯಾಗಿ ನಡೆದುಕೊಳ್ಳುವದಕ್ಕೆ ಒಂದು ಉಪಾಯ ಉಂಟು. ಎಲ್ಲಾ ದೇಶಗಳಲ್ಲಿಯೂ ವಿವಾಹವೆಂದರೆ ನಿಷೇಕವೆಂದು ತಾತ್ಪರ್ಯವು. ನಮ್ಮವರಲ್ಲಿ ಈ ಯೆರಡಕ್ಕೂ ವ್ಯತ್ಯಾಸವುಂಟು. ಈ ತಾರತಮ್ಯದ ಸಹಾಯದಿಂದಲೇ, ನಾವು ಧರ್ಮಶಾಸ್ತ್ರಕ್ಕೆ ಅನುಸಾರವಾಗಿಯೇ, ಸ್ತ್ರೀಯು ಪುಷ್ಪವತಿಯಾಗುವದಕ್ಕೆ ಮೊದಲೇ ಮದುವೆಯಾಗಬಹುದು. ಹೀಗೆ ಮದುವೆ ಮಾಡಿಕೊಂಡವರೆಲ್ಲರೂ ೨೧ ವರ್ಷಗಳಾದ ಮೇಲೆ ನಿಷೇಕ ಮಾಡಿಕೊಂಡರೆ ನಮ್ಮ ಧರ್ಮಶಾಸ್ತ್ರಕ್ಕೆ ಲೋಪವಿಲ್ಲದೆಯೂ ವೈದ್ಯಶಾಸ್ತ್ರಕ್ಕೆ ಅನುಸಾರವಾಗಿಯೂ ನಡೆಯಬಹುದು. ಇದರಿಂದ ಮೇಲೆ ಹೇಳಿದ ಕೇಡುಗಳೆಲ್ಲಾ ತೊಲಗುವವು.

೨. ಆರೋಗ್ಯ.

ಅಡಿಗೆಗೂ, ಸ್ನಾನಪಾನ
ಕುಡಿಯುವದಕ್ಕೂ, ನಿರ್ಮಲ
ಜಲವನ್ನು, ಮಲಿನವಾದ ಪ್ರಾಂತ್ಯ

ಹುಣಸೆಮರದ ಕೆಳಗೆ ಮಜ್ಜಿಗೆ ಕುಡಿದರೆ ನಾಚಿಕೆ ಕೇಡಾಗದೆ ಹೋದೀತೆ?

ಗಳಿಂದ ನೀರನ್ನು ತಂದು ಎಲ್ಲಾ ಬೀದಿಗಳಿಗೂ ಬಿಡುತ್ತಾರೆ. ದೊಡ್ಡ ಮನುಷ್ಯರು ಅಲ್ಲಿಂದ ತಮ್ಮ ಮನೆಗಳಿಗೆ ನಲ್ಲಿಗಳನ್ನು ಇಡಿಸಿಕೊಂಡಿದ್ದಾರೆ. ಇಂಥಾ ಪಟ್ಟಣಗಳಲ್ಲಿ ಯಾವಾಗಲೂ ನೀರಿಲ್ಲದೆ ಇರುವದಿಲ್ಲ. ಆದರೆ ಇತರ ಸ್ಥಳಗಳಲ್ಲಿ ಆಳವಾದ ಬಾವಿಯ ನೀರನ್ನು ಸೋದಿ ಉಪಯೋಗಿಸುವದು ಉತ್ತಮ. ಈ ಮೇಲೆ ಹೇಳಿದ ಕೆಲಸಗಳಿಗೆಲ್ಲಾ ಬೇಕಾದಷ್ಟು ನೀರನ್ನು ಸೋದುವದಕ್ಕೆ ಉಪೇಕ್ಷೆಮಾಡಿ, ಮನೇ ಬಚ್ಚಲು ಮುಂತಾದವುಗಳನ್ನೆಲ್ಲಾ ತುಂಬಾ ನೀರುಹಾಕಿ ತೊಳೆಯದಿದ್ದರೆ, ಅಲ್ಲಿ ದುರ್ವಾಸನೆ ಹುಟ್ಟಿ ಅನಾರೋಗ್ಯವನ್ನು ಉಂಟುಮಾಡುವದು. ಅಡಿಗೆ ಮಾಡುವದಕ್ಕೆ ಬೇಕಾದದಹಾಗೆ ನಿರ್ಮಲವಾದ ನೀರು ಇರಬೇಕು. ತರಕಾರಿ ಮುಂತಾದ ಪದಾರ್ಥಗಳನ್ನು ಬೇಯಿಸುವದಕ್ಕೆ ಮೊದಲೇ ತೊಳೆಯ ಬೇಕು. ಹಾಗಿಲ್ಲದಿದ್ದರೆ ಅವುಗಳ ಮೇಲೆ ಸೂಕ್ಷ್ಮವಾದ ಹುಳಗಳಿದ್ದು ಅವುಗಳೊಂದಿಗೆ ಬೆಂದು ನಮ್ಮ ಶರೀರವನ್ನು ಸೇರುವವು. ಸಾಧಾರಣವಾಗಿ ಅಡಿಗೆಗೆ ಆಳವಾದಬಾವಿಯ ನೀರು ಒಳ್ಳೇದು. ಈ ನೀರು ಉಪ್ಪಾಗಿದ್ದರೂ ಬಾಧಕವಿಲ್ಲ. ಬೇಯುವ ಪದಾರ್ಥಗಳನ್ನುಮಾತ್ರ ಸೀನೀರಿನಲ್ಲಿ ಬೇಯಿಸಿ ಮಿಕ್ಕದ್ದಕ್ಕೆಲ್ಲಾ ಮೇಲೆ ಹೇಳಿದಂಥಾ ಬಾವಿಯ ನೀರನ್ನು ಬಳಸುವದು ಉತ್ತಮ.

ಪಾನಮಾಡುವದಕ್ಕೆ ನೀರು ಮಕ್ಕಳಿಗಿಂತ ಹೆಚ್ಚಾಗಿ ದೊಡ್ಡ ಹೆಂಗಸರಿಗೂ ಇವರಿಗಿಂತ ಹೆಚ್ಚಾಗಿ ಗಂಡಸರಿಗೂ ಬೇಕು. ಬಹಳ ಸೆಖೆಯೂ ಬಹಳ ಚಳಿಯೂ ಇಲ್ಲದಕಾಲದಲ್ಲಿ ಒಬ್ಬ ಮನುಷ್ಯನಿಗೆ ೧ಸೇರುನೀರು ಸಾಕು. ಬಹಳ ಬಿಸಿಲಕಾಲದಲ್ಲಿ ಇದಕ್ಕಿಂತ ಸ್ವಲ್ಪ ಹೆಚ್ಚಾದರೂ ಚಳಿಗಾಲದಲ್ಲಿ ಸ್ವಲ್ಪ ಕಡಮೆಯಾದರೂ ಬಾಧಕವಿಲ್ಲ. ದಿನ ೧ಕ್ಕೆ ಕುದರೆ, ಎತ್ತು, ಹಸುಗಳು ಒಂದೊಂದು ೨೫ ಸೇರು ನೀರನ್ನೂ, ಆನೆಗಳು ೯೦ ಸೇರನ್ನೂ, ಒಂಟೆಗಳು ೪೦-೫೦ ಸೇರು ನೀರನ್ನೂ ಕುಡಿಯುವವು. ಈ ಮೃಗಗಳಿಗೂ ನಿರ್ಮಲವಾದ ನೀರನ್ನೇ ಕುಡಿಸಬೇಕು. ಇವುಗಳಿಗೆ ಹುರಳಿ ಮುಂತಾದ ಧಾನ್ಯಗಳನ್ನು ಬೇಯಿಸದೆ ತಿನ್ನಿಸುವ ಪಕ್ಷದಲ್ಲಿ ೪ ಸೇರು ಧಾನ್ಯಕ್ಕೆ ೧ ಸೇರಿನ ಪ್ರಕಾರ ನೀರನ್ನು ಹೆಚ್ಚಿಸುತ್ತಾ ಬರಬೇಕು.

ಜ್ಞಾನ ಬೋಧಿನಿ.

ಪ್ರತಿನಿತ್ಯವೂ ಸ್ನಾನ ಮಾಡಿರಿ?

ಆರೋಗ್ಯವಾಗಿ ಇರಬೇಕಾದರೆ, ಪ್ರತಿದಿನವೂ ಸ್ನಾನ ಮಾಡಬೇಕು. ಸ್ನಾನಕ್ಕೆ ೧ ಕೊಡದಿಂದ ೪ ಕೊಡದವರೆಗೂ ನೀರನ್ನು ಉಪಯೋಗಿಸುವದುಂಟು. ನಾವು ಭೋಜನ ಮಾಡುವ ಪದಾರ್ಥಗಳೆಲ್ಲಾ ಅನ್ನಕೋಶದಲ್ಲಿಯೂ ಕರುಳುಗಳಲ್ಲಿಯೂ ಪ್ರವೇಶಿಸಿ ಅವುಗಳ ಸಾರಾಂಶವೆಲ್ಲಾ ಅಲ್ಲಿ ಪಕ್ವವಾಗಿ ಹಾಲಿನ ರೂಪವನ್ನು ಹೊಂದಿ, ಕ್ರಮೇಣ ರಕ್ತವಾಗಿ, ರಕ್ತನಾಳಗಳನ್ನು ಪ್ರವೇಶಿಸಿ, ಸಮಸ್ತ ಅವಯವಗಳನ್ನೂ ಪೋಷಿಸುವದು; ಆ ಸಾರಾಂಶವನ್ನು ಉಳಿದು ನಿಂತ ಭಾಗವು ಮಲಮೂತ್ರಗಳೇ ಮುಂತಾದ ರೂಪಭೇದಗಳನ್ನು ಹೊಂದಿ ಜಲ ಮಲ ದ್ವಾರಗಳಿಂದಲೂ ರೋಮಕೂಪಗಳಿಂದಲೂ ಹೊರಕ್ಕೆ ಬರುವದು. ಇದು ಶರೀರದಲ್ಲಿ ನಿಲ್ಲದೆ ಆಗಾಗ್ಯೆ ವಿಸರ್ಜನೆಯಾಗುತ್ತಿದ್ದರೆ ಯಾವ ಬಾಧಕವೂ ಇಲ್ಲದೆ ಆರೋಗ್ಯವಾಗಿರುವದು; ಹಾಗಿಲ್ಲದೆ ನಿಂತರೆ ನಾನಾರೋಗಗಳು ಹುಟ್ಟುವವು. ನಮ್ಮ ಶರೀರದ ಸಕಲ ಭಾಗಗಳಲ್ಲಿಯೂ ರೋಮಕೂಪಗಳು ಇರುವವು. ಇವುಗಳಿಂದ ೨೪ ಗಂಟೆಗಳೊಳಗಾಗಿ ೪೦ ರೂಪಾಯಿತೂಕ ನೀರೂ ೧ ರೂಪಾಯಿ ತೂಕ ಶರೀರಸಂಬಂಧವಾದ ಕೊಳೆಯೂ ೧॥ ರೂಪಾಯಿ ತೂಕ ಕಾರ್ಬಾನಿಕ್ ಆಸಿಡ್ ಎಂಬ ವಿಷಮಯವಾದ ಧಾತುವೂ ಈಚೆಗೆ ಬರುತ್ತವೆ. ಈ ವಸ್ತುಗಳಲ್ಲಿ ನೀರೂ ಕಾರ್ಬಾನಿಕ್ ಆಸಿಡ್ ಧಾತುವೂ ರೋಮಗಳಿಂದ ಹೊರಕ್ಕೆ ಬಂದು ನಾವು ಹಾಕಿಕೊಳ್ಳುವ ಬಟ್ಟೆಗಳನ್ನು ಪ್ರವೇಶಿಸಿ ಅಲ್ಲಿಂದ ಹಾರಿ ಹೋಗುವವು; ಆದರೆ ನಮ್ಮ ಶರೀರ ಸಂಬಂಧವಾದ ಕೊಳೆಯು ಹೀಗೆ ಹಾರಿಹೋಗದೆ ನಮ್ಮ ಬಟ್ಟೆಗೂ ಶರೀರಕ್ಕೂ ಹತ್ತಿಕೊಂಡಿರುವದು.

ಸ್ನಾನದಿಂದ ಕೊಳೆಯೆಲ್ಲಾ ಹೋಗಿ, ಶರೀರವು ಶುಚಿಯಾಗುವದು. ರೋಮಕೂಪಗಳನ್ನು ಮುಚ್ಚಿಕೊಂಡಿದ್ದ ಕೊಳೆಯೆಲ್ಲಾ ತೊಲಗಿ ಶರೀರದ ಕಲ್ಮಷಗಳೆಲ್ಲಾ ಆ ಕೂಪಗಳ ಮಾರ್ಗವಾಗಿ ಈಚೆಗೆ ಬರುವದಕ್ಕೆ ದಾರಿ ಮಾಡಿಕೊಡುವದು. ಇದರಿಂದ ಆರೋಗ್ಯವು ಹೆಚ್ಚುವದು. ಪೂರ್ವಕಾಲದಲ್ಲಿ ಇಟೆಲೀ ದೇಶದಲ್ಲಿರುವ ರೋಂ ಪಟ್ಟಣದ ಒಬ್ಬ ರಾಜನು ಈ ರೋಮಕೂಪಗಳ ಪ್ರಯೋಜನವನ್ನು ತಿಳಿಯದೆ ಚಿಕ್ಕವನಾದ ತನ್ನ ಮಗನಿಗೆ ರೋಮಕೂಪಗಳೆಲ್ಲಾ ಮುಚ್ಚಿಕೊಳ್ಳುವಂತೆ ಮೈಗೆಲ್ಲಾ ತೆಳುವಾದ ಚಿನ್ನ

ಸ್ವೇದಗತಿ ಚಿಕಿತ್ಸೆ.

ವರ್ಣಗಳಿಂದ ತುಂಬ ಬಳಿಸಿದನು. ಕೂಡಲೆ ಬೆವರಿದ ಕಶ್ಮಲಗಳೆಲ್ಲಾ ಹೊರಗೆ ಬರುವದಕ್ಕೆ ಮಾರ್ಗವಿಲ್ಲದೆ ರಕ್ತ ಕೆಟ್ಟಿತು. ಹೀಗೆ ಆ ಹುಡುಗನು ಯಾವ ಚಿಕಿತ್ಸೆಗೂ ಸಾಧ್ಯವಾಗದೆ ೨೪ ಗಳಿಗೆಗಳೊಳಗಾಗಿ ಸತ್ತನು. ಆದ್ದರಿಂದ ಯಾವಾಗಲೂ ರೋಮಕೂಪಗಳನ್ನು ಆಗಾಗ್ಯೆ ತೊಳೆದು ನಿರ್ಮಲವಾಗಿ ಇಟ್ಟಿರಬೇಕು. ಹಾಗಲ್ಲದೆ ನಾನಾ ವಿಧವಾದ ಲೇಪನಗಳಿಂದ ಆ ದ್ವಾರಗಳು ಮುಚ್ಚಿ ಕೊಳ್ಳುವ ಹಾಗೆ ಮಾಡಿದರೆ, ರೋಗವು ಬರುವದು. ಎಲ್ಲಾ ಕೂಪಗಳನ್ನೂ ಮುಚ್ಚಿಬಿಟ್ಟರೆ ಸತ್ತೇಹೋಗುವರು.

ಸ್ನಾನಮಾಡತಕ್ಕ ನೀರು ನಿರ್ಮಲವಾಗಿ ಇರಬೇಕು. ಬಚ್ಚಲುನೀರಿನಲ್ಲೂ ನಿಂತನೀರಿನಲ್ಲೂ ಜಲಜಂತುಗಳ ಮೊಟ್ಟೆಗಳಿರುವವು. ಇಂಥಾ ನೀರಿನಲ್ಲಿ ಸ್ನಾನಮಾಡಿದರೆ ಕಜ್ಜಿ ತುರಿ ಮುಂತಾದ ಚರ್ಮಕ್ಕೆ ಸಂಬಂಧಿಸಿದ ರೋಗಗಳೆಲ್ಲಾ ಬರುವವು. ನಮ್ಮಲ್ಲಿ ಅನೇಕರು ಕಂಠಸ್ನಾನವನ್ನು ಮಾಡುತ್ತಾರೆ. ಸ್ನಾನವೇ ಮಾಡದೆ ಇರುವದಕ್ಕಿಂತ ಇದು ಉತ್ತಮವೇ ಸರಿ. ಆದರೆ ಮಿದುಳಿಗೆ ಆಧಾರ ಭೂತವಾದದ್ದು ತಲೆ. ಅಲ್ಲಿನ ರೋಮಕೂಪಗಳಲ್ಲಿ ಕೊಳೆಯು ಸೇರದಹಾಗೆ ಇಟ್ಟುಕೊಳ್ಳುವದು ಅವಶ್ಯಕವು. ಆದಕಾರಣ ಪ್ರತಿ ದಿನವೂ ತಲೆಗೆ ಸ್ನಾನಮಾಡುವದು ಬಹಳ ಆರೋಗ್ಯಕರವು. ತಲೆಯಲ್ಲಿ ಕೂದಲು ಹೆಚ್ಚಾಗಿರುವವರು ೨—೩ ದಿನಗಳಿಗೆ ೧ ಸಾರಿಯಾದರೂ ಅಂಥಾ ರೋಮ ಕೂಪಗಳಲ್ಲಿ ಸ್ವಲ್ಪವೂ ಕೊಳೆ ಸೇರದ ಹಾಗೆ ಉಜ್ಜಿಕೊಂಡು ಸ್ನಾನಮಾಡಬೇಕು. ತೆಂಗಿನಕಾಯಿಯ ಹಾಲನ್ನು ತಲೆಗೂ ಮೈಗೂ ಹಾಕಿಕೊಂಡು ಸ್ನಾನಮಾಡಿದರೆ ರೋಮ ಕೂಪಗಳೆಲ್ಲಾ ನಿರ್ಮಲವಾಗುವವು.

ನಮ್ಮಲ್ಲಿ ಅನೇಕರು ೪ ತಂಬಿಗೆ ನೀರನ್ನು ಸುಮ್ಮನೆ ಮೈಮೇಲೆ ಸುರಿದುಕೊಂಡು ಒರಸಿಕೊಂಡು ಓಡಿ ಬರುವರು. ಇದು ಎಂದಿಗೂ ಕ್ರಮವಾದ ಸ್ನಾನವಲ್ಲ. ಸ್ನಾನಮಾಡುವದರಲ್ಲಿ ಮೈ ಕೈಗಳ ಕೊಳೆಯೆಲ್ಲಾ ಹೋಗಿ ನಿರ್ಮಲವಾಗುವದೇ ಆರೋಗ್ಯಶಾಸ್ತ್ರದ ಉದ್ದೇಶವು. ೧೦೦೦ ಕೊಡಗಳ ನೀರನ್ನು ಸುಮ್ಮನೆ ಮೇಲೆ ಸುರಿದುಕೊಂಡರೂ, ಕೊಳೆ ಹೋಗದೆ

ಇದ್ದರೆ ಅದು ಸ್ನಾನವೇ ಅಲ್ಲ. ಆದಕಾರಣ ಬಿರಟಾಗಿಯೂ ಕೊಳೆ ಯಿಲ್ಲದೆಯೂ ಇರತಕ್ಕ ದುಬಟಿ ಮುಂತಾದ ವಸ್ತ್ರಗಳನ್ನು ನೆನೆಯಿಸಿ ಅವುಗಳಿಂದ ಮೈಯನ್ನು ಗಟ್ಟಿಯಾಗಿ ತಿಕ್ಕಿಕೊಂಡು ಸ್ನಾನಮಾಡಬೇಕು. ಇಷ್ಟು ವಿರತಕ್ಕವರು ಕಡಲೆ ಅಥವಾ ಹೆಸರಿನ ಹಿಟ್ಟಿನಿಂದಲಾಗಲೀ ಸಾಬೂನಿನಿಂದಲಾಗಲೀ ಉಜ್ಜಿಕೊಂಡು ಸ್ನಾನಮಾಡಿದರೆ ಮತ್ತೂ ಉತ್ತಮ. ಮನುಷ್ಯರ ಹಾಗೆಯೇ ಮೃಗಗಳಿಗೂ ಸ್ನಾನವು ಅವಶ್ಯಕವಾದದ್ದು. ಆದಕಾರಣ ಕುದರೆ,ಹಸು,ಕರು ಮುಂತಾದ ಕಾಲ್ನಡೆಗಳನ್ನು ನಿತ್ಯವೂ ತೊಳೆಯಬೇಕು.

ನಮ್ಮ ದೇಶದವರು ಸ್ನಾನಮಾಡುವ ಕೆರೆ ಕೊಳ ಮುಂತಾದ ಜಲಾಶಯಗಳಲ್ಲಿಯೇ ಬಟ್ಟೆಗಳನ್ನೂ ಒಗೆಯುತ್ತಾರೆ. ಸಾಧಾರಣವಾಗಿ ಯುರೋಪ್ ಮುಂತಾದ ಅನೇಕ ಪ್ರದೇಶಗಳಲ್ಲಿ ರೋಗಿಗಳು ತೊಟ್ಟುಕೊಂಡಿದ್ದ ಬಟ್ಟೆಗಳನ್ನು ಒಗೆಯದೇಲೇ ಒಂದು ಪೆಟ್ಟಿಗೆಯಲ್ಲಿ ಹಾಕಿ ಇದ್ದು ಆ ರೋಗವು ಮತ್ತೊಬ್ಬರಿಗೆ ಅಂಟೀತೆಂಬ ಭಯದಿಂದ ಅವುಗಳನ್ನು ಸುಟ್ಟು ಬಿಡುತ್ತಾರೆ; ಆದರೆ ನಮ್ಮ ದೇಶದಲ್ಲಿ ರೋಗಿಗಳ ಬಟ್ಟೆಗಳನ್ನೆಲ್ಲಾ ಸ್ನಾನಪಾನಗಳನ್ನು ಮಾಡುವ ಜಲಾಶಯಗಳಲ್ಲಿಯೇ ಒಗೆಯುತ್ತಾರೆ. ಇದರಿಂದ ಆ ರೋಗದ ಪರಮಾಣುಗಳು ನೀರಿನಲ್ಲಿ ಸೇರಿಕೊಂಡು ಅಂಥಾ ನೀರನ್ನು ಬಳಸುವವರಿಗೆಲ್ಲಾ ಬಾಧಕವನ್ನು ಉಂಟುಮಾಡುವದು. ಇದರಿಂದಲೇ ವಾಂತಿ ಭೇದಿ ಮುಂತಾದ ರೋಗಗಳೆಲ್ಲಾ ಹುಟ್ಟುವವೆಂಬದಾಗಿ ಅನೇಕ ವಿದ್ವಾಂಸರು ನಿಶ್ಚಯಿಸಿ ಇದ್ದಾರೆ. ಆದ್ದರಿಂದ ಬಟ್ಟೆಗಳನ್ನು ಒಗೆಯುತಕ್ಕ ನಿಂತನೀರನ್ನು ಸ್ನಾನ ಪಾನಗಳಿಗೆ ಉಪಯೋಗಿಸಬಾರದು.

೩. ಹಿಂದೂ ಸಂಸಾರ.

ಹಿಂದೂಜನರ ಕ್ಷೇಮಚಿಂತಕರಾದವರೆಲ್ಲರೂ ಇವರಲ್ಲಿ ಕಪಟವು ವಿಶೇಷವಾಗಿರುವದೆಂಬದಾಗಿಯೂ, ಸ್ಥೈರ್ಯವೂ ಸಾಹಸವೂ ಯುಕ್ತವೆಂದು ತೋರಿದ ಕೆಲಸಗಳನ್ನು ನಿರ್ಭಯವಾಗಿ ಮಾಡತಕ್ಕಶಕ್ತಿಯೂ ಸಾಧಾರಣ

ವಾಗಿ ಈ ಜನರಲ್ಲಿ ಇಲ್ಲವೆಂಬದಾಗಿಯೂ ಹೇಳುವರು. ಇಂಥಾ ದುರ್ಗುಣಗ್ರಸ್ತರಾಗೂ ಸುಗುಣಗಳಿಲ್ಲದೆ ಇರುವವರೂ ಪಾಮರರು ಮಾತ್ರವೇ ಅಲ್ಲ; ಪಂಡಿತರೂ ಹೀಗೆಯೇ ಇರುತ್ತಾರೆ.

ಲೋಕದಲ್ಲಿ ಸಕಲರೂ ತಮ್ಮತಮ್ಮ ಮನೆಗಳಲ್ಲಿ ಎಂಥಾ ನಡತೆಗಳನ್ನು ಕಲಿಯುವರೋ ಅಂಥಾ ನಡತೆಗಳನ್ನೇ ಆಚರಿಸುವರು. ಆದಕಾರಣ ಸಾಧಾರಣವಾಗಿ ಈಗಿನ ಎಲ್ಲಾ ಹಿಂದುಗಳ ಮನೆಗಳಲ್ಲಿಯೂ ಬಾಲಕರು ಕಲಿಯುತಕ್ಕ ನಡತೆಗಳನ್ನು ವಿಚಾರಿಸಿ ನೋಡಿದರೆ ಮುಂದಕ್ಕೆ ಅವರು ಸಂಪಾದಿಸತಕ್ಕ ಸತ್ಯಸಂಧತೆಯು ಗೊತ್ತಾಗುವದು. ಬಾಲಕರು ಸನ್ಮಾರ್ಗಪ್ರವರ್ತಕರಾಗುವಂತೆ ವಿದ್ಯಾಭ್ಯಾಸವೇ ಮುಂತಾದತಕ್ಕ ಏರ್ಪಾಡುಗಳನ್ನು ಮಾಡಿಕೊಂಡಿರತಕ್ಕ ಜನರು ನಮ್ಮಲ್ಲಿ ಇದ್ದರೂ ಇರಬಹುದು. ಆದರೆ ಇದುವರಿಗೂ ಅಂಥಾವರು ಯಾರನ್ನೂ ನಾನು ಕಾಣೆನು.

ನಮ್ಮ ಜನರಲ್ಲಿ ದಂಪತಿಗಳು ಚಿಕ್ಕವರಾಗಿ ಇದ್ದಾಗಲೇ ಮಕ್ಕಳನ್ನು ಪಡೆಯುವರು. ಈ ಮಕ್ಕಳು ದುರ್ಬಲರಾದ ತಾಯಿತಂದೆಗಳಿಂದ ಜನಿಸುವದರಿಂದ ತಾವೂ ದುರ್ಬಲವಾದ ಶರೀರವನ್ನೂ ಬುದ್ಧಿಯನ್ನೂ ಪಡೆಯುವರು. ತಾಯಿಯಾದವಳಿಗೆ ಓದುವದಕ್ಕೂ ಬರೆಯುವದಕ್ಕೂ ಬರುವದಿಲ್ಲ. ಆದ್ದರಿಂದ ಅವಳ ಅಜ್ಞಾನದಿಂದ ಸಂಭವಿಸುವ ತೊಂದರೆಗಳನ್ನೆಲ್ಲಾ ಮಗುವು ಅನುಭವಿಸಬೇಕಾಗುವದು. ಮಗುವು ಯುಕ್ತಾಯುಕ್ತಗಳನ್ನು ತಿಳಿದುಕೊಳ್ಳುವ ಕಾಲದಲ್ಲಿ ತಾಯಿಯು ನಿಷ್ಕಾರಣವಾಗಿ ಮೆಚ್ಚುವದರಿಂದಲೂ ಮೆಚ್ಚದೆ ಇರುವದರಿಂದಲೂ ಆ ಮಗುವನ್ನು ಕೆಡಿಸುವಳು. ಅವಳು ಸಂತೋಷವಾಗಿದ್ದಾಗ ಮಗುವು ಯಾವದಾದರೂ ಒಂದು ಪದಾರ್ಥವನ್ನು ಕದ್ದರೂ ಅದನ್ನು ಮುದ್ದಾಡುವಳು ; ಕೋಪ ಬಂದಾಗ ಇದೇ ವಿಧವಾದ ಕೆಲಸವನ್ನು ಮಾಡಿದರೆ ಅದನ್ನು ಚನ್ನಾಗಿ ದಂಡಿಸುವಳು. ಕೋಪತಾಪಗಳನ್ನು ಜಯಿಸುವದರಿಂದುಂಟಾಗುವ ಪ್ರಯೋಜನವು ಅವಳಿಗೆ ತಿಳಿಯದು. ಮಕ್ಕಳು ಒಳ್ಳೇ ಕೆಲಸವನ್ನು ಮಾಡಿದಾಗೆಲ್ಲಾ ಸಂತೋಷ ಪಡಬೇಕೆಂಬದಾಗಿಯೂ ಕೆಟ್ಟ ಕೆಲಸವನ್ನು ಮಾಡಿದರೆ ಯಾವಾಗಲೂ ಕೋಪಿಸಿಕೊಳ್ಳ

ಬೇಕೆಂಬುದಾಗಿಯೂ ಅವಳಿಗೆ ಬೋಧಿಸುವರು. ಹೀಗೆ ಸ್ವಾನುಭವಕ್ಕೆ ಬರಲಾಗಿ ಅವಳು ಆ ಮಾರ್ಗವನ್ನು ಮುನ್ನಡೆಸುವ ಕಾಲಕ್ಕೆ ಅದಕ್ಕೆ ಬೇಕಾದ ಸಾಧನೆಗಳನ್ನೆಲ್ಲಾ ಕಲಿಸುವಳು.

ನಮ್ಮ ಜನರಲ್ಲಿ ಮಕ್ಕಳು ಚಿಕ್ಕವರಾಗಿದ್ದಾಗಲೇ ಮದುವೆ ಮಾಡುವರು. ಮದುವೆಯಾದ ಬಾಲಕನು ತನಗೂ ತನ್ನ ಹೆಂಡತಿಗೂ ಆಗಿರುವ ವಿವಾಹದ ಉದ್ದೇಶವನ್ನು ತಿಳಿದುಕೊಳ್ಳುವದಕ್ಕೆ ಮುಂಚಿತವಾಗಿಯೇ, ತಂದೆ ತಾಯಿಗಳಿಗೆ ತನ್ನಲ್ಲಿ ಅನುರಾಗವಿಲ್ಲದೆ ಇರುವದನ್ನೂ ತನ್ನ ತಾಯಿಗೂ ಅವಳ ಅತ್ತೆಗೂ ಇರುವ ವಿರೋಧವನ್ನೂ, ದುರದೃಷ್ಟದಿಂದ ತಂದೆಗೆ ಇನ್ನೊಬ್ಬ ಹೆಂಡತಿ ಅಂದರೆ ತನಗೆ ಮಲತಾಯಿ ಯಿದ್ದ ಪಕ್ಷದಲ್ಲಿ ಅವಳು ತನಗೂ ತನ್ನ ಸಹೋದರಸಹೋದರಿಯರಿಗೂ ವಿಷಹಾಕಿ ಕೊಲ್ಲಬೇಕೆಂದು ಮಾಡುವ ಪ್ರಯತ್ನಗಳನ್ನೂ ಪ್ರತ್ಯಕ್ಷವಾಗಿ ನೋಡುತ್ತಾನೆ. ಇದಲ್ಲದೆ ತನ್ನ ತಂದೆಯೂ ತಾತನೂ ಒಂದೇ ಮನೆಯಲ್ಲಿ ಇದ್ದುಕೊಂಡು ಪರಸ್ಪರ ವಿರೋಧಿಗಳಾಗಿರುತ್ತಾರೆ. ಹಿಂದುಗಳು ತಮ್ಮ ಸಂಸಾರದಲ್ಲಿ ಅತ್ಯಂತ ಅನುರಾಗವುಳ್ಳವರೆಂದು ಹೇಳಿಕೊಳ್ಳುವದುಂಟು. ಇವರು ಕೃತಯುಗದಲ್ಲಿ ಹೀಗಿದ್ದರೋ ಏನೋ!

ಈಗಿನ ಹಿಂದೂ ಮನೆಯನ್ನು ನೋಡಿದರೆ ಇದೇ ದುಃಖಕ್ಕೆ ಕಾರಣವು ಎಂದು ಹೇಳಬಹುದು. ಸ್ತ್ರೀಯರೆಲ್ಲರೂ ವಿದ್ಯಾವಂತರಾಗಿ, ಚಿಕ್ಕತನದಲ್ಲಾಗುವ ವಿವಾಹವು ತಪ್ಪಿ ಹೋಗುವವರೆಗೂ ಇಂಥಾ ದುಃಖವು ತೊಲಗಲಾರದು. ದರಿದ್ರರ ಮಕ್ಕಳು ವಿದ್ಯಾವಿಹೀನರಾದ ಪೋಲೀ ಹುಡುಗರ ಸಹವಾಸವನ್ನೂ, ಐಶ್ವರ್ಯವಂತರ ಮಕ್ಕಳು ನಿರಕ್ಷರಕುಕ್ಷಿಗಳಾದ ಭೃತ್ಯರ ಸಹವಾಸವನ್ನೂ ಮಾಡುವರು. ಮಕ್ಕಳು ಬೆಳೆದು ಓಡಾಡುವ ಹಾಗೆ ಆಗುವವರೆಗೂ ತಂದೆಯು ಮನೆಯಲ್ಲಿ ಇರುವದಿಲ್ಲವಾದ್ದರಿಂದ ತಾಯಿಯಿಂದಲೇ ಶಿಕ್ಷೆಯನ್ನು ಹೊಂದುವರು. ಆಕೆಯು ಆ ಮಕ್ಕಳಿಗೆ ತನಗೆ ತಿಳಿದ ಪುರಾಣದ ಕಥೆಗಳನ್ನೆಲ್ಲಾ ಹೇಳಿ ಅವರನ್ನು ಇತರ ಮತಗಳನ್ನೆಲ್ಲಾ ದ್ವೇಷಿಸುವಂ

ಕೋಟಿ ವಿದ್ಯೆಯು ಕೂಳಿಗೋಸ್ಕರವೇ.

[illegible]ಯೂ ಅವರ ತಮ್ಮ ದ್ವೇಷವನ್ನು ಬಹಿರಂಗ ಮಾಡದಂತೆಯೂ ಮಾಡುವರು.

ಕೆಲವು ವೇಳೆ ಸುಳ್ಳನ್ನು ಹೇಳಬಹುದೆಂದು ನಮ್ಮವರ ಶಾಸ್ತ್ರಗಳಲ್ಲಿ ಹೇಳಿ ಇದೆ. ಮುಖ್ಯವಾಗಿ ಬಾಲ್ಯಾರಭ್ಯ ನಮ್ಮವರ ಮಕ್ಕಳು ಕಪಟಿಗಳಾಗುವರು. ಹೀಗೆ ಬಾಲ್ಯದಲ್ಲಿ ಕೇಳಿದ ಕಥೆಗಳು ಮನಸ್ಸಿನಲ್ಲಿ ಸ್ಥಿರವಾಗಿ ನೆಲಸುವದರಿಂದ, ಅನಂತರದಲ್ಲಿ ಜನರು ಎಷ್ಟು ವಿದ್ವಾಂಸರಾದಾಗ್ಯೂ, ಪಿಶಾಚಗಳು ಸುಳ್ಳುವರೆ ಜಗಳಕ್ಕೆ ಬರುವರು. ಕೆಲವರು ಬಿ. ಎ. ಪರೀಕ್ಷೆಯನ್ನು ಕೊಟ್ಟವರು ಕೂಡ ಇವುಗಳನ್ನು ನಂಬುತ್ತಾರೆ. ಒಂದು ವಸ್ತುವು ವಿಚಿತ್ರವಾಗಿ ಮಾಯವಾಯಿತೆಂದು ಯಾರಾದರೂ ಒಂದು ಕಥೆಯನ್ನು ಹೇಳಿದರೆ, ವಿದ್ವಾಂಸರೂ ಕೂಡ—ಅಹುದು, ಅಹುದು, ಪೂರ್ವದಲ್ಲಿ ಒಂದು ಸಾರೆ ಹೀಗೆಯೇ ನಡೆದಿರುವದು ನನಗೆ ಜ್ಞಾಪಕವಿದೆಯೆಂದು ಹೇಳುವರು. ಗಂಡು ಮಕ್ಕಳಿಗೆ ಸ್ವಲ್ಪ ವಯಸ್ಸಾದ ಕೂಡಲೆ ಉಪನಯನವನ್ನು ಮಾಡಿ, ಬೇಸರುಂಟುಮಾಡುವ ಸಂಸ್ಕೃತ ಮಂತ್ರಗಳನ್ನು ಕಲಿಸಿ, ಅನಂತರ ಒಂದು ಇಂಗ್ಲಿಷು ಪಾಠಶಾಲೆಗೆ ಹಾಕುವರು. ಈ ಹುಡುಗನು ಪಾಠಶಾಲೆಯಲ್ಲಿ ಓದುವಾಗ ತಾನು ಮನೆಯಲ್ಲಿ ಕಲಿತುಕೊಂಡ ನಿತ್ಯಕರ್ಮಗಳೆಲ್ಲಾ ಅವಿವೇಕವೆಂದು ತಿಳಿದುಕೊಳ್ಳುತ್ತಾನೆ. ಹೀಗೆ ತಿಳಿದುಕೊಂಡಾಗ್ಯೂ, ಇವನು ಮನೇ ಜನರ ಹಿಂಸೆಗೋಸ್ಕರ ಇವುಗಳನ್ನು ಆಚರಿಸುತ್ತಾನೆ. ಇಲ್ಲಿಯೇ ಕಪಟಿಕ್ಕೆ ಮೊದಲಾಗುವದು. ಪಾಠಶಾಲೆಯಲ್ಲಿ ಇಂಥಾ ಕೆಲಸಕ್ಕೆ ಈಹೊತ್ತೆಂದು ಗೊತ್ತು ಮಾಡಿ ಇರುತ್ತಾರೆ. ಇವನು "ಪಾಠಶಾಲೆಯವರ ಆಜ್ಞಾನುಸಾರವಾಗಿ ಹೋಗಬೇಕು; ಜಾಗ್ರತೆಯಾಗಿ ಭೋಜನಕ್ಕೆ ಅನುಕೂಲಮಾಡು" ಎಂದು ಹೇಳಿದರೆ, ತಾಯಿಯು ಸರಿಯಾದ ಹೊತ್ತಿಗೆ ಊಟಕ್ಕೆ ಇಡಳು; ತಂದೆಯೂ ಕೂಡ "ಒಂದು ಕಾಲುಘಂಟೆ ಹೆಚ್ಚುಕಡಮೆಯಾದರೆ ಬಾಧಕವೇನು? ನಿನ್ನನ್ನು ಕೇಳಿದರೆ ಹೊಟ್ಟೆನೋವು ಬರುತ್ತಿತ್ತೆಂತಲಾಗಲೀ ನನ್ನ ಗಡಿಯಾರವು ತಪ್ಪಾದಕಾಲವನ್ನು ಸೂಚಿಸುತ್ತಿತ್ತೆಂತಲಾಗಲೀ ಹೇಳು" ಎಂದು ಹೇಳಿಕೊಡುವನು. ಈ ಹುಡುಗನು "ಈ ಮಾತು ಸುಳ್ಳಲ್ಲಾ! ಹ್ಯಾಗೆ ಹೇಳಲಿ!"

ಸರಿಹೊತ್ತಿನಲ್ಲಿ ಸಿಗುವವರು ಹುಟ್ಟೇತೆ ?

ಎಂದು ಕೇಳಿದರೆ, ತಂದೆಯು " ಅಯ್ಯೋ ಹುಚ್ಚನೇ! ಈ ಮಾತು ಸುಳ್ಳಾದರೆ ಲೋಕದಲ್ಲಿ ನಿಜ ಹೇಳುವರ್‍ಯಾರೋ ನನಗೆ ತಿಳಿಯದು. ಅಂಥಾ ಪ್ರಾಮಾಣಿಕರು ಈಗ ಯಾರೂ ಇಲ್ಲ" ಎಂದು ಹೇಳುತ್ತಾನೆ. ಆಯಾ ಕಾಲಗಳಲ್ಲಿ ಆಯಾ ಕೆಲಸಗಳನ್ನು ಮಾಡುವ ಪದ್ಧತಿಯನ್ನು ಐಶ್ವರ್ಯವಂತರಾಗಿಯೂ ವಿದ್ಯಾವಂತರಾಗಿಯೂ ಇರುವವರು ಕೂಡ ಆಚರಿಸುವದಿಲ್ಲ. ಈ ವಿಷಯವನ್ನು ತಿಳಿದು ಕೊಳ್ಳಬೇಕಾದರೆ ೧೧ ಘಂಟೆಗೆ ಸರಿಯಾಗಿ ಯಾವದಾದರೂ ಒಂದು ಪಾಠಶಾಲೆಯ ಬಳಿಗೆ ಹೋಗಿ ನಿಲ್ಲೋಣ. ಸುಮಾರು ಕಾಲು ಘಂಟೆಯೊಳಗಾಗಿ, ದಡಬಡಲಾಗಿ ತಿಂಡೀ ತಿಂದುಕೊಂಡು, ಉಪಾಧ್ಯಾಯರು ಒಬ್ಬೊಬ್ಬರಾಗಿ ಪಾಠಶಾಲೆಯನ್ನು ಪ್ರವೇಶಿಸುವರು. ಇಂಥಾ ದಿವಸ ಇಂಥಾ ಸ್ಥಳದಲ್ಲಿ ಬೆಳಿಗ್ಗೆ ೮ ಘಂಟೆಗೆ ಸರಿಯಾಗಿ ಮೀಟಿಂಗ್ ಆಗುವದೆಂದು ಗೊತ್ತಾಗಿ ಇರುತ್ತದೆ. ಆಹೊತ್ತಿಗೆ ಸರಿಯಾಗಿ ಅಲ್ಲಿಗೆ ಹೋಗಿ ನೋಡಿದರೆ, ಎಲ್ಲಾದರೂ ಒಬ್ಬೊಬ್ಬರು ಬಹು ತಾಳ್ಮೆಯಿಂದ ಕಾದಿರುವರು. ಆಮೇಲೆ ಅರ್ಧಘಂಟೆಯ ಹೊತ್ತು ಕಾದುಕೊಂಡಿದ್ದರೂ ಯಾರೂ ಬರುವದಿಲ್ಲ. ಅನಂತರದಲ್ಲಿ ಯಾಕೆ ಬರಲಿಲ್ಲವೆಂದು ವಿಚಾರಿಸಿದರೆ ಮಹಾರಾಜಶ್ರೀ —ರಿಗೆ ಆಕಾಲಕ್ಕೆ ಸರಿಯಾಗಿ ಕಾಫೀ ಯಾಗಲಿಲ್ಲವಾದ್ದರಿಂದ ಆದಿನ ಮೀಟಿಂಗ್ ನಿಂತಿತೆಂದು ಗೊತ್ತಾಗುವದು. ನಾನು ಎಷ್ಟೋ ಸೋಮಾರಿಗಳಾದ ಯೂರೋಪಿಯನರನ್ನು ನೋಡಿ ಇದ್ದೇನೆ; ಆದರೆ ಅವರು ಅಷ್ಟು ಸೋಮಾರಿಗಳಾದರೂ, ಕಾಲಮೀರಿ ಬಂದದ್ದನ್ನು ನಾನು ಎಂದೂ ನೋಡಲಿಲ್ಲ. ಇದಕ್ಕೆ ಕಾರಣವೇನೆಂದರೆ, ಯೂರೋಪಿಯನರೆಲ್ಲರೂ ಬಾಲ್ಯದಲ್ಲಿಯೇ ಸಕಲ ಕಾರ್ಯಗಳನ್ನೂ ನಿರ್ಣಯವಾದ ಕಾಲಕ್ಕೆ ಮಾಡಬೇಕೆಂದು ಶಿಕ್ಷಿಸಲ್ಪಟ್ಟಿರುತ್ತಾರೆ. ನಮ್ಮ ಜನರಲ್ಲಿ ಇಂಥಾ ಶಿಕ್ಷೆ ಯಿಲ್ಲದಿರುವ ಕಾರಣ, ವಯಸ್ಸಾದ ಮೇಲೆ ಇದನ್ನು ಅತಿಕ್ರಮಿಸಿ ನಡೆಯುವರು.

ಇಂಗ್ಲೀಷು ಜನರಲ್ಲಿ ಬಾಲಕರಿಗೆ ಪ್ರತಿ ತಿಂಗಳಲ್ಲಿಯೂ ಅವರ ಸ್ವಂತವಾದ ವೆಚ್ಚಕ್ಕೋಸ್ಕರ ಸ್ವಲ್ಪ ಹಣವನ್ನು ಕೊಡತಕ್ಕ ಪದ್ಧತಿಯುಂಟು. ಇದರ ಪ್ರಯೋಜನವು ಸ್ಪಷ್ಟವಾಗಿದೆ. ಏನೆಂದರೆ: ಇದರಿಂದ ಧರ್ಮ, ಮಿತವ್ಯಯ

ಮುಂತಾದ ಗುಣಗಳೆಲ್ಲಾ ವೃದ್ಧಿಯಾಗುವವು. ಈ ವಿಷಯದಲ್ಲಿ ಹಿಂದೂ ಮತ್ತು ಇಂಗ್ಲೀಷು ವ್ಯವಹಾರಗಳನ್ನು ಹೋಲಿಸಿ ನೋಡಿದರೆ, ಇಂಗ್ಲೀಷು ವ್ಯವಹಾರವೇ ಉತ್ತಮವಾದ್ದೆಂದು ಗೊತ್ತಾಗುವದು. ನಮ್ಮ ಜನರು ತಮ್ಮ ಮಕ್ಕಳಿಗೆ ತಿಂಗಳಿಗೊಂದುಸಾರಿ ಏನನ್ನೂ ಕೊಡುವದಿಲ್ಲ. ಇಂಗ್ಲೀಷು ಜನರಾದರೋ ಸರಿಯಾದ ಕಾರಣವನ್ನು ಹೇಳಿದರೆ, ಮಕ್ಕಳಿಗೆ ಎಷ್ಟು ಹಣವನ್ನಾದರೂ ಕೊಡುವರು. ಇದರಿಂದ ಹುಡುಗರು ಬಹಳ ಉದಾರಿಗಳಾಗುವರು. ನಮ್ಮಲ್ಲಿ ಬಡವರ ಮಕ್ಕಳು ತಮ್ಮ ವೆಚ್ಚಕ್ಕೆ ಏನೂ ಯಿಲ್ಲದೆ ಸ್ವಭಾವವಾಗಿ ಕದಿಯುವದಕ್ಕೆ ಉಪಕ್ರಮಿಸುವರು. ಹೀಗೆ ಇವರಿಗೆ ಕಳ್ಳತನವೇ ಅಭ್ಯಾಸವಾಗಿ ಕಡೆಗೆ ಜೈಲಿಗೆ ಬೀಳುವರು. ಈ ಹುಡುಗರಿಗೆ ವಯಸ್ಸಾದಹಾಗೆಲ್ಲಾ ಇವರಿಗೂ ಇವರ ತಂದೆಗೂ ವಿರೋಧವು ಹೆಚ್ಚುತ್ತಿರುವದು. ತಂದೆಮಕ್ಕಳ ಯೋಚನೆಗಳಿಗೆ ಅರ್ಥಾರ್ಥ ಸಂಬಂಧ ವಿರುವದಿಲ್ಲ. ಮಗನು ಹೇಳಿದ್ದನ್ನು ತಿಳಿದುಕೊಳ್ಳುವದಕ್ಕೆ ತಂದೆಗೆ ಯೋಗ್ಯತೆಯೇ ಇರುವದಿಲ್ಲ. ಇದರಿಂದ ಪರಸ್ಪರ ವಿರೋಧಗಳು ಹುಟ್ಟುವವು.

ಕ್ರಮೇಣ ಈ ಹುಡುಗನಿಗೆ ಮದುವೇ ಕಾಲವು ಪ್ರಾಪ್ತವಾಗುವದು. ಮದುವೆ ಯಾಗುವದಕ್ಕೆ ಮುಂಚೆ ವಧೂವರರಿಗೆ ಪರಸ್ಪರಾನುರಾಗವು ಇದೆಯೋ ಇಲ್ಲವೋ ಎಂದು ವಿಚಾರಣೆ ಮಾಡುವದೇ ಇಲ್ಲ. ಇವರಿಗೆ ಲಗ್ನವನ್ನು ನಿಶ್ಚಯಿಸುವದರಲ್ಲಿ ತಾಯಿತಂದೆಗಳ ಉದ್ದೇಶಗಳು ನೀಚವಾದವುಗಳಾಗಿಯೂ ಧನಾಕಾಂಕ್ಷೆಯಿಂದ ಕೂಡಿದವುಗಳಾಗಿಯೂ ಇರುವವು. ಹುಡುಗಿಯ ತಂದೆತಾಯಿಗಳು, ವರನು ಎಷ್ಟು ಸೇರು ಚಿನ್ನ ವಿಡುತ್ತಾನೆಂತಲೂ, ಅವನ ರೂಪು ಎಂಥಾದ್ದೆಂತಲೂ ಕೇಳುವರೇ ಹೊರ್ತು ಅವನ ಪಾಂಡಿತ್ಯವನ್ನೂ ನಡೆನುಡಿಗಳನ್ನೂ ವಿಚಾರಿಸುವದೇ ಇಲ್ಲ. ಹೀಗೆ ತಾವು ಕೋರಿದ್ದೆಲ್ಲಾ ಅನುಕೂಲವಾದರೆ ಅನಂತರದಲ್ಲಿ ಮದುವೆ ನಡಿಯುವದು. ಕ್ರಮೇಣ ಪ್ರಸ್ತವೂ ಆಗುವದು. ಆದರೆ ಈ ದಂಪತಿಗಳಿಗೆ ಪರಸ್ಪರಾನುರಾಗವು ಇಲ್ಲದಿರುವದರಿಂದ ಅನಂತರದಲ್ಲಿ ಬಾಲ್ಯದಲ್ಲಾಗುವ ವಿವಾಹದಿಂದುಂಟಾಗುವ ಕೇಡುಗಳೆಲ್ಲಾ ಸಂಭವಿಸುವವು. ಇದರಿಂದ ಕುಲವೇ ಕ್ರಮೇಣ

ನಾಶವಾಗುತ್ತಾ ಬರುವದು. ಇಂಥಾ ದಂಪತಿಗಳ ಹಿರೀಮಗುವು ಸಾಧಾರಣವಾಗಿ ಸಾಯುವದೇ ನಿಜವು. ಯಾಕಂದರೆ, ಹಿರೀಮಗುವು ಹುಟ್ಟಿದಾಗ ತಾಯಿಗೆ ೧೪ ಅಥವಾ ೧೫ ವರ್ಷಗಳಾಗಿ ಇರುವದರಿಂದ ಅಂಥಾ ಮಗುವನ್ನು ಪೋಷಿಸತಕ್ಕ ಯೋಗ್ಯತೆಯು ಆವಳಿಗೆ ಇರುವದಿಲ್ಲ. ಹೀಗೆ ಆವಳ ಅಜ್ಞಾನ ಜನ್ಯವಾದ ಅನಾದರಣೆಯಿಂದಲೇ ಮಗುವು ಸಾಯುವದು. ಈಕೆಯ ಗಂಡನಾದರೋ ಪ್ರಸ್ತಾದನಂತರ ಪಾಠಶಾಲೆಗಳಲ್ಲಿ ವಿದ್ಯಾವ್ಯಾಸಂಗ ಮಾಡುವದಕ್ಕೆ ಆಗುವದಿಲ್ಲ. ವೈದ್ಯಶಾಸ್ತ್ರವನ್ನೂ ಎಂಜನಿಯರಿಂಗ್ ಶಾಸ್ತ್ರವನ್ನೂ ಓದತಕ್ಕವರಿಗೆ ತಿಂಗಳಿಗೆ ೧೫ ರೂಪಾಯಿ ಸ್ಕಾಲರ್‌ಷಿಪ್ ಕೊಡುವದಾಗಿ ಮೈಸೂರು ಗವರ್ನಮೆಂಟಿನವರು ಏರ್ಪಾಡು ಮಾಡಿದಾಗ ಕೆಲವರು ಬಿ. ಎ. ಪರೀಕ್ಷೆಯನ್ನು ಕೊಟ್ಟ ವಿದ್ಯಾರ್ಥಿಗಳು ದೂರದೇಶದಲ್ಲಿ ಸಂಸಾರದೊಡನೆ ಜೀವನ ಮಾಡಿಕೊಂಡು ವ್ಯಾಸಂಗ ಮಾಡುವದಕ್ಕೆ ಸಾಲದೆಂದು ಈ ಏರ್ಪಾಡಿನ ಪ್ರಕಾರ ವ್ಯಾಸಂಗಮಾಡುವದಕ್ಕೆ ಒಪ್ಪಲಿಲ್ಲ. ಯೂರೋಪಿಯನರಿಗಾದರೆ ಈ ಅವಸ್ಥೆಗಳೇನೂ ಇಲ್ಲ. ಯಾಕಂದರೆ, ಇವರು ವಿದ್ಯಾವ್ಯಾಸಂಗಮಾಡಿ ಪಂಡಿತರಾಗುವವರಿಗೂ ಮದುವೇ ಮಾಡಿಕೊಳ್ಳುವದಿಲ್ಲ. ಪಾಂಡಿತ್ಯದಲ್ಲಿಯೂ, ಸಾಹಸದಲ್ಲಿಯೂ, ಸಂಸಾರ ತಾಪತ್ರಯದಲ್ಲಿ ಮುಳಗಿದ ನಮ್ಮ ಜನರಿಗೂ ಮದುವೆಯಿಲ್ಲದ ಯೂರೋಪಿಯನರಿಗೂ ಅರ್ಥಾರ್ಥ ಸಂಬಂಧವಿಲ್ಲ.

ಹೀಗೆ ಭಗ್ನಮನೋರಥನಾದ ಹಿಂದೂ ವಿದ್ಯಾರ್ಥಿಯು ತನ್ನ ಕಷ್ಟಕ್ಕೆಲ್ಲಾ ತನ್ನ ತಾಯಿತಂದೆಗಳೇ ಕಾರಣಭೂತರೆಂದು ತಿಳಿದುಕೊಳ್ಳುವನು. ಕೆಲವು ವೇಳೆಗಳಲ್ಲಿ ಈತನ ಹೆಂಡತಿಯು ಈತನನ್ನು ಬಿಟ್ಟು ಬಿಡುವಳು, ಮತ್ತು ಕೆಲವು ವೇಳೆಗಳಲ್ಲಿ ತನಗೆ ಅಪ್ರಿಯರಾದ ಅವನ ತಂದೆ ತಾಯಿಗಳನ್ನು ಅವನು ಬಿಡುವಂತೆ ಮಾಡುವಳು. ಇದರಿಂದ ತಂದೆ ಮಕ್ಕಳಿಗೆ ಮನಸ್ತಾಪಗಳುಂಟಾಗಿ, ಕ್ರಮೇಣ ಸಂಸಾರದ ಆಸ್ತಿಯ ವಿಷಯವಾಗಿ ಜಗಳಗಳು ಹುಟ್ಟಿ, ಆ ಜಗಳಗಳನ್ನು ಕೊನೆಗೆ ಕೋರ್ಟಿನವರು ತೀರಿಸಬೇಕಾಗುವದು. ಇದನ್ನೆಲ್ಲಾ ನೋಡಿ, ತಂದೆಯು ಇದೆಲ್ಲಾ ಕಲಿಯುಗದ ಮಾಹಾತ್ಮ್ಯ

ಯೆಂದು ಅಂದುಕೊಳ್ಳುವನು. ಕೆಲವು ಸಮಯ್ಯಗಳಲ್ಲಿ, ನನ್ನ ಗಂಡನ ಮನೆಯಲ್ಲಿ ಇರುವದಕ್ಕೆ ನನಗೆ ಸಮ್ಮತವಿಲ್ಲವೆಂದು ಹೆಂಡತಿಯು ತಾನೇ ಕೋರ್ಟಿಗೆ ಹೋಗುವಳು. ಇಂಥಾ ಸಂಸಾರದ ದುಃಖದಲ್ಲಿ ಈತನು ತನ್ನ ವಿದ್ಯಾವ್ಯಾಸಂಗವನ್ನು ಬಿಟ್ಟು ಕ್ರಮೇಣ ತಾನು ಕಲಿತಿದ್ದನ್ನೆಲ್ಲಾ ಮರೆತುಬಿಡುವನು. ಅನಂತರದಲ್ಲಿ ಜೀವನ ಮಾಡಿಕೊಳ್ಳಲು ಯತ್ನವಿಲ್ಲದೆ ದುರ್ಮಾರ್ಗಪ್ರವರ್ತಕನಾಗುವನು.

ಇದಲ್ಲದೆ ಚಿಕ್ಕತನದಲ್ಲಾಗುವ ವಿವಾಹದಿಂದ ಅನೇಕ ಸ್ತ್ರೀಯರು ಬಾಲ್ಯದಲ್ಲಿಯೇ ವಿಧವೆಯರಾಗುವರು. ಇವರು ಯಾವಜ್ಜೀವವೂ ಸನ್ಯಾಸಿಗಳ ಹಾಗೆ ಇರಬೇಕಾದಕಾರಣ ಸಂದರ್ಭಬಿದ್ದಾಗ ವ್ಯಭಿಚಾರಿಗಳಾಗಿ ಕ್ರಮೇಣ ಶಿಶುಹತ್ಯೆ ಮುಂತಾದ ದುಷ್ಕೃತ್ಯಗಳನ್ನೆಲ್ಲಾ ಮಾಡುವರು.

ಹುಡುಗನು ಸ್ವತಂತ್ರನಾಗಿದ್ದರೆ ಏನಾಗುವದೋ ನೋಡೋಣ. ಈತನು ವೃದ್ಧರಾದ ತನ್ನ ತಾಯಿತಂದೆಗಳನ್ನು ನೋಡಿ ಅವರನ್ನು ಹುಚ್ಚರಿಗಿಂತಲೂ ಹೆಚ್ಚಾಗಿ ಕಾಣುವನು. ತಾನು ಮನೆಯಿಂದ ಹೊರಗಿದ್ದಾಗ ಸುಖವಾಗಿರುವನು. ಕ್ರಮೇಣ ಇಂಗ್ಲೀಷು ಜನರ ಹಾಗೆಯೇ ನಟಿಸುವನು. ತನ್ನ ಮನೆಯುವರನ್ನು ತಾನು ತಿದ್ದಿಕೊಳ್ಳಲಾರನು. ಇಂಥಾವನು ಮತಭ್ರಷ್ಟನಾಗಿಯೂ ಆಕ್ರಮನಾಗಿಯೂ ಇರುವನೆಂಬ ವಿಷಯದಲ್ಲಿ ಏನೇನೂ ಆಶ್ಚರ್ಯವಿಲ್ಲ. ಹೀಗೆ ಇವನ ಜೀವಮಾನವು ಪರರಿಗೆ ಉಪಕಾರವಿಲ್ಲದೆಯೂ ತನಗೆ ಸುಖವಿಲ್ಲದೆಯೂ ಮುಗಿದು ಹೋಗುವದು.

ಈಗ ಹೇಳಿದ್ದೆಲ್ಲಾ ಯೂರೋಪು ದೇಶಸ್ಥರಿಗೆ ಅತಿಶಯೋಕ್ತಿ ಯೆಂದು ತೋರಬಹುದು. ಆದರೆ ನಿಷ್ಪಕ್ಷಪಾತಿಗಳಾಗಿರುವ ಹಿಂದುಗಳು ಅನೇಕ ಹಿಂದೂ ಸಂಸಾರಗಳು ಇದಕ್ಕಿಂತಲೂ ಕಡೆಯಾಗಿವೆ ಯೆಂಬದಾಗಿಯೂ, ಈ ಅವಸ್ಥೆಯನ್ನು ತಪ್ಪಿಸುವದು ಕಷ್ಟವೆಂಬದಾಗಿಯೂ, ಒಪ್ಪಿಕೊಳ್ಳುವರು. ಈ ಸಂಸಾರದುಃಖಗಳೆಲ್ಲಾ ತಪ್ಪಬೇಕಾದರೆ ಚಿಕ್ಕತನದಲ್ಲಾಗುವ ಮದುವೆಯನ್ನು ತಪ್ಪಿಸುವದು, ಹೆಂಗಸರಿಗೆ ವಿದ್ಯಾಭ್ಯಾಸ ಮಾಡಿಸುವದು, ಈ ಎರ

ಷರಿಂದ ವಿನಹಾ ಮತ್ತ್ಯಾವನರಿಂದಲೂ ಸಾಧ್ಯವಾಗಲಾರದು. ಸಂಸಾರವು ಈ ಸ್ಥಿತಿಯಲ್ಲಿರುವಾಗ ಜನರಿಗೆ ಪಾಠಶಾಲೆಯಲ್ಲಿ ಎಷ್ಟು ನೀತಿಯನ್ನು ಬೋಧಿಸಿದರೂ ಅವರು ಮತಾಭಿಮಾನಿಗಳೂ ಪ್ರಾಮಾಣಿಕರೂ ಆಗುವದಿಲ್ಲ. ಈ ಅವಿವೇಕ ಕೃತ್ಯಗಳನ್ನು ನಿರ್ಮೂಲಮಾಡಿದ ಹೊರ್ತು ಹಿಂದೂಜನರು ಸುಖಿಗಳಾಗಿಯೂ ಜ್ಞಾನವಂತರಾಗಿಯೂ ಇರುವದಿಲ್ಲ.

ಸಿ. ಸುಬ್ಬರಾವ್, ಬಿ. ಎ.

೪. ಜ್ಯೋತಿಷ.



ಕಳೆದ ಸಂಚಿಕೆಯಲ್ಲಿ ಬರೆದಿರುವ ವಿಷಯವು, ಭಚಕ್ರದ ಪರಿಧ್ಯಂಶರೀತಿಯಾಗಿ ಭೂಚಕ್ರದ ಪರಿಧಿ ಪ್ರಮಾಣವನ್ನು ಕಂಡು ಹಿಡಿಯುವರೀತಿಯು. ಮುಂದಕ್ಕೆ ಅಕ್ಷದರೀತಿಯಾಗಿ ಭೂಚಕ್ರಪರಿಧಿಪ್ರಮಾಣವನ್ನು ಕಂಡುಹಿಡಿಯುವ ರೀತಿಯನ್ನು ಬರೆಯುವೆವು.

ಇಲ್ಲಿ ಬರೆದಿರುವ ಭೂಚಕ್ರದಲ್ಲಿ 'ಮ' ಮಧ್ಯ, 'ಉ' ಉತ್ತರಧ್ರುವ, 'ದ' ದಕ್ಷಿಣಧ್ರುವ 'ಚ' ಮೈಸೂರು, 'ಪ' ಪಾಲಹಳ್ಳಿ, ಎಂದು ಭಾವಿಸಿದ್ದೇಆದರೆ ಆಗ ಸೂರ್ಯಸಿದ್ಧಾಂತದಲ್ಲಿ "ರಾಕ್ಷಸಾಲಯ ದೇವೌಕ ಶೈಲಯೋರ್ಮಧ್ಯಸೂತ್ರಗಾಃ ಭೂಮಧ್ಯರೇಖಾಃ" ಎಂಬದಾಗಿ ಭೂಮಧ್ಯರೇಖಾರ್ಥವು ಬರೆಯಲ್ಪಟ್ಟಿರೋಣದರಿಂದಲೂ, ಇದಕ್ಕೆ ರಾಮಕೃಷ್ಣಾರ್ಯರು ಬರೆದಿರುವ ವ್ಯಾಖ್ಯಾನವು "ಸ್ವಮೇರು ಲಂಕಾಮೇರೋಃ ಸಮಸೂತ್ರಾಃ ಭೂಮಧ್ಯರೇಖಾಃ" ಎಂಬದಾಗಿ ಇರೋಣದರಿಂದಲೂ ಉತ್ತರ ದಕ್ಷಿಣ ಧ್ರುವಗಳ

ಮನೇಕಟ್ಟಬಹುದು ; ಮನಸ್ಸು ಕಟ್ಟಕೂಡದು.

ಮೂಲಕವಾಗಿಯೂ ನಾವಿರುವ ಪ್ರದೇಶದ ಮೂಲಕವಾಗಿಯೂ ಹಾಯ್ದು ಹೋಗುವ ರೇಖೆಯು ಆ ಸ್ಥಳದ ಭೂಮಧ್ಯರೇಖೆಯೆಂದು ಗೊತ್ತಾಗುವದು. ಮೇಲೆ ಬರೆದಿರುವ ಭೂಚಕ್ರದ ಪರಿಧಿಯು ಉತ್ತರದಕ್ಷಿಣಧ್ರುವಗಳ ಮೂಲಕವಾಗಿ ಮೈಸೂರು ಪಾಲಹಳ್ಳಿಗಳ ಮೇಲೆ ಹಾಯ್ದು ಹೋಗುವದ್ದರಿಂದ ಈ ರೇಖೆಯು ಮೈಸೂರಿಗೂ ಪಾಲಹಳ್ಳಿಗೂ ಭೂಮಧ್ಯ ರೇಖೆಯಾಗುವದು. ಇದಲ್ಲದೆ 'ಶ' ಎಂಬ ಅಕ್ಷರವಿರುವ ಪ್ರದೇಶವು ಮೈಸೂರಿಗೂ, 'ಗ' ಎಂಬ ಅಕ್ಷರವಿರುವದು ಪಾಲಹಳ್ಳಿಗೂ, ಉಚ್ಚ್ಯಗಳಾಗುವವು. ಮತ್ತು ಭ ಚಕ್ರದಲ್ಲಿನ ಯಾವದಾದರೂ ಒಂದು ನಕ್ಷತ್ರ ಯಾವ ವೇಳೆಯಲ್ಲಾದರೂ ಭೂಚಕ್ರದ ಮೇಲಿರುವ ಯಾವದಾದರೂ ಒಂದು ಸ್ಥಳದ ಉಚ್ಚ್ಯಸ್ಥಾನಕ್ಕೆ ಸರಿಯಾಗಿ ದಕ್ಷಿಣದ ಕಡೆಗೆ ಬಂದರೆ, ಅದೇ ವೇಳೆಯಲ್ಲಿ ಆ ನಕ್ಷತ್ರವು ಆ ಸ್ಥಳದ ಭೂಮಧ್ಯರೇಖೆಯ ಮೇಲೆ ಆ ಸ್ಥಳಕ್ಕೆ ಉತ್ತರದಲ್ಲಿರುವ ಪ್ರದೇಶಗಳಿಗೆ ದಕ್ಷಿಣದಕಡೆಯೂ, ದಕ್ಷಿಣದಕಡೆ ಇರುವವುಗಳಿಗೆ ಉತ್ತರಕ್ಕೂ ಇರುವದಾದ್ದರಿಂದ ಮೇಲೆ ಬರೆದಿರುವ ವೃತ್ತದಲ್ಲಿ ಮೊದಲ 'ನ' ಎಂಬ ಪ್ರದೇಶದಲ್ಲಿರುವ ನಕ್ಷತ್ರವು ರಾತ್ರಿ ಹತ್ತು ಘಂಟೆಗೆ ಮೈಸೂರಿಗೆ ಉಚ್ಚ್ಯದಲ್ಲಿರುವ 'ಶ' ಎಂಬ ಪ್ರದೇಶಕ್ಕೆ ದಕ್ಷಿಣಕ್ಕೆ ಬಂದರೆ ಅದೇ ಹತ್ತು ಘಂಟೆಯಲ್ಲಿ ಆ ನಕ್ಷತ್ರವು ಮೈಸೂರಿಗೆ ಉತ್ತರದಲ್ಲಿರುವ ಪಾಲಹಳ್ಳಿಗೆ ದಕ್ಷಿಣದ ಕಡೆಯೇ ಇರುವದು ಸ್ಪಷ್ಟವು.

ಎರಡು ರೇಖೆಗಳು ಸೇರುವಕಡೆ ಅಶ್ರವೆಂದರೆ ಮೂಲೆಯುಂಟಾಗುವದು. ಇದು ಸಕಲರಿಗೂ ವಿಶದವಾಗಿಯೇ ಇದೆ. ಭಾಗಾಶ್ರ ರಾಶ್ಯಶ್ರಗಳ ಅರ್ಥವು ಪೂರ್ವದಲ್ಲೇ ತಿಳಿಸಲ್ಪಟ್ಟಿರುತ್ತೆ. ಈ ಅಶ್ರಗಳನ್ನೂ ಅಶಾಂಶಗಳನ್ನೂ ಅಳೆಯುವದಕ್ಕೆ ಒಂದು ಯಂತ್ರವಿರುವದು. ಈ ಯಂತ್ರದ ಸಹಾಯದಿಂದ ಯಾವನಾದರೂ ಒಬ್ಬನು 'ಚ' ಎಂಬ ಪ್ರದೇಶವಾದ ಮೈಸೂರಲ್ಲಿ ನಿಂತು ರಾತ್ರಿ ಹತ್ತು ಘಂಟೆಯಲ್ಲಿ 'ನ ಚ' 'ಶ ಚ' ಗಳೆಂಬ ಎರಡು ರೇಖೆಗಳು ಕೂಡೋಣವರಿಂದ ಉಂಟಾಗುವ 'ನಚಶ' ಎಂಬ ಅಶ್ರವನ್ನು ಕಂಡು ಹಿಡಿಯಲಿ. 'ನ' ಎಂಬ ಪ್ರದೇಶದಲ್ಲಿರುವ ನಕ್ಷತ್ರವು ಬಹಳ ದೂರದಲ್ಲಿರುವ

ದ್ದಗಿಂದ ಭೂ ವ್ಯಾಸಾರ್ಧವು ಈ ದೂರಕ್ಕೆ ಹೋಲಿಸಿದಾಗ ಅತ್ಯಂತ ಚಿಕ್ಕದಾದ್ದರಿಂದ ಈ 'ನಚಕಶ' ಎಂಬ ಅಕ್ಷವು ಭೂಮಧ್ಯದಲ್ಲಿರುವ 'ನಮಷ' ಎಂಬದರಸಮನೆಂದೇ ಭಾವಿಸಬಹುದು. ಮಸಲ ಈ ಅಕ್ಷವು ೨ ಭಾಗಾಂಶಗಳೂ ೩೭ ಲಿಪ್ತ್ಯಂಶಗಳೂ, ಆಗುವದೆನ್ನೋಣ. ಇದೇ ವೇಳೆಯಲ್ಲಿ ಪಾಲಹಳ್ಳಿಯಲ್ಲಿ ಅದೇ ಯಂತ್ರದ ದೆಸೆಯಿಂದ 'ನ ಪ ರ' ಅಥವಾ 'ನ ಮ ಠ' ಎಂಬ ಅಕ್ಷವನ್ನು ಗೊತ್ತು ಮಾಡಲಿ. ಮಸಲ ಇದು ೨ ಭಾಗಾಂಶಗಳೂ ೪೩ ಲಿಪ್ತ್ಯಂಶಗಳೂ ಆಗುವದೆನ್ನೋಣ. ಈ ಯೆರಡಕ್ಷಗಳ ಅಂತರವು ಆರು ಲಿಪ್ತ್ಯಂಶಗಳಾಗುವವು. ಆಮೇಲೆ ಮೈಸೂರಿಗೂ ಪಾಲಹಳ್ಳಿಗೂ ಎಷ್ಟು ದೂರ ಇದೆಯೋ ಅದನ್ನು ಗೊತ್ತು ಮಾಡಬೇಕು. ಮಸಲ ಇದು ೭ ಮೈಲಿಗಳೆನ್ನೋಣ. ಮೇಲೆ ಹೇಳಿದ ಪ್ರಕಾರ ಆರು ಲಿಪ್ತ್ಯಂಶಗಳನ್ನು ಭೂಪರಿಧಿಯಲ್ಲಿ ೭ ಮೈಲುಗಳ ಪರಿಧ್ಯಂಶವು ಮುಟ್ಟುವದು. ಆದ್ದರಿಂದ ೬೦ ಲಿಪ್ತ್ಯಂಶಗಳು ಅಂದರೆ ಒಂದು ಭಾಗಾಂಶವನ್ನು ೭೦ ಮೈಲುಗಳ ಪರಿಧಿಯು ಮುಟ್ಟುವದು. ಹೀಗೆಯೇ ೩೦ ಭಾಗಾಂಶಗಳಂದರೆ ಒಂದು ರಾಶ್ಯಂಶವನ್ನು ೨,೧೦೦ ಮೈಲುಗಳ ಪರಿಧಿಯುಮುಟ್ಟುವದು. ಆದಕಾರಣ ೧೨ ರಾಶ್ಯಂಶಗಳನ್ನು ೨೫,೨೦೦ ಮೈಲುಗಳ ಪರಿಧಿಯು ಮುಟ್ಟುತ್ತಿರುವದು. ಹೀಗೆ ಭೂಪರಿಧಿ ಪ್ರಮಾಣವು ಸ್ವಲ್ಪ ಹೆಚ್ಚು ಕಡಿಮೆ ೨೫,೨೦೦ ಮೈಲುಗಗಳಾಗಿರುವದು. ಜ್ಯೋತಿಷ್ಕರು ಇದನ್ನು ಸರಿಯಾಗಿ ಗಣಿತಮಾಡಿ ಭೂಪರಿಧಿ ಪ್ರಮಾಣವು ೨೪೯೩೫ ಮೈಲುಗಳು ಅಂದರೆ ೪೯೮೭ ಯೋಜನಗಳೆಂದೂ ಇದರ ವ್ಯಾಸವು ೭೯೦೫ ಮೈಲುಗಳು ಅಂದರೆ ೧೫೮೦ ಯೋಜನಗಳೆಂದೂ ಗೊತ್ತು ಮಾಡಿ ಇದ್ದಾರೆ.

ಕೋ. ಕಂ. ವೆಂ.

೫. ಅಲೆಗ್ಝಾಂಡರಿಗೂ ಒಬ್ಬ ಕಳ್ಳನಿಗೂ ನಡೆದ ಸಂಭಾಷಣೆ.

ಯೂರೋಪು ಖಂಡದಲ್ಲಿ ಗ್ರೀಸ್ ಎಂಬದಾಗಿ ಒಂದು ದೇಶವಿದೆ. ಇದರ ಉತ್ತರಭಾಗದಲ್ಲಿ ಮೆಸಡೋನಿಯಾ ಎಂಬ ಒಂದು ರಾಜ್ಯವಿತ್ತು. ಈಗ್ಯೆ ಸುಮಾರು ೨೨೪೦ ವರ್ಷಗಳಿಗೆ ಮುಂಚೆ ಈ ರಾಜ್ಯವನ್ನು ಫಿಲಿಪ್

ಎಂಬುವನು ಆಳುತ್ತಿದ್ದನು. ಈತನ ಮಗನೇ ಅಲೆಗ್ಸಾಂಡರ್ ಎಂಬಾತನು. ಅಲೆಗ್ಸಾಂಡರನು ಚಿಕ್ಕಂದಿನಲ್ಲಿಯೇ ಬಹಳ ವಿದ್ಯಾವಂತನಾಗಿಯೂ ಪರಾಕ್ರಮಶಾಲಿಯಾಗಿಯೂ ಇದ್ದನು. ಈತನು ಒಂದುದಿನ ತನ್ನ ವಿದ್ಯಾಗುರುವಿನ ಬಳಿಯಲ್ಲಿ ವೀರರಸದಿಂದ ತುಂಬಿದ ಒಂದು ಗ್ರಂಥವನ್ನು ಓದುತ್ತಾ ಇರುವಾಗ ಆತನನ್ನು ಕುರಿತು “ ಸ್ವಾಮಿ, ನಾನು ಮಾಡತಕ್ಕದ್ದೇನು ! ಈ ಗ್ರಂಥದಲ್ಲಿ ಹೇಳಿ ಇರುವ ವೀರರ ಸಾಹಸಕೃತ್ಯಗಳನ್ನು ನೋಡಿ ಈ ಲೋಕವನ್ನೆಲ್ಲಾ ಜಯಿಸಿ ಅಪಾರವಾದ ಕೀರ್ತಿಯನ್ನು ಸಂಪಾದಿಸ ಬೇಕೆಂದು ನನಗೆ ಕುತೂಹಲ ಉಂಟಾಗಿದೆ ; ಆದರೆ ನನ್ನ ತಂದೆಯು ನನಗೆ ಒಂದು ದೇಶವನ್ನೂ ಬಿಡದೆ ಲೋಕವನ್ನೆಲ್ಲಾ ಜಯಿಸುವದಕ್ಕೆ ಉಪಕ್ರಮಿಸಿ ಇದ್ದಾನೆ. ನಾನೇನು ಮಾಡಲಿ ! ” ಎಂದು ಹೇಳಿದನು. ಕೆಲವು ದಿನಗಳಾದ ಮೇಲೆ ಒಬ್ಬ ವರ್ತಕನು, ಅತ್ಯಂತ ಬಲಿಷ್ಠವಾದ ಒಂದು ಕುದರೆಯನ್ನು ತೆಗೆದುಕೊಂಡು ಬಂದು ರಾಜನಿಗೆ ಒಪ್ಪಿಸಿದನು. ಆ ದಿವ್ಯವಾದ ಕುದುರೆಯ ಮೇಲೆ ಕೂತುಕೊಳ್ಳುವದಕ್ಕೆ ಯಾರಿಗೂ ಅಶಕ್ಯವಾಗಿತ್ತು. ರಾಜನು ತನ್ನ ದೇಶದಲ್ಲಿ ಪ್ರಸಿದ್ಧರಾದ ಅನೇಕ ಸವಾರರನ್ನು ಕರೆಸಿ ಈ ಕುದುರೆಯ ಮೇಲೆ ಕೂತು ಸವಾರೀ ಮಾಡಿರೆಂದು ಆಜ್ಞಾಪಿಸಿದನು. ಅವರಲ್ಲಿ ಕೆಲವರು ಅದರ ಮೇಲೆ ಹತ್ತುವದಕ್ಕೆ ಪ್ರಯತ್ನಿಸಿ ಕೈಕಾಲುಗಳನ್ನು ಮುರಿದು ಕೊಂಡರು ; ಮತ್ತು ಕೆಲವರು ಪ್ರಾಣಗಳನ್ನು ಕಳೆದು ಕೊಂಡರು. ಇದನ್ನು ನೋಡಿ ಅಲೆಗ್ಸಾಂಡರನು ತಂದೆಯ ಬಳಿಗೆ ಹೋಗಿ ಆ ಕುದುರೆಯನ್ನೇರುವದಕ್ಕೆ ತನಗೆ ಅಪ್ಪಣೆಯಾಗಬೇಕೆಂದು ಕೇಳಿಕೊಂಡನು. ಅದಕ್ಕೆ ರಾಜನು “ಎಲೆ ಮಗನೆ, ನೀನೆಲ್ಲಿ ಈ ಕುದುರೆ ಎಲ್ಲಿ ! ಪ್ರಸಿದ್ಧರಾದ ಅನೇಕ ರಾವುತರೂ ಕೂಡ ಇದರ ಮೇಲೆ ಕೂತುಕೊಳ್ಳುವದಕ್ಕೆ ಪ್ರಯತ್ನ ಮಾಡಿ ಪ್ರಾಣಗಳನ್ನು ಕಳೆದುಕೊಂಡರು. ಇದಲ್ಲದೆ ನನಗೆ ನೀನೊಬ್ಬನೇ ಮಗನು. ಇಂಥಾ ಕೋರಿಕೆಯನ್ನು ಕೋರ ಬೇಡ ” ಎಂದು ಹೇಳಿದನು. ಅಲೆಗ್ಸಾಂಡರನು ತಂದೆಯನ್ನು ನಾನಾ ವಿಧವಾಗಿ ಬೇಡಿಕೊಂಡು, ಕಡೆಗೆ ಅವನ ಅನುಮತಿಯನ್ನು ಪಡೆದು, ಮೆಲ್ಲಗೆ ಆ ಕುದುರೆಯ ಸಮೀಪಕ್ಕೆ ಹೋಗಿ, ಅದನ್ನು

ಸಾಯುವವರ ಕಣ್ಣಿಗೆ ಸುಳಿದವನೇ ಜವರಾಯ.

ಮೈಸವರಿ, ಸಮೀಪದಲ್ಲಿ ಸುಮ್ಮನೆ ನಿಂತಿರುವವನಂತೆ ಅಭಿನಯಿಸಿ, ಅದನ್ನು ಬಿಸಲಿಗೆ ಎದುರಾಗಿ ನಿಲ್ಲಿಸಿ, ಅದರ ಹಿಂದು ಮುಂದೆ ತಿರುಗುತ್ತಾ ಇದ್ದು, ಅದರ ದೃಷ್ಟಿಯು ತನ್ನ ಮೇಲೆ ಇಲ್ಲದ ಸಮಯವನ್ನು ನೋಡಿಕೊಂಡು, ಗಕ್ಕನೆ ಹಾರಿ ಅದರ ಮೇಲೆ ಕೂತನು. ಕೂಡಲೆ ಆ ಕುದುರೆಯು ಈತನನ್ನು ಕೆಡವ ಬೇಕೆಂದು ಯೋಚಿಸಿ, ನಾನಾ ವಿಧವಾಗಿ ಮೇಲಕ್ಕೆ ಹಾರಿ, ಆದರೂ ಈತನು ಬೀಳದೆ ಭದ್ರವಾಗಿ ಕೂತುಇದ್ದದ್ದನ್ನು ಕಂಡು, ಅತ್ಯಂತ ವೇಗವಾಗಿ ಓಡಲು ಉಪಕ್ರಮಿಸಿತು. ಆಗ ಎಲ್ಲರೂ ಈತನ ಸಾಹಸವನ್ನು ಕಂಡು ಬೆರಗಾಗಿ ಅದು ಹೋದ ಮಾರ್ಗವನ್ನೇ ನೋಡುತ್ತಾ ನಿಶ್ಚಲರಾಗಿ ನಿಂತು ಇದ್ದರು. ೫—೬ ಗಂಟೆಗಳೊಳಗಾಗಿ ಅಲೆಗ್ಜಾಂಡರನು ಆ ಕುದುರೆಯನ್ನು ೧೦೦ ಮೈಲು ಸುತ್ತಿಸಿ, ತಿರುಗಿ ತಾನು ಹೊರಟ ಸ್ಥಳಕ್ಕೆ ತಂದು ನಿಲ್ಲಿಸಿ, ಕೆಳಕ್ಕೆ ದುಮುಕಿದನು. ರಾಜನು ಮಗನ ಸಾಮರ್ಥ್ಯವನ್ನು ನೋಡಿ ಮೆಚ್ಚಿ ಅವನನ್ನು ಆಲಿಂಗನೆ ಮಾಡಿಕೊಂಡನು. ಕುದುರೆಯು ಮೈ ಯೆಲ್ಲಾ ಬೆವತು ಬಾಯಿಯಿಂದ ನೊರೆಯನ್ನು ಸುರಿಸುತ್ತಿತ್ತು. ಹೀಗೆ ಆ ಕುದುರೆಯು ಅದಿನ ಮೊದಲುಗೊಂಡು ಈತನ ಸವಾರಿಗೆ ಅನುಕೂಲಿಸಿತು.

ಕೆಲವು ದಿನಗಳಾದ ಮೇಲೆ ಫಿಲಿಪ್ ರಾಜನು ಕಾಲಾಧೀನನಾದನು. ಕೂಡಲೆ ಅಲೆಗ್ಜಾಂಡರನು ಸಿಂಹಾಸನಾಸೀನನಾಗಿ ಲೋಕವನ್ನೆಲ್ಲಾ ಜಯಿಸಿ ಏಕಛತ್ರಾಧಿಪತ್ಯವನ್ನು ಮಾಡುತ್ತಾ ಇದ್ದನು. ಆಗ ಈತನ ದೇಶದ ಪಶ್ಚಿಮಭಾಗದಲ್ಲಿ ತ್ರೇಸ್ ಎಂಬ ಪರ್ವತ ದೇಶದಲ್ಲಿ ಮಹಾ ಪರಾಕ್ರಮಶಾಲಿಯಾದ ಒಬ್ಬ ಕಳ್ಳನು ಅನೇಕಜನ ಕಳ್ಳರನ್ನು ಕಟ್ಟಿಕೊಂಡು ಅರಣ್ಯಗಳಲ್ಲಿಯೂ ಬೆಟ್ಟಗಳಲ್ಲಿಯೂ ವಾಸಮಾಡುತ್ತಾ ಇದ್ದು, ಸಕಲರಾಜ್ಯಗಳಲ್ಲಿಯೂ ಐಶ್ವರ್ಯವಂತರ ಮನೆಗಳನ್ನು ಸೂರೆಮಾಡಿ, ತನ್ನ ಪರಿವಾರ ದೊಂದಿಗೆ ಜೀವನ ಮಾಡುತ್ತಾ ದರಿದ್ರರಿಗೆ ಸಹಾಯಮಾಡುತ್ತಾ ಕಾಲಹರಣ ಮಾಡಿಕೊಂಡಿದ್ದನು. ಅಲೆಗ್ಜಾಂಡರನು ಅವನನ್ನು ಹಿಡಿಯಬೇಕೆಂದು ನಾನಾವಿಧವಾದ ಪ್ರಯತ್ನಗಳನ್ನು ಮಾಡಿ ಭಗ್ನಮನೋರಥನಾಗಿ ಕಡೆಗೆ ಒಂದಾನೊಂದು ಕಾಲದಲ್ಲಿ ಆ ಚೋರಶ್ರೇಷ್ಠನು ಅರಣ್ಯದಲ್ಲಿ ಇದ್ದ ಸಂಗತಿಯನ್ನು ತಿಳಿದು

ಸುಳ್ಳು ದೇವರಿಗೆ ಕಳ್ಳ ಪೂಜಾರಿ.

ಗುಟ್ಟಾಗಿ ತನ್ನ ಜನರನ್ನು ಕಳುಹಿಸಿ ಅವನನ್ನು ಹಿಡಿತರಿಸಿ ಸೆರೆಯಲ್ಲಿ ಇಟ್ಟಿದ್ದು, ಅವನನ್ನು ವಿಚಾರಣೆ ಮಾಡಿ ದಂಡಿಸುವದಕ್ಕಾಗಿ ಒಂದು ದಿನ ಸಮಸ್ತ ನ್ಯಾಯಾಧಿಪತಿಗಳನ್ನೂ ಕರೆಸಿ, ಸಭೆಮಾಡಿ ಅವನನ್ನು ಹಿಡಿತಂದು ನಿಲ್ಲಿಸುವಂತೆ ಆಜ್ಞೆ ಮಾಡಿದನು. ದೂತರು ಕೂಡಲೆ ಅವನನ್ನು ಹಿಡಿತಂದು ನಿಲ್ಲಿಸಲು, ಆ ಚೋರಶ್ರೇಷ್ಠನು ನ್ಯಾಯಾಧಿಪತಿಗಳನ್ನೂ ಸಿಂಹಾಸನಾರೂಢನಾದ ರಾಜನನ್ನೂ ನಿರ್ಭೀತನಾಗಿ ದುರುಗುಟ್ಟಿಕೊಂಡು ನೋಡಿದನು. ಅಲೆಗ್ಝಾಂಡರ್ ಮಹಾರಾಜನು ಅವನಧೈರ್ಯವನ್ನೂ ಮನೋದಾರ್ಢ್ಯವನ್ನೂ ನೋಡಿ ತನ್ನಲ್ಲಿ ತಾನೇ ಆಶ್ಚರ್ಯಪಟ್ಟು ಅತ್ಯಂತ ಕೋಪವನ್ನು ಅಭಿನಯಿಸುತ್ತಾ ಅವನನ್ನು ಕುರಿತು—

ಅಲೆಗ್ಝಾಂಡರ್.—ಎಲೈ ಚೋರಾಧಮನೇ ! ನೀನು ಮಾಡಿರುವ ಆ ಕೃತ್ಯ ಗಳನ್ನು ಕೇಳಿ ಬಲ್ಲೆನು. ನೀನು ಯಾರು ?

ಕಳ್ಳ.—ನಾನು ಥ್ರೇಷ್ಯಾದೇಶದ ಸೇನಾನಾಯಕನು.

ಅ.—ಓಹೋ ! ನೀನೂ ಸೇನಾನಾಯಕನೋ ? ಈ ಬಿರದು ಕಳ್ಳರಿಗೂ ಉಂಟೋ ? ನೀನು ಪರಮ ನೀಚನು ; ಪ್ರಾಣಿ ಹಿಂಸೆಯನ್ನು ಮಾಡುವದಕ್ಕೆ ಹೇಸದವನು. ನಿನ್ನ ಮನೋಧೈರ್ಯವನ್ನು ನೋಡಿ ಶ್ಲಾಘಿಸಬೇಕಾದಾಗ್ಯೂ ನೀನು ಮಾಡಿರುವ ಅಕೃತ್ಯಗಳಿಗಾಗಿ ನಿನ್ನನ್ನು ದಂಡಿಸುವೆನು.

ಕ.—ಅಯ್ಯಾ ರಾಜನೇ, ಯಾತಕ್ಕೆ ಇಷ್ಟು ಕೋಪಮಾಡುವೆ ? ಲೋಕದಲ್ಲಿ ನಿರಪರಾಧಿಗಳನ್ನು ದಂಡಿಸ ಬಹುದೆ ? ನಾನು ನಿನಗೆ ಮಾಡಿದ ಅಪರಾಧವೇನು ? ನನ್ನನ್ನು ಯಾಕೆ ದಂಡಿಸುವೆ ?

ಅ.—ನೀನು ರಾಜಾಜ್ಞೆಗೆ ವಿರೋಧವಾಗಿ ನಿರ್ಭಯದಿಂದ ನಡೆದವನು. ನೀನು ಸಂಸಾರಿಗಳಿಗೆ ತೊಂದರೆ ಕೊಟ್ಟು ಅವರ ಆಸ್ತಿಗಳನ್ನೆಲ್ಲಾ ಸೂರೆಗೊಂಡವನಲ್ಲವೆ ? ಹೀಗೆ ರಾಜದ್ರೋಹಿಯೂ ಜನದ್ರೋಹಿಯೂ

ಸೇರು ರಾಜ, ಮಣಿ ಬಂಟ.

ಆದ ನೀನು ನಿರಪರಾಧಿಯು ? ನಿನ್ನನ್ನು ಶಿಕ್ಷಿಸುವದು ಸಜ್ಜನರಿಗೆ ಅಭಿಮತವೇ ಸರಿ.

ಕ.—ಎಲೈ ರಾಜನೇ, ನಾನು ದೈವಾಧೀನದಿಂದ ಈಗ ನಿನ್ನ ಅಧೀನನಾಗಿ ಇದ್ದೇನೆ. ನೀನು ಬಾಯಿಗೆ ಬಂದಹಾಗೆಲ್ಲಾ ಮಾತನಾಡಿದರೂ ಕೇಳತಕ್ಕ ಅವಸ್ಥೆಯು ನನಗೆ ಬಂದಿರುತ್ತದೆ, ಆದರೂ ನಾನು ಹೆದರ ತಕ್ಕವನಲ್ಲ. ನನ್ನ ಶರೀರವು ನಿನ್ನ ಅಧೀನವೇ ಸರಿ ; ಆದರೆ ನನ್ನ ಮನಸ್ಸಿಗೆ ನೀನು ಯಜಮಾನನಲ್ಲ. ನೀನಾಡುವ ನಿಂದಾವಚನಗ ಳಿಗೆ ತಕ್ಕ ಉತ್ತರಗಳನ್ನು ನಾನು ಕೊಡ ಬಲ್ಲೆನು. ನೀನು ರಾಜ ನಾದರೂ ಭಯಪಡದೆ ನಿನ್ನ ಮಾತುಗಳಿಗೆ ತಕ್ಕ ಉತ್ತರವನ್ನು ಕೊಡುವೆನು. ಕೇಳುವದಕ್ಕೆ ಇಷ್ಟವಿದ್ದರೆ ಕೇಳು.

ಅ.—ನೀನು ನನ್ನ ಸ್ವಾಧೀನನೆಂದು ನಿನಗೆ ನಾನು ಅನ್ಯಾಯವಾದ ಶಿಕ್ಷೆ ಯನ್ನು ಮಾಡುವದಿಲ್ಲ. ನಿನಗೆ ತೋರುವ ಪ್ರತ್ಯುತ್ತರಗಳನ್ನು ಅಂಜದೆ ಹೇಳು. ತಪ್ಪಿತಸ್ಥರನ್ನು ಶಿಕ್ಷಿಸಬೇಕಾದರೆ ಮೊದಲು ಅವರು ಹೇಳುವದನ್ನೆಲ್ಲಾ ಕೇಳಿ ಅನಂತರ ನ್ಯಾಯಾನುಸಾರವಾಗಿ ನಡೆಯುವದು ರಾಜಪದ್ಧತಿಯು. ನಾನು ಈ ಪದ್ಧತಿಯನ್ನು ಮೀರಿ ನಡೆಯತಕ್ಕವನಲ್ಲ.

ಕ.—ಹಾಗಾದರೆ ನಿನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವದಕ್ಕೆ ಮೊದ ಲು ನಿನ್ನನ್ನೇ ಒಂದು ಪ್ರಶ್ನೆಯನ್ನು ಕೇಳುವೆನು — ನೀನು ನಿನ್ನ ಜೀವನವನ್ನು ಹ್ಯಾಗೆ ಮಾಡುತ್ತಾ ಇದ್ದೀಯೆ ?

ಅ.—ವೀರಶ್ರೇಷ್ಠನ ಹಾಗೆ ಮಾಡುತ್ತಾ ಇದ್ದೇನೆ. ವಿಜಯ ಲಕ್ಷ್ಮಿಯನ್ನು ಕೇಳು. ಆಕೆಯು ನಿನಗೆ ತಿಳಿಸುವಳು. ನಾನು ಮಹಾವೀರರಲ್ಲಿ ಮಹಾವೀರನು, ಚಕ್ರವರ್ತಿಗಳಲ್ಲಿ ಚಕ್ರವರ್ತಿಯು, ಜಯಶಾಲಿಗ ಳಲ್ಲಿ ಜಯಶಾಲಿಯು.

ಕ.—ಆಹಾ ರಾಜನೇ ! ನೀನೇ ನಿನ್ನ ಪರಾಕ್ರಮವನ್ನು ಚನ್ನಾಗಿ ಕೊಚ್ಚಿ

ಹಲ್ಲಿದ್ದವನಿಗೆ ಕಳ್ಳೆಯಿಲ್ಲ, ಕಳ್ಳೆಯಿದ್ದವನಿಗೆ ಹಲ್ಲಿಲ್ಲ.

ಕೊಂಡೆ. ನನ್ನ ಸಾಮರ್ಥ್ಯವನ್ನು ಹೇಳಿಕೊಳ್ಳಲು ನಾನೇ ನಾಚುವೆನು. ಚೋರಾಗ್ರೇಸರಲ್ಲಿ ನನಗಿಂತಲೂ ಗಟ್ಟಿಗನಾದವನು ಯಾವನಾದರೂ ಹಿಂದಕ್ಕೆ ಇದ್ದನೆ? ಈಗ ಇರುತ್ತಾನೆಯೆ? ನಿನ್ನ ಜಯಲಕ್ಷ್ಮಿಯನ್ನು ನೀನೇ ಕೇಳು. ಸಮಸ್ತ ರಾಜ್ಯಗಳನ್ನೂ ಲೀಲೆಯಿಂದ ಜಯಿಸಿದ ನಿನಗೂ ನನ್ನನ್ನು ಹಿಡಿಯುವದು ಎಷ್ಟು ಕಷ್ಟವಾಯಿತೊ ಅದನ್ನು ನೀನೇ ಯೋಚಿಸಿಕೊ: ಆಗ ನನ್ನ ಸಾಮರ್ಥ್ಯವು ನಿನಗೆ ಸ್ಪಷ್ಟವಾಗಿ ತಿಳಿಯುವದು.

ಅ.—ಆದರೆ ಏನು? ಹ್ಯಾಗಾದರೂ ನೀನು ಕಳ್ಳನಷ್ಟೆ. ಅದರಲ್ಲಿಯೂ ನೀನು ಬಹಳ ದ್ರೋಹಿಯು.

ಕ.—ಓಹೋ! ಎಷ್ಟು ಚನ್ನಾಗಿ ಹೇಳಿದೆ! ಜಯಶಾಲಿ ಅಂದರೆ ಅರ್ಥವೇನು? ನೀನು ದ್ರವ್ಯ ಕೀರ್ತಿಗಳನ್ನು ಸಂಪಾದಿಸಬೇಕೆಂಬ ಆಶೆಯಿಂದ ಮಾರಿಯಹಾಗೆ ಲೋಕದಲ್ಲಿರುವ ಎಲ್ಲಾ ದೇಶಗಳನ್ನೂ ನುಗ್ಗಿ ಸುಖವಾಗಿರುವ ಸಂಸಾರಿಗಳಿಗೆ ಕಷ್ಟವನ್ನು ಕೊಟ್ಟು ವ್ಯಾಪಾರ ವ್ಯವಸಾಯಗಳನ್ನು ಕೆಡಿಸಿ ದುರ್ನೀತಿ ಪರನಾಗಿ ಅನೇಕರನ್ನು ಕೊಂದು ಅವರ ಆಸ್ತಿಗಳನ್ನೆಲ್ಲಾ ಅಪಹರಿಸಿ ದೇಶಗಳನ್ನೂ ಪಟ್ಟಣಗಳನ್ನೂ ಗ್ರಾಮಗಳನ್ನೂ ಸುಟ್ಟು ಲೋಕಕಂಟಕನಾಗಿ ಇದ್ದು ಇಂಥಾ ಅಕೃತ್ಯಗಳಿಂದಲ್ಲವೇ ನೀನು ಜಯಶಾಲಿ ಆದದ್ದು! ನಾನು ಎಲ್ಲಾದರೂ ೧—೨ ಗ್ರಾಮಗಳನ್ನು ಪ್ರವೇಶಿಸಿ ೪—೫ ಧನಿಕರ ಮನೆಗಳನ್ನು ಲೂಟಿ ಮಾಡಿದರೆ ನೀನು ಲಕ್ಷೋಪ ಲಕ್ಷದೇಶಗಳನ್ನು ಹೊಕ್ಕು ಧನಿಕರು ದರಿದ್ರರೆಂದು ಭಾವಿಸದೆ ಎಲ್ಲರನ್ನೂ ಹಿಂಸಿಸಿ ರಾಜ್ಯಗಳನ್ನೇ ನಿರ್ಮೂಲ ಮಾಡಿ ಇದ್ದೀಯೆ. ನಾನು ಎಲ್ಲಿಯೋ ಒಬ್ಬೊಬ್ಬ ಪ್ರಯಾಣಿಕನ ಆಸ್ತಿಯನ್ನು ಅಪಹರಿಸಿದರೆ ನೀನು ಅನೇಕ ರಾಜರನ್ನು ಹಿಡಿದು ಅವರ ರಾಜ್ಯಗಳನ್ನೆಲ್ಲಾ ಸೂರೆಮಾಡಿ ಸಂಸಾರ ಸಹಿತವಾಗಿ ಅವರನ್ನೆಲ್ಲಾ ನಾಶಮಾಡಿ ಇದ್ದೀಯೆ. ನಾನು ನನಗೆ ಪ್ರತಿಕೂಲಗಳಾದ ಕೆಲವು ಹಳ್ಳಿಗಳನ್ನು ಸುಟ್ಟಿದ್ದರೆ ನೀನು ಧನಧಾನ್ಯಾದಿಗಳಿಂದ

ಹಾವಿನ ಕೂಡೆ ಕಪ್ಪೆಗೆ ಸರಸವೆ ?

ತುಂಬಿದ ಅನೇಕ ಪಟ್ಟಣಗಳನ್ನೇ ಸುಟ್ಟು ಇದ್ದೀಯೆ. ಮುಖ್ಯವಾಗಿ ನೀನು ರಾಜ ವಂಶೋತ್ಪನ್ನನು ; ನಾನು ಸಾಮಾನ್ಯರಲ್ಲಿ ಹುಟ್ಟಿದವನು. ನೀನು ದೊಡ್ಡ ವಂಶದಲ್ಲಿ ಹುಟ್ಟಿದವನಾದ್ದರಿಂದ ದೊಡ್ಡ ದೊಡ್ಡ ರಾಜ್ಯಗಳನ್ನೇ ಕೊಳ್ಳೆಹೊಡೆಯುವೆ ; ನಾನು ಸಾಮಾನ್ಯರಲ್ಲಿ ಹುಟ್ಟಿದವನಾದ್ದರಿಂದ ಸಾಮಾನ್ಯವಾದ ಹಳ್ಳಿಗಳನ್ನು ಕೊಳ್ಳೆಹೊಡೆಯುತ್ತೇನೆ. ನಿನಗೂ ನನಗೂ ಬಹಳ ವ್ಯತ್ಯಾಸವಿಲ್ಲ. ನಾನು ಚಿಕ್ಕಕಳ್ಳನಾದರೆ ನೀನು ದೊಡ್ಡಕಳ್ಳನು.

ಅ.—ನಾನು ರಾಜನಾಗಿ ಕೆಲವುದೇಶಗಳನ್ನು ಕೊಳ್ಳೆ ಹೊಡೆದಾಗ್ಯೂ ಲೋಕಕ್ಕೆಲ್ಲಾ ಉಪಕಾರಮಾಡುತ್ತೇನೆ. ಎಲ್ಲಿಯೋ ಕೆಲವು ರಾಜ್ಯಗಳನ್ನು ಹಾಳುಮಾಡಿದಾಗ್ಯೂ ಅವುಗಳಿಗಿಂತಲೂ ಉತ್ಕೃಷ್ಟವಾದ ಅನೇಕ ರಾಜ್ಯಗಳನ್ನು ಕಟ್ಟಿಸಿ ಇದ್ದೇನೆ. ಧರ್ಮ, ವಿದ್ಯೆ, ವ್ಯಾಪಾರ ಮುಂತಾದವುಗಳಿಗೆ ಪ್ರೋತ್ಸಾಹ ವುಂಟುಮಾಡಿ ಲೋಕವನ್ನೇ ಉದ್ಧಾರಮಾಡುತ್ತೇನೆ.

ಕ.—ಹಾಗಾದರೆ ನಾನು ಧನವಂತರ ಮನೆಗಳನ್ನು ಸೂರೆಮಾಡಿ ದರಿದ್ರರಿಗೆ ಕೊಡುವದಿಲ್ಲವೋ ? ಅತ್ಯಂತ ದುಷ್ಟರಾದ ಅನೇಕ ಕಳ್ಳರಗುಂಪನ್ನು ನನ್ನ ಆಜ್ಞೆಯನ್ನು ಸ್ವಲ್ಪವಾದರೂ ಮೀರಿ ನಡೆಯದಂತೆ ಅಧೀನದಲ್ಲಿಟ್ಟುಕೊಂಡು ಇರುವದಿಲ್ಲವೋ? ಶರಣಾಗತರಾದವರನ್ನು ನಾನು ಕಾಪಾಡುವದಿಲ್ಲವೋ ? ಲೋಕದಲ್ಲಿ ಎಲ್ಲರೂ ತಮ್ಮತಮ್ಮ ಧರ್ಮಗಳಿಗೆ ಪ್ರೋತ್ಸಾಹ ವುಂಟುಮಾಡುವದು ಸ್ವಭಾವವು. ಅದರೆ ಲೋಕಕ್ಕೆನಾವಿಬ್ಬರೂ ಅನೇಕಅಪಕಾರಗಳನ್ನು ಮಾಡಿಇದ್ದೇವೆ. ನಾನು ಮಾಡಿದ ಅಪಕಾರಕ್ಕೆ ನನಗೆ ಶಿಕ್ಷೆ ಯಾಗಬೇಕೆಂದು ಹೇಳಿದೆ. ನೀನು ಮಾಡಿದ ಅಪಕಾರಕ್ಕೆ ನಿನಗೆ ಶಿಕ್ಷೆಬೇಡವೋ ?

ಈ ಮಾತುಗಳನ್ನೆಲ್ಲಾ ಕೇಳಿ ಅಲೆಗ್ಸಾಂಡರ್ ಮಹಾರಾಜನು ತನ್ನ ನ್ಯಾಯಾಧಿಪತಿಗಳ ಮುಖವನ್ನು ನೋಡಿ—ಈತನು ಹೇಳಿದ ಮಾತುಗಳೆಲ್ಲಾ

ಸಹಜವಾಗಿ ತೋರುತ್ತವೆ, ಈತನ ಬಂಧನವನ್ನು ಬಿಡಿಸಿ ಕಾಲಿಗೆ ಹಾಕಿರುವ ಸಂಕೋಲೆಯನ್ನು ತೆಗೆದುಹಾಕಿರಿ, ಎಂದು ಹೇಳಿ, ಕಳ್ಳನನ್ನು ಕುರಿತು “ ಎಲೆ ಸ್ನೇಹಿತನೇ ! ನಾನು ಇದುವರಿಗೂ ಐಶ್ವರ್ಯಮದದಿಂದಲೂ ಅಧಿಕಾರಮದದಿಂದಲೂ ಭ್ರಾಂತನಾಗಿ ನನ್ನ ಸಮೀಪವರ್ತಿಗಳಾದ ಮುಖಸ್ತುತಿಯಲ್ಲಿ ನಿಪುಣರಾದ ಸಭಾಸದರ ಇಚ್ಛಾಕದ ಮಾತುಗಳಿಗೆ ಮರುಳಾಗಿ ನೀನು ಹೇಳಿದ ಅಕೃತ್ಯಗಳನ್ನೆಲ್ಲಾ ಮಾಡಿ ಆದಾಗ್ಯೂ ನಾನೇ ಧರ್ಮೈಕಪರನೆಂದು ತಿಳಿದುಕೊಂಡು ತಾರತಮ್ಯಗಳನ್ನು ತಿಳಿಯದೆ ದುಷ್ಕೃತ್ಯಗಳನ್ನು ಮಾಡುತ್ತಾ ಅವುಗಳೇ ಸತ್ಕಾರ್ಯಗಳೆಂದು ತಿಳಿದು ಧರ್ಮ ಭ್ರಷ್ಟನಾಗಿ ಇದ್ದೆನು. ಈಗ ನಾನು ಅಧಮಾಧಮನೆಂದು ನನಗೇ ಗೊತ್ತಾಯಿತು. ಇದು ಮೊದಲು ನನಗೆ ನೀತಿಯನ್ನು ಬೋಧಿಸಿದ ನೀನೇ ನನ್ನ ಗುರುವೆಂದು ಭಾವಿಸಿ ಇರುವೆನು ” ಎಂದು ಹೇಳಿ ಆ ಕಳ್ಳನಿಗೆ ನಾನಾವಿಧ ಮರ್ಯಾದೆಗಳನ್ನು ಮಾಡಿ ಅನಂತರದಲ್ಲಿ ಅವನ ಪರಿವಾರವೆಲ್ಲವನ್ನೂ ಕರೆಯಿಸಿ ಅವರವರ ತಾರತಮ್ಯಾನುಸಾರವಾಗಿ ಎಲ್ಲರಿಗೂ ಜೀವನಗಳನ್ನು ಕಲ್ಪಿಸಿಕೊಟ್ಟು ತಾನು ಸತ್ಯದಿಂದ ರಾಜ್ಯ ಪರಿಪಾಲನೆಯನ್ನು ಮಾಡುತ್ತಾ ಬಂದನು.

೬ ಮೈಸೂರು ಗಜೆಟ ಸಂಗ್ರಹ.

ಆಗಸ್ಟು ತಾರೀಖು ೨೧.—ಮೈಸೂರು ರೇಲ್ವೇ ಅಸಿಸ್ಟೆಂಟ ಟ್ರ್ಯಾಫಿಕ ಸೂಪರಿಂಟೆಂಡೆಂಟರಾದ ಮೆ|| ಕೆ. ಪಿ. ಪುಟ್ಟಣ್ಣಶೆಟ್ಟರವರಿಗೆ ಈ ಆಗಸ್ಟು ತಾರೀಖು ೨೦ರ ಲಾಗಾಯತು ಟ್ರ್ಯಾಫಿಕ ಸೂಪರಿಂಟೆಂಡೆಂಟರ ಕೆಲಸಕ್ಕೆ ಬಡತಿಯಾಗಿ ಇದೆ. ಇದು ಮೊದಲುಗೊಂಡು ಇವರಿಗೆ ತಿಂಗಳು ೧೫೦ಕ್ಕೆ ೨೫೦ ರೂಪಾಯಿ ಸಂಬಳವು ಸಲ್ಲುವದು.

ಮೈಸೂರು ಸ್ಟೇಟ್ ರೇಲ್ವೇ ಆಡಿಟರಾದ ಮೆ|| ಸೆಂಟ್ ಜಾರ್ಜ್ ಬೂಕಂ ಸಾಹೇಬರವರಿಗೆ ಆಗಸ್ಟು ತಾರೀಖು ೧೧ ರ ಲಾಗಾಯತು ಸಂಬಳವು ೨೫೦ ರೂಪಾಯಿಗೆ ಬಡತಿಯಾಗಿ ಇದೆ.

ಸೆಪಟಂಬರು ತಾ|| ೩—. ಮೆ|| ವೈ. ಶ್ರೀನಿವಾಸ ರಾಯರವರು ಬೆಂಗಳೂರು ಮತ್ತು ತುಮಕೂರು ರೇಲ್ವೆಗಳಲ್ಲಿ ಆಕ್ಟಿಂಗ್ ಎಗ್ಸೆಕ್ಯುಟಿವ ಎಂಜಿನಿಯರಾಗಿ ಇದ್ದರಷ್ಟೆ. ಬರುವ ತಿಂಗಳು ೧೫ನೇ ತಾರೀಖಿನ ಲಾಗಾಯತು ಇವರು ಅಸಿಸ್ಟೆಂಟ್ ಎಂಜಿನಿಯರಾಗಿ

ಹಣವಂದರೆ ಹೆಣ ಬಾಯಿ ಬಿಡುವದು.

ಕೋಲಾರಡಿಸ್ಟ್ರಿಕ್ಟ್ ಚಾರ್ಜಿನಲ್ಲಿ ಇರುವರಹಾಗೂ, ಕೋಲಾರದಲ್ಲಿರುವ ಮೆ|| ಅ. ಎಂ. ಸಯ್ಯದ್ ಯೂಸೂಫ್ ಸಾಹೇಬರು ಕಡೂರಿನ ಅ|| ಎಂಜಿನಿಯರಾಗಿರುವ ಹಾಗೂ ಗೊತ್ತಾಗಿ ಇದೆ.

ಸೆಪಟಂಬರು ತಾರೀಖು ೧೧.—ಹೊಳೇ ನರಸೀಪುರದ ಅಸಿಸ್ಟೆಂಟ್ ಮುನಸೀಫ್‌ರಾಗಿ ಇದ್ದ ಮೆ|| ಸುಬ್ಬರಾಯರವರಿಗೆ ಅವರಿಗೆ ಇರತಕ್ಕ ೩ನೇ ತರಗತಿಯ ಮುನಸೀಫ್ ಕೆಲಸ ಸವೇ ಖಾಯಂ ಆಗಿಇದೆ. ಇದರಿಂದ ೨೫ನೇ ಜಾಬ್ತೆ ೪೫ನೇ ನಂಬರು ಇಸ್ತಿಹಾರುನಾವೆಗಳಲ್ಲಿನ ಮೊದಲನೇ ಪ್ಯಾರಾವು ರದ್ದಾಗುತ್ತದೆ. ಮೆ|| ಶ್ರೀನಿವಾಸರಾಯರೂ ೩ನೇ ತರಗತಿಯ ಮುನಸೀಫ್‌ರಾಗಿಯೇ ಇರುವರು.

ಫಾರೆಸ್ಟು ಸೂಪರಿಂಟೆಂಡೆಂಟರಾದ ಮೆ|| ಸಿ. ಇ. ಎಂ. ರಸಲ್ ಸಾಹೇಬರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ೩ ತಿಂಗಳ ಪ್ರಿವಲೀಜ್ ರಜಾವೂ ಡಾಕ್ಟರ್ ಸರ್ಟಿಫಿಕೇಟ್ ಹಾಜರುಮಾಡಿದರೆ ೩ ತಿಂಗಳ ಸಿಕ್ ರಜಾವೂ ಕೊಡಲ್ಪಡುವದು.

೧೮೮೫ನೇ ಇಸವಿ ಸೆಪಟಂಬರು ತಾ|| ೨೦ರ ಕಾಲಸ್ಥಿತಿಯ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟ್.— ಬೆಂಗಳೂರಲ್ಲಿ ಮಳೆಯಿಲ್ಲ. ಇನ್ನು ಕೆಲವು ಭಾಗಗಳಲ್ಲಿ ಸ್ವಲ್ಪ ಮಳೆಯಾಯಿತು. ಇನ್ನು ಮೇಲೆ ಮಳೆಯು ಚನ್ನಾಗಿ ನಡೆದರೂ ಬೆಳೆಯು ಚನ್ನಾಗಿ ಆಗಲಾರದು. ಆಗಿದ್ದ ಪೈರೆಲ್ಲಾ ಒಣಗಿ ಹೋಗುತ್ತಾ ಇದೆ. ಯಾರೂ ಹೊಸದಾಗಿ ಬಿತ್ತಿಲ್ಲ. ಇನ್ನು ಮೇಲಾದರೂ ಚನ್ನಾಗಿ ಮಳೆಯಾದರೆ ಸ್ವಲ್ಪವಾದರೂ ಪ್ರಯೋಜನ ಉಂಟು. ಆನೆಕಲ್ಲು, ಮಾಗಡಿ, ನೆಲಮಂಗಲ, ಈ ತಾಲ್ಲೂಕುಗಳಲ್ಲಿ ಸ್ವಲ್ಪಮಳೆಯಾಗಿ ಪೈರು ಚನ್ನಾಗಿ ಇದೆ. ಹುಲ್ಲೂ ನೀರೂ ಇಲ್ಲದೆ ದನಗಳಿಗೆ ಬಹಳ ತೊಂದರೆ. ರೂಪಾಯಿ ೧ಕ್ಕೆ ದುಯ್ಯಂ ಅಕ್ಕಿ ೧೨|| ಸೇರು, ರಾಗಿ ೨೩ ಸೇರು, ಹುರಳಿ ೨೦ ಸೇರು.

ಕೋಲಾರ ಡಿಸ್ಟ್ರಿಕ್ಟ್.—ಮಳೆಯಿಲ್ಲ. ಪೈರೆಲ್ಲಾ ಒಣಗುತ್ತಾ ಇದೆ. ಮೇವಿಲ್ಲದೆ ದನಗಳು ಸಾಯುತ್ತವೆ. ರೂಪಾಯಿ ೧ ಕ್ಕೆ ಅಕ್ಕಿ ೧೨—೧೪ ಸೇರು, ರಾಗಿ ೨೪—೨೬ ಸೇರು.

ತುಮಕೂರು ಡಿಸ್ಟ್ರಿಕ್ಟ್ —ತುಮಕೂರಿನಲ್ಲಿಯೂ ಚಿತ್ರದುರ್ಗಕ್ಕೆ ಸೇರಿದ ಕೆಲವು ಹೋಬಳಿಗಳಲ್ಲಿಯೂ ಸ್ವಲ್ಪ ಮಳೆಯಾಯಿತು. ಮಿಕ್ಕಾದ ಕಡೆ ಮಳೆಯೇ ಇಲ್ಲ. ಸೀರ್ಯದ ತಾಲ್ಲೂಕಿನಲ್ಲಿ ರಾಗೀ ಬೆಳೆಯು ಚನ್ನಾಗಿ ಇದೆ. ತುಮಕೂರು, ಮದ್ದಗಿರಿ, ತಿಪಟೂರು, ಚಳ್ಳಕೆರೆ, ಈ ತಾಲ್ಲೂಕುಗಳಲ್ಲಿ ಪೈರು ಹಾಳಾಯಿತು. ಮಿಕ್ಕಾದ ತಾಲ್ಲೂಕುಗಳಲ್ಲಿಯೂ ಪೈರು ಒಣಗುತ್ತಾ ಇದೆ. ಅಲ್ಲಲ್ಲಿ ಬೀಜಗಳನ್ನು ಚಲ್ಲಿ ಇದ್ದಾರೆ. ಗುಬ್ಬಿ ಮತ್ತು ತಿಪಟೂರುಗಳಲ್ಲಿ ಬತ್ತವು ಕಟಾವಾಯಿತು. ಚಿತ್ರದುರ್ಗದಲ್ಲಿ ಉದ್ದಿನ ಬೆಳೆ ಆಯಿತು. ಹುಲ್ಲಿಲ್ಲದೆ ದನಗಳೆಲ್ಲಾ ಸೊಪ್ಪುಸೊದೆಗಳನ್ನು ತಿಂದು ಜೀವಿಸುತ್ತವೆ. ರೂಪಾಯಿ ೧ಕ್ಕೆ ಅಕ್ಕಿ ೧೨—೧೫ ಸೇರು, ರಾಗಿ ೩೨—೪೦ ಸೇರು, ಹುರಳಿ ೨೦—೨೬ ಸೇರು.

ಸಿತ್ಯ ಪರಿದ್ರನಿಗೆ ನಿಶ್ಚಿಂತೆ.

ಮೈಸೂರು ಡಿಸ್ಟ್ರಿಕ್ಟ್.—ಮೈಸೂರಲ್ಲಿ ಮಳೆಯಿಲ್ಲ. ನಾಗಮಂಗಲ ವಿನಹಾ ಮಿಕ್ಕ ತಾಲ್ಲೂಕುಗಳಲ್ಲಿ ಸ್ವಲ್ಪ ಮಳೆಯಾಯಿತು. ಹೈನುರಾಗಿ, ಉದ್ದು, ಹೆಸರು, ಹುರಳಿ; ಈ ಧಾನ್ಯಗಳನ್ನು ಬಿತ್ತಿದ್ದಾರೆ. ರೂಪಾಯಿ ೧ಕ್ಕೆ ದಯ್ಯ ಅಕ್ಕಿ ೧೩ ಸೇರು, ರಾಗಿ ೨೬ ಸೇರು, ಹುರಳಿ ೨೪ ಸೇರು.

ಶಿವಮೊಗ್ಗಾ ಡಿಸ್ಟ್ರಿಕ್ಟ್.— ಇಲ್ಲಿಸ್ವಲ್ಪ ಮಳೆಯಾಯಿತು. ಪೈರು ಚನ್ನಾಗಿದೆ. ಆದರೂ ಇನ್ನೂ ಮಳೆಬೇಕು. ಸೊರಬ, ನಗರ, ತಾಲ್ಲೂಕುಗಳಲ್ಲಿ ಅಡಿಕೆ ಫಸಲು ಕೆಟ್ಟುಹೋಯಿತು. ರಾಗಿ, ಹುರಳಿ, ಹತ್ತಿ, ಜೋಳ, ನವಣೆ, ಧಾನ್ಯಗಳನ್ನು ಬಿತ್ತಿದ್ದಾರೆ. ಬತ್ತವು ಕೆಲವು ಕಡೆ ನಾಟಿಯಾಗಿದೆ. ಜ್ವರ ಮತ್ತು ಸಿಡುಬಿನ ರೋಗಗಳು ಹೆಚ್ಚಿ ಇವೆ. ದನಗಳು ರೋಗದಿಂದ ನಾಶವಾಗುತ್ತವೆ. ರೂಪಾಯಿ ೧ಕ್ಕೆ ಅಕ್ಕಿ ೧೩—೧೫ ಸೇರು. ರಾಗಿ ೨೦—೪೮ ಸೇರು. ಜೋಳ ೨೮—೪೪ ಸೇರು.

ಕಡೂರು ಡಿಸ್ಟ್ರಿಕ್ಟ್.—ಕಡೂರು ಮತ್ತು ಅರಸೀಕೆರೆ ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ ಪೈರು ಒಣಗುತ್ತಾ ಇದೆ. ಕಬ್ಬು, ಬತ್ತ, ರಾಗಿ, ಅವರೆ, ಬೆಳ್ಳುಳ್ಳಿ, ಕಡಲೆ, ಹೆಸರು, ಹುರಳಿ, ಗೋಧಿ, ಮುಂತಾದವುಗಳನ್ನೆಲ್ಲಾ ಬಿತ್ತಿದರು. ಯಾಲಕ್ಕಿ, ಗಿಡ್ಡರಾಗಿ, ಬೆಳ್ಳುಳ್ಳಿ, ಕೊತ್ತುಂಬರಿ, ಇವುಗಳ ಫಸಲಾಯಿತು. ರೂಪಾಯಿ ೧ಕ್ಕೆ ಅಕ್ಕಿ ೧೬—೨೦ ಸೇರು. ರಾಗಿ ೧೯—೩೪ ಸೇರು.

೨. ವೃತ್ತಾಂತಸಂಗ್ರಹ.

ಮೈಸೂರು ಮಹಾರಾಜರವರೂ ದಿವಾನರವರೂ ಗವರ್ನರ್ ಜನರಲ್ ಸಾಹೇಬರವರನ್ನು ಕಾಣುವದಕ್ಕೋಸ್ಕರ ಈ ವರ್ಷದ ಕೊನೆಗೆ ಪರಿವಾರಸಮೇತವಾಗಿ ಕಲ್ಕತ್ತೆಗೆ ಹೋಗುತ್ತಾರಂತೆ.

ಮದರಾಸಿನಲ್ಲಿ ವಾಂತಿ ಭೇದಿ ಉಪದ್ರವು ಉಂಟಾಗಿ ಸೆಪಟಂಬರು ತಾರೀಖು ೮ ರಿಂದ ೧೪ರೊಳಗಾಗಿ ೧೫೦ ಜನರು ಸತ್ತರು. ಈಗಲೂ ಬಹಳ ಹೆಚ್ಚಾಗಿ ಇದೆ ಯೆಂದು ಕೇಳುತ್ತೇವೆ.

ಕಾಬೂಲ್ ದೇಶದಲ್ಲಿ ಒಬ್ಬ ಮನುಷ್ಯನು ತನ್ನ ಹೆಂಡತಿಯನ್ನು ಮಾತ್ರ ಮನೆಯಲ್ಲಿ ಬಿಟ್ಟು ತಾನು ಹೊಲಕ್ಕೆ ಹೋಗಿದ್ದನು. ಸಾಯಂಕಾಲವಾಗುತ್ತಲೇ ಮನೆಗೆ ಬಂದು ತನ್ನ ಹೆಂಡತಿಯೊಂದಿಗೆ ಮತ್ತೊಬ್ಬ ಮನುಷ್ಯನು ಮಾತನಾಡುತ್ತಾ ಇದ್ದದ್ದನ್ನು ಕಂಡು ಅತ್ಯಂತ ಕೋಪಿಸಿ ಅವನನ್ನು ತಲೆಯೇ ಕಡಿದುಹಾಕಿದನು. ಕೂಡಲೆ ಸತ್ತವನು ತನ್ನ

ಮನೇ ದೀಪವಾದರೆ ಮುತ್ತು ಕೊಡಬಹುದೆ ?

ಸಹೋದರನೆಂದು ಗೊತ್ತಾಯಿತು. ಆಗ ಇವನು ಅತಿ ದುಃಖದಿಂದ ಮನೆಯನ್ನು ಬಿಟ್ಟು ಆಚೆಗೆ ಹೋಗಬೇಕೆಂದು ಹೊರಡಲು ಈತನ ತಂದೆಯು ಆ ಮನೆಯ ಒಂದು ಪ್ರದೇಶದಲ್ಲಿಯೇ ಕೂತಿದ್ದು ನಡೆದ ಸಂಗತಿಯನ್ನೆಲ್ಲಾ ನೋಡಿ, ಇವನು ಯಾರೋ ಪರಕೀಯನೆಂದು ಎಣಿಸಿ ಅವನನ್ನು ತುಪಾಕಿಯಿಂದ ಹೊಡೆದುಹಾ ದನು. ಕೂಡಲೇ ಸತ್ತವರಿಬ್ಬರೂ ತನ್ನ ಮಕ್ಕಳೆಂದು ಗೊತ್ತಾಯಿತು. ಆ ದುಃಖವನ್ನು ಸಹಿಸಲಾರದೆ ಆತನು ಆತಕ್ಷಣದಲ್ಲಿಯೇ ಆತ್ಮಹತ್ಯೆಯನ್ನು ಮಾಡಿಕೊಂಡನು.

ಚೀನಾದೇಶಕ್ಕೆ ದಕ್ಷಿಣದಲ್ಲಿ ಆನಾಂ ಎಂಬ ಒಂದುದೇಶವಿದೆ. ಇಲ್ಲಿನ ಒಬ್ಬ ಸ್ತ್ರೀಯು ಕಳೆದ ಜೂನ್‍ತಿಂಗಳು ೨ನೇ ತಾರೀಖಿನಲ್ಲಿ ಇಬ್ಬರು ಗಂಡುಮಕ್ಕಳನ್ನೂ ೨೧ ರಲ್ಲಿ ಒಂದು ಗಂಡುಮಗುವನ್ನೂ ಒಂದು ಹೆಣ್ಣುಮಗುವನ್ನೂ ಹೆತ್ತಳು.

ಆನಂದಬಾಯಿ ಎಂಬಾಕೆಯು ವೈದ್ಯಶಾಸ್ತ್ರವನ್ನು ಅಭ್ಯಾಸಮಾಡುವದಕ್ಕಾಗಿ ಅಮರಿಕಾ ಖಂಡಕ್ಕೆ ಹೋಗಿ ೧ ವರ್ಷವಾಯಿತು. ಈಕೆಯು ಆ ಶಾಸ್ತ್ರದಲ್ಲಿ ಮೊದಲನೇ ಪರೀಕ್ಷೆಯನ್ನು ಕೊಟ್ಟಳು.

ಕಾಸಿಂಬಜಾರ್ ಎಂಬ ಪಟ್ಟಣದಲ್ಲಿರತಕ್ಕ ಮಹಾರಾಣಿ ಸುರನಾಮಾಯಿ ಎಂಬುವರು ಹೆಂಗಸರಿಗೆ ವೈದ್ಯ ಶಾಸ್ತ್ರವನ್ನು ಹೇಳುವದಕ್ಕೂ ಸೂಲಗಿತ್ತೀ ಕೆಲಸವನ್ನು ಹೇಳಿ ಕೊಡುವದಕ್ಕೂ ತಕ್ಕ ಏರ್ಪಾಡುಗಳನ್ನು ಮಾಡುವದಕ್ಕೋಸ್ಕರ ಕಲ್ಕತ್ತಾ ವೈದ್ಯ ಪಾಠಶಾಲೆಗೆ ೧॥ ಲಕ್ಷರೂಪಾಯಿಗಳನ್ನು ಕೊಟ್ಟರು.

ಡಿಲ್ಲಿಯಲ್ಲಿ ಸ್ಟೀವನ್ಸ್ ಕಾಲೇಜ್ ಎಂಬ ಒಂದು ಪಾಠಶಾಲೆಯಲ್ಲಿ ಚಂದಸಿಂಗ್ ಎಂಬ ಕುರುಡನಾದ ಒಬ್ಬವಿದ್ಯಾರ್ಥಿಯು ಇರುತ್ತಾನೆ. ಈತನ ಜ್ಞಾಪಕಶಕ್ತಿಯು ವಿಚಿತ್ರವಾದದ್ದು ಈತನು ಇಗ್ಲೀಷು, ಪಾರಸಿ, ಮತ್ತು ಉರುದು ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ಬಾಯಿಯಲ್ಲಿ ಒಪ್ಪಿಸುತ್ತಾನೆ. ಗಣಿತ ಶಾಸ್ತ್ರದಲ್ಲಿ ದೊಡ್ಡ ದೊಡ್ಡ ಲೆಖ್ಖಗಳನ್ನು ಇತರರು ಸ್ಲೇಟು ಪೆನ್ಸಲ್‍ಗಳ ಸಹಾಯದಿಂದ ಮಾಡುವದಕ್ಕೆ ಮೊದಲೇ ಹೇಳುತ್ತಾನೆ. ಹೀಗೆಯೇ ಗುಣ್ಯ ಗುಣಕಗಳು ಎಷ್ಟು ದೊಡ್ಡದಾಗಿದ್ದಾಗ್ಯೂ ಅದರ ಲಬ್ಧವನ್ನು ಇತರರು ಹೇಳುವದಕ್ಕೆ ಮೊದಲೇ ಹೇಳುತ್ತಾನೆ. ಹೋದವರ್ಷದ ಯೂನಿವರ್ಸಿಟೀಪರೀಕ್ಷೆಯಲ್ಲಿ ಚೆನ್ನಾಗಿ ಪರೀಕ್ಷೆ ಕೊಟ್ಟವರಲ್ಲಿ ಈತನೊಬ್ಬನು. ಬರುವ ವರ್ಷಕ್ಕೆ ಲಾಪರೀಕ್ಷೆಗೆ ಹೋಗಬಹುದೆಂದು ಈತನಿಗೆ ಸರಕಾರದವರು ಸ್ವತಂತ್ರಕೊಟ್ಟು ಇದ್ದಾರೆ.

ಮಂತ್ರಿಸಿದರೆ ಮಾವಿನ ಕಾಯಿ ಬಿದ್ದೀತೆ?

ಚೀನಾದೇಶದಲ್ಲಿ ಮಕ್ಕಳಿಗೆ ತಂದೇವಿಷಯದಲ್ಲಿ ಮರ್ಯಾದೆಯು ಬಹಳವಾಗಿರುವದು. ಯಾವನಾದರೂ ತನ್ನ ತಂದೇಮೇಲೆ ದಾವಾಮಾಡಿದರೆ ಮೊಕದ್ದಮೆಯು ವಿಚಾರಣೆಯಾಗುವದಕ್ಕೆ ಮೊದಲೇ ಮಗನಿಗೆ ೧೦೦ ಏಟುಗಳು ಬೀಳುವವು.

ಮೈಸೂರಿನಲ್ಲಿ ಪ್ರತಿವರ್ಷದಲ್ಲೂ ನಡೆಯತಕ್ಕ ಪ್ರಜಾಪ್ರತಿನಿಧಿಗಳ ಸಭೆಯು ಈ ಅಕ್ಟೋಬರು ತಿಂಗಳು ೧ ನೇ ತಾರೀಖಿನಲ್ಲಿ ಪ್ರಾರಂಭಿಸಿತು. ಇದರ ವಿಷಯವನ್ನು ಮುಂದಲ ಸಂಚಿಕೆಯಲ್ಲಿ ತಿಳಿಸುವೆವು.

ಚನ್ನಪಟ್ಟಣ, ದೊಡ್ಡಬಳ್ಳಾಪುರ, ಕುಣಿಗಲು, ಈ ಮೂರು ಸ್ಥಳಗಳಲ್ಲಿಯೂ ಈ ಅಕ್ಟೋಬರು ತಿಂಗಳು ಮುಗಿಯುವದರೊಳಗಾಗಿ ಹೊಸದಾಗಿ ವೈದ್ಯಶಾಲೆಗಳಾಗುವಂತೆ ದಿವಾನರವರು ಏರ್ಪಾಡುಮಾಡಿದ್ದಾರೆ. ಇವುಗಳ ಮೇಲಿನ ವಿಚಾರಣೆಯು ಸರ್ಜನ್ ಮಿ|| ಹುಸ್ಸೈನ್‌ಸಾಹೇಬರವರಿಗೆ ಸೇರುವದು.

ನಮ್ಮ ದೇಶದಲ್ಲಿ ಬ್ಯಾಂಕುಗಳು ಹೆಚ್ಚಾದವು. ಇವುಗಳನ್ನು ಇಟ್ಟುಕೊಂಡಿರುವವರು ತಾವು ಲೋಕೋಪಕಾರಿಗಳೆಂಬದಾಗಿಯೂ ಸಾಲತೆಗೆಯುವವರು ಇವರಿಂದ ತಮಗೆ ಬಹಳ ಉಪಕಾರ ವಾಯಿತೆಂಬದಾಗಿಯೂ ತಿಳಿದುಕೊಂಡಿದ್ದಾರೆ. ಇದರ ನಿಜಸ್ಥಿತಿಯನ್ನು ತಿಳಿದು ಕೊಳ್ಳೋಣ. ಎ. ಎಂಬುವನು ಒಂದು ಬ್ಯಾಂಕಿನಲ್ಲಿ ೧೦೦ ರೂಪಾಯಿ ಸಾಲಾ ತೆಗೆಯುವನು. ಬ್ಯಾಂಕಿನ ಏಜಂಟನು ಸೇಕಡ ೧ ರೂಪಾಯಿನ ಪ್ರಕಾರ ಬಡ್ಡಿ ತೆಗೆದುಕೊಳ್ಳುತ್ತೇನೆಂದು ಹೇಳುವನು. ಇಬ್ಬರೂ ಒಪ್ಪಿದರೆ ಬ್ಯಾಂಕಿನ ಏಜಂಟನು ಎ. ಎಂಬುವನಿಂದ ತಿಂಗಳಿಗೆ ೧೦ ರೂಪಾಯಿನ ಪ್ರಕಾರ ೧೦ ಕಂತುಗಳಲ್ಲಿ ತೀರಿಸುತ್ತೇನೆಂತ ೧೦೦ ರೂಪಾಯಿಗೆ ಪತ್ರವನ್ನು ಬರೆಸಿಕೊಂಡು ಬಡ್ಡಿಗಾಗಿ ೧೦ ರೂಪಾಯಿಯನ್ನು ಆಗಲೇ ಹಿಡಿದುಕೊಂಡು ೯೦ ರೂಪಾಯಿಗಳನ್ನು ಅವನಿಗೆ ಕೊಡುವನು. ಎ. ಎಂಬುವನು ನ್ಯಾಯವಾಗಿ ಕೊಡತಕ್ಕ ಬಡ್ಡಿಯು ಏನಾಗುವದೋ ನೋಡೋಣ. ಎ. ವಶದಲ್ಲಿ ೧ನೇ ತಿಂಗಳು ೯೦ ರೂಪಾಯಿಯೂ ೨ನೇ ತಿಂಗಳಲ್ಲಿ ೮೦ರೂ., ೩ನೇ ತಿಂಗಳಲ್ಲಿ ೭೦ರೂ., ೪ ನೇ ದರಲ್ಲಿ ೬೦ ರೂ., ೫ನೇದರಲ್ಲಿ ೫೦ ರೂ., ೬ ನೇ ದರಲ್ಲಿ ೪೦ ರೂ., ೭ ನೇ ದರಲ್ಲಿ ೩೦ ರೂ., ೮ ನೇ ತಿಂಗಳಲ್ಲಿ ೨೦ ರೂ., ೯ನೇ ತಿಂಗಳಲ್ಲಿ ೧೦ ರೂ., ೧೦ನೇದರಲ್ಲಿ ಸೊನ್ನೆಯೂ ನಿಲ್ಲುವವು. ಇದನ್ನೆಲ್ಲಾ ಒಟ್ಟುಮಾಡಿ ನೋಡಲಾಗಿ ಎ.ಎಂಬುವನು ಬ್ಯಾಂಕಿಗೆ ೪೫೦ರೂಪಾಯಿಗೆ ಒಂದುತಿಂಗಳಿಗಾಗುವ ಬಡ್ಡಿಯನ್ನು ಕೊಟ್ಟಂತಾಗುವದು. ಇದಕ್ಕೆ ಮೊದಲೇ ೧೦ ರೂಪಾಯನ್ನು ಹಿಡಿದುಕೊಳ್ಳುವನು. ಹೀಗೆಸಾಲ ತೆಗೆದುಕೊಂಡವನು ಸೇಕಡ ೧ ರೂಪಾಯಿ ಬಡ್ಡಿ ಪ್ರಕಾರ ತೆಗೆದುಕೊಂಡೆನೆಂದು ತಿಳಿದು ಕೊಂಡಿದ್ದಾಗ್ಯೂ ವಿಚಾರಿಸಿ ನೋಡಲಾಗಿ

ಸುಮಾರು ಸೇಕಡ ೨೦ ರೂಪಾಯಿ ಕೊಟ್ಟಹಾಗಾಗುವದು. ಒಂದು ವೇಳೆ ಕಂತು ಕೊಡ ತಕ್ಕದ್ದು ಸುಸ್ತಿಯಾದರೆ ದ್ವಿಗುಣವಾದ ಬಡ್ಡೀ ಕೊಡಬೇಕಾಗುವದು. ಇದರಿಂದ ಸೇಕಡಾ ದರವು ಹ್ಯಾಗೆ ಬೀಳುವದೋ ಯೋಚಿಸಿ ತಿಳಿದುಕೊಳ್ಳಬಹುದು. ಆದದರಿಂದ ಬ್ಯಾಂಕಿನಲ್ಲಿ ಸಾಲಾ ತೆಗೆಯುವದಕ್ಕಿಂತ ಜಿಂದಿಗಿಯನ್ನು ಗಿರವಿ ಹಾಕುವದಾಗಲೀ ಅಥವಾ ಮಾರಿ ಬಿಡುವ ದಾಗಲೀ ಉತ್ತಮವು.

ಇಂಡಿಯಾ ದೇಶಕ್ಕೆ ಗವರ್ನರ್ ಜನರಲಾಗಿದ್ದ ಲಾರ್ಡ್ ರೈಪರ್ ಸಾಹೇಬರವರು ತಮ್ಮ ಕೆಲಸಕ್ಕೆ ರಾಜೀ ನಾಮೆಯನ್ನು ಕೊಟ್ಟು ಇಲಾಯತಿಗೆ ಹೊರಟು ಹೋಗುವರು. ಇವರಿಗೆ ಬದಲಾಗಿ ಲಾರ್ಡ್ ಡಫರೀನ್ ಸಾಹೇಬರವರು ಬರುವರಂತೆ.

ಬೆಂಗಳೂರು ಸಬ್‌—ಜಡ್ಜಿ ಕೋರ್ಟನ್ನೂ ಮದ್ದಗಿರಿ ಮುನಸೀಫ್ ಕೋರ್ಟನ್ನೂ ಬರುವ ಡಿಸೆಂಬರ್ ಮುಗಿಯುವದರೊಳಗಾಗಿ ತೆಗೆದು ಹಾಕುತ್ತಾರಂತೆ.

ಆಗಸ್ಟು ೧೭ನೇ ತಾರೀಖಿನಲ್ಲಿ ಕಾಗ್ಲಾನ್ ಸ್ಟೇಷನ್ ಮಾಸ್ಟರ ಹೆಂಡತಿಯು ತನ್ನ ಗಂಡ ಸತ್ತ ದುಃಖದಿಂದ ಪ್ರಾಣತ್ಯಾಗ ಮಾಡಿಕೊಳ್ಳುವದಕ್ಕೆ ನಿರ್ಧಾರ ಮಾಡಿಕೊಂಡು ರಾತ್ರೀ ರೇಲು ಹೋಗ ತಕ್ಕ ಕಾಲದಲ್ಲಿ ದಾರಿಯಲ್ಲಿ ಮಲಗಿದ್ದಳು. ಚಕ್ರವು ಹರಿದು ಅವಳು ಸತ್ತಳು.

ಯೂರೋಪು ಖಂಡಕ್ಕೆ ಸೇರಿದ ದೇಶದವರೆಲ್ಲರೂ ವ್ಯಾಪಾರಾರ್ಥವಾಗಿ ಚೀನಾ ದೇಶಕ್ಕೆ ಹೋಗುವದುಂಟು. ಈಗ ಚೀನಾ ದೇಶದವರಿಗೂ ಫ್ರೆಂಚರಿಗೂ ಮನಸ್ತಾಪಗಳು ಬಂದು ಯುದ್ಧ ನಡಿಯುತ್ತಾ ಇದೆ ಎಂದು ಕೇಳುತ್ತೇವೆ.

ಚಿಕ್ಕಮಗಳೂರಲ್ಲಿ ತುಂಬಾ ಮಳೆಯಾಗಿ ಕೆರೆ ಕುಂಟೆಗಳೆಲ್ಲಾ ತುಂಬಿ ಪೈರುಗಳೆಲ್ಲಾ ಚೆನ್ನಾಗಿವೆಯಂತೆ.

ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿ ಬಂಡೀ ಖಾನೆಯನ್ನು ಕಟ್ಟುವದಕ್ಕಾಗಿ ನಮ್ಮ ದಿವಾನರವರು ೧೪೦೦ ರೂಪಾಯಿಯನ್ನು ಸ್ಯಾಂಗ್‌ಷನ್ ಮಾಡಿ ಇದ್ದಾರೆಂದು ಕೇಳಲು ಸಂತೋಷಿಸುತ್ತೇವೆ.

---

೨೦ ರೂಪಾಯಿ ಅಥವಾ ಅದಕ್ಕಿಂತ ಕಡಮೆಯಾದ ಸಂಬಳವುಳ್ಳ ನೌಕರರ ಮೇಲೆ ಡಿಕ್ರಿಯಾದರೆ ಡಿಕ್ರಿ ಮೊಬಲಿಗಿಗಾಗಿ ಅವರ ಸಂಬಳವನ್ನು ಹಿಡಿಯ ಕೂಡದೆಂದು ಏರ್ಪಾಡಾಗಿ ಇದೆ. ಇದರಿಂದ ಅನೇಕರಿಗೆ ಕ್ಷೇಮ ವುಂಟಾಗುವದು ; ಆದರೆ ಈ ಏರ್ಪಾಡನ್ನು ನೋಡಿ ಬಡ್ಡಿಗೆ ಹಣ ಕೊಡುತ್ತಿದ್ದವರು ಅನೇಕರು ದುಃಖಿಸುತ್ತಾರೆ.

ಮಾರೀಮನೆಗೆ ಹೋತ ಕಣ್ಣು ಕೋರದ ಹಾಗೆ.

ಇಟಲೀದೇಶದಲ್ಲಿ ಪಾಂಪೆ ಎಂಬ ಒಂದುಪಟ್ಟಣವಿದೆ. ಸುಮಾರು ೨೦೦೦ ವರ್ಷಗಳಿಗೆ ಮುಂಚೆ ಇದರ ಸಮೀಪದಲ್ಲಿರತಕ್ಕ ಒಂದು ಬೆಟ್ಟದಿಂದ ಭೂಮಿಯೊಳಗಣ ಕಿಚ್ಚಿನಿಂದ ಕರಗಿದ ಬಂಡೆಗಳು, ಲೋಹಗಳು, ಮುಂತಾದವುಗಳೆಲ್ಲಾ ನೀರಿನಹಾಗೆ ಹೊರಕ್ಕೆ ಬಂದು ಈ ಪಟ್ಟಣವನ್ನು ಮುಳಗಿಸಿ ಹೊರಗಿನ ಶೈತ್ಯವುಳ್ಳ ಗಾಳಿಯ ದೆಸೆಯಿಂದ ಘನೀಭವಿಸಿತು. ಆ ಕಾಲದಲ್ಲಿ ಜನರು ಯಾವ ಯಾವ ಅವಸ್ಥೆಗಳಲ್ಲಿದ್ದರೋ ಆಯಾ ಅವಸ್ಥೆಗಳಲ್ಲಿಯೇ ಹೂಳಿಕೊಂಡು ಇದ್ದಾರೆ. ಈಗ್ಯೆ ಕೆಲವು ದಿವಸಗಳಲ್ಲಿ ಒಂದು ಸ್ಥಳವನ್ನು ಅಗೆಯುತ್ತಿದ್ದಾಗ ಒಬ್ಬ ಮನುಷ್ಯನ ಶವವು ಸಿಕ್ಕಿತು. ಮುಖಭಾವವೂ ಶರೀರಭಾವವೂ ಆತನು ಹೊತುಹೋದ ದಿವಸ ಹ್ಯಾಗಿದ್ದವೋ ಈಗಲೂ ಹಾಗೆಯೇ ಇವೆ. ಬಾಯಿ ಸ್ವಲ್ಪ ತೆರೆದುಕೊಂಡಿದೆ. ಎರಡು ಸಾಲಿನ ಹಲ್ಲುಗಳೂ ಚನ್ನಾಗಿ ಕಾಣುತ್ತವೆ. ಒಂದು ಕೈಯಲ್ಲಿ ಎರಡು ಬೀಗದಕೈಗಳಿವೆ. ಒಂದುಕಾಲು ನೆಲದಮೇಲೂ ಮತ್ತೊಂದು ಸ್ವಲ್ಪಮೇಲಕ್ಕೆ ಎತ್ತಿಕೊಂಡೂ ಇವೆ. ಹೀಗೆಯೇ ಇನ್ನು ಕೆಲವು ಸ್ಥಳಗಳಲ್ಲಿ ಅಗೆದು ನೋಡಲಾಗಿ ಮೃಗಗಳೂ, ಸಂಚಾರಮಾಡುತ್ತಿದ್ದ ಜನರೂ, ಮನೆಯಲ್ಲಿದ್ದ ಜನರೂ, ಅಗ ಹ್ಯಾಗೆ ಇದ್ದರೋ ಈಗಲೂ ಹಾಗೆಯೇ ಇದ್ದಾರೆ. ಇದನ್ನು ನೋಡುವದಕ್ಕೋಸ್ಕರ ನಾನಾದೇಶದ ಜನರು ಅಲ್ಲಿಗೆ ಹೋಗುತ್ತಾರೆ.

ಬರೀಸಾಲ್ ಎಂಬ ಪಟ್ಟಣದಲ್ಲಿ ಒಬ್ಬ ಮನುಷ್ಯನಮೇಲೆ ಖೂನೀಸಾಬೀತಾಗಿ ೩ಘಂಟೇ ಹೊತ್ತಿಗೆ ಅವನನ್ನು ಗಲ್ಲಿಗೆ ಹಾಕಿದರು. ಇವನ ತಾಯಿಯು ತನ್ನ ಮಗನನ್ನು ಗಲ್ಲಿಗೆ ಹಾಕುವರೆಂದು ಫೈಸಲಾದದ್ದನ್ನು ಕೇಳಿ ಡಕ್ಕಾ ಪಟ್ಟಣಕ್ಕೆ ಹೋಗಿ ಈ ಮೊಕದ್ದಮೆಯು ಪುನಃ ದರ್‍ಯಾಪ್ತಿ ಆಗುವವರಿಗೂ ಗಲ್ಲಿಗೆ ಹಾಕಕೂಡದೆಂದು ತಂತೀ ವರ್ತಮಾನವನ್ನು ಕೊಡಿಸಿದಳು. ಡಕ್ಕಾ ಯಿಂದ ಬರೀಸಾಲಿನ ವರಿಗೂ ತಂತಿ ಇಲ್ಲದಕಾರಣ, ಸ್ವಲ್ಪದೂರ ಟಪಾಲಿನಮೇಲೆ ಹೋಗಬೇಕಾಗಿ, ವರ್ತಮಾನವು ೭ಗಂಟೆಗೆ ತಲಪಿತು. ಅವನನ್ನು ೩ಗಂಟೆಗೇ ಗಲ್ಲಿಗೆ ಹಾಕಿಇದ್ದರು. ಫಾಸೀ ಸಜಾ ಕೊಡತಕ್ಕವರು ಅಪೀಲುಮಾಡತಕ್ಕವರಿಗೆ ಸಾಕಾದಷ್ಟು ಅವಕಾಶವನ್ನು ಕೊಡುವದು ನ್ಯಾಯ. ಹೀಗಾಗುವದಕ್ಕೆ ಕಾರಣವೇನೋ ತಿಳಿಯಲಿಲ್ಲ.

ಮದರಾಸಿನ ತಿರುವಳಕ್ಕೇಣಿಯಲ್ಲಿ ಉತ್ತರಾದಿ ಮಠದ ಸ್ವಾಮಿಗಳು ಇದ್ದು ಇದ್ದಾರೆ. ಇವರ ಸನ್ನಿಧಿಗೆ ಲಕ್ಷ್ಮಣಾಚಾರ್ಯರೆಂಬ ಒಬ್ಬ ಪಂಡಿತರು ಬಂದು ಇದ್ದರು. ಸ್ವಾಮಿಗಳು ಇವರ ವಿದ್ಯಾಪರೀಕ್ಷೆಗಾಗಿ ದೊಡ್ಡ ಸಭೆಯನ್ನು ಸೇರಿಸಿದರು. ವೇದ ಪುರಾಣ ಬ್ರಹ್ಮಸೂತ್ರಗಳೇ ಮೊದಲಾದ ಅನೇಕ ವಿಷಯಗಳಲ್ಲಿ ವಾಕ್ಯಾರ್ಥಗಳು ನಡೆದವು. ಇವುಗಳಲ್ಲಿವರ ಪಾಂಡಿತ್ಯವು ಅಪರಿಮಿತವಾದದ್ದೆಂದು ಗೊತ್ತಾಯಿತು. ಇದನ್ನು ನೋಡಿ

ಮಡಿಕೆ ಒಡೆಯುವದಕ್ಕೆ ಅಡಿಕೇಮರ ಬೇಕೆ ?

ಸ್ವಾಮಿಗಳು ಬಹಳ ಸಂತೋಷವನ್ನು ಹೊಂದಿ ಮೇಲೆಹೇಳಿದ ಗ್ರಂಥಗಳಲ್ಲೆಲ್ಲಾ ಇವರಿಗೆ ಅಖಂಡ ಪಾಂಡಿತ್ಯವುಂಟೆಂದು ಬರೆದು ಅವಕ್ಕೆ ತಮ್ಮ ರುಜುಹಾಕಿ ಇತರ ಪಂಡಿತರಿಂದಲೂ ರುಜು ಹಾಕಿಸಿ ಇವರಿಗೆ ಬಹಳವಾಗಿ ಮರ್‍ಯಾದೆಮಾಡಿ ಸಮಸ್ತ ವೈದಿಕ ಸಭೆಗಳಿಗೂ ಇವರ ಪಾಲಕಿಯಲ್ಲಿ ಹೋಗಬಹುದೆಂದು ಸ್ವಾತಂತ್ರ್ಯ ಕೊಟ್ಟರು.

ನೆಲಮಂಗಲದಲ್ಲಿ ಸೆಪ್ಟಂಬರ್ ೩ನೇ ತಾರೀಖಿನ ರಾತ್ರಿ ಒಬ್ಬ ಪೋಲೀಸ್ ಜವಾನನು ಗಸ್ತುತಿರುಗುತ್ತಿದ್ದಾಗ ಒಂದು ಬಾವಿಯಲ್ಲಿ ಒಂದು ಮಗುವು ಅಳುವ ಶಬ್ದವನ್ನು ಕೇಳಿ ಅದರ ಬಳಿಗೆ ಹೋಗಿ ನೋಡಲು ಬಾವಿಯೊಳಗಿನಿಂದ ಹಗ್ಗವು ಕಂಭಕ್ಕೆ ಕಟ್ಟಿಹಾಕಿ ಇತ್ತು. ಹಗ್ಗವನ್ನು ಎಳೆಯಲು ಆಗತಾನೆ ಹುಟ್ಟಿದ ೧ ಮಗುವು ಮೇಲಕ್ಕೆ ಬಂತು. ಆಮೇಲೆ ವಿಚಾರಣೆ ಮಾಡಲಾಗಿ ಒಬ್ಬ ವಿಧವೆಯು ಇದನ್ನು ಹೆತ್ತು ಬಾವಿಗೆ ಬಿಟ್ಟಳೆಂದು ಗೊತ್ತಾಯಿತು. ಈಕೆಯನ್ನೂ ಆ ಮಗುವನ್ನೂ ಜೈಲಿನಲ್ಲಿ ಇಟ್ಟು ಇದ್ದಾರೆ.

ಫ್ರಾನ್ಸ್ ದೇಶದಲ್ಲಿ ಮಿಸ್ಟರ್ ರೆನರ್ಡ್ ಎಂಬುವನು ಒಂದು ಆಕಾಶ ಬುಟ್ಟಿಯನ್ನು ಕಟ್ಟಿ ಆಕಾಶದಲ್ಲಿ ಬೇಕಾದಕಡೆಗೆ ತಿರುಗಿಸಿಕೊಂಡು ಹೋಗುತ್ತಾನಂತೆ. ಈಗಿನ ರೇಲ್ವೆಯಲ್ಲಿ ಎಷ್ಟುವೇಗವಾಗಿ ಹೋಗಬಹುದೋ ಅದರಲ್ಲಿಯೂ ಅಷ್ಟುವೇಗವಾಗಿ ಹೋಗಬಹುದಂತೆ. ಇದರ ಯಂತ್ರಗಳು ಮುಂತಾದವುಗಳನ್ನು ಮಾಡುವದಕ್ಕೆ ಖರ್ಚು ಬಹಳವಾಗುವದರಿಂದ ರೇಲ್ ಬಂಡಿಗಳಹಾಗೆ ಸಾಧಾರಣವಾಗಿ ಆಗಲಾರದೆಂದು ಅನೇಕರು ಎಣಿಸುತ್ತಾರೆ. ಆದರೂ ಆ ದೇಶಸ್ಥರು ಉಪಾಯಾಂತರಗಳಿಂದ ಇದನ್ನು ಸುಲಭವಾದ ಖರ್ಚಿನಿಂದ ಮಾಡುವದಕ್ಕೆ ಯತ್ನಿಸುತ್ತಾ ಇದ್ದಾರೆ.

ವಿದ್ಯಾವಂತಳಾದ ೧೭ ವರ್ಷದ ಒಬ್ಬ ವಿಧವೆಯು ಒಂದು ಮದರಾಸು ಪತ್ರಿಕೆಗೆ ಬರೆಯುವದೇನಂದರೆ.—ಹಾ ವಿಧಿಯೇ! ಸ್ತ್ರೀಯರಂಥಾ ದುರದೃಷ್ಟವಂತರು ಯಾರೂ ಇಲ್ಲ! ಗಂಡಸತ್ತಕೂಡಲೆ ಸ್ವಭಾವಸಿದ್ಧವಾದ ದುಃಖದ ಜೊತೆಗೆ ಅನೇಕ ದುಃಖಗಳು ಸೇರುವವು. ಆಕೆಗೆ ತಲೆಬೋಳಿಸುವರು. ಅವಳನ್ನು ಜನಸಮೂದಾಯಕ್ಕೆ ಸೇರಿಸರು. ಕೆಲವು ಕಾಲದವರಿಗೂ ಬಂದೀಖಾನೆಯಲ್ಲಿರುವ ಕಳ್ಳನು ಅವಿತುಕೊಳ್ಳುವಹಾಗೆ ಮಾಡುವರು. ಎಲ್ಲರೂ ಆಕೆಯ ಮುಖವನ್ನು ನೋಡಿದರೆ ಏನೋ ವಿಪತ್ತು ಬರುವದೆಂದು ತಿಳಿದುಕೊಳ್ಳುವರು. ಎದುರಿಗೆ ಬಂದರೆ ಅಪಶಕುನ ವಾಯಿತೆಂದು ಹೇಳಿ ಬೈಯುತ್ತಾ ಹೊರಟು ಹೋಗುವರು. ಯಾವಜ್ಜೀವವೂ ದುಃಖವನ್ನು ಅನುಭವಿಸುತ್ತಾ ಸಂನ್ಯಾಸಿಯಂತೆ ಕಾಲಕ್ಷೇಪಮಾಡುವದಕ್ಕಿಂತ ಪ್ರಾಣತ್ಯಾಗವನ್ನು ಮಾಡಿಕೊಳ್ಳುವದು ಉತ್ತಮ. ಗಂಡಸತ್ತಕೂಡಲೆ ಅವನ ಜೊತೆಯಲ್ಲಿಯೇ ಸಹಗಮನ ಮಾಡುವದು ಉತ್ತಮ. ಶಿವಶಿವಾ!

ನಿತ್ಯ ದರಿದ್ರನಿಗೆ ನಿಶ್ಚಿಂತೆ.

ಲೋಕದಲ್ಲಿ ಸ್ತ್ರೀಯರೆಲ್ಲಾ ಹೀಗೆ ದುಃಖಿಸಬೇಕೆಂಬುವದು ನಿನ್ನ ನಿಯಾಮಕವೆ ? ಮಹಾತ್ಮರಾದವರು ಅನೇಕರು ನೀನು ದಯಾಸಮುದ್ರನೆಂದು ಹೇಳುತ್ತಾರೆ. ನಿರಪರಾಧಿಗಳಾದ ಅಬಲೆಯರ ವಿಷಯದಲ್ಲಿ ಇಂಥಾ ನಿಯಾಮಕವನ್ನು ಮಾಡಿದ್ದ ಪಕ್ಷದಲ್ಲಿ ನಿನ್ನನ್ನು ದಯಾಸಮುದ್ರನೆಂದು ಕರೆಯಬಹುದೆ ? ನ್ಯಾಯವಾಗಿ ನಿನಗೆ ಕರುಣಾನಿಧಿಯೆಂಬ ಬಿರುದು ಎಂದಿಗೂ ತಪ್ಪುವದಿಲ್ಲ. ಇಂಥಾ ಕಟ್ಟಳೆಯು ನೀನು ಮಾಡಿದ್ದಲ್ಲ. ನಾನಾ ಜೀವರಾಶಿಗಳಿಂದ ತುಂಬಿದ ಈ ಲೋಕದಲ್ಲಿ ಯಾವ ಪ್ರಾಣಿಗಳ ನಡವಳಿಕೆಗಳನ್ನು ನೋಡಿದಾಗ್ಯೂ, ಇಂಥಾ ಅಧರ್ಮವಾದ ಕಟ್ಟಳೆಯನ್ನು ಎಲ್ಲಿಯೂ ಕಾಣೆನು. ಇದು ದುರ್ಮಾರ್ಗರಾಗಿಯೂ ಸ್ವಕಾರ್ಯಧುರಂಧರರಾಗಿಯೂ ಇರುವಂಥಾ ಪುರುಷರ ಕಟ್ಟಳೆಯಾಗಿ ತೋರುತ್ತದೆ. ಹಾಗಲ್ಲದಿದ್ದರೆ ಪತಿವಿಯೋಗವನ್ನು ಹೊಂದಿದ ಸ್ತ್ರೀಯರ ವಿಷಯದಲ್ಲಿರುವ ಕಟ್ಟಳೆಗಳೆಲ್ಲಾ ಅಪತ್ನೀಕರಾದ ಪುರುಷರ ವಿಷಯದಲ್ಲಿಯೂ ಯಾಕೆ ಇರಬಾರದು ? ನಿಷ್ಕರುಣಿಗಳಾಗಿಯೂ ಅಧರ್ಮಮಾರ್ಗ ಪ್ರವರ್ತಕರಾಗಿಯೂ ಇದ್ದಂಥಾ, ಇಂಥಾಕಟ್ಟಳೆಗಳನ್ನು ಮಾಡಿದಂಥಾ ಪಾಪಿಗಳು, ಅಷ್ಟರಲ್ಲೇ ತೃಪ್ತರಾಗದೆ, ಅವುಗಳೆಲ್ಲಾ ಆಚರಣೆಗೆ ಬರುವಂತೆ ಅವುಗಳನ್ನು ಅನೇಕ ಪುರಾಣ ಪುಣ್ಯಕಥೆಗಳಲ್ಲಿ ಇತಿಹಾಸ ಪೂರ್ವಕವಾಗಿ ಸೇರಿಸಿ, ಅವುಗಳ ಪ್ರಾಮುಖ್ಯವನ್ನು ದೋಷಯುಕ್ತವಾಗಿ ಮಾಡಿವರು. ಅರೇಬಿಯಾ ದೇಶದಲ್ಲಿ ಅಪತ್ನೀಕರನ್ನು ಅವರವರ ಹೆಂಡತಿಯರ ಜೊತೆಯಲ್ಲಿಯೇ ಹೂಳುತ್ತಿದ್ದರೆಂದು ಒಂದು ಇತಿಹಾಸವಿದೆ. ಪತಿವಿಯೋಗವನ್ನು ಹೊಂದಿದ ಸ್ತ್ರೀಯನ್ನು ಯಾವಜ್ಜೀವವೂ ದೊಡ್ಡ ಅಪರಾಧವನ್ನು ಮಾಡಿದ ಖೈದಿಯು ಹಾಗೆ ನಿರ್ಬಂಧವಲ್ಲಿಟ್ಟು ಐಹಿಕ ವ್ಯಾಪಾರಗಳಲ್ಲೆಲ್ಲಾ ವಿರಕ್ತಿಯನ್ನು ಹುಟ್ಟಿಸಿ ನಾನಾವಿಧವಾದ ವೇಷವಂಡನೆಗಳಿಂದ ಕಾಲಹರಣ ಮಾಡಿಸತಕ್ಕ ಈಗಿನ ನಮ್ಮ ಆಚಾರಗಳನ್ನು ನೋಡಿ ಕನಿಕರಪಟ್ಟು ತಕ್ಕ ಏರ್ಪಾಡುಗಳನ್ನು ಮಾಡುವದಕ್ಕೆ ಗಂಡಸರು ಎಂದಿಗೂ ಪ್ರಯತ್ನಿಸುವದಿಲ್ಲವಲ್ಲಾ ! ಮಾಡತಕ್ಕದ್ದೇನು !

ಮೆ|| ರೀ ಸಾಹೇಬರವರು ಮಹಾಬಲಿಪುರದ ಸಮೀಪದಲ್ಲಿ ಅಗೆಸುತ್ತಾ ಇರುವಾಗ ಆರು ಅಡಿಯುಳ್ಳ ಒಂದು ಸಿಂಹದ ಪ್ರತಿಮೆಯು ಸಿಕ್ಕಿತು. ಅದರ ಎರಡು ಕಟಿಪ್ರದೇಶಗಳ ಮೇಲೂ ಇಬ್ಬರು ಸವಾರರು ಕೂತು ಇದ್ದಾರೆ. ಅದರ ಬೆನ್ನಿನ ಮೇಲೆ ಒಂದು ಎಮ್ಮೆಯ ಪ್ರತಿಮೆಯೂ ಅದರಮೇಲೆ ದುರ್ಗಾಪ್ರತಿಮೆಯೂ ಇವೆ. ಇವೆಲ್ಲಾ ಅಖಂಡವಾದ ಒಂದು ಕಲ್ಲಿನ ಪೀಠದಮೇಲೆ ಇವೆ. ಅದರ ಸಮೀಪದಲ್ಲಿಯೇ ಒಂದು ರಾಕ್ಷಸನ ಪ್ರತಿಮೆಯೂ ಒಂದು ಜಿಂಕೆಯ ಪ್ರತಿಮೆಯೂ ಇವೆ.

ಒಂದದಿನ ನೆಂಟ, ಮರುದಿನ ಬಂಟ, ಆಮೇಲೆ ಕಂಟ.

ಲೋಕೋಪಯುಕ್ತವಾದ ಶಾಸ್ತ್ರಗಳನ್ನು ಕಲಿಯುವದಕೋಸ್ಕರ ಯೂರೋಪು ಖಂಡಕ್ಕೆ ವಿದ್ಯಾರ್ಥಿಗಳನ್ನು ಕಳುಹಿಸಬೇಕೆಂದು ಬೊಂಬಾಯಿಯಲ್ಲಿ ಧನಿಕರಾದವರು ಅನೇಕರು ದ್ರವ್ಯವನ್ನು ಕೂಡಿಹಾಕುತ್ತಾ ಇದ್ದಾರೆ. ಹೀಗೆ ಬಹಳ ದ್ರವ್ಯವನ್ನು ಕೂಡಿ ಹಾಕಿ ೧೦–೧೫ ಜನರನ್ನು ಯೂರೋಪುಖಂಡಕ್ಕೆ ಕಳುಹಿಸುತ್ತಾರಂತೆ. ಹೀಗೆ ಮಾಡುವದಕ್ಕಿಂತ ಸಮಸ್ತ ಕಸಬುಗಳನ್ನೂ ಕಲಿಸತಕ್ಕ ಒಂದು ಪಾಠಶಾಲೆಯನ್ನು ನಿರ್ಮಿಸಿ ಬುದ್ಧಿವಂತರಿಗೆ ಸಂಬಳವನ್ನು ಕೊಡುವೆವೆಂದು ಪರದೇಶಗಳಿಂದ ವಿದ್ವಾಂಸರನ್ನು ಕರೆಯಿಸಿ ಇವುಗಳನ್ನು ಕಲಿಯತಕ್ಕವರಿಗೆಲ್ಲಾ ತಕ್ಕ ಏರ್ಪಾಡುಗಳನ್ನು ಮಾಡಿದರೆ ಅನೇಕರು ವಿದ್ವಾಂಸರಾಗಿ ದೇಶಕ್ಕೆಲ್ಲಾ ಉಪಕಾರ ಮಾಡಿದಹಾಗಾಗುವದು. ಆದರೆ ದ್ರವ್ಯವಂತರಿಗೆ ಇಂಥಾ ಆಲೋಚನೆಗಳು ಹುಟ್ಟುವದುಕಷ್ಟ.

ಪ್ಯಾರಿಸ್ ಲಾಟರೀ ವಿಷಯವಾಗಿ ಎಲ್ಲರಿಗೂ ತಿಳಿದಿರಬಹುದು. ಒಂದೊಂದು ಟಿಕೆಟ್ಟಿಗೆ ೨ ರೂಪಾಯಿನ ಪ್ರಕಾರ ಲಕ್ಷಾಂತರ ಜನರು ಟಿಕೆಟ್ಟುಗಳನ್ನು ತೆಗೆದರು ಅನೇಕರು ಬಡವರು ಇದರಿಂದ ತಾವು ಬದುಕುವೆವೆಂದು ತಿಳಿದುಕೊಂಡು, ಸಾಲ ಸೋಲಗಳನ್ನಾದರೂ ಮಾಡಿ, ಒಬ್ಬೊಬ್ಬರ ಹೆಸರಿಗೆ ೮–೧೦ ಟಿಕೆಟ್ಟುಗಳನ್ನು ತೆಗೆದರು. ಎಲ್ಲರೂ ತಮ್ಮ ಅದೃಷ್ಟವು ಚೆನ್ನಾಗಿಯಿದ್ದು ೨ ಲಕ್ಷ ರೂಪಾಯಿಯೂ ತಮ್ಮ ಹೆಸರಿಗೇ ಬಂದರೆ, ಮುಂದಕ್ಕೆ ಬದುಕತಕ್ಕ ಉಪಾಯಾಂತರಗಳನ್ನೆಲ್ಲಾ ಆಲೋಚಿಸುತ್ತಾ, ಆ ಕಾಲದಲ್ಲಿ ಉಂಟಾಗತಕ್ಕ ಸಂತೋಷಗಳನ್ನೆಲ್ಲಾ ಮೊದಲೇ ಮನಸ್ಸಿನಲ್ಲಿ ಅನುಭವಿಸುತ್ತಿದ್ದು, ಹಿಟ್ಟಿನಮಡಿಕೆಯನ್ನು ಒದ್ದ ಬ್ರಾಹ್ಮಣನಂತೆ ಭಗ್ನ ಮನೋರಥರಾದರು. ಸಂಪತ್ತು ಬರುವದು ದೈವಾಧೀನ. ಈಸ್ಟ್ ಇಂಡಿಯನ್ ರೇಲ್ವೆಯಲ್ಲಿ ಟಿಕೆಟ್ ಜವಾಯಿಸುತ್ತಿದ್ದ ಒಬ್ಬ ಮನುಷ್ಯನಿಗೆ ೨ ಲಕ್ಷ ರೂಪಾಯಿಯೂ ಬಂತು. ಈತನ ಮನೋರಥಗಳೆಲ್ಲಾ ಇನ್ನುಮೇಲೆ ನೆರವೇರಬಹುದು. ಇನ್ನೂ ಅನೇಕರು ಪಾಂಡಿಚೆರೀ ಲಾಟರಿಯಲ್ಲಿ ಟಿಕೆಟ್ಟುಗಳನ್ನು ತೆಗೆದು ತಾವು ಐಶ್ವರ್ಯವಂತರಾಗಬಹುದೆಂದು ಯೋಚಿಸಿಕೊಂಡಿದ್ದಾರೆ. "ಅಳಿಯನಕುರುಡು ಬೆಳಗಾದರೆ" ಎಂಬ ಗಾದೆಗೆ ಅನುಸಾರವಾಗಿ ಇನ್ನು ೭ ತಿಂಗಳೊಳಗಾಗಿಯೇ ಇವರ ಅದೃಷ್ಟಗಳೂ ಬಹಿರಂಗವಾಗುವವು.

ತಿರುಪತಿಯ ಸಮೀಪದಲ್ಲಿ ಯಾತ್ರಾರ್ಥಿಯಾದ ಒಬ್ಬ ಬ್ರಾಹ್ಮಣನು ಒಂದು ದಿನ ರಾತ್ರಿ ಮಾರ್ಗದಲ್ಲಿ ಒಂದು ಮನೆಯಲ್ಲಿ ಇಳಿದನು. ಮೂರು ಜನ ಹುಡುಗರು ಆತನ ಬಳಿಗೆ ಹೋಗಿ ನಾನಾವಿಧವಾಗಿ ಆತನಿಗೆ ಉಪಚರಿಸಿದ್ದರಿಂದ ಆತನು ಇವರು ಸಂಪನ್ನರೆಂದು ತಿಳಿದು ತನ್ನ ಬಳಿಯಲ್ಲಿ ಸೇರಿಸಿದನು. ಬೆಳಗಾಗುವದರೊಳಗಾಗಿ, ಆ ಹುಡುಗರು ಆತನ

ತುಂಟ ಕುದುರೆಗೆ ಗಂಟು ಲಗಾಮು.

ಬಳಿಯಲ್ಲಿದ್ದ ದ್ರವ್ಯವನ್ನೂ ದೇವರ ಪೆಟ್ಟಿಗೆ ಮುಂತಾದವುಗಳನ್ನೂ ತೆಗದುಕೊಂಡು ಹೊರಟುಹೋದರು. ಜನರ ಉಪಚಾರೋಕ್ತಿಗಳಿಗೆ ಮರುಳಾದರೆ ಹೀಗೆ ನಷ್ಟಬರುವದು.

ಆಗಸ್ಟು ೧೦ನೇ ತಾರೀಖಿನ ರಾತ್ರಿ ೧ ಘಂಟೆಯ ಹೊತ್ತಿನಲ್ಲಿ ಬೆಂಗಳೂರಲ್ಲಿ ಚನ್ನ, ವರದ ಎಂಬವರು ಇಬ್ಬರು ಸೇರಿಕೊಂಡು ಹೊನ್ನಪ್ಪನೆಂಬುವನನ್ನು ಬಲಗಣ್ಣಿನ್ನು ಬಂದು ಆಯುಧದಿಂದ ತಿವಿದರು. ಈತನನ್ನು ಕೂಡಲೇ ಆಸ್ಪತ್ರಿಗೆ ತೆಗದುಕೊಂಡು ಹೋದರು. ಮಾರನೇ ದಿನವೇ ಈತನು ಸತ್ತನು. ಇದಕ್ಕೆ ಕಾರಣವೇನಂದರೆ: ಹೊನ್ನಪ್ಪ ನೆಂಬುವನು ಒಬ್ಬ ಹೆಂಗಸನ್ನು ಇಟ್ಟುಕೊಂಡಿದ್ದನು. ಚನ್ನ ನೆಂಬುವನು ಅವಳನ್ನು ತನ್ನ ವಶಮಾಡಿಕೊಂಡು ಅನಂತರದಲ್ಲಿ ವರದನೆಂಬುವನನ್ನು ತನ್ನ ಸಹಾಯಕ್ಕೆ ಸೇರಿಸಿಕೊಂಡು ಹೊನ್ನಪ್ಪನ ಮೇಲೆ ತನಗಿದ್ದ ಶತ್ರುತ್ವವನ್ನು ತೀರಿಸಿ ಕೊಂಡಂತೆ ತೋರುತ್ತದೆ.

ಸೇಲಂ ಜಿಲ್ಲೆಯಲ್ಲಿ ಹಿಂದುಗಳಿಗೂ ಮುಸಲ್ಮಾನರಿಗೂ ಆದ ಜಗಳವನ್ನು ಸೂಚಿಸಿ ಇದ್ದೇವಷ್ಟೆ. ಈ ಜಗಳವು ಹಿಂದುಗಳಲ್ಲಿಯೂ ಮುಸಲ್ಮಾನರಲ್ಲಿಯೂ ತುಂಟರಾದ ಜನಗಳಿಂದ ನಡೆದದ್ದು. ಅನೇಕ ಜನತುಂಟರು ದೊಡ್ಡಮನುಷ್ಯರನ್ನು ಭಯಪಡಿಸಿ ದುಡ್ಡು ಕಿತ್ತು ಕೊಳ್ಳುವದಕ್ಕೋಸ್ಕರ ಅವರಮೇಲೆ ಕ್ರಿಮಿನಲ್ ಚಾರ್ಜು ತಂದರು. ಇದೆಲ್ಲಾ ವಾಸ್ತವವೆಂದು ತಿಳಿದು ಸರಕಾರದ ಅಧಿಕಾರಿಗಳೂ ಕೂಡ ಆ ದೊಡ್ಡಮನುಷ್ಯರನ್ನು ಮ್ಯಾಜಿಸ್ಟ್ರೇಟರ ವಿಚಾರಣೆಯಲ್ಲಿ ತಪ್ಪಿತಸ್ಥರನ್ನಾಗಿ ಹಿಡಿದುಕೊಂಡು ಅವರಿಗೆಲ್ಲಾ ಕ್ರೂರವಾದ ದಂಡನೆ ಗಳನ್ನು ಮಾಡಿದರು. ಹೀಗೆ ದಂಡನೆಯಾದ ಜನರಲ್ಲಿ ವಿಜಯರಾಘವಾಚಾರ್ಯರೆಂಬುವರು ಸರಕಾರದವರೇ ಅಧರ್ಮವಾಗಿ ಶಿಕ್ಷೆಯನ್ನು ಮಾಡಿ ಇದ್ದಾರೆಂದು ಹೈಕೋರ್ಟಿನಲ್ಲಿ ದಾವಾಮಾಡಿ ಮದರಾಸು ಗವರ್ನರ್‌ಸಾಹೇಬರವರಿಂದ ೧೦೦ ರೂಪಾಯಿ ಡ್ಯಾಮೇಜ್ ತೆರಿಸಿದ್ದಲ್ಲದೆ ಎಲ್ಲಾ ಕೋರ್ಟುಗಳಲ್ಲಿಯೂ ತಮಗಾದ ನಷ್ಟವನ್ನು ಗವರ್ನರವರು ಕೊಡುವಹಾಗೆ ಫೈಸಲನ್ನು ಪಡೆದರು. ಈ ವಿಜಯರಾಘವಾಚಾರ್ಯರು ಈಚೆಗೆ ತಮ್ಮಮೇಲೂ, ದಂಡನೆಯನ್ನು ಹೊಂದಿದ ಇತರದೊಡ್ಡಮನುಷ್ಯರಮೇಲೂ, ಸರಕಾರದವರ ದುಪ್ರೇರಣೆಯಿಂದ ಸುಳ್ಳುಸಾಕ್ಷಿಯನ್ನು ಹೇಳಿದವರಮೇಲೆ ದಾವಾಮಾಡಿ, ಅನೇಕರನ್ನು ಬಂದೀಖಾನೆಗೆ ಹಾಕಿಸಿದ್ದಲ್ಲದೆ ಈಗಲೂ ಅನೇಕರಮೇಲೆ ದಾವಾಮಾಡುತ್ತಾ ಇದ್ದಾರೆ. ಈ ವಿಷಯಗಳೆಲ್ಲಾ ಇಲಾಯತಿಯಲ್ಲಿರುವ ಪಾರ್ಲಿಮೆಂಟ್‌ವರಿಗೂ ತಿಳಿದು ಇಲಾಯತೀ ಗವರ್ನಮೆಂಟಿನವರೂ ಗವರ್ನರ್‌ಸಾಹೇಬರೂ ಎಲ್ಲರೂ ಸೇರಿ ಮದರಾಸು ಗವರ್ನಮೆಂಟಿನವರು ಬುದ್ಧಿಶಾಲಿಗಳಲ್ಲವೆಂಬದಾಗಿ ವ್ಯಕ್ತ

ದಿಕ್ಕಿಲ್ಲದವರಿಗೆ ದೇವರೇ ಗತಿ.

ಹಾಗುವದರಿಂದ ಅನ್ಯಾಯವಾದ ಶಿಕ್ಷೆಯನ್ನು ಅನುಭವಿಸುತ್ತಿರುವ ಜನರನ್ನೆಲ್ಲಾ ಬಂಧ ನದಿಂದ ತಪ್ಪಿಸತಕ್ಕ ಆಲೋಚನೆಯಲ್ಲಿರುವಹಾಗೆ ವರ್ತಮಾನವಿದೆ. ಹೀಗೆ ಇಂಗ್ಲೀಷು ರಾಜ್ಯಭಾರದಲ್ಲಿ ಸಾಮಾನ್ಯರಾದ ಅಧಿಕಾರಿಗಳು ಇಂಥಾ ಅಧರ್ಮಕೃತ್ಯಗಳನ್ನು ಮಾಡಿ ದಾಗ್ಯೂ ಶಿಕ್ಷೆಯನ್ನು ಹೊಂದಿದವರು ಧೈರ್ಯವನ್ನು ಬಿಡದೆ ನಡೆದ ವಿಷಯಗಳನ್ನೆಲ್ಲಾ ಸ್ಪಷ್ಟವಾಗಿ ಮೇಲಿನ ಸರಕಾರಕ್ಕೆ ತಿಳಿಸಿದರೆ ಧರ್ಮಕ್ಕೆ ಎಂದಿಗೂ ಕುಂದುಕ ಬರುವದಿಲ್ಲ.

ಮೀನು ಮೀನನ್ನು ನುಂಗುವದೆಂಬುವದನ್ನು ಕೇಳಿಬಲ್ಲೆವು. ಇದು ಆಶ್ಚರ್ಯ ವಲ್ಲ. ಕಳೆದ ಜುಲಾಯಿ ತಾರೀಖು ೩೦ ರಲ್ಲಿ ತಂಜಾವೂರು ಡಿಸ್ಟ್ರಿಕ್ಟ ಕುಂಭಕೋಣದ ಸಮೀಪದಲ್ಲಿ ಎರಡು ನಾಗರಹಾವುಗಳು ಜಗಳವಾಡುತ್ತಿದ್ದವು. ಇದನ್ನು ನೋಡುವದಕ್ಕೆ ಅನೇಕ ಜನರು ಸೇರಿದ್ದರು. ಕಡೆಗೆ ಆ ಹಾವುಗಳಲ್ಲಿ ಚಿಕ್ಕದು ಜಗಳವಾಡುವದಕ್ಕೆ ಸಾಮರ್ಥ್ಯವಿಲ್ಲದೆ ಸುಮ್ಮನೆ ಬಿದ್ದುಕೊಂಡಿತು. ಕೂಡಲೆ ದೊಡ್ಡಹಾವು ಅದನ್ನು ತಲೇ ಕಡೆಯಿಂದ ನುಂಗುವದಕ್ಕೆ ಪ್ರಾರಂಭಿಸಿತು. ಅಷ್ಟರಲ್ಲಿಯೇ ಜನರು ಗಾಬರಿಮಾಡಲು ಅದು ಅದನ್ನು ನುಂಗುತ್ತಾ ಸಮೀಪದಲ್ಲಿದ್ದ ಒಂದು ಬಿಲವನ್ನು ಹೊಕ್ಕಿತು. ಇವರೆಲ್ಲಾ ದೊಣ್ಣೆಗಳನ್ನು ತೆಗೆದುಕೊಂಡು ಆ ಬಿಲವನ್ನು ಅಗೆದು ಆ ಹಾವನ್ನು ಕೊಂದರು. ಅನಂ ತರದಲ್ಲಿ ಅವರಲ್ಲೊಬ್ಬನು ಅದನ್ನು ಸೀಳಿ ನೋಡಲಾಗಿ ಅದರ ಹೊಟ್ಟೆಯಲ್ಲಿ ಆ ಚಿಕ್ಕ ಹಾವು ಇತ್ತು.

ವಾಂತಿಭೇದಿ ಉಪದ್ರಕ್ಕೆ ಸಿದ್ಧೌಷಧವನ್ನು ಒಬ್ಬವೈದ್ಯನು ಹೇಳಿಇರುತ್ತಾನೆ. ಏನಂ ದರೆ: ಒಣಗಿದ ಮೆಣಸಿನಕಾಯನ್ನು ಜೇನುತುಪ್ಪದಲ್ಲಿ ಹುರಿದು ಕಲಪತ್ತಿನಲ್ಲಿ ನುಣ್ಣಗೆ ಪುಡಿ ಮಾಡಿ ದಪ್ಪ ಅವರೇಕಾಳುಗಾತ್ರ ಮಾತ್ರೆಗಳನ್ನು ಮಾಡಿ ಇಟ್ಟುಕೊಂಡು ಈ ರೋಗವು ತಗ ಲಿದ ಕೂಡಲೆ ೩ಮಾತ್ರೆಗಳನ್ನು ಕೊಟ್ಟರೆ ಕೂಡಲೇ ರೋಗವು ನಿಲ್ಲುವದು. ಹಾಗೆ ನಿಲ್ಲ ದಿದ್ದರೆ ಇನ್ನೊಂದುಸಾರಿ ೩ಮಾತ್ರೆಗಳನ್ನು ಕೊಡುವದರೊಳಗಾಗಿ ನಿಶ್ಶೇಷವಾಗಿ ನಿಂತು ಹೋಗುವದು. ಹೀಗೆ ರೋಗಬಂದವರಿಗೆ ದಾಹ ಹೆಚ್ಚಾದರೆ ಒಂದುಹೊಸಮಡಿಕೆಯನ್ನು ತರಿಸಿ ಒಳಭಾಗವನ್ನು ಚನ್ನಾಗಿ ತೊಳೆದು ಚನ್ನಾಗಿ ಶೋಧಿಸಿದ ನೀರನ್ನು ತುಂಬಿ ಆ ನೀ ರಿಗೆ ಕರ್ಪೂರವನ್ನು ಪುಡಿಮಾಡಿಹಾಕಿ ಅದನ್ನು ಕುಡಿಯುವದಕ್ಕೆ ಕೊಡುತ್ತಾ ಇರಬೇಕು.

ಫ್ರಾನ್ಸ್ ದೇಶದಲ್ಲಿ ೧೦೮ ವರ್ಷಗಳ ವಯಸ್ಸುಳ್ಳ ಮ್ಯಾಡಾಂ ಲಕ್ಸ್ ಎಂಬುವಳು ಸತ್ತ ಳಂತೆ. ಈಕೆಯು ತಾನು ಸಾಯುವವರಿಗೂ ಮನೇಕೆಲಸಗಳನ್ನೆಲ್ಲಾ ತಾನೇಮಾಡಿಕೊಳ್ಳು

ತ್ತಿದ್ದಳಂತೆ. ಇದು ಆಶ್ಚರ್ಯವಲ್ಲ. ಯಾಕಂದರೆ, ಇಲಾಯತಿಯಲ್ಲಿದ್ದ ತಾಮಸ್ ಪಾರ್ ಎಂಬ ರೈತನು ೧೦೦ವರ್ಷದವರೆಗೂ ಮದುವೆಯಿಲ್ಲದೆ ಇದ್ದು ಅನಂತರದಲ್ಲಿ ಮದುವೆಯಾಗಿ, ೧೨೦ರವರೆಗೂ ಅವಳೊಡನೆ ಬಾಳಿ, ಆಗ ಅವಳು ಸತ್ತುದರಿಂದ ಎರಡನೇವಳನ್ನು ಮದುವೆಯಾಗಿ, ಮಕ್ಕಳನ್ನು ಪಡೆದು ೧೪೦ರವರೆಗೂ ಸುಖವಾಗಿ ಇದ್ದನು. ಹೆನ್ರಿ ಜಂಕಿನ್ಸ್ ಎಂಬುವನು ಹೀಗೆಯೇ ೧೩೦ವರ್ಷಗಳು ಬದುಕಿದನು. ಈತನು ಸಾಯುವವರೆಗೂ ದೇಹಶ್ರಮೆಯಿಂದ ತನ್ನ ಜೀವನವನ್ನು ತಾನೇ ಸಂಪಾದಿಸಿಕೊಳ್ಳುತ್ತಿದ್ದನು.

ಕ್ಲಾಯ್ಯಂಗ್ ಎಂಬ ಪಟ್ಟಣದಲ್ಲಿ ಒಬ್ಬ ಕಾಪೀತೋಟದ ಯಜಮಾನನು ತನ್ನ ಕೊಠಡಿಯನ್ನು ಪ್ರವೇಶಿಸಲು ಚಿತ್ರ ವಿಚಿತ್ರವಾದ ಬಣ್ಣಗಳುಳ್ಳ ಒಂದುಹಾವು ಈತನನ್ನು ಕಡಿಯಬೇಕೆಂದು ಮೇಲೆ ಬೀಳುವದಕ್ಕೆ ಬಂತು. ಈತನು ತನ್ನ ಕೈಯಲ್ಲಿದ್ದ ಒಂದು ದೊಣ್ಣೆಯಿಂದ ಅದು ತನ್ನಮೇಲೆ ಬೀಳದಂತೆ ಹೊಡೆದು ತಪ್ಪಿಸಿಕೊಳ್ಳುತ್ತಾ ಇದ್ದನು. ಹೀಗೆ ಅದು ಈತನನ್ನು ಕಡಿಯಬೇಕೆಂಬದಾಗಿಯೂ ಈತನು ಅದನ್ನು ಕೊಲ್ಲಬೇಕೆಂಬದಾಗಿಯೂ ಸ್ವಲ್ಪಹೊತ್ತು ಹೋರಾಡಿದಮೇಲೆ ಈತನ ಆಳು ಒಂದು ತುಪಾಕಿಯನ್ನು ತಂದು ತನ್ನ ಯಜಮಾನನ ಕೈಗೆ ಕೊಟ್ಟನು. ಈತನು ಆ ಹಾವನ್ನು ಹೊಡೆದು ಅದರ ವಿಚಿತ್ರವಾದ ಚರ್ಮವನ್ನು ಸರ್ವವಸ್ತು ಪ್ರದರ್ಶನಶಾಲೆಯಲ್ಲಿ ಇಟ್ಟಿದ್ದಾನೆ.

ಸುಮಾರು ೧೦ - ೧೨ ದಿನಗಳಕೆಳಗೆ ಇಲಾಯತಿಯಲ್ಲಿ ಪ್ರಚಂಡವಾದ ಗಾಳಿ ಮಳೆ ಗುಡುಗು ಮಿಂಚುಗಳು ಬಂದು ಅವುಗಳ ರಭಸಕ್ಕೆ ಅನೇಕ ದೇವಾಲಯಗಳೂ ಮನೆಗಳೂ ಬಿದ್ದುಹೋದವು. ಅನೇಕರು ಸತ್ತರು. ಲಾಡರ್ ಡೇಲ್ ಎಂಬ ಒಬ್ಬ ದೊಡ್ಡಮನುಷ್ಯನು ಸಿಡಿಲಿನ ಪೆಟ್ಟು ತಗಲಿ ಸತ್ತನು. ಈಮಳೆಯ ಪೆಟ್ಟಿಗೆ ತಡೆಯಲಾರದೆ ಒಂದುಮರದ ಬುಡವನ್ನು ಆಶ್ರಯಿಸಿಕೊಂಡಿದ್ದ ಒಬ್ಬ ಮನುಷ್ಯನಿಗೆ ಸಿಡಿಲಿನ ಪೆಟ್ಟು ತಗಲಿ ಅವನಕಾಲಿನ ಮೋಜಾದ ಮೇಲಿನ ಭಾಗದಿಂದ ಭೂಮಿಯೊಳಕ್ಕೆ ಪ್ರವೇಶಿಸಿತು. ಇದರಿಂದ ಇವನಕಾಲಿನಲ್ಲಿ ಎರಡು ರಂಧ್ರಗಳಾಗಿ ಇವೆ.

ಜನರು ಬಹಳ ಚಿಕ್ಕವರಾಗಿ ಇರುವಾಗಲೇ ಮದುವೆಮಾಡುವದರಿಂದಲೂ ಪತಿವಿಯೋಗವನ್ನು ಹೊಂದಿದ ಹೆಂಗಸರು ಯಾವಜ್ಜೀವವೂ ಪುನರ್ವಿವಾಹ ಮಾಡಿಕೊಳ್ಳದೆ ಇರುವದರಿಂದಲೂ ಅನೇಕ ಕೇಡುಗಳು ಸಂಭವಿಸುವವು. ಬಲಿತಬೀಜಗಳನ್ನು ಹಾಕಿದರೆ ಗಿಡಗಳು ಚನ್ನಾಗಿ ಬೆಳೆಯುವವು; ಎಳೇಬೀಜಗಳನ್ನು ಹಾಕಿದರೆ ಅವು ಮೊಳೆಯುವದೇ ಕಷ್ಟ.

ಕರಡಿಗೆ ಹೆದರದವ ಕಂಬಳಿಗೆ ಹೆದರಾನೆ ?

ಎಲ್ಲಿಯೋ ಬಂದೊಂದು ಮೊಳೆತರೂ ಕರತುಕೊಂಡು ಹೋಗುವದು. ಬಾಲ್ಯದಲ್ಲಿ ವಿವಾಹ ಮಾಡುವದರಿಂದ ಶಕ್ತಿಯಿಲ್ಲದ ಮಕ್ಕಳು ಹುಟ್ಟಿ ಶೀಘ್ರವಾಗಿಯೇ ಸಾಯುವರು. ಒಂದು ವೇಳೆ ಬದುಕಿದರೂ ಶಕ್ತಿಯಿಲ್ಲದೆ ಕ್ಷಯಿಸುತ್ತಿರುವರು. ಇವರಿಗೆ ಆಯುಸ್ಸು ಕಡಮೆಯಾಗುವದು; ದೇಹದಾರ್ಢ್ಯವು ಇರುವದಿಲ್ಲ; ಬುದ್ಧಿಪ್ರಾಚುರ್ಯವು ಇರುವದೇ ಇಲ್ಲ; ಚಿಕ್ಕ ವಯಸ್ಸಿನಲ್ಲಿಯೇ ಮುದುಕರಾಗುವರು. ಚಿಕ್ಕತನದಲ್ಲಿಯೇ ವಿಧವೆಯರಾದವರಿಗೆ ಪುನರ್ವಿವಾಹವನ್ನು ಮಾಡದೆ ಇರುವದರಿಂದ ಗೋಪ್ಯವಾಗಿ ನಡೆಯತಕ್ಕ ಶಿಶುಹತ್ಯೆಗಳೇ ಮೊದಲಾದ ಅಕೃತ್ಯಗಳು ಲೋಕಪ್ರಸಿದ್ಧವಾಗಿವೆ. ಚಿಕ್ಕತನದಲ್ಲಿಯೇ ಮದುವೆ ಮಾಡಬೇಕೆಂತಲೂ, ಚಿಕ್ಕಂದಿನಲ್ಲಿಯೇ ಗಂಡಂದಿರು ಸತ್ತರೂ ಅವರಿಗೆ ಪುನರ್ವಿವಾಹವನ್ನು ಮಾಡಕೂಡದೆಂತಲೂ, ನಿಬಂಧನೆ ಮಾಡಿದವರು ಇವುಗಳಿಂದ ಸಂಭವಿಸುವ ಕೇಡುಗಳನ್ನು ಯೋಚಿಸಿ ಇದ್ದರೆ ಎಂದಿಗೂ ಹೀಗೆ ಮಾಡುತ್ತಿರಲಿಲ್ಲವೆಂಬದಾಗಿ ಒಂದು ಪತ್ರಿಕೆಯಿಂದ ತಿಳಿಯಬರುತ್ತದೆ.

ನಮ್ಮ ದೇಶದಲ್ಲಿ ಕೆಲವರು ಅಧಿಕಾರದಿಂದಲೂ ಕೆಲವರು ವ್ಯಾಪಾರದಿಂದಲೂ ಮತ್ತು ಕೆಲವರು ವ್ಯವಸಾಯದಿಂದಲೂ ಜೀವಿಸುತ್ತಾರೆ. ಈ ಮೂರು ಕಸಬುಗಳಲ್ಲಿಯೂ ದೊಡ್ಡ ಅಧಿಕಾರಿಗಳೂ ಭಾರೀ ವರ್ತಕರೂ ಶ್ರೇಷ್ಠರಾದ ರೈತರೂ ಸುಖಪಡುವರು. ಜುಜಬೀ ನೌಕರರು ಜೀವನಕ್ಕೆ ಸಾಲದ್ದರಿಂದ ಅನೇಕ ಅಧರ್ಮವಾದ ಕೆಲಸಗಳನ್ನು ಮಾಡುವರು. ಬಡವರಾದ ವರ್ತಕರು ತಕ್ಕ ಬಂಡವಾಳವಿಲ್ಲದೆ ಇರುವ ಕಾರಣ ಆದಾಯಕರವಾದ ಕೆಲಸಗಳನ್ನು ಮಾಡದೆಯೂ ಅಲ್ಪ ವ್ಯಾಪಾರಗಳಿಂದ ಅಹನ್ಯಹನಿ ಕಾಲಕ್ಷೇಪ ಮಾಡಿಕೊಂಡು ಕ್ರಮೇಣ ದೊಡ್ಡ ವ್ಯಾಪಾರಗಳನ್ನು ಮಾಡುವದಕ್ಕೆ ಇಷ್ಟವಿಲ್ಲದೆಯೂ ದರಿದ್ರಾವಸ್ಥೆಯಲ್ಲಿಯೇ ಇದ್ದುಕೊಂಡು ಹಿಂಸೆಪಡುವರು. ಬಡರೈತರು ಮಳೆಬೆಳೆಗಳು ಸರಿಯಾಗಿ ನಡೆಯುವವರೆಗೂ ಕಷ್ಟಜೀವನವನ್ನು ಮಾಡಿಕೊಳ್ಳುತ್ತಾ ಇದ್ದು, ಅಕಸ್ಮಾತ್ತಾಗಿ ಬರಗಾಲ ಮುಂತಾದವುಗಳು ಪ್ರಾಪ್ತವಾದರೆ, ಜೀವನಾಂತರಕ್ಕೆ ಮಾರ್ಗವಿಲ್ಲದೆ ಸಾಲಗಾರರ ಮತ್ತು ಸರಕಾರದ ಬಾಧೆಯನ್ನು ತಡೆಯಬಾರದೆ ಹೊಲ ಮನೆಗಳನ್ನು ಬಿಟ್ಟು, ಕೂಲಿಯಿಂದ ಎಲ್ಲಾದರೂ ಜೀವಿಸಿಕೊಳ್ಳಬೇಕೆಂದು ಹೊರಟು, ಅನ್ನವಸ್ತ್ರಗಳಿಲ್ಲದೆ ರೋಗಪೀಡಿತರಾಗಿ, ದಾರಿಯಲ್ಲಿ ಕೆಲವರೂ ಕಾಫೀ ತೋಟದಲ್ಲಿ ಕೆಲವರೂ ಸಾಯುವರು. ಇವರ ಅವಸ್ಥೆಗಳನ್ನು ಚನ್ನಾಗಿ ವಿಚಾರಿಸಿ ನೋಡಿದರೆ ಎಂಥವರಿಗೂ ದುಃಖಬರುವದು. ಇಂಥಾ ದಾರಿದ್ರ್ಯಕ್ಕೆ ಈ ಜನರ ಅಜ್ಞಾನವೇ ಮುಖ್ಯವಾದ ಕಾರಣವು. ವ್ಯವಸಾಯ ಮಾಡತಕ್ಕವರೇ ಆಗಲೀ ವ್ಯಾಪಾರವನ್ನು ಮಾಡತಕ್ಕವರೇ ಆಗಲೀ ಲೋಕವ್ಯವಹಾರಕ್ಕೆ

ಕಾಲವನ್ನು ನಾಲಿಗೆ ಹೇಳುವದು.

ತಕ್ಕಷ್ಟು ವಿದ್ಯೆಯನ್ನು ಸಂಪಾದಿಸಿಕೊಂಡು, ವ್ಯವಸಾಯ ವ್ಯಾಪಾರಕಾಲಗಳಲ್ಲಿ ಅವುಗಳನ್ನು ಮಾಡುತ್ತಾ, ವಿರಾಮಕಾಲದಲ್ಲಿ ಇನ್ನ್ಯಾವದಾದರೂ ಕಸಬಿನಿಂದ ಸಾಧ್ಯವಾದ ಮಟ್ಟಿಗೆ ದ್ರವ್ಯವನ್ನು ಸಂಪಾದನೆ ಮಾಡಿಕೊಂಡು ಮುಂದೆ ಏನು ಕಷ್ಟ ಬರುವದೋ ಎಂದು ಜಾಗರೂಕರಾಗಿ ಇದ್ದುಕೊಂಡು ಕುಡಿಯುವದೇ ಮೊದಲಾದ ಕೆಟ್ಟ ಕೆಲಸಗಳಲ್ಲಿ ಪ್ರವರ್ತಿಸದೆ ಇದ್ದರೆ ಲೋಕದಲ್ಲಿ ಸಾಧ್ಯವಾದಮಟ್ಟಿಗೆ ಸುಖವಾಗಿ ಇರಬಹುದು. ನಮ್ಮಲ್ಲಿ ಅನೇಕರು ಯಾವಾಗಲೂ ಉದ್ಯೋಗಜೀವನವೇ ಗೌರವವಾದದ್ದೆಂದು ತಿಳಿದು ಇದ್ದಾರೆ. ತನ್ನ ಜೀವನಕ್ಕೂ ಸಾಲದಷ್ಟು ಸಂಬಳವನ್ನು ಸಂಪಾದಿಸಿ, ಅಕೃತ್ಯಗಳನ್ನು ಮಾಡಿ, ಮೇಲಿನ ಅಧಿಕಾರಿಗಳಿಂದ ವಾಚಾಮಗೋಚರವಾಗಿ ಮಾತುಗಳನ್ನು ಕೇಳಿ, ಸ್ವಲ್ಪವೂ ಸ್ವತಂತ್ರವಿಲ್ಲದೆ ಅತಿ ದುಃಖಕರವಾದ ಜೀವನವನ್ನು ಮಾಡುವದಕ್ಕಿಂತ ಸ್ವತಂತ್ರವಾಗಿ ಕೃಷಿಯನ್ನಾಗಲೀ ವ್ಯಾಪಾರವನ್ನಾಗಲೀ ಮಾಡಿ ಜೀವಿಸುವದು ಬಹಳ ಸುಖಕರವಾದದ್ದು. ಆದರೆ ಅನೇಕರು ಹೀಗೆ ಕೃಷಿಮಾಡುವದಕ್ಕೆ ಭೂಮಿಯೂ ವ್ಯಾಪಾರಕ್ಕೆ ಬಂಡವಾಲವೂ ಇಲ್ಲವೆಂದು ಹೇಳಬಹುದು. ಆದರೆ ಲೋಕದಲ್ಲಿ ಮಧ್ಯಾಹ್ನದರಿದ್ರರು ಅನೇಕರು ಸೇವಾವೃತ್ತಿಯಿಂದ ಹಣವನ್ನು ಸಂಪಾದಿಸಿ ಅದರ ಸಹಾಯದಿಂದ ವ್ಯಾಪಾರ ಕೃಷಿ ಮುಂತಾದವುಗಳನ್ನು ಮಾಡಿ ಬೇಕಾದಷ್ಟು ಹಣವನ್ನು ಸಂಪಾದಿಸಿ ಲೋಕಕ್ಕೂ ಉಪಕಾರಮಾಡಿ ತಾವೂ ಸುಖಪಟ್ಟು ಇದ್ದಾರೆ. ಈಗ ಬಂಗಾಳಾದಲ್ಲಿರತಕ್ಕ ಒಬ್ಬ ವಿದ್ವಾಂಸನು ಸುಮಾರು ೧೦-೧೨ ವರ್ಷಗಳಿಗೆ ಮುಂಚೆ ಎಂ. ಏ. ಪರೀಕ್ಷೆಯನ್ನು ಕೊಟ್ಟು, ಮತ್ತೊಬ್ಬರನ್ನು ಅನುಸರಿಸಿ ಜೀವಿಸುವದಕ್ಕೆ ಇಷ್ಟವಿಲ್ಲದೆ, ಭಕ್ಷ್ಯಗಳ ಅಂಗಡಿಯನ್ನು ಇಟ್ಟು, ಕ್ರಮೇಣ ಬಂಡವಾಳವನ್ನು ಮಾಡಿಕೊಂಡು, ಈಗ ತುಂಬಾ ಧನಿಕನಾಗಿ ಇದ್ದಾನೆ. ಹೀಗೆ ಲೋಕವ್ಯವಹಾರಗಳನ್ನು ತಿಳಿದ ಬುದ್ಧಿವಂತರು ಹ್ಯಾಗಾದರೂ ಬದುಕುವರು; ಇಲ್ಲದವರು ನಾನಾ ಕಷ್ಟಕ್ಕೆ ಗುರಿಯಾಗುವರು ಎಂಬದಾಗಿ ಒಂದು ಪತ್ರಿಕೆಯು ತಿಳಿಸುತ್ತದೆ.

ವಾಂತಿಭೇದಿ ಉಪದ್ರವು ಊರಿನಲ್ಲಿ ಪ್ರಬಲವಾಗಿ ಇರುವಾಗ ಕಾಲಿಸ್ ಬ್ರೌನ್ಸ್ ಕ್ಲೋರೋಡೈನನ್ನು ಸಿದ್ಧವಾಗಿ ಇಟ್ಟುಕೊಂಡಿರಬೇಕು. ಮನೆಯಲ್ಲಿ ಅಗ್ಗಿಷ್ಟಿಕೆಯಲ್ಲಿ ತುಂಬಾ ಕೆಂಡವನ್ನು ಹಾಕಿ ಅದರ ಮೇಲೆ ಗಂಧಕದ ಪುಡಿಯನ್ನು ಚೆಲ್ಲಿದರೆ ಗಾಳಿಯು ನಿರ್ಮಲವಾಗುವದು. ಬೇಗ ಜೀರ್ಣಕ್ಕೆ ಬರುವ ಪದಾರ್ಥಗಳನ್ನು ವಿನಹಾ ಮತ್ಯಾವದನ್ನೂ ತಿನ್ನಬಾರದು. ಪಲ್ಯ ಮೊದಲಾದವುಗಳಿಗೆ ಸ್ವಲ್ಪ ಉಪ್ಪನ್ನು ಹೆಚ್ಚಾಗಿ ಸೇರಿಸಬೇಕು. ಮೆಣಸಿನ ಸಾರನ್ನು ಮಾಡಿಸಿ ಅದಕ್ಕೆ ಹಿಂಗನ್ನು ಮಿಶ್ರಮಾಡಿ ಹಾಕಿಕೊಳ್ಳಬೇಕು. ಸ್ನಾನಪಾನಗಳಿಗೆ ಬಿಸಿನೀರನ್ನೇ ಬಳಸಬೇಕು. ಯಾವಾಗಲೂ ಹತ್ತಿರ ಕರ್ಪೂರವನ್ನು ಇಟ್ಟುಕೊಂಡಿರಬೇಕು.

ಅಕ್ಕ ತಂಗಿಯರಾದರೂ ಅಕ್ಕಸಾಲೆ ಬಿಡ.

* ೮. ಒಗಟೆ ಗಳು

(೧) ಪಕ್ಷಿವಾಹೊ ನ ಚ ಹರಿಃ। ಜಟಾಧಾರೀ ನ ಶಂಕರಃ ॥ ಸ್ವಯಂಭೂರ್ನ ಚತುರ್ವಕ್ತ್ರಃ ।ಹರಿವಂಶೋ ನ ವಾಸುಕಿಃ ॥

(೨) ಪಕ್ಷೀನ್ದ್ರವೈಶ್ವಾನರ ಶಂಕರಾಣಾಂ । ನಾಮಾನಿ ಗಾತ್ರೇ ಪರಿಲೋಚನಾನಿ ॥ ಧೃತ್ವಾ ಸ್ಥಿತೋ ಪಿ ಕ್ರತುಭು ಕ್ಪತಿರ್ನ । ನಶಂಕರೊ ನಾಗ್ನಿ ಖಗೇಶ್ವರೌ ಚ ॥

(೩) ಒಂದಕ್ಕಿರು ಪಾರ್ಶ್ವದೊಳುಂ
ಸಂಧಿಸಿ ತೈಕಪ್ಪು ಬಿಳಪು ಮಧ್ಯದೊಳರುಣಂ ॥
ಕುಂದದೆ ಬಿಳಿಕಪ್ಪಾಗಲು
ಸಂದೇಹಿಸಬೇಡಿ ಬಿಳಪು ಕಪ್ಪಾಗುವದೈ ॥

(೪) ಎಲ್ಲಿ ನೋಡಿದರು ತಾನಲ್ಲಿ ಕಂಟಕವು ।
ಬೆಳ್ಳಿಕಟ್ಟುಗಳಿಂದ ಚಳ್ಳಿನಂ ಬಿಗಿದು ।
ಬಳ್ಳಿಚಿನ್ನದ ಕೋಟೆಯಲ್ಲಿ ತಾನಿಹನು ।
ಬೆಳ್ಳಗಿರುವಂಗಿ ಯವ ಎಲ್ಲರಿದಪೇಳಿ ॥

೧೨ನೇ ಸಂಚಿಕೆಯಲ್ಲಿನ ಒಗಟೆಗಳಿಗೆ ಉತ್ತರ.

೧ (ಕೂಶ್ಮಾಂಡಂ. (೨) ಕುಂಭಕರ್ಣಃ. (೩) ತಿದಿ. (೪) ಅಡಿಕೆ.

---

* ಚಂದಾದಾರರಾದ ಆನೆಕಲ್ ಲಂಡ್ಸ್ ಮಿಷನ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ರಾಮಸ್ವಾಮಿ ಆಚಾರ್ಯರು ಕಳುಹಿಸಿದವುಗಳು.

ಹೀಗೆ ಯಾರು ಕಳುಹಿಸಿದರೂ ಅವರಿಗೆ ತುಂಬಾ ಕೃತಜ್ಞರಾಗಿ ಇರುವವು.

Jaganmohan Press, Palace Department, Mysore.—5-10-84—800.

ಹಿ ತ ಬೋ ಧಿ ನಿ.

ತಾರಣಸಂವತ್ಸರ,—ಕಾರ್ತೀಕಮಾಸ.

ಸಂಪುಟ ೨.] ನವೆಂಬರ್. [ಸಂಚಿಕೆ ೭.

೧. ಮೈಸೂರು ಸಂಸ್ಥಾನದ ಸರಸ್ವತೀ ಪ್ರಾಸಾದ ಪಾಠಶಾಲೆಯಲ್ಲಿ ನಡೆದಸಭೆ.

ಅಕ್ಟೋಬರು ತಿಂಗಳು ೨ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರಿಂದ ಸ್ಥಾಪಿತವಾಗಿರುವ ಸರಸ್ವತೀ ಪ್ರಾಸಾದನಾಮಕವಾದ ಸಂಸ್ಕೃತ ಪಾಠ ಶಾಲೆಯಲ್ಲಿ ಪಾರಿತೋಷಿಕ ಸಭೆಯು ನಡೆಯಿತು. ಈ ಸಭೆಗೆ ಶ್ರೀಮನ್ಮಹಾರಾಜ ರಾಜ ಸಾಹೇಬ್ ಬಹದ್ದೂರವರೂ, ಗುರುಗಳಾದ ಶ್ರೀಪರಕಾಲಸ್ವಾಮಿಗಳೂ ಸಹ ಬಿಜಮಾಡಿಸಿ ಇದ್ದದರಿಂದ ಸಭೆಯು ಅಪೂರ್ವವಾದ ನೇತ್ರೋತ್ಸವವನ್ನು ಉಂಟುಮಾಡಿತು. ಶ್ರೀಮನ್ಮಹಾರಾಜರು ಸಭಾ ನಾಯಕತ್ವವನ್ನು ವಹಿಸಿ ಇದ್ದರು. ಇವರು ಪಾಠಶಾಲೆಯಲ್ಲಿ ಪಶ್ಚಿಮಭಾಗದ ಮಧ್ಯಪ್ರದೇಶದಲ್ಲಿ ಉಲ್ಲಾರದಮೇಲೆ ಪೂರ್ವಾಭಿಮುಖವಾಗಿ ದಯಮಾಡಿಸಿ ಇದ್ದರು. ಶ್ರೀಸ್ವಾಮಿಗಳು ಇವರ ಬಲಗಡೆಯಲ್ಲಿ ಬೆಳ್ಳಿಯ ಚೌಕಿಯ ಮೇಲೆ ದಯಮಾಡಿಸಿ ಇದ್ದರು. ಇವರ ಎಡಗಡೆಯಲ್ಲಿ ದಿವಾನರು ಇದ್ದರು. ಹೈಕೋರ್ಟುಜಡ್ಜಿ ಮಾ॥ರಾ॥ ರಾಮ ಚಂದ್ರಯ್ಯನವರು, ಮಾ॥ ರಾ॥ ಸಭಾಪತಿಮೊದಲ್ಯಾರರು, ಮಾ॥ ರಾ॥ ಟಿ. ಆನಂದರಾಯರು, ಮಾ॥ ರಾ॥ ಟಿ. ನರಹರಿರಾಯರು, ಮಾ॥ ರಾ॥ ವಿ. ಎನ್. ನರಸಿಂಹಅಯ್ಯಂಗಾರ್ಯರು ಮಾ॥ ರಾ॥ ವಿ. ಪಿ. ಮಾಧವರಾಯರು ಮೊದಲಾದ ದೊಡ್ಡಮನುಷ್ಯರೂ, ಬಾಳರಾಜ ಅರಸಿನವರು, ಛತ್ರೀ ವೀರಪ್ಪಾಜಿ ಅರಸಿನವರು, ಮೊದಲಾದ ದೊಡ್ಡದೊಡ್ಡ ಅರಸುಗಳೂ, ಪೂರ್ವಪಶ್ಚಿಮ ಪಙ್ತ್ತಿಗಳಾಗಿ ಕುಳಿತಿದ್ದರು. ಶ್ರೀಸ್ವಾಮಿಗಳಿಗೆ ಎದುರಾಗಿ ಉತ್ತರದಕ್ಷಿಣವಾದ ಮೊದಲನೇ ಪಙ್ತ್ತಿಯಲ್ಲಿ ಧರ್ಮಾಧಿಕಾರಿಗಳೂ ಪಾಠಶಾಲೆಯ ಮಹಾವಿದ್ವಾಂಸರಾದ ಬೆಂಗಳೂರು ಸೀತಾರಾಮ ಶಾಸ್ತ್ರಿಗಳೂ ಸಹ ಕುಳಿತಿದ್ದರು. ಇವರ ಹಿಂದೆ ಸ್ವಾಮಿಗಳಿಗೆ ಅಭಿಮುಖವಾಗಿ ಸನ್ಮಾನಾ ರ್ಹರಾದ ವೃದ್ಧ ಪಂಡಿತರೂ ಪರೀಕ್ಷೆಯನ್ನು ಕೊಟ್ಟು ಸನ್ಮಾನಾರ್ಹರಾಗಿರುವ ವಿದ್ವಾಂಸರೂ ಸಹ ಕುಳಿತಿದ್ದರು. ಇವರ ಹಿಂದುಗಡೆಯಲ್ಲಿ ಪಾರಿತೋಷಿಕವನ್ನು ಹೊಂದತಕ್ಕ ವಿದ್ಯಾರ್ಥಿ ಗಳೆಲ್ಲರೂ ಸಾಲುಸಾಲುಗಳಾಗಿ ಕುಳಿತಿದ್ದರು. ಸ್ವಾಮಿಗಳ ಬಲಗಡೆಯಲ್ಲಿ ಪೂರ್ವ ಪಶ್ಚಿಮ

[illegible]

[illegible]

[illegible] ಅವರ [illegible] ಇದು [illegible]

ಹಾಡಿದರು. ಆ ಸಮಯದಲ್ಲಿ ಶ್ರೀಮನ್ಮಹಾರಾಜರವರು ಬಹುಮಾನಗಳು ಆದ್ಯಂತವೂ ಸ್ವಾಮಿಗಳ ಶ್ರೀ ಹಸ್ತದಿಂದಲೇ ನಡೆಯಬೇಕೆಂಬ ತಾತ್ಪರ್ಯವನ್ನು ವ್ಯಕ್ತಪಡಿಸಿದರು. ಮಠಗಳು ಸರಸ್ವತೀ ಪೀಠಗಳೆಂದು ಗ್ರಹಿಸಿ ಇಂಥಾ ಸಂದರ್ಭಗಳಲ್ಲಿ ವಿದ್ಯಾನಿಧಿಗಳಾದ ಶ್ರೀಸ್ವಾಮಿಗಳವರಿಂದ ಬಹುಮಾನ ನಡೆಯತಕ್ಕದ್ದು ಉಚಿತವೆಂದು ಪರ್ಯಾಲೋಚಿಸಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಮಾತನ್ನು ಕೇಳಿ ಅವರ ವಿವೇಕಕ್ಕೆ ಸಮಸ್ತರೂ ಸಂತೋಷಪಟ್ಟರು. ಅನಂತರದಲ್ಲಿ ವಿದ್ವತ್ಸಂಭಾವನೆಯು ಪ್ರಾರಂಭಿಸಿತು. ಮೊದಲು ಧರ್ಮಾಧಿಕಾರಿಗಳಿಗೆ ಕಲಾಬತ್ತು ಶಾಲ್‌ಜೋಡಿ ಬಹುಮಾನವಾಯಿತು. ಅನಂತರ ಋಗ್ವೇದದಲ್ಲಿಯೂ ಯಜುರ್ವೇದದಲ್ಲಿಯೂ ಪರೀಕ್ಷೆಯನ್ನು ಕೊಟ್ಟ ವಿದ್ವಾಂಸರಿಗೆ ದ್ರವ್ಯವೂ ಕಲಾಬತ್ತು ಶಾಲ್‌ಜೋಡಿಯೂ ಬಹುಮಾನವಾದವು. ತದನಂತರ ತರ್ಕ, ವ್ಯಾಕರಣಗಳಲ್ಲಿ ಪರೀಕ್ಷೆಕೊಟ್ಟ ವಿದ್ವಾಂಸರಿಗೂ, ಆಮೇಲೆ ಅನಂತಶಯನದ ಸುಬ್ಬು ಘನಪಾಠಿಗಳಿಗೂ ಸಹ, ದ್ರವ್ಯ ಶಾಲ್‌ಜೋಡಿ ಬಹುಮಾನವಾಯಿತು. ಆ ಮೇಲೆ ಲಬ್ಧ ಪ್ರತಿಷ್ಠರಾಗಿಯೂ ವೃದ್ಧರಾಗಿಯೂ ಇರುವ ಆರುಮಂದಿ ವಿದ್ವಾಂಸರಿಗೆ ಬಹುಮಾನವಾಯಿತು. ಇವರಲ್ಲಿ ಒಬ್ಬ ಮಹಾವಿದ್ವಾಂಸರಿಗೆ ಸುಮಾರು ತೊಂಭತ್ತು ವರ್ಷದಮೇಲೆ ವಯಸ್ಸು ಆಗಿ ಇರಬಹುದು. ಆತನು ಮುಪ್ಪಿನಿಂದ ಕುಗ್ಗಿ ನೆಲದ ತನಕ ಬಗ್ಗಿ ಕೈ ಕಾಲು ತಲೆಗಳನ್ನು ನಡುಗಿಸಿಕೊಂಡು ಸಂಭಾವನಾರ್ಥವಾಗಿ ಎದ್ದು ಹೋಗುವಾಗ ಶ್ರೀಮದ್ರಾಮಾಯಣದಲ್ಲಿ ವಾಲ್ಮೀಕರು ವರ್ಣಿಸಿ ಇರುವ ವೃದ್ಧಬ್ರಾಹ್ಮಣನ ಸ್ಮರಣೆಯು ಬಹುಮಂದಿಗೆ ಉಂಟಾಯಿತು. ಇವರ ಸಂಭಾವನೆ ಆದಮೇಲೆ ಪಾಠಶಾಲೆಯಲ್ಲಿ ವೇದಶಾಸ್ತ್ರಗಳಲ್ಲಿ ಉತ್ತಮ ತರಗತಿಗಳಲ್ಲಿ ಓದಿ ಪರೀಕ್ಷೆಕೊಟ್ಟವರ ಪಾರಿತೋಷಕಗಳು ನಡೆದವು. ತದನಂತರ ಪರೀಕ್ಷೆ ಕೊಟ್ಟ ಸ್ಥಳವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಕೊಡಲ್ಪಟ್ಟವು. ಇದು ಸುಮಾರು ಒಂದು ಘಂಟೆಯ ಪರ್ಯಂತವೂ ಆಯಿತು.

ಆ ಬಳಿಕ ಮಹಾರಾಜಶ್ರೀ ದಿವಾನರವರು ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹದ್ದೂರವರ ಆಜ್ಞಾನುಸಾರವಾಗಿ ಪಾಠಶಾಲೆಯ ಅಭಿವೃದ್ಧಿಯ ವಿಷಯವಾಗಿ ಸಭಾಸದರಿಗೆ ಹೇಳಿದ್ದೇನೆಂದರೆ :—

ಸಂಸ್ಕೃತ ವಿದ್ಯೆಯು ಪ್ರಬಲವಾಗುವ ಉದ್ದಿಶ್ಯ ಏರ್ಪಾಡುಗಳನ್ನು ಮಾಡಿ ಒಂದೇ ಒಂದು ವರ್ಷವಾಯಿತು. ಆದಾಗ್ಯೂ ಇದರಿಂದ ಈ ಒಳಗೆ ಬಹಳ ವಿಶೇಷವಾಗಿ ವೃದ್ಧಿಯಾಗಿರುವದನ್ನು ಕಂಡು ತಮಗೆ ಬಹಳ ತೃಪ್ತಿಯಾಗಿ ಇದೆಯೆಂಬ ಅಭಿಪ್ರಾಯವನ್ನು ಎಲ್ಲರಿಗೂ ತಿಳಿಯಪಡಿಸುವಂತೆ ಶ್ರೀಮನ್ಮಹಾರಾಜರವರು ನನಗೆ ಅಜ್ಞಾಪಿಸಿ ಇರುತ್ತಾರೆ. ಧರ್ಮಾಧಿಕಾರಿಗಳು ಮನಃಪೂರ್ವಕ ಬಹಳ ಶ್ರದ್ಧೆಯಿಂದ ಅತಿ ಶ್ರಮಪಟ್ಟು ಇರುತ್ತಾರಾದ್ದರಿಂದ ಇಷ್ಟುಮಟ್ಟಿಗೆ ಪಾಠಶಾಲೆಯು ವೃದ್ಧಿಯಲ್ಲಿ ಬಂದಿರುತ್ತೆ. ಈ ಪಾಠಶಾಲೆಯು ಇದೇರೀತಿ

ಅಂಕೆ ತಿಳಿಯದವನ ಮಂಕಗಿಂತ ಕಡೆ.

ಪಜ್ತ್ರಿಗಳಾಗಿ ಪಾಠಶಾಲೆಯ ವಿದ್ವಾಂಸರೂ ಈ ದೇಶದ ದೇಶಾಂತರದ ವಿದ್ವಾಂಸರೂ ಸಹ ಸುಮಾರು ೧೫೦ ಮಂದಿಗಿಂತಲೂ ಹೆಚ್ಚಾಗಿ ಕುಳಿತಿದ್ದರು.

ಶ್ರೀಮನ್ಮಹಾರಾಜರವರು ಸ್ವಾಮಿಗಳಿಗೆ ಕಟ್ಟೆಯಮೇಲೆಗೆ ಅಭಿವಂದಿಸಿ, ಆಶೀರ್ವಾದ ಮರ್ಯಾದೆಗಳನ್ನು ಸ್ವೀಕರಿಸಿ ಕುಳಿತಕೂಡಲೆ ಶ್ರಾವ್ಯಕಂಠವುಳ್ಳ ಪಾಠಶಾಲೆಯ ಬಾಲವಿದ್ಯಾರ್ಥಿಗಳಿಬ್ಬರು ಭಗವನ್ನಾಮ ಸ್ಮರಣರೂಪವಾಗಿಯೂ ಆಶೀರ್ವಾದ ರೂಪವಾಗಿಯೂ ಇರುವ ಚಿತ್ರವೃತ್ತಗಳ ಶ್ಲೋಕಗಳನ್ನೂ ಸಂಸ್ಕೃತಕೃತಿಗಳನ್ನೂ ಹೇಳಿದರು. ತರುವಾಯ ಮ|| ರಾ|| ಆ. ಕ. ಚಿದಂಬರಯ್ಯನವರು ತಾತ್ಪರ್ಯದಲ್ಲಿ ಯಾರಿಗೂ ಸಂದೇಹ ಬರದಂತೆ ಪ್ರತಿಶಬ್ದವನ್ನೂ ಸ್ಫುಟವಾಗಿ ಉಚ್ಚರಿಸಿಕೊಂಡು ಸಮಸ್ತರಿಗೂ ಚನ್ನಾಗಿ ಕೇಳಿಸುವಂತೆ ಘಂಟಾಘೋಷವಾಗಿ ಪಾಠಶಾಲೆಯ ವಿದ್ಯಾಭಿವೃದ್ಧಿಯ ರಿಪೋರ್ಟನ್ನು ಓದಿದರು. ಈ ರಿಪೋರ್ಟು ಪಾಠಶಾಲೆಯ ಸ್ಥಿತಿಯನ್ನೂ ಅದರಲ್ಲಿ ನಡೆಯುವ ವ್ಯಾಸಂಗಗಳ ಆದ್ಯಂತ ಏರ್ಪಾಡುಗಳನ್ನೂ ಸಹ ತಿಳಿಸುವದಾಗಿಯೂ, ಸ್ವಲ್ಪ ದೀರ್ಘವಾಗಿಯೂ ಇದೆ. ಇದನ್ನು ಮುಂದೆ ಬರೆದು ಇದ್ದೇವೆ.

ಅನಂತರ ಋಗ್ಯಜುಸ್ಸಾಮವೇದಗಳಲ್ಲಿ ಕೆಲವು ಹನಸುಗಳನ್ನು ಆಯಾ ಶಾಖಾಧ್ಯಾಯಿಗಳಾದ ವಿದ್ಯಾರ್ಥಿಗಳು ಸಸ್ವರವಾಗಿ ಸುಸ್ವರದಿಂದ ಗಾನಮಾಡಿದರು. ಆಮೇಲೆ ಇಬ್ಬರು ಘನಪಾಠಿಗಳು ಯಜುರ್ವೇದದಲ್ಲಿ ಘನವನ್ನು ಹೇಳಿದರು. ತದನಂತರ ಇವರಲ್ಲಿ ಒಬ್ಬರು ಘನಪಾಠಿಗಳೆಂಬ ಪರೀಕ್ಷೆಕೊಟ್ಟ ಮಹಾವಿದ್ವಾಂಸರು ವೀಣೆಯಲ್ಲಿ ಘನವನ್ನು ಹಾಡಿದರು ಇದಲ್ಲದೆ ಅವರು ವರ್ಣಸಾರ ವರ್ಣಕ್ರಮವನ್ನು ಹೇಳಿ ಸ್ವರಾವಧಾನಮಾಡಿದರು. ಅವರ ಅದ್ವಿತೀಯ ಪಾಂಡಿತ್ಯವನ್ನು ನೋಡಿ ಸಕಲರೂ ಆಶ್ಚರ್ಯಪಟ್ಟರು. ಶ್ರೀ ಪರಕಾಲಸ್ವಾಮಿಗಳು ಮೊದಲು ಮಾಡಿಕೊಂಡು ಸಮಸ್ತ ವೇದಶಾಸ್ತ್ರಜ್ಞರೂ ಸಂತೋಷಿಸಿದರು. ಇದು ಆದಮೇಲೆ ಈ ಪಟ್ಟಣದಲ್ಲಿ ಸಂಸ್ಕೃತವಿದ್ಯೆಯ ವೃದ್ಧಿಕ್ಷಯಗಳನ್ನೂ ಈಗಿನ ವಿಜೃಂಭಣವನ್ನೂ ಕುರಿತು ಮಾಡಿರುವ ಅತ್ಯಂತ ಮಧುರವಾದ ಶಬ್ದಸರಣಿಯುಳ್ಳ ಒಂದು ಚೂರ್ಣಿಕೆಯನ್ನೂ ಕೆಲವು ಚಿತ್ರವೃತ್ತಗಳ ಶ್ಲೋಕಗಳನ್ನೂ ಸಹ ಒಬ್ಬ ವಿದ್ಯಾರ್ಥಿಯು ಸಕಲ ಸಭಾಸದರಿಗೂ ಆನಂದವಾಗುವಂತೆ ಹಾಡಿದನು. ತರುವಾಯ ಸ್ಫುಟವಾದ ವಾಕ್ಕುಳ್ಳ ಸಣ್ಣ ವಿದ್ಯಾರ್ಥಿಗಳು ವೈದ್ಯ ಜ್ಯೋತಿಷಕರಿಗೆ ನಡೆದಂತೆ ಒಂದು ಸಂವಾದವನ್ನು ಹೇಳಿದರು. ಇದು ವೈದ್ಯ ಜ್ಯೋತಿಷಕರಿಬ್ಬರು ಆತ್ಮಸ್ತುತಿಯನ್ನು ಮಾಡಿಕೊಂಡು ಪರಸ್ಪರ ನಿಂದೆಯನ್ನು ಮಾಡುತ್ತಲೂ ಮರ್ಮೋದ್ಘಾಟನೆ ಮಾಡುತ್ತಲೂ ಇರುವಂತೆ ಹಾಸ್ಯರಸಪ್ರಧಾನವಾಗಿ ಇದ್ದದರಿಂದ ಎಲ್ಲರ ಮನಸ್ಸನ್ನೂ ವಿನೋದಪಡಿಸಿ ಸಮಸ್ತರಿಗೂ ಮಂದಹಾಸವನ್ನು ಉಂಟುಮಾಡಿತು. ಇದು ಆದಮೇಲೆ ಪಾಠಶಾಲೆಯಲ್ಲಿ ಸಂಗೀತವನ್ನು ಅಭ್ಯಾಸಮಾಡುವವರ ಪೈಕಿ ಇಬ್ಬರು ವಿದ್ಯಾರ್ಥಿಗಳು ಒಂದೆರಡು ಸಂಸ್ಕೃತ ಕೃತಿಗಳನ್ನು

ಹಾಡಿದರು. ಆ ಸಮಯದಲ್ಲಿ ಶ್ರೀಮನ್ಮಹಾರಾಜರವರು ಬಹುಮಾನಗಳು ಆದ್ಯಂತವೂ ಸ್ವಾಮಿಗಳ ಶ್ರೀ ಹಸ್ತದಿಂದಲೇ ನಡೆಯಬೇಕೆಂಬ ತಾತ್ಪರ್ಯವನ್ನು ವ್ಯಕ್ತಪಡಿಸಿದರು. ಮಠಗಳು ಸರಸ್ವತೀ ಪೀಠಗಳೆಂದು ಗ್ರಹಿಸಿ ಇಂಥಾ ಸಂದರ್ಭಗಳಲ್ಲಿ ವಿದ್ಯಾನಿಧಿಗಳಾದ ಶ್ರೀಸ್ವಾಮಿಗಳವರಿಂದ ಬಹುಮಾನ ನಡೆಯತಕ್ಕದ್ದು ಉಚಿತವೆಂದು ಪರ್ಯಾಲೋಚಿಸಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಮಾತನ್ನು ಕೇಳಿ ಅವರ ವಿವೇಕಕ್ಕೆ ಸಮಸ್ತರೂ ಸಂತೋಷಪಟ್ಟರು. ಅನಂತರದಲ್ಲಿ ವಿದ್ವತ್ಸಂಭಾವನೆಯು ಪ್ರಾರಂಭಿಸಿತು. ಮೊದಲು ಧರ್ಮಾಧಿಕಾರಿಗಳಿಗೆ ಕಲಾಬತ್ತು ಶಾಲ್‌ಜೋಡಿ ಬಹುಮಾನವಾಯಿತು. ಅನಂತರ ಋಗ್ವೇದದಲ್ಲಿಯೂ ಯಜುರ್ವೇದದಲ್ಲಿಯೂ ಪರೀಕ್ಷೆಯನ್ನು ಕೊಟ್ಟ ವಿದ್ವಾಂಸರಿಗೆ ದ್ರವ್ಯವೂ ಕಲಾಬತ್ತು ಶಾಲ್‌ಜೋಡಿಯೂ ಬಹುಮಾನವಾದವು. ತದನಂತರ ತರ್ಕ ವ್ಯಾಕರಣಗಳಲ್ಲಿ ಪರೀಕ್ಷೆಕೊಟ್ಟ ವಿದ್ವಾಂಸರಿಗೂ, ಆಮೇಲೆ ಅನಂತಶಯನದ ಸುಬ್ಬು ಘನಪಾಠಿಗಳಿಗೂ ಸಹ, ದ್ರವ್ಯ ಶಾಲ್‌ಜೋಡಿ ಬಹುಮಾನವಾಯಿತು. ಆ ಮೇಲೆ ಲಬ್ಧ ಪ್ರತಿಷ್ಠರಾಗಿಯೂ ವೃದ್ಧರಾಗಿಯೂ ಇರುವ ಆರುಮಂದಿ ವಿದ್ವಾಂಸರಿಗೆ ಬಹುಮಾನವಾಯಿತು. ಇವರಲ್ಲಿ ಒಬ್ಬ ಮಹಾವಿದ್ವಾಂಸರಿಗೆ ಸುಮಾರು ತೊಂಭತ್ತು ವರ್ಷದಮೇಲೆ ವಯಸ್ಸು ಆಗಿ ಇರಬಹುದು. ಆತನು ಮುಪ್ಪಿನಿಂದ ಕುಗ್ಗಿ ನೆಲದ ತನಕ ಬಗ್ಗಿ ಕೈ ಕಾಲು ತಲೆಗಳನ್ನು ನಡುಗಿಸಿಕೊಂಡು ಸಂಭಾವನಾರ್ಥವಾಗಿ ಎದ್ದು ಹೋಗುವಾಗ ಶ್ರೀಮದ್ರಾಮಾಯಣದಲ್ಲಿ ವಾಲ್ಮೀಕರು ವರ್ಣಿಸಿ ಇರುವ ವೃದ್ಧಬ್ರಾಹ್ಮಣನ ಸ್ಮರಣೆಯು ಬಹುಮಂದಿಗೆ ಉಂಟಾಯಿತು. ಇವರ ಸಂಭಾವನೆ ಆದಮೇಲೆ ಪಾಠಶಾಲೆಯಲ್ಲಿ ವೇದಶಾಸ್ತ್ರಗಳಲ್ಲಿ ಉತ್ತಮ ತರಗತಿಗಳಲ್ಲಿ ಓದಿ ಪರೀಕ್ಷೆಕೊಟ್ಟವರ ಪಾರಿತೋಷಕಗಳು ನಡೆದವು. ತದನಂತರ ಪರೀಕ್ಷೆ ಕೊಟ್ಟ ಸ್ಥಳವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಕೊಡಲ್ಪಟ್ಟವು. ಇದು ಸುಮಾರು ಒಂದು ಘಂಟೆಯ ಪರ್ಯಂತವೂ ಆಯಿತು.

ಆ ಬಳಿಕ ಮಹಾರಾಜಶ್ರೀ ದಿವಾನರವರು ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹದ್ದುರವರ ಆಜ್ಞಾನುಸಾರವಾಗಿ ಪಾಠಶಾಲೆಯ ಅಭಿವೃದ್ಧಿಯ ವಿಷಯವಾಗಿ ಸಭಾಸದರಿಗೆ ಹೇಳಿದ್ದೇನಂದರೆ :—

ಸಂಸ್ಕೃತ ವಿದ್ಯೆಯು ಪ್ರಬಲವಾಗುವ ಉದ್ದಿಶ್ಯ ಏರ್ಪಾಡುಗಳನ್ನು ಮಾಡಿ ಒಂದೇ ಒಂದು ವರ್ಷವಾಯಿತು. ಆದಾಗ್ಯೂ ಇದರಿಂದ ಈ ಒಳಗೆ ಬಹಳ ವಿಶೇಷವಾಗಿ ವೃದ್ಧಿಯಾಗಿರುವದನ್ನು ಕಂಡು ತಮಗೆ ಬಹಳ ತೃಪ್ತಿಯಾಗಿ ಇದೆಯೆಂಬ ಅಭಿಪ್ರಾಯವನ್ನು ಎಲ್ಲರಿಗೂ ತಿಳಿಯಪಡಿಸುವಂತೆ ಶ್ರೀಮನ್ಮಹಾರಾಜರವರು ನನಗೆ ಆಜ್ಞಾಪಿಸಿ ಇರುತ್ತಾರೆ. ಧರ್ಮಾಧಿಕಾರಿಗಳು ಮನಃಪೂರ್ವಕ ಬಹಳ ಶ್ರದ್ಧೆಯಿಂದ ಅತಿ ಶ್ರಮಪಟ್ಟು ಇರುತ್ತಾರಾದ್ದರಿಂದ ಇಷ್ಟುಮಟ್ಟಿಗೆ ಪಾಠಶಾಲೆಯು ವೃದ್ಧಿಯಲ್ಲಿ ಬಂದಿರುತ್ತೆ. ಈ ಪಾಠಶಾಲೆಯು ಇದೇರೀತಿ

ಅಂಕೆ ತಿಳಿಯದವ ಮಂಕಗಿಂತ ಕಡೆ.

ಪಣ್ಡಿತಗಳಾಗಿ ಪಾಠಶಾಲೆಯ ವಿದ್ವಾಂಸರೂ ಈ ದೇಶದ ದೇಶಾಂತರದ ವಿದ್ವಾಂಸರೂ ಸಹ ಸುಮಾರು ೧೫೦ ಮಂದಿಗಿಂತಲೂ ಹೆಚ್ಚಾಗಿ ಕುಳಿತಿದ್ದರು.

ಶ್ರೀಮನ್ಮಹಾರಾಜರವರು ಸ್ವಾಮಿಗಳಿಗೆ ಕಟ್ಟೆಯ ಮೇಲೆ ಅಭಿವಂದಿಸಿ, ಆಶೀರ್ವಾದ ಮರ್ಯಾದೆಗಳನ್ನು ಸ್ವೀಕರಿಸಿ ಕುಳಿತನೊಡನೆ ಶ್ರಾವ್ಯಕಂಠವುಳ್ಳ ಪಾಠಶಾಲೆಯ ಬಾಲವಿದ್ಯಾರ್ಥಿಗಳಿಬ್ಬರು ಭಗವನ್ನಾಮ ಸ್ಮರಣರೂಪವಾಗಿಯೂ ಆಶೀರ್ವಾದ ರೂಪವಾಗಿಯೂ ಇರುವ ಚಿತ್ರವೃತ್ತಗಳ ಶ್ಲೋಕಗಳನ್ನೂ ಸಂಸ್ಕೃತಕೃತಿಗಳನ್ನೂ ಹೇಳಿದರು. ತರುವಾಯ ಮ॥ ರಾ॥ ಅ. ಕ. ಚಿದಂಬರಮಯ್ಯನವರು ತಾತ್ಪರ್ಯದಲ್ಲಿ ಯಾರಿಗೂ ಸಂದೇಹ ಬರದಂತೆ ಪ್ರತಿಶಬ್ದವನ್ನೂ ಸ್ಫುಟವಾಗಿ ಉಚ್ಚರಿಸಿಕೊಂಡು ಸಮಸ್ತರಿಗೂ ಚನ್ನಾಗಿ ಕೇಳಿಸುವಂತೆ ಘಂಟಾಘೋಷವಾಗಿ ಪಾಠಶಾಲೆಯ ವಿದ್ಯಾಭಿವೃದ್ಧಿಯ ರಿಪೋರ್ಟನ್ನು ಓದಿದರು. ಈ ರಿಪೋರ್ಟು ಪಾಠಶಾಲೆಯ ಸ್ಥಿತಿಯನ್ನೂ ಅದರಲ್ಲಿ ನಡೆಯುವ ವ್ಯಾಸಂಗಗಳ ಆದ್ಯಂತ ಏರ್ಪಾಡುಗಳನ್ನೂ ಸಹ ತಿಳಿಸುವದಾಗಿಯೂ, ಸ್ವಲ್ಪ ದೀರ್ಘವಾಗಿಯೂ ಇದೆ. ಇದನ್ನು ಮುಂದೆ ಬರೆದು ಇದ್ದೇವೆ.

ಅನಂತರ ಋಗ್ಯಜುಸ್ಸಾಮವೇದಗಳಲ್ಲಿ ಕೆಲವು ಹನಸುಗಳನ್ನು ಆಯಾ ಶಾಖಾಧ್ಯಾಯಿಗಳಾದ ವಿದ್ಯಾರ್ಥಿಗಳು ಸಸ್ವರವಾಗಿ ಸುಸ್ವರದಿಂದ ಗಾನಮಾಡಿದರು. ಆಮೇಲೆ ಇಬ್ಬರು ಘನಪಾಠಿಗಳು ಯಜುರ್ವೇದದಲ್ಲಿ ಘನವನ್ನು ಹೇಳಿದರು. ತದನಂತರ ಇವರಲ್ಲಿ ಒಬ್ಬರು ಘನಪಾಠಿಗಳೆಂಬ ಪರೀಕ್ಷೆಕೊಟ್ಟ ಮಹಾವಿದ್ವಾಂಸರು ವೀಣೆಯಲ್ಲಿ ಘನವನ್ನು ಹಾಡಿದರು. ಇದಲ್ಲದೆ ಅವರು ವರ್ಣಸಾರ ವರ್ಣಕ್ರಮವನ್ನು ಹೇಳಿ ಸ್ವರಾವಧಾನಮಾಡಿದರು. ಅವರ ಅದ್ವಿತೀಯ ಪಾಂಡಿತ್ಯವನ್ನು ನೋಡಿ ಸಕಲರೂ ಆಶ್ಚರ್ಯಪಟ್ಟರು. ಶ್ರೀ ಪರಕಾಲಸ್ವಾಮಿಗಳು ಮೊದಲು ಮಾಡಿಕೊಂಡು ಸಮಸ್ತ ವೇದಶಾಸ್ತ್ರಜ್ಞರೂ ಸಂತೋಷಿಸಿದರು. ಇದು ಆದಮೇಲೆ ಈ ಪಟ್ಟಣದಲ್ಲಿ ಸಂಸ್ಕೃತವಿದ್ಯೆಯ ವೃದ್ಧಿಕ್ಷಯಗಳನ್ನೂ ಈಗಿನ ವಿಜೃಂಭಣವನ್ನೂ ಕುರಿತು ಮಾಡಿರುವ ಅತ್ಯಂತ ಮಧುರವಾದ ಶಬ್ದಸರಣಿಯುಳ್ಳ ಒಂದು ಚೂರ್ಣಿಕೆಯನ್ನೂ ಕೆಲವು ಚಿತ್ರವೃತ್ತಗಳ ಶ್ಲೋಕಗಳನ್ನೂ ಸಹ ಒಬ್ಬ ವಿದ್ಯಾರ್ಥಿಯು ಸಕಲ ಸಭಾಸದರಿಗೂ ಆನಂದವಾಗುವಂತೆ ಹಾಡಿದನು. ತರುವಾಯ ಸ್ಫುಟವಾದ ವಾಕ್ಕುಳ್ಳ ಸಣ್ಣ ವಿದ್ಯಾರ್ಥಿಗಳು ವೈದ್ಯ ಜ್ಯೋತಿಷಕರಿಗೆ ನಡೆದಂತೆ ಒಂದು ಸಂವಾದವನ್ನು ಹೇಳಿದರು. ಇದು ವೈದ್ಯ ಜ್ಯೋತಿಷಕರಿಬ್ಬರು ಆತ್ಮಸ್ತುತಿಯನ್ನು ಮಾಡಿಕೊಂಡು ಪರಸ್ಪರ ನಿಂದೆಯನ್ನು ಮಾಡುತ್ತಲೂ ಮರ್ಮೋದ್ಘಾಟನೆ ಮಾಡುತ್ತಲೂ ಇರುವಂತೆ ಹಾಸ್ಯರಸಪ್ರಧಾನವಾಗಿ ಇದ್ದದರಿಂದ ಎಲ್ಲರ ಮನಸ್ಸನ್ನೂ ವಿನೋದಪಡಿಸಿ ಸಮಸ್ತರಿಗೂ ಮಂದಹಾಸವನ್ನು ಉಂಟುಮಾಡಿತು. ಇದು ಆದಮೇಲೆ ಪಾಠಶಾಲೆಯಲ್ಲಿ ಸಂಗೀತವನ್ನು ಅಭ್ಯಾಸಮಾಡುವವರ ಪೈಕಿ ಇಬ್ಬರು ವಿದ್ಯಾರ್ಥಿಗಳು ಒಂದೆರಡು ಸಂಸ್ಕೃತ ಕೃತಿಗಳನ್ನು

ಹಾಡಿದರು. ಆ ಸಮಯದಲ್ಲಿ ಶ್ರೀಮನ್ಮಹಾರಾಜರವರು ಬಹುಮಾನಗಳು ಆದ್ಯಂತವೂ ಸ್ವಾಮಿಗಳ ಶ್ರೀ ಹಸ್ತದಿಂದಲೇ ನಡೆಯಬೇಕೆಂಬ ತಾತ್ಪರ್ಯವನ್ನು ವ್ಯಕ್ತಪಡಿಸಿದರು. ಮಠಗಳು ಸರಸ್ವತೀ ಪೀಠಗಳೆಂದು ಗ್ರಹಿಸಿ ಇಂಥಾ ಸಂದರ್ಭಗಳಲ್ಲಿ ವಿದ್ಯಾನಿಧಿಗಳಾದ ಶ್ರೀಸ್ವಾಮಿಗಳವರಿಂದ ಬಹುಮಾನ ನಡೆಯತಕ್ಕದ್ದು ಉಚಿತವೆಂದು ಪರ್ಯಾಲೋಚಿಸಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಮಾತನ್ನು ಕೇಳಿ ಅವರ ವಿವೇಕಕ್ಕೆ ಸಮಸ್ತರೂ ಸಂತೋಷಪಟ್ಟರು. ಅನಂತರದಲ್ಲಿ ವಿದ್ವತ್ಸಂಭಾವನೆಯು ಪ್ರಾರಂಭಿಸಿತು. ಮೊದಲು ಧರ್ಮಾಧಿಕಾರಿಗಳಿಗೆ ಕಲಾಬತ್ತು ಶಾಲ್‌ಜೋಡಿ ಬಹುಮಾನವಾಯಿತು. ಅನಂತರ ಋಗ್ವೇದದಲ್ಲಿಯೂ ಯಜುರ್ವೇದದಲ್ಲಿಯೂ ಪರೀಕ್ಷೆಯನ್ನು ಕೊಟ್ಟ ವಿದ್ವಾಂಸರಿಗೆ ದ್ರವ್ಯವೂ ಕಲಾಬತ್ತು ಶಾಲ್‌ಜೋಡಿಯೂ ಬಹುಮಾನವಾದವು. ತದನಂತರ ತರ್ಕ ವ್ಯಾಕರಣಗಳಲ್ಲಿ ಪರೀಕ್ಷೆಕೊಟ್ಟ ವಿದ್ವಾಂಸರಿಗೂ, ಆಮೇಲೆ ಅನಂತಶಯನದ ಸುಬ್ಬು ಘನಪಾಠಿಗಳಿಗೂ ಸಹ, ದ್ರವ್ಯ ಶಾಲ್‌ಜೋಡಿ ಬಹುಮಾನವಾಯಿತು. ಆ ಮೇಲೆ ಲಬ್ಧ ಪ್ರತಿಷ್ಠರಾಗಿಯೂ ವೃದ್ಧರಾಗಿಯೂ ಇರುವ ಆರುಮಂದಿ ವಿದ್ವಾಂಸರಿಗೆ ಬಹುಮಾನವಾಯಿತು. ಇವರಲ್ಲಿ ಒಬ್ಬ ಮಹಾವಿದ್ವಾಂಸರಿಗೆ ಸುಮಾರು ತೊಂಭತ್ತು ವರ್ಷದಮೇಲೆ ವಯಸ್ಸು ಆಗಿ ಇರಬಹುದು. ಆತನು ಮುಪ್ಪಿನಿಂದ ಕುಗ್ಗಿ ನೆಲದ ತನಕ ಬಗ್ಗಿ ಕೈ ಕಾಲು ತಲೆಗಳನ್ನು ನಡುಗಿಸಿಕೊಂಡು ಸಂಭಾವನಾರ್ಥವಾಗಿ ಎದ್ದು ಹೋಗುವಾಗ ಶ್ರೀಮದ್ರಾಮಾಯಣದಲ್ಲಿ ವಾಲ್ಮೀಕರು ವರ್ಣಿಸಿ ಇರುವ ವೃದ್ಧಬ್ರಾಹ್ಮಣನ ಸ್ಮರಣೆಯು ಬಹುಮಂದಿಗೆ ಉಂಟಾಯಿತು. ಇವರ ಸಂಭಾವನೆ ಆದಮೇಲೆ ಪಾಠಶಾಲೆಯಲ್ಲಿ ವೇದಶಾಸ್ತ್ರಗಳಲ್ಲಿ ಉತ್ತಮ ತರಗತಿಗಳಲ್ಲಿ ಓದಿ ಪರೀಕ್ಷೆಕೊಟ್ಟವರ ಪಾರಿತೋಷಕಗಳು ನಡೆದವು. ತದನಂತರ ಪರೀಕ್ಷೆ ಕೊಟ್ಟ ಸ್ಥಳವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಕೊಡಲ್ಪಟ್ಟವು. ಇದು ಸುಮಾರು ಒಂದು ಘಂಟೆಯ ಪರ್ಯಂತವೂ ಆಯಿತು.

ಆ ಬಳಿಕ ಮಹಾರಾಜಶ್ರೀ ದಿವಾನರವರು ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹದ್ದೂರವರ ಆಜ್ಞಾನುಸಾರವಾಗಿ ಪಾಠಶಾಲೆಯ ಅಭಿವೃದ್ಧಿಯ ವಿಷಯವಾಗಿ ಸಭಾಸದರಿಗೆ ಹೇಳಿದ್ದೇನಂದರೆ :—

ಸಂಸ್ಕೃತ ವಿದ್ಯೆಯು ಪ್ರಬಲವಾಗುವ ಉದ್ದಿಶ್ಯ ಏರ್ಪಾಡುಗಳನ್ನು ಮಾಡಿ ಒಂದೇ ಒಂದು ವರ್ಷವಾಯಿತು. ಆದಾಗ್ಯೂ ಇದರಿಂದ ಈ ಒಳಗೆ ಬಹಳ ವಿಶೇಷವಾಗಿ ವೃದ್ಧಿಯಾಗಿರುವದನ್ನು ಕಂಡು ತಮಗೆ ಬಹಳ ತೃಪ್ತಿಯಾಗಿ ಇದೆಯೆಂಬ ಅಭಿಪ್ರಾಯವನ್ನು ಎಲ್ಲರಿಗೂ ತಿಳಿಯಪಡಿಸುವಂತೆ ಶ್ರೀಮನ್ಮಹಾರಾಜರವರು ನನಗೆ ಆಜ್ಞಾಪಿಸಿ ಇರುತ್ತಾರೆ. ಧರ್ಮಾಧಿಕಾರಿಗಳು ಮನಃಪೂರ್ವಕ ಬಹಳ ಶ್ರದ್ಧೆಯಿಂದ ಅತಿ ಶ್ರಮಪಟ್ಟು ಇರುತ್ತಾರಾದ್ದರಿಂದ ಇಷ್ಟುಮಟ್ಟಿಗೆ ಪಾಠಶಾಲೆಯು ವೃದ್ಧಿಯಲ್ಲಿ ಬಂದಿರುತ್ತೆ. ಈ ಪಾಠಶಾಲೆಯು ಇದೇರೀತಿ

ಯಲ್ಲಿ ನಾಲ್ಕು ಐದು ವರ್ಷಗಳವರೆಗೆ ನಡೆದಲ್ಲಿ ಇದರಿಂದ ಎಂಥಾ ಮಹಾಫಲಗಳು ತಾನೇ ಉಂಟಾಗಲಾರವು ? ವಿದ್ಯಾರ್ಥಿಗಳಿಗೆ ಭೋಜನದ ಏರ್ಪಾಡಿನಿಂದ ಬಹು ಪ್ರಯೋಜನ ಇರುವಂತೆ ತೋರುತ್ತದೆ. ಅನುಪಪನ್ನರಾಗಿ ಕೆಲವು ಮಟ್ಟಿಗೆ ವ್ಯಾಸಂಗಮಾಡಿ ಇರುವ ವಿದ್ಯಾರ್ಥಿಗಳಿಗೆ ಅನ್ನ ವಸ್ತ್ರಗಳೂ, ಪುಸ್ತಕ ಮೊದಲಾದವುಗಳೂ ಸಹ ಪಾಠಶಾಲೆಯಿಂದಲೇ ಕೊಡಲ್ಪಡುತ್ತವೆ. ವಿಶೇಷವಾಗಿ ಶಾಸ್ತ್ರಾದಿಗಳಲ್ಲಿ ಪ್ರಾಚುರ್ಯವುಳ್ಳ ವಿದ್ಯಾರ್ಥಿಗಳಿಗೆ ಉತ್ತರೋತ್ತರ ವ್ಯಾಸಂಗದಲ್ಲಿ ಉತ್ಸಾಹ ಹುಟ್ಟುವದಕ್ಕೋಸ್ಕರ ವಿದ್ಯಾರ್ಥಿ ವೇತನಗಳು ಕೊಡಲ್ಪಡುತ್ತಾ ಇವೆ. ವಿದ್ಯಾರ್ಥಿಗಳಲ್ಲಿ ಪರಸ್ಪರ ಸ್ಪರ್ಧೆಯನ್ನು ವೃದ್ಧಿಮಾಡುವದಕ್ಕೋಸ್ಕರ ಮೂರು ತಿಂಗಳಿಗೆ ಒಂದುಸಾರಿ ಪರೀಕ್ಷೆ ಸಹ ಮಾಡುತ್ತೆ. ಈ ಸಂದರ್ಭಗಳೆಲ್ಲಾ ಸಂಸ್ಕೃತ ವಿದ್ಯಾಭಿವೃದ್ಧಿಗೆ ಸಹಕಾರಿಗಳಾಗಿ ಇರುತ್ತವೆ ಎಂಬುವದರಲ್ಲಿ ಸಂದೇಹವಿಲ್ಲ. ಕೇವಲ ಸಂಸ್ಕೃತವನ್ನು ಮಾತ್ರ ಕಲಿಯುವವರಿಗೆ ಜೀವನ ಸಂಪಾದಿಸುವದರಲ್ಲಿ ವಿಶೇಷ ಮಾರ್ಗವಿರುವದಿಲ್ಲ. ಈ ನ್ಯೂನತೆಯನ್ನು ತಪ್ಪಿಸುವದಕ್ಕೋಸ್ಕರ ಪಾಠಶಾಲೆಯ ವ್ಯಾಸಂಗಗಳಲ್ಲಿ ಗಣಿತ, ಭೂಗೋಳ, ಆರೋಗ್ಯಸೂತ್ರವಿಚಾರ ಮೊದಲಾದ ವಿಷಯಗಳನ್ನು ಸೇರಿಸಿ ಇರುವದು ಬಹಳ ಉಪಯುಕ್ತವಾದದ್ದು. ಈ ವಿಷಯದಲ್ಲಿ ಎಲ್ಲಾ ವಿದ್ಯಾರ್ಥಿಗಳೂ ವ್ಯಾಸಂಗಮಾಡಿ ಇರುವದನ್ನು ನೋಡಿ ಬಹಳ ಸಂತೋಷವಾಗಿ ಇದೆ. ವೆಂಕಟಕೃಷ್ಣಮಾಚಾರ್ಯರೆಂಬುವರು ಶ್ರೀ ಶ್ರೀಪರಕಾಲಮಠದ ಮಹಾವಿದ್ವಾಂಸರು, ವೃದ್ಧರು ಮತ್ತು ಸಮಸ್ತದಲ್ಲಿಯೂ ಪ್ರಖ್ಯಾತವಾದ ಪಾಂಡಿತ್ಯವುಳ್ಳವರು. ಇವರು ಪಾಠಶಾಲೆಯ ಪರೀಕ್ಷೆಗಳು ಮುಂತಾದ್ದರಲ್ಲಿ ಆಸಕ್ತಿಯಿಂದ ಬಹಳ ಶ್ರಮಪಡುತ್ತಾ ಇರುವದ್ದರಿಂದ ಇವರಿಗೆ ಶ್ರೀಮನ್ಮಹಾರಾಜರವರು ಸನ್ಮಾನಾರ್ಥವಾಗಿ ತಿಂಗಳಿಗೆ ೧೦ ರೂಪಾಯಿನ ತಲಬಿನ ಮೇಲೆ ಅರಮನೆಯ ಖರಾವರ್ದಿಗೆ ಅಪ್ಪಣೆ ದಯಪಾಲಿಸಿ ಇರುತ್ತಾರೆ. ಇದಲ್ಲದೆ ಪಾಠಶಾಲೆಯ ವಿದ್ವಾಂಸರಾದ ನಾಮಗುಂಡ್ಲ ಶಾಮಾಚಾರ್ಯರವರನ್ನೂ ಅರಮನೆಯ ಪಂಡಿತರಾದ ವಾಸುದೇವಶಾಸ್ತ್ರಿಗಳನ್ನೂ ಸಹ ಅರಮನೆಯ ಮಹಾವಿದ್ವಾಂಸರ ಸ್ಥಾನಕ್ಕೆ ಬಡತೀಮಾಡುವಂತೆ ಹುಕುಂಮಾಡಿ ಇರುತ್ತಾರೆ. ಮತ್ತು ಪಾಠಶಾಲೆಯ ವಿದ್ವಾಂಸರಿಗೆಲ್ಲಾ ಅವರವರ ಶ್ರಮಾನುಗುಣ್ಯವಾಗಿ ಮರ್ಯಾದೆ ಮಾಡುವದಕ್ಕೋಸ್ಕರ ನಾನೂರು ರೂಪಾಯನ್ನು ಇನಾಂ ತರಫ್ ಅಪ್ಪಣೆಕೊಡಿಸಿ ಇರುತ್ತಾರೆ. ಧರ್ಮಾಧಿಕಾರಿಗಳು ಇದುವರಿಗೆ ಪಾಠಶಾಲೆಯ ವಿಷಯದಲ್ಲಿ ಬಹಳ ಶ್ರಮಪಡುತ್ತಾ ಇದ್ದರಷ್ಟೆ. ಇದೇರೀತಿಯಲ್ಲಿ ಅವರು ಇನ್ನುಮೇಲೆ ಕೂಡ ಪಾಠಶಾಲಾಭಿವೃದ್ಧಿಗೆ ಸಹಾಯ ಮಾಡುವರೆಂದು ಶ್ರೀಮನ್ಮಹಾರಾಜರವರು ನಂಬಿ ಇರುತ್ತಾರೆ. ಮ॥ ರಾ॥ ಅ. ಕ. ಚಿದಂಬರಮಯ್ಯನವರೂ, ಮ॥ ರಾ॥ ನರಸಿಂಹ ಅಯ್ಯಂಗಾರರೂ ಸಹ ಈ ಏರ್ಪಾಡುಗಳೆಲ್ಲಾ ಸಫಲವಾಗುವಂತೆ ಮಾಡಿ ಇರುತ್ತಾರೆ. ಅವರ ಶ್ರಮವು ಸಕಲ ಜನಶ್ಲಾಘ್ಯವಾಗಿ ಇರುತ್ತದೆ. ಪಾಠಶಾಲೆಯು ಕ್ಷೀಣಸ್ಥಿತಿಯಲ್ಲಿಯೂ ವೃದ್ಧಿಸ್ಥಿತಿಯಲ್ಲಿಯೂ ಸಹ ಲಕ್ಷ್ಮಣರಾಯರವರು ಅದನ್ನು ವಿಚಾರಣೆ ತೆಗದು

ಕೊಳ್ಳುತ್ತಿದ್ದರು, ಇವರ ವಿಷಯವನ್ನು ವಿಶೇಷಿಸಿ ಹೇಳಬೇಕಾದ್ದೇ ಇಲ್ಲ. ಈ ಸ್ಪೆಕ್ಟರಿಗೆ ಸಂಸ್ಕೃತ ಮತ್ತು ಇಂಗ್ಲೀಷು ಎರಡೂ ಬರುತ್ತವೆ. ಇವರೂ ಬಹಳ ಶ್ರಮಪಟ್ಟಿರುತ್ತಾರೆ. ಇಂತೆಂದು ಹೇಳಿ ದಿವಾನರು ತಮ್ಮ ಪೀಠವನ್ನು ಪುನಶ್ಚ ಸ್ವೀಕರಿಸಿದರು.

ತರುವಾಯ ಪಾಠಶಾಲೆಯ ವಿದ್ಯಾರ್ಥಿಗಳಲ್ಲಿ ಕೆಲವರು ಶ್ರೀಮನ್ಮಹಾರಾಜರವರು ಸಾಕ್ಷಾತ್ತಾಗಿ ಬಂದದರಿಂದ ನಾವು ಸಮಸ್ತರೂ ಧನ್ಯರಾದೆವು, ಇದೇರೀತಿಯಲ್ಲಿ ನಮ್ಮನ್ನು ಸಂರಕ್ಷಣೆಮಾಡುತ್ತಾ ಬರಬೇಕೆಂಬುವದು, ಮೊದಲಾದ ಕೃತಜ್ಞತೆಯನ್ನು ಪ್ರಕಾಶಮಾಡುವ ಕೃತಿಗಳನ್ನೂ ಶ್ಲೋಕಗಳನ್ನೂ ಗಾನಮಾಡಿದರು. ಈ ರೀತಿಯಲ್ಲಿ ಸಭೆಯು ಮುಗಿಯಿತು. ಸಭಾಸದರೆಲ್ಲರೂ ಅತ್ಯಂತ ತೃಪ್ತರಾಗಿ ಹಸನ್ಮುಖರಾಗಿ ಹೊರಟರು. ಶ್ರೀಮನ್ಮಹಾರಾಜರವರು ಬಹಳ ಹೊತ್ತು ಸಭೆಯಲ್ಲಿದ್ದು ಪರಮ ಸುಲಭರಾಗಿ ಆಯಾ ವಿದ್ಯಾರ್ಥಿಗಳನ್ನೂ ವಿದ್ವಾಂಸರನ್ನೂ ಸಹ ಬೇರೆಬೇರೆ ವಿಚಾರಿಸಿ ಅವರವರ ತಾರತಮ್ಯಗಳನ್ನು ತಿಳಿದುಕೊಳ್ಳುತ್ತಾ ಸಂತೋಷದಿಂದ ಅವರಿಗೆಲ್ಲಾ ಬಹುಮಾನಗಳನ್ನು ಮಾಡಿಸುತ್ತಾ ಇದ್ದದ್ದನ್ನು ನೋಡಿ ಸಮಸ್ತ ವಿದ್ವಾಂಸರೂ "ಈ ರೀತಿಯಲ್ಲಿ ವಿದ್ವತ್ಸಭೆಯು ಯಾವಾಗಲೂ ಈ ಸಂಸ್ಥಾನದಲ್ಲಿ ನಡೆಯಲಿಲ್ಲ. ಶ್ರೀಮನ್ಮಹಾರಾಜರವರಿಗೆ ಈ ರೀತಿಯಲ್ಲಿ ಸಂಸ್ಕೃತ ವಿದ್ಯಾಭಿವೃದ್ಧಿಯಲ್ಲಿ ಅತ್ಯಂತ ಶ್ರದ್ಧೆ ಹುಟ್ಟಿ ಎಲ್ಲೆಲ್ಲಿಯೂ ಸಂಸ್ಕೃತ ವ್ಯಾಸಂಗಮಯವಾಗಿರುವದನ್ನು ನೋಡಿದರೆ ಕೃತಯುಗಾವಿರ್ಭಾವದಂತೆ ತೋರುತ್ತದೆ. ನಮ್ಮ ಶ್ರೀಮನ್ಮಹಾರಾಜರು ದೀರ್ಘಾಯುರಾರೋಗ್ಯೈಶ್ವರ್ಯ ಸಂಪನ್ನರಾಗಿ ಆಚಂದ್ರಾರ್ಕಸ್ಥಾಯಿಯಾಗಿ ರಾಜ್ಯವನ್ನು ಪರಿಪಾಲನೆ ಮಾಡುತ್ತಿರಲಿ" ಎಂದು ಅನೇಕ ವಿಧಗಳಲ್ಲಿ ಮಹಾರಾಜರಿಗೆ ಹರಿಕೆಗಳನ್ನು ಇಡುತ್ತಾ, ಶ್ರೀಮನ್ಮಹಾರಾಜರವರಿಗೆ ಈ ಬಾಲ್ಯದಲ್ಲಿ ಈ ರೀತಿಯಾದ ತಾರತಮ್ಯಜ್ಞಾನವು ಸೌಲಭ್ಯವೂ ಔದಾರ್ಯವೂ ವಿದ್ಯಾಪಕ್ಷಪಾತವೂ ಸಾಮಾನ್ಯವಾಗಿ ಎಲ್ಲಿಯಾದರೂ ಉಂಟೇ ! ಎಂದು ಅನೇಕ ಪ್ರಕಾರಗಳಲ್ಲಿ ಶ್ರೀಮನ್ಮಹಾರಾಜರವರ ಗುಣಾತಿಶಯಗಳನ್ನು ಪುನಃಪುನಃ ಮನಸಾ ಭಾವಿಸಿ ಕೊಂಡಾಡುತ್ತಾ ಎಲ್ಲರೂ ಆನಂದ ಸಮುದ್ರಮಗ್ನರಾಗಿ ತಮ್ಮ ತಮ್ಮ ನಿವಾಸಗಳಿಗೆ ಹೋದರು.

ಮೈಸೂರು ಸಂಸ್ಥಾನದ ಸರಸ್ವತೀ ಪ್ರಾಸಾದ ಪಾಠಶಾಲೆಯ ವಿದ್ಯಾಭಿವೃದ್ಧಿಯ ರಿಪೋರ್ಟು.

ಈ ಪಾಠಶಾಲೆಯು ೧೮೭೬ನೇ ಇಸವಿಗೆ ಸರಿಯಾದ ಧಾತು ಸಂವತ್ಸರದಲಾಗಾಯಿತು ನಡೆಯುತ್ತಾ ಇದೆ. ನಮ್ಮ ಶ್ರೀಮನ್ಮಹಾರಾಜರಾಜಾಸಾಹೇಬ್ ಬಹದ್ದುರವರು ಬಹುಕಾಲದಿಂದ ಕ್ಷೀಣವಾಗಿರುವ ವೇದಶಾಸ್ತ್ರಾದಿವಿದ್ಯೆಗಳು ಅಭಿವೃದ್ಧಿಯಾಗುವ ರೀತಿ ಮಾಡಬೇಕೆಂದು, ಅಪ್ಪಣೆ ದಯಪಾಲಿಸಿದ್ದನ್ನು, ಪಾರಿತೋಷಿಕಸಭೆಯಲ್ಲಿ, ಮಹಾ

ಅಂಗೈಹುಣ್ಣಿಗೆ ಕನ್ನಡಿ ಯಾಕೆ ?

ರಾಜಶ್ರೀ ದಿವಾನರವರು ವಿವರಿಸಿದ ಮೇರೆಗೆ ಏರ್ಪಾಡುಗಳು ಮಾಡಿರುತ್ತೆ. ಆ ಏರ್ಪಾ ಪ್ರಕಾರ ನಡೆಯುವ ವೇದಶಾಸ್ತ್ರಾದಿಗಳ ವ್ಯಾಸಂಗರೀತಿ ಯಾವದೆಂದರೆ:—

ಕಳೆದ ಸಂವತ್ಸರದ ಆಖೈರುವರಿಗೆ ಈ ಪಾಠಶಾಲೆಯಲ್ಲಿ ಋಗ್ವೇದ, ಎಜುರ್ವೇ ತರ್ಕ, ವ್ಯಾಕರಣ, ಸಾಹಿತ್ಯ, ಇವುಗಳ ವ್ಯಾಸಂಗಮಾತ್ರ ನಡೆಯುತ್ತಿತ್ತು. ಈ ಸಂ ವತ್ಸರ ಹೊಸದಾಗಿ, ಸಾಮವೇದ, ವೇದಭಾಷ್ಯ, ಧರ್ಮಶಾಸ್ತ್ರ, ಜ್ಯೋತಿಷ್ಯಶಾಸ್ತ್ರ ಸಂಗೀತ, ಕನ್ನಡ, ಇವುಗಳಿಗೆಲ್ಲಾ ಕ್ಲಾಸುಗಳನ್ನೂ, ಉಪಾಧ್ಯಾಯರನ್ನೂ ಸಹ ಏರ್ಪಡಿಸಿ ಇರುತ್ತೆ. ಹೋದವರ್ಷ ಎಂಟು ಜನ ಉಪಾಧ್ಯಾಯರು ಇದ್ದರು. ಈ ಸಂವತ್ಸ ಇವರಿಗೆಲ್ಲ ಬಡತಿಮಾಡಿ, ಹೊಸದಾಗಿ ಹನ್ನೆರಡು ಮಂದಿ ವಿದ್ವಾಂಸರನ್ನು ನೇಮಿಸಿರುತ್ತೆ ಈಗ ಇಪ್ಪತ್ತು ಮಂದಿ ಉಪಾಧ್ಯಾಯರು ಇರುತ್ತಾರೆ. ದೇವರಾಜಬಹದೂರ್ ಧರ್ಮ ನಂಡಿನ ಟ್ರಸ್ಟಿಗಳು ಒಬ್ಬ ಸಂಗೀತವಿದ್ವಾಂಸನ ಸಹಾಯವನ್ನು ಕೊಟ್ಟು ಇರುತ್ತಾರೆ ಕಳದ ಸಂವತ್ಸರದಲ್ಲಿ ವಿದ್ಯಾರ್ಥಿಗಳು (೯೦) ತೊಂಭತ್ತು ಮಂದಿ ಇದ್ದರು; ಈ ಸಂವತ್ಸ ದಲ್ಲಿ (೧೮೮) ನೂರು ಎಂಭತ್ತು ಎಂಟು ಮಂದಿ ವಿದ್ಯಾರ್ಥಿಗಳು ಇದ್ದಾರೆ.

ಈಗ ಇರುವ ವಿದ್ಯಾರ್ಥಿಗಳ ಪೈಕಿ ಋಗ್ವೇದದಲ್ಲಿ ಹನ್ನೆರಡು ಜನ, ಎಜುರ್ವೇದದಲ್ಲಿ ಇಪ್ಪ ತ್ತು ಮೂರು ಜನ, ಸಾಮವೇದದಲ್ಲಿ ಹನ್ನೊಂದು ಜನ, ವ್ಯಾಕರಣಶಾಸ್ತ್ರದಲ್ಲಿ ಇಪ್ಪತ್ತು ಮೂರು ಜನ, ಸಾಹಿತ್ಯದಲ್ಲಿ ಎಂಭತ್ತೆರಡು ಜನ, ಜ್ಯೋತಿಷ್ಯಶಾಸ್ತ್ರದಲ್ಲಿ ಮೂರು ಜನ ಧರ್ಮಶಾಸ್ತ್ರದಲ್ಲಿ ಒಂಭತ್ತು ಜನ, ಈಮೇರೆ ಅಧ್ಯಯನ ಮಾಡುತ್ತಲಿದ್ದಾರೆ. ಶಾಸ್ತ್ರದಲ್ಲಿ ಏಳು ಜನ ಉದ್ಗ್ರಂಥ ಓದುವ ವಿದ್ಯಾರ್ಥಿಗಳು, ಇಲ್ಲಿ ಆಗಾಗ್ಯೆ ಗೊತ್ತುಮಾಡಿಕೊಡುವ ಗ್ರಂಥಗಳನ್ನು ತಮ್ಮ ಅನುಕೂಲ್ಯಕ್ಕೋಸ್ಕರ ಅನ್ಯತ್ರ ವ್ಯಾಸಂಗಮಾಡಿ ಇಲ್ಲಿ ಆಗಾಗ್ಯೆ ಪರೀಕ್ಷೆಕೊಡುತ್ತಾರೆ.

ಮಹಾರಾಜಶ್ರೀ ದಿವಾನರವರ ಸೂಚನೆಮೇರೆಗೆ ವಿದ್ಯಾರ್ಥಿಗಳ ಅಭಿವೃದ್ಧಿ ಗೋಸ್ಕರ ಮಾಡಿರುವ ಹೊಸ ಏರ್ಪಾಡುಗಳೇನಂದರೆ.

ಶಾಸ್ತ್ರ ಅಥವಾ ಸಾಹಿತ್ಯಜ್ಞಾನವಿಲ್ಲದೆ, ಬರೀ ವೇದಾಧ್ಯಯನ ಮಾಡಿದಲ್ಲಿ, ಉಪಯೋಗ ಕಡಮೆಯಾದ್ದರಿಂದ, ವೇದ ವಿದ್ಯಾರ್ಥಿಗಳಿಗೆಲ್ಲ ಸಾಹಿತ್ಯ ವ್ಯಾಸಂಗ ನಡೆಯುವಂತೆ ಏರ್ಪಾಡು ಮಾಡಿರುತ್ತೆ.

ವಿದ್ಯಾರ್ಥಿಗಳಲ್ಲಿ ಎಲ್ಲರೂ ಪೂರ್ಣಪಂಡಿತರಾಗುವದಕ್ಕೆ ಅನುಕೂಲಿಸದೆ ಹೋಗ ಬಹುದು. ಅಂಥಾ ವಿದ್ಯಾರ್ಥಿಗಳಿಗೆ ಲೌಕಿಕ ವ್ಯವಹಾರಕ್ಕೆ ಉಪಯೋಗವಾದ ಕನ್ನಡ ಭಾಷೆ, ಲಿಪಿ, ಮೋಡಿ ಅಕ್ಷರ ಓದುವದು, ಬರೆಯುವದು, ಆರೋಗ್ಯಸೂತ್ರ, ಭೂಗೋಳ

ಮೊದಲಾದ ವಿಷಯಗಳು ತಿಳಿದುಇದ್ದಲ್ಲಿ, ಕಾಲಾಂತರದಲ್ಲಿ ಜೀವನೋಪಾಯಗಳನ್ನು ಹುಡುಕುವದಕ್ಕೆ ಸುಲಭವಾಗಿ ಇರುತ್ತೆ. ಈ ವಿಷಯಗಳನ್ನು ತಿಳಿದುಕೊಳ್ಳುವದು ಸುಲಭವಾಗಿ ಇರುತ್ತೆ. ಆದ್ದರಿಂದ ಇವುಗಳಲ್ಲಿ ಸಕಲ ವಿದ್ಯಾರ್ಥಿಗಳಿಗೂ ಯಥಾಶಕ್ತಿ ವ್ಯಾಸಂಗವಾಗುವಾಗಬೇಕೆಂದು ಯೋಚಿಸಿ, ವೇದ, ಸಾಹಿತ್ಯ ವಿದ್ಯಾರ್ಥಿಗಳೆಲ್ಲರೂ, ಈ ವಿಷಯಗಳನ್ನು ವ್ಯಾಸಂಗ ಮಾಡುವಂತೆ ನಿಷ್ಕರ್ಷೆ ಮಾಡಿರುತ್ತೆ. ಇದಕ್ಕಾಗಿ, ವಿದ್ಯಾರ್ಥಿಗಳ ಜ್ಞಾನ ತಾರತಮ್ಯಾನುಗುಣವಾಗಿ, ಐದು ಕ್ಲಾಸುಗಳನ್ನು ಮಾಡಿರುತ್ತೆ ; ಮತ್ತು ಶಾಸ್ತ್ರಾಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ವಿಶೇಷ ವಿರಾಮವಿಲ್ಲದಕಾರಣ, ತಿಂಗಳಿಗೆ ಆರು ದಿವಸಗಳು ಅನಧ್ಯಯನ ಕಾಲದಲ್ಲಿ, ಭೂಗೋಳ, ಆರೋಗ್ಯಸೂತ್ರವಿಚಾರ, ಭೌತಿಕಶಾಸ್ತ್ರವಿಷಯ ಮೊದಲಾದವುಗಳನ್ನು ಕನ್ನಡದಲ್ಲಿ ಬರೆದು ಕೆಲವು ಮಟ್ಟಿಗೆ ತಿಳಿಸುತ್ತಾ ಇದೆ.

ಒಳ್ಳೇಪಂಡಿತರಾದಾಗ್ಯೂಕೂಡ, ಕೆಲವರಿಗೆ, ಅಭ್ಯಾಸವಿಲ್ಲದೆ ಹೋದ್ದರಿಂದ ಸಂಸ್ಕೃತ ಭಾಷೆಯಲ್ಲಿ ಧಾರಾಳವಾಗಿ ಮಾತನಾಡುವದಕ್ಕಾಗಲೀ ಅಥವಾ ಒಂದು ವಿಷಯವನ್ನು ಕುರಿತು ಬರೆಯುವದಕ್ಕಾಗಲೀ ಆಗುವದಿಲ್ಲ. ಈ ನ್ಯೂನತೆಯನ್ನು ತಪ್ಪಿಸುವದಕ್ಕೆ ವೇತನವನ್ನು ಪಡೆಯುವ ವಿದ್ಯಾರ್ಥಿಗಳೂ, ಬೋರ್ಡಿಂಗ್ (ಭೋಜನದ) ವಿದ್ಯಾರ್ಥಿಗಳೂ, ವಾರಕ್ಕೆ ಒಂದಾವರ್ತಿ, ಕನ್ನಡದಿಂದ ಸಂಸ್ಕೃತಕ್ಕೆ ತರ್ಜುಮೆ (ಪರಿವರ್ತನ) ಮಾಡುವ ಹಾಗೆ ಗೊತ್ತು ಮಾಡಿರುತ್ತೆ. ಇದಲ್ಲದೆ ಪ್ರತಿಚತುರ್ದಶಿಯಲ್ಲಿಯೂ, ವಿದ್ವಾಂಸರೂ, ವಿದ್ಯಾರ್ಥಿಗಳೂ ಸಹಸೇರಿ, ವೇತನ ವಿದ್ಯಾರ್ಥಿಗಳ ಪೈಕಿ ಒಬ್ಬರು, ಯಾವದಾದರೂ ಒಂದು ವಿಷಯವನ್ನು ಕುರಿತು ಉಪನ್ಯಾಸಮಾಡುವಹಾಗೂ, ಬಾಕಿ ಎಲ್ಲರೂ ಆ ವಿಷಯದಲ್ಲಿ ಪ್ರಸಂಗ ಮಾಡುವಹಾಗೂ, ಏರ್ಪಾಡು ಮಾಡಿ ಇದೆ.

ವೈದ್ಯ, ಸಂಗೀತ, ಈ ಎರಡೂ, ಆಯಾ ಶಾಸ್ತ್ರಜ್ಞಾನ ಸಹಾಯವಿಲ್ಲದೆ, ಶಿಲವಾಗಿ ಇರುತ್ತವೆ. ಸಂಸ್ಕೃತ ಪಂಡಿತರಲ್ಲಿ ಕೆಲವರು ಈ ವಿದ್ಯೆಗಳನ್ನ ಕಲಿತಲ್ಲಿ, ಇವುಗಳು ಪ್ರಬಲವಾಗುವವು. ಆದ್ದರಿಂದ ಇವುಗಳನ್ನ ಅಭ್ಯಾಸ ಮಾಡುವದಕ್ಕೆ ಇಷ್ಟವಿರುವ ಸಂಸ್ಕೃತ ವಿದ್ಯಾರ್ಥಿಗಳಿಗೆ, ವ್ಯಾಸಂಗಕ್ಕೆ ಅನುಕೂಲವಾಗಿ ಏರ್ಪಾಡು ಮಾಡಿರುತ್ತೆ. ಸಂಗೀತದಲ್ಲಿ ಎರಡು ಕ್ಲಾಸುಗಳಿವೆ. ಇವುಗಳಲ್ಲಿ ಇಪ್ಪತ್ತೆರಡು ವಿದ್ಯಾರ್ಥಿಗಳಿದ್ದಾರೆ. ವೈದ್ಯಕ್ಕೆ ಒಂದು ಕ್ಲಾಸಿದೆ ; ಇದರಲ್ಲಿ ಹನ್ನೊಂದು ಜನ ವಿದ್ಯಾರ್ಥಿಗಳು ಬಾಹಟವೈದ್ಯಸಂಗ್ರಹಾದಿಗಳನ್ನು ವ್ಯಾಸಂಗಮಾಡುತ್ತಾ ಇದ್ದಾರೆ.

ಇಲ್ಲಿ ವಿದ್ಯಾಭ್ಯಾಸಮಾಡತಕ್ಕ ವಿದ್ಯಾರ್ಥಿಗಳ ಪೈಕಿ ಕೆಲವರು, ಸಂಸ್ಕೃತ, ಇಂಗ್ಲೀಷ್, ಈ ಎರಡರಲ್ಲಿಯೂ ವಿಶೇಷ ಪಂಡಿತರಾದಲ್ಲಿ, ಶಾಸ್ತ್ರಗಳನ್ನ ಚೆನ್ನಾಗಿ ಬೋಧಿ

ಸುವರು; ಮತ್ತು ಯೂರೋಪ್ ಖಂಡದ ಜನಗಳ ವಿದ್ಯೆಗಳನ್ನೂ, ಶಾಸ್ತ್ರಗಳನ್ನೂ, ದೇಶ ಭಾಷೆಯಲ್ಲಿ ಸುಲಭವಾಗಿ ಸಮಸ್ತರಿಗೂ ತಿಳಿಸುವದಕ್ಕೆ ಶಕ್ತರಾಗಿರುವರು ; ಮತ್ತು ಅನೇಕ ವಿಧದಲ್ಲಿ ಲೋಕೋಪಕಾರಿಗಳಾಗುವರು, ಆದ್ದರಿಂದ ಈಗ ಸಾಹಿತ್ಯ ಅಥವಾ ಶಾಸ್ತ್ರ ದಲ್ಲಿ ಪಂಡಿತರಾಗಿರುವ ಕೆಲವರು, ಇಂಗ್ಲೀಷು ಅಭ್ಯಾಸಮಾಡುವದಕ್ಕೆ ಅನುಕೂಲವಾಗಿ ಏರ್ಪಾಡುಮಾಡಿರುತ್ತೆ. ಇಂಗ್ಲೀಷಿಗೋಸ್ಕರ ಎರಡುಕ್ಲಾಸುಗಳಿವೆ ; ಮೇಲಿನ ಕ್ಲಾಸಿನಲ್ಲಿ ಆರುಜನ ವಿದ್ಯಾರ್ಥಿಗಳು ಎಂಟು ತಿಂಗಳಿಂದ ಓದುತ್ತಾ ಇದ್ದಾರೆ. ಇವರು ಶಾಸ್ತ್ರಾಭ್ಯಾಸ ವನ್ನು ಮಾಡಿಕೊಂಡು, ಇಂಗ್ಲೀಷಿನಲ್ಲಿಯೂ ತೃಪ್ತಿಕರವಾಗಿ ಅಭಿವೃದ್ಧಿಯನ್ನು ಹೊಂದಿ ಇರುತ್ತಾರೆ. ಸಾಹಿತ್ಯದ ಕೆಳಗಿನ ಕ್ಲಾಸಿನ ವಿದ್ಯಾರ್ಥಿಗಳಿಗೆ ಇಂಗ್ಲೀಷು ಓದಬೇಕೆಂದು ಬಹಳ ಅಪೇಕ್ಷೆ ಇದ್ದದ್ದರಿಂದ, ಇನ್ನೊಂದು ಕ್ಲಾಸು ಈಚೆಗೆ ಏರ್ಪಾಡುಮಾಡಲ್ಪಟ್ಟಿದೆ. ಇದರಲ್ಲಿ ಹದಿನೈದು ಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಾ ಇದ್ದಾರೆ ; ಮತ್ತು ಇವರಿಗೆ ಮೊದಲ ನೇ ಪುಸ್ತಕ ಮಾತ್ರ ಆಗಿ ಇದೆ.

ಪಾಠಶಾಲೆಯಲ್ಲಿ ಸಮಸ್ತ ವಿದ್ಯಾವ್ಯಾಸಂಗವೂ ಕ್ರಮವಾಗಿಯೂ ಚೆನ್ನಾಗಿಯೂ ನಡೆಯುತ್ತವೆ ಎಂಬುವದನ್ನು ತಿಳಿದುಕೊಳ್ಳುವ ಉದ್ದಿಶ್ಯ ವಿದ್ಯಾರ್ಥಿಗಳಿಗೆಲ್ಲ ಓದುವದಕ್ಕೆ ಗ್ರಂಥ ನಿಬಂಧನೆಯನ್ನು ಮಾಡಿ ಮೂರು ತಿಂಗಳಿಗೆ ೧ ಸಾರಿ ಎಲ್ಲರಿಗೂ ಪರೀಕ್ಷೆಮಾಡಲ್ಪಡುತ್ತೆ.

ಸ್ಕಾಲರ್‌ಷಿಪ್ ಅಥವಾ ವಿದ್ಯಾರ್ಥಿವೇತನದ ಏರ್ಪಾಡು.

ಶಾಸ್ತ್ರದಲ್ಲಿ ಉದ್ಗ್ರಂಥಗಳನ್ನು ವ್ಯಾಸಂಗಮಾಡುವ ಅನೇಕ ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡಲಾಗಿ ಅದರಲ್ಲಿ ೧೪ ಮಂದಿ ಶಾಸ್ತ್ರಸಾಹಿತ್ಯಗಳಲ್ಲಿ ಪಂಡಿತರಾಗಿ ಕಾಣಬಂದರು. ಇವರು ಇನ್ನುಮುಂದಕ್ಕೂ ವಿದ್ಯಾವ್ಯಾಸಂಗಾಪೇಕ್ಷೆಯುಳ್ಳವರಾಗಿ ಇರುವದರಿಂದ ಇವರಿಗೆ ಸ್ಕಾಲರ್‌ಷಿಪ್ ಮಾಡಿಇರುತ್ತೆ. ಇದಲ್ಲದೆ ಸಾಹಿತ್ಯ ವರ್ಗ್ಗದ ಕೆಳಗಿನ ಕ್ಲಾಸುಗಳಲ್ಲಿ ವಿದ್ಯಾರ್ಥಿಗಳಿಗೆ ಪರಸ್ಪರ ಸ್ಪರ್ಧೆಯುಂಟುಮಾಡುವದಕ್ಕೋಸ್ಕರ, ಸಣ್ಣ ಸಣ್ಣ ವಿದ್ಯಾರ್ಥಿವೇತನ ಗಳನ್ನು ಏರ್ಪಾಡುಮಾಡಿ ಇರುತ್ತೆ. ಈ ಸಣ್ಣ ವೇತನಗಳು ಮೇಲೆ ಹೇಳಿದ ಮೂರು ತಿಂಗಳಿಗೆ ೧ ಸಾರಿ ಆಗುವ ಪರೀಕ್ಷೆಯಲ್ಲಿ ಬುದ್ಧಿವಂತರಾಗಿ ಕಾಣಬಂದ ವಿದ್ಯಾರ್ಥಿಗಳಿಗೆ ಆಯಾ ಕ್ಲಾಸಿನಲ್ಲಿ ಉತ್ತಮ ಮಧ್ಯಮ ಕ್ರಮಾನುಸಾರವಾಗಿ, ಕೊಡಲ್ಪಡುತ್ತವೆ. ಹೀಗೆ ಕೊಟ್ಟ ವೇತನಗಳು ಪುನಃ ಇನ್ನೊಂದು ಮೂರುತಿಂಗಳ ಪರೀಕ್ಷೆಯವರಿಗೆ ನಡೆಯುತ್ತವೆ; ಆಗ ಈವೇತನವಿದ್ಯಾರ್ಥಿಗಳು, ಪರೀಕ್ಷೆಯಲ್ಲಿ ತಮ್ಮತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳದೆ ಹೋದಲ್ಲಿ, ಈ ವೇತನಗಳನ್ನು ಅವರಿಗೆ ತಪ್ಪಿಸಿ, ಅವರ ಸ್ಥಾನಕ್ಕೆ ಬಂದ ಇತರ ವಿದ್ಯಾರ್ಥಿ ಗಳಿಗೆ ಕೊಡಲ್ಪಡುತ್ತವೆ.

ಅಂಟವಾಳದ ಕಾಯಿಗೆ ಬಂಟವಾಳಕ್ಕೆ ಹೋಗಬೇಕೆ ?

ಇದಲ್ಲದೆ ಸಂಗೀತಕ್ಕೆ ಹತ್ತು ರೂಪಾಯಿನ ಒಂದು ವಿದ್ಯಾರ್ಥಿವೇತನವು ಇದೆ. ಇದನ್ನು ಹೊಂದುವ ಬಹಳ ಬುದ್ಧಿವಂತನಾದ ಒಬ್ಬ ವಿದ್ಯಾರ್ಥಿಯನ್ನು ಮಹಾವೈದ್ಯಿ ಎಂಬ ಸಂಗೀತವಿದ್ವಾಂಸರ ಸಂಗಡ ಸಂಗೀತಶಾಸ್ತ್ರಾಭ್ಯಾಸಕ್ಕೋಸ್ಕರ ಕಳುಹಿಸಿ ಇರುತ್ತೆ. ಈ ವೇತನಗಳ ಒಟ್ಟು ಮೊಬಲಗು ೧೪೪ ರೂಪಾಯಿಗಳು. ಈ ಪೈಕಿ ೧೦೦ ರೂಪಾಯಿ ಅರಮನೆಯಿಂದ ಸಲ್ಲುತ್ತದೆ. ಬಾಕಿ ೪೪ ರೂಪಾಯಿ ದೇವರಾಜಬಹದ್ದೂರವರ ಧರ್ಮದ ಫಂಡಿನಿಂದ ಸಲ್ಲುತ್ತದೆ.

ವಿದ್ಯಾರ್ಥಿಗಳಿಗೆ ಅನ್ನವಸ್ತ್ರವಿಷಯದ ಏರ್ಪಾಡು.

ಕೆಲವು ಮಟ್ಟಿಗೆ ವ್ಯಾಸಂಗಮಾಡಿ ಬುದ್ಧಿವಂತರಾಗಿರುವ ಅನುಪಪನ್ನರಾದ ವಿದ್ಯಾರ್ಥಿಗಳಿಗೆ ಭೋಜನ ನಡೆಯುವದಾಗಿ ಏರ್ಪಾಡು ಮಾಡಿ ಇರುತ್ತೆ. ಈ ಭೋಜನ ಸಮುದಾಯದಲ್ಲಿ ೪೪ ಜನ ವಿದ್ಯಾರ್ಥಿಗಳಿದ್ದಾರೆ. ಇವರಲ್ಲದೆ, ವಿಶೇಷವಾಗಿ ವ್ಯಾಸಂಗಮಾಡಿ ಉದ್ಗ್ರಂಥಗಳನ್ನು ಓದುತ್ತಿರುವ ದೊಡ್ಡವರಾದ ನಾಲ್ಕು ಜನ ವಿದ್ಯಾರ್ಥಿಗಳಿಗೆ ಭೋಜನಾರ್ಥವಾಗಿ ವೇತನಗಳನ್ನು ನಡೆಸುತ್ತಿದೆ. ಈ ಭೋಜನಸಮುದಾಯಕ್ಕೆ ಸೇರಿರುವ ವಿದ್ಯಾರ್ಥಿಗಳೆಲ್ಲರಿಗೂ ವಸ್ತ್ರಗಳನ್ನು ಕೊಡುವದಲ್ಲದೆ ಅಭ್ಯಂಜನ ಮೊದಲಾದ ಅನುಕೂಲ್ಯಗಳಿಗೂ ಏರ್ಪಾಡು ಮಾಡಿ ಇರುತ್ತೆ.

ವಿದ್ಯಾರ್ಥಿಗಳೆಲ್ಲರಿಗೂ ಸರ್ವಸಾಮಾನ್ಯವಾಗಿ ಅವರವರು ವ್ಯಾಸಂಗ ಮಾಡತಕ್ಕ ಪುಸ್ತಕಗಳು, ಕಾಗದಗಳು, ಕಡ್ಡಿ, ಮೊದಲಾದವುಗಳು ಪಾಠಶಾಲೆಯಿಂದಲೇ ಕೊಡಲ್ಪಡುತ್ತವೆ. ಹೀಗೆ ಅನುಕೂಲಗಳನ್ನು ಹೊಂದಿ ನಿರಾತಂಕವಾಗಿ ವ್ಯಾಸಂಗ ಮಾಡುತ್ತಿರುವ ಭೋಜನದ ವಿದ್ಯಾರ್ಥಿಗಳು ೪೪ ಜನಗಳ ಪೈಕಿ ಇಪ್ಪತ್ತು ಜನ ಶ್ಲಾಘ್ಯವಾದ ಪರೀಕ್ಷೆಯನ್ನು ಕೊಟ್ಟು ಬಹುಮಾನಪಾತ್ರರಾಗಿ ಇರುತ್ತಾರೆ.

ಕಳೆದ ಆಗಸ್ಟು ತಿಂಗಳು ತಾರೀಖು ೨೪ನೇ ಗಣೇಶ ಚತುರ್ಥಿ ಮೊದಲುಗೊಂಡು ಸೆಪಟಂಬರು ತಾ ॥ ೨೪ರವರಿಗೆ ವಿದ್ಯಾರ್ಥಿಗಳ ಪರೀಕ್ಷೆಯೂ, ವಿದ್ವತ್ಪರೀಕ್ಷೆಯೂ ಸಹ ನಡೆದು ಇರುತ್ತವೆ. ಈ ಪರೀಕ್ಷೆಗಳಲ್ಲಿ ಅನೇಕ ದೊಡ್ಡವಿದ್ವಾಂಸರು ಪರೀಕ್ಷಕರಾಗಿ ಇದ್ದರು.

ಈ ಪರೀಕ್ಷೆಗಳ ಏರ್ಪಾಡು ಮತ್ತು ಅವುಗಳ ಫಲಿತಾರ್ಥ.

ಈ ಪಾಠಶಾಲಾ ವಿದ್ಯಾರ್ಥಿಗಳೂ, ಇತರ ಸ್ಥಳಲ್ಲಿ ಓದುವ ವಿದ್ಯಾರ್ಥಿಗಳೂ ಸಹ ಒಂದೇ ಗುಂಪಾಗಿಸೇರಿದರೆ ಪರಸ್ಪರ ಸ್ಪರ್ಧೆ ಹೆಚ್ಚಾಗುವದರಿಂದ ಇತರ ವಿದ್ಯಾರ್ಥಿಗಳನ್ನೂ ಸಹ ಈ ಪಾಠಶಾಲಾ ವಿದ್ಯಾರ್ಥಿಗಳೊಂದಿಗೆ ಆಯಾ ತರಗತಿಯ ಏರ್ಪಾಡಿನ ಪ್ರಕಾರ ಸೇರಿಸಿ

ಪರೀಕ್ಷೆಮಾಡಿ ಇರುತ್ತೆ. ಈ ಸರ್ವಸಾಮಾನ್ಯ ಪರೀಕ್ಷೆಗಾಗಿ ಮಾಡಿರುವ ಕ್ಲಾಸಗಳ ವಿಭಾಗವು ಏನಂದರೆ: ಸಾಹಿತ್ಯದಲ್ಲಿ ೮೦೦ ಶ್ಲೋಕಕ್ಕೆ ಕಡಮೆಯಿಲ್ಲದೆ ಆಗಿರತಕ್ಕವರೆಲ್ಲರೂ ಒಂದನೇ ತರಗತಿ. ಕಾವ್ಯದಲ್ಲಿ ಸಾವಿರ ಶ್ಲೋಕಗಳೂ ಒಂದು ಚಂಪುವಿಗೆ ಕಡಮೆಯಿಲ್ಲದೆ ಆಗಿರತಕ್ಕವರು ಅವಕ್ಕೆ ಮೇಲಿನ ತರಗತಿ. ಎರಡು ಚಂಪು, ಎರಡು ನಾಟಕ, ಅಲಂಕಾರ, ಪ್ರಾಕೃತ, ವೃತ್ತಲಕ್ಷಣಗಳು, ಇಷ್ಟಕ್ಕೆ ಕಡಮೆಯಿಲ್ಲದೆ ಆಗಿರತಕ್ಕವರು ಮೂರನೇ ತರಗತಿ. ಮೂರು ನಾಟಕವೂ ಕುವಲಯಾನಂದ ಚಂದ್ರಿಕೆಯೂ ಸಹ ಆಗಿರತಕ್ಕವರು ನಾಲ್ಕನೇ ತರಗತಿ. ಋಗ್ವೇದದಲ್ಲಿ ಸಂಹಿತೆ ಸಂಪೂರ್ಣ ಒಂದನೇ ತರಗತಿ. ಪದಾಂತವಾಗಿ ಎರಡನೇ ತರಗತಿ. ಯಜುರ್ವೇದದಲ್ಲಿ ಪದಾಂತವಾಗಿ ಒಂದನೇ ತರಗತಿ. ಜಟಾಂತ ಎರಡನೇ ತರಗತಿ. ಘನಾಂತ ಮೂರನೇ ತರಗತಿ. ಇದೇಮೇರೆಗೆ ಈ ಪಾಠಶಾಲೆಯಲ್ಲಿ ನಡೆಯುತಕ್ಕ ಎಲ್ಲಾ ಪಾಠಗಳಿಗೂ ತರಗತಿಗಳನ್ನು ವಿಭಾಗಮಾಡಿ ಇತ್ತು. ಇವುಗಳಲ್ಲೆಲ್ಲಾ ಪರೀಕ್ಷೆಕೊಡತಕ್ಕವರಾಗಿ ಯಾರೂ ಬರಲಿಲ್ಲ.

ಸಾಹಿತ್ಯದಲ್ಲಿ ಒಂದನೇ ತರಗತಿಗೆ ಈ ವೂರು ನರಸಪ್ಪನವರ ಪಾಠಶಾಲೆಯಿಂದ ಆರು ಮಂದಿಯೂ, ಕ್ಯಾಗೋನಹಳ್ಳಿಯಿಂದ ಒಬ್ಬನೂ, ಒಟ್ಟು ಏಳುಮಂದಿ ಬಂದಯಿದ್ದರು. ಇವರಲ್ಲಿ ಇಬ್ಬರು ಉತ್ತಮಪರೀಕ್ಷೆಯನ್ನು ಕೊಟ್ಟು, ಬಹುಮಾನಕ್ಕೆ ಪಾತ್ರರಾಗಿ ಇರುತ್ತಾರೆ. ಇದೇ ತರಗತಿಗೆ ಪಾಠಶಾಲೆಯಿಂದ ಎಂಟುಜನ ಬಂದಿರುತ್ತಾರೆ. ಇವರಲ್ಲಿ ನಾಲ್ಕುಜನಕ್ಕೆ ಬಹುಮಾನ ಬಂದಿರುತ್ತೆ. ಕಾವ್ಯದ ಎರಡನೇ ತರಗತಿಗೆ ನರಸಪ್ಪನವರ ಪಾಠಶಾಲೆಯಿಂದ ಇಬ್ಬರೂ, ಸದ್ವಿದ್ಯಾಶಾಲೆಯಿಂದ ಹದಿಮೂರು ಜನಗಳೂ, ಈ ವೂರಲ್ಲಿ ಇತರತ್ರ ವ್ಯಾಸಂಗ ಮಾಡತಕ್ಕವರಲ್ಲಿ ಒಬ್ಬನೂ, ಮೇಲುಕೋಟೆಯಿಂದ ಐದುಮಂದಿಯೂ, ಒಟ್ಟು ಇಪ್ಪತ್ತೊಂದು ಮಂದಿ ಪರೀಕ್ಷೆಗೆ ಬಂದಿದ್ದರು. ಇವರಲ್ಲಿ ಏಳು ಜನಕ್ಕೆ ಬಹುಮಾನ ಬಂದಿರುತ್ತೆ. ಈ ಪಾಠಶಾಲೆಯಿಂದ ಬಂದಿದ್ದ ಹದಿನಾಲ್ಕು ಜನಗಳ ಪೈಕಿ ಏಳು ಜನಕ್ಕೆ ಬಹುಮಾನ ಬಂದಿರುತ್ತೆ. ಸಾಹಿತ್ಯದ ಮೂರನೇ ತರಗತಿಗೆ ಮೇಲುಕೋಟೆಯಿಂದ ೫ ಮಂದಿ ಪರೀಕ್ಷೆಗೆ ಬಂದು ಇದ್ದರು. ಇವರಲ್ಲಿ ಮೂರು ಮಂದಿಗೆ ಬಹುಮಾನ ಬಂದಿರುತ್ತೆ. ಈ ಪಾಠಶಾಲೆಗೆ ಸೇರಿದವರು ಆರುಮಂದಿ ಪರೀಕ್ಷೆಗೆ ಬಂದಿದ್ದರು. ಇವರಲ್ಲಿ ಒಬ್ಬನಿಗೆ, ಬಹುಮಾನ ಬಂದಿರುತ್ತೆ.

ಋಗ್ವೇದದಲ್ಲಿ ಒಂದನೇ ತರಗತಿಗೆ ಈ ವೂರಲ್ಲಿ ಓದತಕ್ಕವರಲ್ಲಿ ಒಬ್ಬನು ಪರೀಕ್ಷೆಗೆ ಬಂದಿದ್ದನು. ಅವನಿಗೆ ಬಹುಮಾನ ಬಂದಿರುತ್ತೆ.

ಯಜುರ್ವೇದದಲ್ಲಿ ಒಂದನೇ ತರಗತಿಗೆ ಮೇಲುಕೋಟೆಯಿಂದ ನಾಲ್ಕು ಜನರೂ, [illegible] ನ್ನಪಟ್ಟಣದಿಂದ ಒಬ್ಬರೂ, [illegible] ಇಬ್ಬರೂ, [illegible]

ಅಂಜಿದವನ ಮೇಲೆ ಕಪ್ಪೆಹಾಕಿದ ಹಾಗೆ ?

ಒಬ್ಬರೂ, ಕೊತ್ತನಹಳ್ಳಿಯಿಂದ ಒಬ್ಬರೂ, ಈ ವೂರಲ್ಲಿ ಓದತಕ್ಕವರಲ್ಲಿ ಒಬ್ಬರೂ, ಅಂತು ಎಂಟುಮಂದಿ ಪರೀಕ್ಷೆಗೆ ಬಂದಿದ್ದರು. ಈ ಎಂಟು ಜನರಿಗೂ ಬಹುಮಾನ ಬಂದಿರುತ್ತೆ. ಈ ಪಾಠಶಾಲೆಯಿಂದ ಪರೀಕ್ಷೆಗೆ ಬಂದ ಐದುಮಂದಿಯಲ್ಲಿ ಇಬ್ಬರಿಗೆ ಬಹುಮಾನ ಬಂದಿರುತ್ತೆ. ಯಜುರ್ವೇದದ ಎರಡನೇ ತರಗತಿಗೆ ಇಬ್ಬರು ಪರೀಕ್ಷೆಗೆ ಬಂದಿದ್ದರು. ಇವರಲ್ಲಿ ಒಬ್ಬರಿಗೆ ಬಹುಮಾನ ಬಂದಿರುತ್ತೆ.

ವ್ಯಾಕರಣದಲ್ಲಿ ಎರಡನೇ ತರಗತಿಗೆ ಐದುಮಂದಿ ಪರೀಕ್ಷೆಗೆ ಬಂದಿದ್ದರು. ಇವರಲ್ಲಿ ಒಬ್ಬರಿಗೆ ಬಹುಮಾನ ಬಂದಿರುತ್ತೆ.

ಗಣಿತ, ಭೂಗೋಳ, ಆರೋಗ್ಯಸಂಗ್ರಹ, ಚರಿತ್ರೆ, ಮೊದಲಾದ ವಿಷಯಗಳನ್ನು ವ್ಯಾಸಂಗಮಾಡತಕ್ಕ ಕನ್ನಡದ ಐದು ತರಗತಿಗಳಲ್ಲಿ (೬೬) ಅರವತ್ತಾರುಮಂದಿ ವಿದ್ಯಾರ್ಥಿಗಳಿರುತ್ತಾರೆ. ಇವರನ್ನು ಮ॥ ರಾ॥ ನರಸಿಂಹ ಅಯ್ಯಂಗಾರ್ರು ಹಿಂದೂಚರಿತ್ರೆಯಲ್ಲಿಯೂ, ಮಲ್ಲಾರಿರಾವ್ ಬಿ. ಎ. ಅವರು ಲೆಖ್ಖಮೊದಲಾದ್ದರಲ್ಲಿಯೂ, ವೆಂಕಟಸ್ವಾಮಿ ಬಿ. ಎ. ಅವರು ಕನ್ನಡಭಾಷೆಯಲ್ಲಿಯೂ, ಮರಿಮಲ್ಲಪ್ಪನವರ ಸ್ಕೂಲ್ ಕೃಷ್ಣಅಯ್ಯಂಗಾರ್ರು ಮತ್ತು ಲಕ್ಷ್ಮೀನಾರಣಪ್ಪನವರು ಲೆಖ್ಖ, ಭಾಷೆ, ಇತ್ಯಾದಿಗಳಲ್ಲಿಯೂ ಪರೀಕ್ಷಿಸಿ ಇರುತ್ತಾರೆ. ಈ ವೊಟ್ಟು ಅರವತ್ತಾರು ಮಂದಿಯಲ್ಲಿ ಇಪ್ಪತ್ತೈದು ಜನ ಉತ್ತಮ ಪರೀಕ್ಷೆಕೊಟ್ಟು, ಬಹುಮಾನಯೋಗ್ಯರಾಗಿ ಇದ್ದಾರೆ.

ಇಂಗ್ಲೀಷು ಓದುವ ಇಪ್ಪತ್ತೆರಡು ಮಂದಿ ವಿದ್ಯಾರ್ಥಿಗಳ ಪೈಕಿ ಆರು ಮಂದಿ ಉತ್ತಮ ಪರೀಕ್ಷೆಕೊಟ್ಟು, ಬಹುಮಾನಕ್ಕೆ ಯೋಗ್ಯರಾಗಿ ಇದ್ದಾರೆ.

ವಿದ್ವತ್ಪರೀಕ್ಷೆ ಮತ್ತು ಅದರ ಫಲಿತಾರ್ಥ ಸಹ.

ಋಗ್ವೇದ ಯಜುರ್ವೇದಾದಿವೇದಗಳಲ್ಲಿಯೂ, ತರ್ಕ ವ್ಯಾಕರಣಾದಿ ಶಾಸ್ತ್ರಗಳಲ್ಲಿಯೂ ಬಹಳ ಪ್ರವೀಣರಾಗಿರುವ ಈ ದೇಶದ ಮತ್ತು ದೇಶಾಂತರದ ಪಂಡಿತರಿಗೆ ಆಯಾ ಶಾಸ್ತ್ರಗಳಲ್ಲಿ ಪರೀಕ್ಷೆಯನ್ನು ನಡಿಸಿ ಅವರಿಗೆ ಸಂಭಾವನೆಗಳನ್ನು ಕೊಡಬೇಕೆಂಬದಾಗಿ ಶ್ರೀಮನ್ಮಹಾರಾಜರವರು ಅಪ್ಪಣೆ ದಯಪಾಲಿಸಿ ಇರುವಮೇರಿಗೆ ವಿದ್ವತ್ಪರೀಕ್ಷಾರ್ಥವಾಗಿ ಗ್ರಂಥ ಬಹುಮಾನಗಳ ವಿಷಯದಲ್ಲಿ ಮಾಡಿರುವ ಏರ್ಪಾಡುಗಳು ಏನಂದರೆ:—

ಋಗ್ವೇದದ ಮೊದಲನೇ ತರಗತಿಯಲ್ಲಿ ಪರೀಕ್ಷೆ ಕೊಡತಕ್ಕವರಿಗೆ —ಋಗ್ವೇದ ಕ್ರಮಾಂತ, ಬ್ರಾಹ್ಮಣ, ಅರಣ, ಅಥವಾ ಜಟಾಂತವಾಗಿ. ಎರಡನೇ ತರಗತಿಯವರಿಗೆ— ಮೊದಲನೇ ತರಗತಿಯ ಗ್ರಂಥಗಳಲ್ಲ, ವಿದ್ಯಾರಣ್ಯಭಾಷ್ಯಸಂಪೂರ್ಣ, ಶೌನಕಕೃತ ಪ್ರಾತಿಶಾಖ್ಯ.

ಅಕ್ಕ ನನ್ನವಳಾದರೆ ಭಾವನನ್ನವನೆ?

ಯಜುರ್ವೇದದಲ್ಲಿ ಮೊದಲನೇ ತರಗತಿಯವರಿಗೆ--(೧) ಘನಾಂತವಾಗಿ. (೨) ವೈದಿಕಾಭರಣ, ಪ್ರಾತಿಶಾಖ್ಯ. (೩) ವರ್ಣಸಾರ, ವರ್ಣಕ್ರಮ. (೪) ಸ್ವರಾವಧಾನ. ಎರಡನೇ ತರಗತಿಯವರಿಗೆ--(೧) ಮೊದಲನೇ ತರಗತಿಯ ಗ್ರಂಥಗಳು. (೨) ವಿದ್ಯಾರಣ್ಯ ಭಾಷ್ಯ ಸಂಪೂರ್ಣ.

(೨) ಸಾಮವೇದದಲ್ಲಿ ಮೊದಲನೇ ತರಗತಿಯವರಿಗೆ--(೧) ಸಪ್ತಗಾನ. (೨) ಪದ. (೩) ಅಷ್ಟಬ್ರಾಹ್ಮಣ. (೪) ಋಕ್ತಂತ್ರ, ಸಾಮತಂತ್ರ, ಪುಲ್ಲತಂತ್ರ. ಎರಡನೇ ತರಗತಿ ಯವರಿಗೆ—(೧) ಮೊದಲನೇ ತರಗತಿಯ ಗ್ರಂಥಗಳು. (೨) ವಿದ್ಯಾರಣ್ಯಭಾಷ್ಯಸಂಪೂರ್ಣ.

ತರ್ಕಶಾಸ್ತ್ರದಲ್ಲಿ ಮೊದಲನೇ ತರಗತಿಯವರಿಗೆ —(೧) ಪ್ರಕರಣಾಂತವಾಗಿ (೨) ಗದಾಧರಪೂರ್ವವಾದಗಳು. (೩) ಉತ್ತರವಾದ ಬಾಧಾಂತವಾಗಿ. (೪) ವ್ಯುತ್ಪತ್ತಿವಾದ. ಎರಡನೇ ತರಗತಿಯವರಿಗೆ—(೧) ಮೊದಲನೇ ತರಗತಿಯ ಗ್ರಂಥಗಳೆಲ್ಲ. (೨) ಶಕ್ತಿವಾದ. (೩) ಪ್ರಾಮಾಣ್ಯವಾದ. (೪) ಶಬ್ದಶಕ್ತಿ ಪ್ರಕಾಶಿಕಾ.

ವ್ಯಾಕರಣಶಾಸ್ತ್ರದಲ್ಲಿ ಮೊದಲನೇ ತರಗತಿಯವರಿಗೆ—(೧) ಮನೋರಮಾಶಬ್ದರತ್ನ, ತಾರಕಾಂತವಾಗಿ. (೨) ಶಬ್ದಕೌಸ್ತುಭನವಾಹ್ನಿಕಾ. (೩) ಪರಿಭಾಷೇಂದು ಶೇಖರ. (೪) ಲಘುಶಬ್ದೇಂದು ಶೇಖರ. ಎರಡನೇ ತರಗತಿ ಯವರಿಗೆ.— (೧) ಮೊದಲನೇ ತರಗತಿಯ ಗ್ರಂಥಗಳೆಲ್ಲ. (೨) ಮಹಾಭಾಷ್ಯ ಸಂಪೂರ್ಣ. (೩) ಕೈಯಟ ಸಂಪೂರ್ಣ. (೪) ವೈಯಾಕರಣ ಭೂಷಣಸಾರ.

ಈ ಮೇಲೆ ಹೇಳಿದವುಗಳಲ್ಲಿ ವೇದಗಳ ೧ನೇ ತರಗತಿಗಳಲ್ಲಿ ಪರೀಕ್ಷೆಕೊಟ್ಟವರಿಗೆ ೩೦ ರೂ ॥ ನಿಂದ ೬೦ ರೂ ॥ ವರಿಗೂ, ತರ್ಕವ್ಯಾಕರಣಗಳ ೧ನೇ ತರಗತಿಯಲ್ಲಿ ಪರೀಕ್ಷೆ ಕೊಟ್ಟವರಿಗೆ ೬೦ ರೂ ॥ ನಿಂದ ೧೦೦ ರೂ ॥ ವರಿಗೂ, ಎಲ್ಲಾ ಗ್ರಂಥಗಳಲ್ಲಿಯೂ ಎರಡನೆ ತರಗತಿಯಲ್ಲಿ ಪರೀಕ್ಷೆ ಕೊಟ್ಟವರಿಗೆ ೧೦೦ ರೂ॥ ನಿಂದ ೧೫೦ ರೂ ॥ ವರಿಗೂ, ಕೊಡತಕ್ಕಂತೆ ನಿಷ್ಕರ್ಷೆಯಾಗಿ ಇದೆ.

ಇದಲ್ಲದೆ ಮೇಲಿನ ಪರೀಕ್ಷೆಗಳಲ್ಲದೆ ಶಾಸ್ತ್ರಾಂತರಗಳಲ್ಲಿಯೂ ಈ ಪರೀಕ್ಷೆಕೊಡತಕ್ಕವರ ವಿಷಯದಲ್ಲಿ ಮಾಡಿರುವ ಏರ್ಪಾಡು ಏನೆಂದರೆ:—

ಮೀಮಾಂಸದ ಒಂದನೇ ತರಗತಿಯವರಿಗೆ---(೧) ಭಾಟ್ಟಕೌಸ್ತುಭ. (೨) ಭಾಟ್ಟದೀಪಿಕೆ. (೩) ಜೈಮಿನೀಯ ನ್ಯಾಯಮಾಲಾ. ಎರಡನೇ ತರಗತಿಯವರಿಗೆ—(೧) ಮೊದಲನೇದರ ಗ್ರಂಥಗಳೆಲ್ಲ. (೨) ಶಾಬರಭಾಷ್ಯ. (೩) ಶಾಸ್ತ್ರದೀಪಿಕಾ ಮತ್ತು ಭಾಟ್ಟರಹಸ್ಯ.

ಅಂಟು ತಪ್ಪಿದರೆ ನಂಟು ತಪ್ಪೀತೆ ?

ವೇದಶಾಸ್ತ್ರದ ಮೊದಲನೇ ತರಗತಿಯವರಿಗೆ—(೧) ಮತತ್ರಯಭಾಷ್ಯಗಳು. (೨) ಅ ದ್ವೈತಸಿದ್ಧಿ, ಬ್ರಹ್ಮಾನಂದೀಯ ನ್ಯಾಯಸಿದ್ಧಾಂಜನ, ನ್ಯಾಯಾಮೃತ ಅಥವಾ ಶತದೂಷಣೀ, ಚಂಡಮಾರುತ,ಸಿದ್ಧಾಂತಲೇಶ, ನ್ಯಾಯಾಮೃತ ಅಥವಾ ಸುಧಾಚಂದ್ರಿಕೆ, ಸಿದ್ಧಾಂತ ಲೇಶ, ನ್ಯಾಯಸಿದ್ಧಾಂಜನ.

ಧರ್ಮಶಾಸ್ತ್ರದಲ್ಲಿ ಪರೀಕ್ಷೆಕೊಡುವವರಿಗೆ. —(೧) ಸರಸ್ವತೀವಿಲಾಸ. (೨) ವೀರ ಮಿತ್ರೋದಯ. (೩) ಮನುಸ್ಮೃತಿಸವ್ಯಾಖ್ಯಾನ. (೪) ಮಿತಾಕ್ಷರ. (೫) ಪರಾಶರ ಮಾಧವೀಯ ಮತ್ತು ವೈದ್ಯನಾಥೀಯ ನಿರ್ಣಯಸಿಂಧು, ಸುಧಿವಿಲೋಚನ.

ಅಲಂಕಾರ ಶಾಸ್ತ್ರದಲ್ಲಿ ಪರೀಕ್ಷೆಕೊಡುವವರಿಗೆ—(೧) ಪಂಚಚಂಪು. (೨) ಪಂಚ ನಾಟಕ. (೩) ಕುವಲಯಾನಂದ. (೪) ಪ್ರತಾಪರುದ್ರೀಯ. (೫) ಚಿತ್ರಮೀಮಾಂಸೆ. (೬) ರಸಗಂಗಾಧರ. (೭) ಕಾವ್ಯಪ್ರಕಾಶ. (೮) ವೃತ್ತರತ್ನಾಕರ. (೯) ಸಿದ್ಧಾಂತ ಕೌಮುದಿ, ಸಂಪೂರ್ಣ. (೧೦) ಪ್ರಕರಣಾಂತ ತರ್ಕ.

ಈಗ ಹೇಳಿದವುಗಳಲ್ಲಿ ಮೀಮಾಂಸ, ವೇದಾಂತ ಶಾಸ್ತ್ರಗಳ ಎರಡನೇ ತರಗತಿಗಳಲ್ಲಿ ಪರೀಕ್ಷೆ ಕೊಟ್ಟವರಿಗೆ ಮಾತ್ರ ೧೦೦ರಿಂದ ೧೫೦ ರೂಪಾಯಿವರಿಗೆ ಬಹುಮಾನ ಕೊಡು ವಹಾಗೂ, ಮಿಕ್ಕ ನಾಲ್ಕರಲ್ಲಿ ಆಯಾ ತರಗತಿಗಳಲ್ಲಿ ಪರೀಕ್ಷೆ ಕೊಟ್ಟವರಿಗೆ ೬೦ರಿಂದ ೧೦೦ ರೂಪಾಯಿನವರಿವಿಗೆ ಬಹುಮಾನ ಕೊಡುವಹಾಗೂ ನಿಷ್ಕರ್ಷೆಯಾಗಿ ಇದೆ.

ಪರೀಕ್ಷೆಯ ನಿಬಂಧನೆ.

ವೇದದಲ್ಲಿ ನೂರರಲ್ಲಿ ಎಪ್ಪತ್ತಕ್ಕೆ ಕಡಮೆಯಿಲ್ಲದೆ ನಂಬರು ಬಂದವರಿಗೆ, ಪರೀಕ್ಷೆ ಆದ ದ್ದಾಗಿಯೂ, ತೊಂಭತ್ತಕ್ಕೆ ಕಡಮೆಯಿಲ್ಲದೆ ಬಂದವರಿಗೆ ಉತ್ತಮ ಪರೀಕ್ಷೆ ಆದದ್ದಾ ಗಿಯೂ ನಿಷ್ಕರ್ಷೆಯಾಗಿ ಇದೆ. ಶಾಸ್ತ್ರದಲ್ಲಿ ಪರೀಕ್ಷೆ ಆಗಬೇಕಾದರೆ ನೂರರಲ್ಲಿ ಅರವತ್ತಕ್ಕೆ ಕಡಮೆಯಿಲ್ಲದೆ ಬರಬೇಕು; ಉತ್ತಮ ಪರೀಕ್ಷೆಗೆ ನೂರರಲ್ಲಿ ಎಂಭತ್ತಕ್ಕೆ ಕಡಮೆ ಯಿಲ್ಲದೆ ಬರಬೇಕು.

ಈ ಪರೀಕ್ಷೆಗೆ ವೇದದಲ್ಲಿ ಇಬ್ಬರು ಬಂದಿರುತ್ತಾರೆ. ಋಷ್ಯೈಕಿ, ಪ್ರಯಾಗಮಾಧವಾಚಾ ರ್ರಂಬ, ಋಗ್ವೇದಿ ಗಳೊಬ್ಬರು. ಇವರು ಒಟ್ಟು ೫೦೦ ನಂಬರುಗಳಲ್ಲಿ ೪೩೧ ಅಂದರೆ ನೂರರಲ್ಲಿ ಎಂಭತ್ತಾರು ನಂಬರುಗಳನ್ನು ಹೊಂದಿ ಮಧ್ಯಮ ಪರೀಕ್ಷೆ ಕೊಟ್ಟಿರುತ್ತಾರೆ. ಇವರಿಗೆ ಬಹುಮಾನ ಐವತ್ತು ರುಪಾಯಿ. ಎಜುರ್ವೇದಿ ಘನಪಾಠಿ ಶಿಂಗ್ರಾಚಾರ್ರಂಬ ಮತ್ತೊಬ್ಬರು ೧೦೦ರಲ್ಲಿ ೯೮ ನಂಬರುಗಳನ್ನು ಹೊಂದಿ ಅತ್ಯುತ್ತಮ ಪರೀಕ್ಷೆ ಕೊಟ್ಟಿರುತ್ತಾರೆ. ಇವರಿಗೆ ಸಂಭಾವನೆ ಅರವತ್ತು ರುಪಾಯಿಗಳು. ಇವರು ವಿಶೇಷ ಬಹು ಮಾನಕ್ಕೆ ಯೋಗ್ಯರಾಗಿ ಇರುತ್ತಾರೆ.

ಅಂದಿಗೆ ಅದೇ ಸುಖ ಇಂದಿಗೆ ಇದೇ ಸುಖ.

ತರ್ಕಶಾಸ್ತ್ರದಲ್ಲಿ ಪರೀಕ್ಷೆಗೆ ಬಂದವರು ೫ ಜನ. ಈ ಪೈಕಿ, ಇಬ್ಬರಿಗೆಮಾತ್ರ ಪರೀಕ್ಷೆ ಆಗಿರುತ್ತೆ. ಎಂಬಾರು ಕಸ್ತೂರಿ ರಂಗಾಚಾರ್ರ್ಯೆಂಬವರೊಬ್ಬರು ೧೦೦ಕ್ಕೆ ೯೦ ನಂಬರು ಸಂಪಾದಿಸಿ ಅತ್ಯುತ್ತಮಪರೀಕ್ಷೆ ಕೊಟ್ಟಿರುತ್ತಾರೆ. ಇವರಿಗೆ ಸಂಭಾವನೆ ೧೦೦ ರುಪಾಯಿಗಳು.

ಆತ್ಮಕೂರು ಬಾಲಸರಸ್ವತೀ ಶ್ರೀನಿವಾಸಚಾರ್ರ್ಯೆಂಬ ಮತ್ತೊಬ್ಬರು ೧೦೦ಕ್ಕೆ ೬೦ ನಂಬರು ಸಂಪಾದಿಸಿ ಮಧ್ಯಮಪರೀಕ್ಷೆ ಕೊಟ್ಟಿರುತ್ತಾರೆ. ಇವರಿಗೆ ಸಂಭಾವನೆ ೬೦ ರುಪಾಯಿಗಳು.

ವ್ಯಾಕರಣದಲ್ಲಿ ಮೂರುಜನ ವಿದ್ವಾಂಸರು ಪರೀಕ್ಷೆಗೆ ಬಂದಿದ್ದರು. ಎಲ್ಲರಿಗೂ ಪರೀಕ್ಷೆ ಆಗಿರುತ್ತೆ. ಇದರಲ್ಲಿ ನಾಗೇಶ ಶಾಸ್ತ್ರಿಗಳೆಂಬುವರು ೧೦೦ರಲ್ಲಿ ೮೩ನ್ನು ತೆಗೆದು ಉತ್ತಮ ಪರೀಕ್ಷೆಯನ್ನು ಕೊಟ್ಟಿರುತ್ತಾರೆ. ಅವರಿಗೆ ೯೦ ರುಪಾಯಿಗಳು ಸಂಭಾವನೆ. ವೆಂಕಟರಮಣಾಚಾರ್ರ್ಯೆಂಬುವರು ೧೦೦ಕ್ಕೆ ೬೬ನ್ನು ತೆಗೆದುಕೊಂಡು, ಮಧ್ಯಮಪರೀಕ್ಷೆ ಕೊಟ್ಟಿರುತ್ತಾರೆ. ಇವರಿಗೆ ಸಂಭಾವನೆ ೮೦ ರುಪಾಯಿಗಳು. ರಾಮಕೃಷ್ಣ ಶಾಸ್ತ್ರಿ ಎಂಬುವರು ೧೦೦ರಲ್ಲಿ ೬೦ನ್ನು ತೆಗೆದುಕೊಂಡು ಮಧ್ಯಮ ಪರೀಕ್ಷೆ ಕೊಟ್ಟಿರುತ್ತಾರೆ. ಇವರಿಗೆ ಸಂಭಾವನೆ ೬೦ ರೂಪಾಯಿ.

ಈ ಪರೀಕ್ಷೆಯಲ್ಲಿ ಬಹುಮಾನಕ್ಕೆ ಯೋಗ್ಯರಾಗಿರುವ ಪಂಡಿತರು ೫ ಜನರಲ್ಲಿ ನಾಲ್ಕು ಜನ, ವಿದ್ಯಾರ್ಥಿವೇತನವನ್ನು ಪಡೆಯುವ ಪಾಠಶಾಲೆಯ ವಿದ್ಯಾರ್ಥಿಗಳಾಗಿ ಇದ್ದಾರೆ.

ಅನಂತ ಶಯನದಿಂದ ಒಬ್ಬರು ಘನಪಾಠಿಗಳು ಬಂದಿರುತ್ತಾರೆ. ಇವರು ಘನಾಂತ ಅಧ್ಯಯನ, ಲಕ್ಷಣ, ಭಾಷ್ಯ, ಇಷ್ಟೂ ಎಜುರ್ವೇದದಲ್ಲಿ ತಿಳಿದವರಾಗಿಯೂ, ವೃದ್ಧರಾಗಿ ಮಾನನೀಯರಾಗಿಯೂ ಇರುವದರಿಂದ, ಇವರಿಗೆ ಪರೀಕ್ಷೆಕೊಟ್ಟ ವಿದ್ವಾಂಸರಂತೆ, ಉತ್ತಮಸಂಭಾವನೆಯನ್ನು ಕೊಡಬೇಕಾಗಿರುತ್ತೆ.

ಹೀಗೆ ಪರೀಕ್ಷೆ ಕೊಟ್ಟು ಬಹುಮಾನಪಡೆಯುವ ವಿದ್ವಾಂಸರಲ್ಲದೆ, ಬಹಳ ವೃದ್ಧರಾಗಿಯೂ, ಒಳ್ಳೇ ಶಾಸ್ತ್ರಜ್ಞರಾಗಿಯೂ, ಸನ್ಮಾನಯೋಗ್ಯರಾಗಿಯೂ, ಇರುವ ಕೆಲವರು ವಿದ್ವಾಂಸರಿಗೆ ಪರೀಕ್ಷೆ ಯಿಲ್ಲದೆ ಸಂಭಾವನೆಮಾಡಬೇಕೆಂಬದಾಗಿ, ಶ್ರೀಮನ್ಮಹಾರಾಜರವರು ಅಪ್ಪಣೆ ದಯಪಾಲಿಸಿರುತ್ತಾರೆ. ಆ ಜನಗಳ್ಯಾರೆಂದರೆ—ಶ್ರೀಶ್ರೀಮಠದ ವೆಂಗಟಕೃಷ್ಣಮಾಚಾರ್ಯರು, ತೋಗಿರೇ ವೇದಾಂತ ಸುಬ್ಬಾಶಾಸ್ತ್ರಿಗಳು, ಶ್ರೀಮಠದ ವ್ಯಾಕರಣಂ ತಾತಾಚಾರ್ಯರು, ನವೀನಂ ಶ್ರೀನಿವಾಸ ರಾಘವಾಚಾರ್ಯರು, ವ್ಯಾಸ ಕೃಷ್ಣಾಚಾರ್ಯರು, ಬೆಂಗಳೂರು ವಾಸುದೇವಶಾಸ್ತ್ರಿಗಳು. ಈ ಆರು ಮಂದಿ ವಿದ್ವಾಂಸರಿಗೆ ಸಂಭಾವನೆ ನಡೆಯಬೇಕಾಗಿದೆ.

ಅಂದು ಬಾ ಎಂದರೆ ಮಿಂದು ಬಂದ.

ಧರ್ಮಾಧಿಕಾರಿಗಳು ಎಲ್ಲರು ವಿದ್ಯಾರ್ಥಿ-ವಿದ್ವತ್ಪರೀಕ್ಷೆಗಳಲ್ಲಿ ಸಹ ಬಹಳ ಶ್ರಮೆಪಟ್ಟು ಇರುತ್ತಾರೆ. ಅವರಲ್ಲಿ ಧರ್ಮಾಧಿಕಾರಿಗಳು ಕುಟ್ಟಿನರಸಿಂಹಶಾಸ್ತ್ರಿಗಳು ಸಮಸ್ತದಲ್ಲಿಯೂ ಆಸಕ್ತಿಯಿಂದ ಕೆಲಸಮಾಡಿಇರುತ್ತಾರೆ. ಬೆಂಗಳೂರಲ್ಲಿ ಇರುವ ಅರಮನೆಯ ವಿದ್ವಾಂಸರಾದ ವಾಸುದೇವಶಾಸ್ತ್ರಿಗಳು ವಿದ್ವತ್ಪರೀಕ್ಷೆಯಲ್ಲಿ ಬಹಳ ಶ್ರಮಪಟ್ಟಿರುತ್ತಾರೆ. ಶ್ರೀಮಠದ ವಿದ್ವಾಂಸರಾದ ವೆಂಕಟಕೃಷ್ಣಮಾಚಾರ್ಯರು ಎರಡು ಶಾಸ್ತ್ರಗಳಲ್ಲಿಯೂ, ಅಲಂಕಾರ ಶಾಸ್ತ್ರದಲ್ಲಿಯೂ, ಬಹಳ ದೊಡ್ಡಪಂಡಿತರು. ಈ ಪಾಠಶಾಲೆಯು ಪ್ರಾರಂಭವಾದ ಲಾಗಾಯತು ಪ್ರತಿಸಂವತ್ಸರ ಪರೀಕ್ಷೆಗಳಲ್ಲಿಯೂ, ಮೂರುಮೂರು ತಿಂಗಳ ಪರೀಕ್ಷೆಗಳಲ್ಲಿಯೂ ಸರ್ವದಾ ಬಂದು ಬಹಳವಾಗಿ ಶ್ರಮೆಪಡುತ್ತಾ ಇದ್ದಾರೆ. ಈಸಾರಿ ವಿದ್ವತ್ಪರೀಕ್ಷೆಯಲ್ಲಿಯೂ ಸಹ ಇವರು ತರ್ಕಪರೀಕ್ಷಕರಾಗಿ ಇದ್ದರು.

ಪಾಠಶಾಲೆಯ ವಿದ್ವಾಂಸರೆಲ್ಲರೂ ಈಸಂವತ್ಸರ ಪಾಠಪ್ರವಚನಗಳಲ್ಲಿ ಬಹಳಶ್ರಮೆಪಟ್ಟಿರುತ್ತಾರೆ. ಇದರಲ್ಲಿ ವಿದ್ಯಾರ್ಥಿಪರೀಕ್ಷೆಯಲ್ಲಿ ಚಾಮರಾಜನಗರದ ರಾಮಶಾಸ್ತ್ರಿಗಳೂ, ವಿದ್ವತ್ಪರೀಕ್ಷೆಯಲ್ಲಿ ಬೆಂಗಳೂರು ಸೀತಾರಾಮಶಾಸ್ತ್ರಿಗಳೂ, ವಿಶೇಷವಾಗಿ ಶ್ರಮೆಪಟ್ಟಿರುತ್ತಾರೆ

೨. ಮೈಸೂರು ಪ್ರಜಾಪ್ರತಿನಿಧಿಗಳ ಸಭೆ.

೧೮೮೪ನೇ ಯಿಸವಿ ಅಕ್ಟೋಬರು ತಾರೀಖು ೧ರಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೆಬ್ಬಹದ್ದುರವರ ಆಜ್ಞಾನುಸಾರವಾಗಿ ಮೈಸೂರಿನಲ್ಲಿರುವ ರೆಸಿಡೆನ್ಸಿ ಬಂಗಲೆಯಲ್ಲಿ ಪ್ರಜಾಪ್ರತಿನಿಧಿಗಳ ಸಂಘವು ಸೇರಿ ಇತ್ತು. ಆಗ ಮಹಾರಾಜಶ್ರೀ ದಿವಾನರವರು ಕಳೆದ ಸಾಲಿನ ಜಮಾ ಖರ್ಚು ಲೆಖ್ಖಗಳನ್ನು ಸಭೆಯವರಿಗೆ ತಿಳಿಯಪಡಿಸಿದರು. ಇದರ ಸಾರಾಂಶವೇನಂದರೆ:—

ಜಮಾ ಆದ ರೂಪಾಯಿಗಳು.

ಲ್ಯಾಂಡ್ ರೆವಿನ್ಯೂ ..	೩೩,೩೪,೪೩೬	ಅಮೃತಮಹಲು ..	೩೪,೧೯೯
ಅಬ್ಕಾರಿ ..	೧೨,೨೯,೩೩೩	ವಿದ್ಯಾಭ್ಯಾಸದ ಇಲಾಖೆ ..	೨೩,೯೬೬
ಫಾರೆಸ್ಟು ..	೬,೨೩,೨೮೩	ಉಪ್ಪು ..	೨೬,೪೫೫
ಸ್ಟ್ಯಾಂಪು ..	೪,೬೫,೦೮೯	ಮರಾಮತ್ತು ..	೯,೩೬೬
ಸಾಯರು ..	೨,೮೩,೪೨೬	ಚಲಾವಣೆ ತಪ್ಪಿದ ತಾಂಬ್ರದನಾಣ್ಯಗಳಕಿಮ್ಮತ್ತು ..	೨೬,೧೨೮
ಮೊಹತರಫಾ ..	೨,೮೧,೪೪೨	ಚಿಲ್ಲರೇ ಬಾಬುಗಳು ..	೧,೨೩,೪೩೫
ಜುಡಿಷಿಲ್ ಬಾಬು ..	೬೦,೯೫೯		
ಅಂಚೆ ..	೫೮,೬೬೧	ಜುಮ್ಲಾ ..	೧,೦೬,೩೫,೫೩೯
ರೆಜಿಸ್ಟ್ರೇಷನ್ ..	೩೬,೯೬೨		

ಅಕ್ಕಸಾಲೆ ಕಿವಿ ಚುಚ್ಚಿದರೆ ನೋವಿಲ್ಲ.

ಖರ್ಚಾದ ರೂಪಾಯಿಗಳು.

[illegible] ...	೨೪,೫೦,೦೦೦
ಅರಮನೆ ಖರ್ಚು ...	೧೦,೦೦,೦೦೦
ಸರಕಾರಿ ಸಾಲದ ಬಡ್ಡಿ...	೪,೯೧,೨೩೩
ಜಹಗೀರಿಗೆ ಬದಲಾಗಿ ಕೊಡುವ ಅಲೋಎನ್ಸ್ ಮತ್ತು ಪೊಲಿಟಿಕಲ್ ಪೆನ್ಷನ್	೧,೪೮,೯೨೫
[illegible] ..	೭,೩೮,೦೦೯
ಒಟ್ಟು....	೪೮,೨೮,೧೩೧
[illegible] ಇಲಾಖೇ ಖರ್ಚು	೧,೯೫,೮೯೦
ಡೆಪ್ಯೂಟಿಕಮಿಷನರು ಮತ್ತು ಅವರ ಸಿಬ್ಬಂದಿ ..	೧,೭೭,೯೪೯
ಅಮಲ್ದಾರು ಮತ್ತು ಅವರ ಸಿಬ್ಬಂದಿ	೧,೦೪,೧೧೨
ತಾಲ್ಲೂಕು ಸಿಬ್ಬಂದಿ ..	೫,೨೭,೬೦೯
ರೆವಿನ್ಯೂ ಸರ್ವೆ ...	೨,೫೦,೪೧೪
ಇನಾಂ ಇಲಾಖೆ ...	೭,೮೧೬
ಗ್ರಾಮ ನೌಕರರ ತಲಬು	೨,೧೪,೨೧೦
ಇತರ ಬಾಬುಗಳು ...	೭೪,೪೭೬
ಅಬ್ಕಾರಿ ...	೧೬,೦೯೭
ಫಾರೆಸ್ಟು ...	೨,೪೮,೨೫೭
ಸ್ಟಾಂಪು ...	೧೪,೩೧೧
ಸಾಯರು ...	೧೫,೨೪೮
ಸರಕಾರಿ [illegible] ಭಾಷಾ ಶಾಲೆ ...	೫೮,೬೯೩
[illegible] ಇಲಾಖೆ..	೧,೭೭,೮೬೦
[illegible] ಸರ್ವೆ	೮೪,೨೮೧
ಒಟ್ಟು......	೨೧,೭೫,೨೫೭

ಜುಡಿಷಿಲ್ ಮತ್ತು ಜೈಲ್ ಬಾಬು ..	೪,೧೨,೨೩೯
ಪೊಲೀಸ್ ...	೪,೫೨,೧೮೫
ವಿದ್ಯಾಭ್ಯಾಸದ ಇಲಾಖೆ.	೧,೩೮,೦೬೫
ಮುಜರಾಯಿ ..	೨,೩೯,೬೫೭
ವೈದ್ಯದ ಇಲಾಖೆ ..	೧,೨೯,೬೫೯
ಪೆನ್ಷನ್ ಮತ್ತು ಗ್ರ್ಯಾಚುಎಟಿ	೨,೪೫,೬೦೦
ಪಬ್ಲಿಕ ವರ್ಕ್ಸ್ ..	೯,೩೬,೦೦೦
ಅಂಚೆ ..	೧,೨೩,೫೩೫
ರೆಜಿಸ್ಟ್ರೇಷನ್ ..	೨೫,೫೩೯
ಚಿಲ್ಲರೆಯಿಲಾಖೆಗಳು ..	೧೬,೧೬೩
ಇಂಗ್ಲೀಷ್ ಅಧಿಕಾರಿಗಳ ಫರ್ಲೋ ಅಲೋಎನ್ಸ್ ಗ್ರ್ಯಾಚ್ಯೂಟಿ ಕಾಂಪೆನ್ಸೇಷನ್ ಲೀವ್ ಮತ್ತು ಪೆನ್ಷನ್ ಸಂಬಂಧವಾದ ಖರ್ಚು ..	೧,೧೫,೬೨
ಚಿಲ್ಲರೆಬಾಬು ಮತ್ತು ಬೆಂಗಳೂರು ಕಂಟೋನ್ಮೆಂಟ್ ಖರ್ಚು ೧,೬೩,೭೯೧ ಸಹ.	೩,೫೬,೩೪೪
ಜಮಾ.....	೩೨,೩೬,೮೯೯
ಒಟ್ಟು ಜಮಾ.....	[illegible]

ಅಜ್ಜನಿಗೆ ಮೊಮ್ಮಗ ಆಕಳಿಕೆ ಕಲಿಸಿದನಂತೆ.

೧೮೮೨-೮೩ನೇ ಇಸವಿಯಲ್ಲಿ ಖರ್ಚು ಜಾತಾ ಉಳಿದ ಮೊಬಲಗು ೧,೧೮,೮೯೬ ರೂ. ಗುದಸ್ತಾ ಸಾಲಿನಲ್ಲಿ ಸದರಿ ಮೊಬಲಗು ೪,೯೬,೦೬೬. ರೂ. ಕಳೆದ ಸಾಲಿನಲ್ಲಿ ಜಾಸ್ತಿ ಹುಟ್ಟುವಳಿ ೩,೧೨,೬೯೯ ರೂ. ಈ ಪೈಕಿ ಅರ್ಧಭಾಗವು ಬಾಕೀವಸೂಲಾದದ್ದು. ಉಳಿದ ಅರ್ಧಭಾಗವು ಮೈಸೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳ ಜಮಾಬಂದಿ ಜಾಸ್ತಿಯಾದ್ದರಿಂದ ಉಂಟಾದದ್ದು.

ಅಬ್ಕಾರಿ, ಫಾರೆಸ್ಟು, ಸ್ಟಾಂಪು ಬಾಬುಗಳ ಹುಟ್ಟುವಳಿಯು ೮೨-೮೩ನೇ ಮತ್ತು ೮೩-೮೪ನೇ ಇಸವಿಗಳಲ್ಲಿ ಸ್ವಲ್ಪಹೆಚ್ಚು ಕಡಿಮೆ ಸಮನಾಗಿಯೇ ಇದೆ. ಸಾಯರು ಬಾಬಿನವಸೂಲಿಯು ಕ್ಷಾಮಕ್ಕೆ ಮುಂಚೆ ೬ ಲಕ್ಷ ರೂಪಾಯಾಗಿತ್ತು. ೮೨-೮೩ನೇ ವರ್ಷದಲ್ಲಿ ೩॥ ಲಕ್ಷ ರೂಪಾಯಿ ಆಯಿತು. ಕಳೆದ ವರ್ಷ ೨,೮೩,೪೨೬ ರೂ॥ ಆಯಿತು. ಹೀಗಾಗುವದಕ್ಕೆ ಈ ಸಂವತ್ಸರ ಮಲ್ನಾಡಿನ ಅಡಿಕೇ ಮರಗಳಿಗೆ ಕೊಳೇರೋಗ ತಗಲಿದ್ದೇ ಕಾರಣ.

ಕಳೆದ ವರ್ಷದಲ್ಲಿ ಅಮೃತಮಹಲಿಗೋಸ್ಕರ ಮದರಾಸು ಗೌರ್ನಮೆಂಟಿಗೆ ಕೊಟ್ಟಿದ್ದು ೧ ಲಕ್ಷ ರೂಪಾಯಿ. ಚಲಾವಣೆ ತಪ್ಪಿದ ನಾಣ್ಯಗಳಿಗೆ ಕೊಟ್ಟದ್ದು ೩೦,೦೫೩ ರೂ. ಇವೇ ಮೊದಲಾದವುಗಳು ಹೆಚ್ಚುವೆಚ್ಚಗಳು. ಆದ್ದರಿಂದ ಈ ಸಾಲಿನಿಂದ ಮಾಮೂಲ್ ವೆಚ್ಚವು ೯೯॥ ಲಕ್ಷ ರೂಪಾಯಿಗಿಂತ ಹೆಚ್ಚಾಗಲಾರದು.

ಸಿವಿಲ್ ಮತ್ತು ಸೆಷನ್ ಕೋರ್ಟುಗಳಿಗೆ ನೇಟಿವ್ ಜಡ್ಜಿಗಳನ್ನು ನಿಯಮಿಸಿದ್ದರಿಂದ ೨೮,೫೮೩ ರೂಪಾಯಿಗಳೂ, ೫ ಸಬ್‌ಜಡ್ಜಿ ಕೋರ್ಟುಗಳನ್ನು ಮೋಕೂಫ್‌ಮಾಡಿದ್ದರಿಂದ ೪೧,೯೬೮ ರೂಪಾಯಿಗಳೂ, ೪ ಮುನಸೀಫ್‌ ಕೋರ್ಟುಗಳನ್ನು ಕಡಿಮೆ ಮಾಡಿದ್ದರಿಂದ ೧೩,೪೮೩ ರೂಪಾಯಿಗಳೂ, ಒಟ್ಟು ೮೪,೦೪೨ ರೂಪಾಯಿ ಕಡಿಮೆಯಾಗಿ ಇರುತ್ತದೆ. ಜೈಲ್ ಬಾಬಿನಲ್ಲಿ ೧೨,೪೨೪ ರೂಪಾಯಿಗಳೂ, ನೀರಿನ ಮೇಲೆ ಕಳುಹಿಸತಕ್ಕ ಜನರಿಗೋಸ್ಕರ ಆಗುವ ಖರ್ಚಿನಲ್ಲಿ ೧,೦೨,೩೭೮ ರೂಪಾಯಿಗಳೂ, ಒಟ್ಟು ೨ ಲಕ್ಷ ರೂಪಾಯಿವರಿಗೆ ಕಡಿಮೆಯಾಗಿ ಇರುತ್ತದೆ.

ಅಮೃತಮಹಲ್ ಇಲಾಖೆಗಾಗಿ ಮದರಾಸು ಗವರ್ನಮೆಂಟಿಗೆ ಕೊಟ್ಟ ೧ ಲಕ್ಷ ರೂಪಾಯಿಯನ್ನು ತೆಗದು ಬಿಟ್ಟರೆ ಅಲ್ಲಿನ ಹುಟ್ಟುವಳಿಯೂ ಖರ್ಚೂ ಎರಡೂ ಸಮನಾಗಿ ಇವೆ. ಎಲ್ಲಾ ಇಲಾಖೆಗಳ ಸಿಬ್ಬಂದೀ ಖರ್ಚನ್ನು ಕಡಿಮೆ ಮಾಡುವ ಕೆಲಸವು ಪೂರಯಿಸುತಾ ಬಂದಿದೆ. ಈವರ್ಷ ಮೂರುಜನ ಜಡ್ಜೀಯರುಳ್ಳ ಹೈಕೋರ್ಟು ಏರ್ಪಾಡಾಯಿತು. ಇದಕ್ಕೋಸ್ಕರ ತಗಲಿದ ಹೆಚ್ಚು ಖರ್ಚು ಮೈಸೂರು ಮತ್ತು ಚಿಕ್ಕಮಗಳೂರು ಸಬ್‌ಜಡ್ಜಿ ಕೋರ್ಟುಗಳನ್ನು ತೆಗದುಹಾಕಿದ್ದರಿಂದ ವಿಲೆ ಆಯಿತು.

ಅಕ್ಕಸಾಲೆ ಕಿವಿ ಚುಚ್ಚಿದರೆ ನೋವಿಲ್ಲ.

ಖರ್ಚಾದ ರೂಪಾಯಿಗಳು.

ಪಗದಿ ...	೨೪,೫೦,೦೦೦
ಅರಮನೇಖರ್ಚು ...	೧೦,೦೦,೦೦೦
ಸರಕಾರೀ ಸಾಲದ ಬಡ್ಡಿ...	೪,೯೧,೨೮೩
ಜಹಗೀರಿಗೆ ಬದಲಾಗಿ ಕೊಡುವ ಅಲೋಎನ್ಸ್ ಮತ್ತು ಪೊಲಿಟಿಕಲ್‌ಪೆನ್ಷನ್	೧,೪೭,೯೨೫
ಮಿಲಟರಿ ಇಲಾಖಾ ..	೩,೮೭,೦೦೯
ಒಟ್ಟು....	೪೭,೨೭,೧೩೧
ಹುಜೂರು ಇಲಾಖೇ ಖರ್ಚು	೧,೯೫,೭೯೦
ಡಿಪ್ಟೀಕಮಿಷನರು ಮತ್ತು ಅವರಶಿಬ್ಬಂದಿ ..	೧,೩೮,೯೪೯
ಅ॥ ಕ॥ರು ಮತ್ತು ಅವರಶಿಬ್ಬಂದಿ	೧,೦೪,೧೧೨
ತಾಲ್ಲೂಕುಶಿಬ್ಬಂದಿ ..	೫,೨೮,೬೦೯
ರೆವಿನ್ಯೂ ಸರ್ವೆ ...	೨,೫೦,೪೦೪
ಇನಾಂ ಇಲಾಖೆ ...	೩,೭೧೬
ಗ್ರಾಮನೌಕರರ ತಲಬು	೨,೦೪,೨೦೧
ಇತರ ಬಾಬುಗಳು ...	೮೪,೪೩೬
ಆಬ್ಕಾರಿ ...	೧೬,೦೯೩
ಫಾರೆಸ್ಟು ...	೨,೪೭,೨೫೩
ಸ್ಟ್ಯಾಂಪು ...	೧೪,೮೧೧
ಸಾಯರು ...	೧೫,೨೩೪
ಸಾದಿಲ್‌ವಾರ್ ಮತ ಛಾಪಾ ಖಾನೆ ...	೫೭,೬೯೮
ಅಮೃತಮಹಲ್ ಇಲಾಖೆ..	೧,೮೩,೭೬೦
ಟೋಪೋಗ್ರ್ಯಾಫಿಕಲ್ ಸರ್ವೆ	೭೪,೨೭೫
ಒಟ್ಟು......	೨೦,೩೫,೨೫೮

ಜುಡಿಷಿಲ್ ಮತ್ತು ಜೈಲ್ ಬಾಬು ..	೪,೧೨,೨೩೯
ಪೊಲೀಸ್ ...	೪,೫೨,೧೭೫
ವಿದ್ಯಾಭ್ಯಾಸದ ಇಲಾಖೆ.	೧,೮೭,೦೬೫
ಮುಜರಾಯಿ ..	೨,೩೯,೬೫೩
ವೈದ್ಯದ ಇಲಾಖೆ ..	೧,೨೯,೬೫೯
ಪೆನ್ಷನ್ ಮತ್ತು ಗ್ರ್ಯಾಚುಟಿ	೨,೪೫,೬೦೦
ಪಬ್ಲಿಕ್ ವರ್ಕ್ಸ್ ..	೯,೮೬,೦೦೧
ಅಂಚೆ ..	೧,೨೩,೫೮೫
ರೆಜಿಸ್ಟ್ರೇಷನ್ ..	೨೫,೫೩೯
ಚಿಲ್ಲರೆಯಿಲಾಖೆಗಳು ..	೧೩,೧೩೮
ಇಂಗ್ಲೀಷ್ ಅಧಿಕಾರಿಗಳ ಫರ್ಲೊ ಅಲ್ಲೊಎನ್ಸ್ ಗ್ರ್ಯಾಚ್ಯುಟಿ ಕಾಂಪೆನ್ಸೇಷನ್ ಲೀವ್ ಮತ್ತು ಪೆನ್ಷನ್ ಸಂಬಂಧವಾದ ಖರ್ಚು ..	೧,೧೫,೬೨೨
ಚಿಲ್ಲರೆಬಾಬು ಮತ್ತು ಬೆಂಗಳೂರು ಕಂಟೋನ್ಮೆಂಟ್ ಖರ್ಚು ೧,೬೩,೩೯೧ ಸಹ.	೮,೫೬,೩೮೪
ಜುಮ್ಲಾ.....	೮೨,೮೬,೦೭೯
ಒಟ್ಟು ಜುಮ್ಲಾ......	೧,೦೧,೮೯,೫೧೮

ಅಜ್ಜನಿಗೆ ಮೊಮ್ಮಗ ಆಕಳಿಕೆ ಕಲಿಸಿದನಂತೆ.

೧೮೮೨-೮೩ನೇ ಇಸವಿಯಲ್ಲಿ ಖರ್ಚು ಜಾತಾ ಉಳಿದ ಮೊಬಲಗು ೧,೧೮,೮೯೬ ರೂ. ಗುದಸ್ತಾ ಸಾಲಿನಲ್ಲಿ ಸದರಿ ಮೊಬಲಗು ೪,೯೬,೦೬೬. ರೂ. ಕಳೆದ ಸಾಲಿನಲ್ಲಿ ಜಾಸ್ತಿ ಹುಟ್ಟುವಳಿ ೩,೧೨,೬೯೯ ರೂ. ಈ ಪೈಕಿ ಅರ್ಧಭಾಗವು ಬಾಕೀವಸೂಲಾದದ್ದು. ಉಳಿದ ಅರ್ಧಭಾಗವು ಮೈಸೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳ ಜಮಾಬಂದಿ ಜಾಸ್ತಿಯಾದ್ದರಿಂದ ಉಂಟಾದದ್ದು.

ಆಬ್ಕಾರಿ, ಫಾರೆಸ್ಟು, ಸ್ಟಾಂಪು ಬಾಬುಗಳ ಹುಟ್ಟುವಳಿಯು ೮೨-೮೩ನೇ ಮತ್ತು ೮೩-೮೪ನೇ ಇಸವಿಗಳಲ್ಲಿ ಸ್ವಲ್ಪಹೆಚ್ಚು ಕಡಿಮೆ ಸಮನಾಗಿಯೇ ಇದೆ. ಸಾಯರು ಬಾಬಿನವಸೂಲಿಯು ಕ್ಷಾಮಕ್ಕೆಮುಂಚೆ ೬ ಲಕ್ಷ ರೂಪಾಯಾಗಿತ್ತು. ೮೨-೮೩ನೇ ವರ್ಷದಲ್ಲಿ ೩॥ ಲಕ್ಷ ರೂಪಾಯಿ ಆಯಿತು. ಕಳೆದ ವರ್ಷ ೨,೮೩,೪೨೬ ರೂ॥ ಆಯಿತು. ಹೀಗಾಗುವದಕ್ಕೆ ಈ ಸಂವತ್ಸರ ಮಲ್ನಾಡಿನ ಅಡಿಕೇ ಮರಗಳಿಗೆ ಕೊಳೇರೋಗ ತಗಲಿದ್ದೇ ಕಾರಣ.

ಕಳೆದ ವರ್ಷದಲ್ಲಿ ಅಮೃತಮಹಲಿಗೋಸ್ಕರ ಮದರಾಸು ಗೌರ್ನಮೆಂಟಿಗೆ ಕೊಟ್ಟಿದ್ದು ೧ ಲಕ್ಷ ರೂಪಾಯಿ. ಚಲಾವಣೆ ತಪ್ಪಿದ ನಾಣ್ಯಗಳಿಗೆ ಕೊಟ್ಟದ್ದು ೫೦,೦೫೩ ರೂ. ಇವೇ ಮೊದಲಾದವುಗಳು ಹೆಚ್ಚು ವೆಚ್ಚಗಳು. ಆದ್ದರಿಂದ ಈ ಸಾಲಿನಿಂದ ಮಾಮೂಲ್ ವೆಚ್ಚವು ೯೯॥ ಲಕ್ಷ ರೂಪಾಯಿಗಿಂತ ಹೆಚ್ಚಾಗಲಾರದು.

ಸಿವಿಲ್ ಮತ್ತು ಸೆಷನ್ ಕೋರ್ಟುಗಳಿಗೆ ನೇಟಿವ್ ಜಡ್ಜಿಗಳನ್ನು ನಿಯಮಿಸಿದ್ದರಿಂದ ೨೮,೫೮೩ ರೂಪಾಯಿಗಳೂ, ೫ ಸಬ್ ಜಡ್ಜಿ ಕೋರ್ಟುಗಳನ್ನು ಮೋಕೂಫ್ ಮಾಡಿದ್ದರಿಂದ ೪೧,೯೬೮ ರೂಪಾಯಿಗಳೂ, ೪ ಮುನಸೀಫ್ ಕೋರ್ಟುಗಳನ್ನು ಕಡಿಮೆ ಮಾಡಿದ್ದರಿಂದ ೧೩,೪೮೭ ರೂಪಾಯಿಗಳೂ, ಒಟ್ಟು ೮೪,೦೩೨ ರೂಪಾಯಿ ಕಡಿಮೆಯಾಗಿ ಇರುತ್ತದೆ. ಜೈಲ್ ಬಾಬಿನಲ್ಲಿ ೧೨,೪೨೪ ರೂಪಾಯಿಗಳೂ, ನೀರಿನ ಮೇಲೆ ಕಳುಹಿಸತಕ್ಕ ಜನರಿಗೋಸ್ಕರ ಆಗುವ ಖರ್ಚಿನಲ್ಲಿ ೧,೦೨,೩೭೮ ರೂಪಾಯಿಗಳೂ, ಒಟ್ಟು ೨ ಲಕ್ಷ ರೂಪಾಯಿವರಿಗೆ ಕಡಿಮೆಯಾಗಿ ಇರುತ್ತದೆ.

ಅಮೃತಮಹಲ್ ಇಲಾಖೆಗಾಗಿ ಮದರಾಸು ಗವರ್ನಮೆಂಟಿಗೆ ಕೊಟ್ಟ ೧ ಲಕ್ಷ ರೂಪಾಯಿಯನ್ನು ತೆಗದು ಬಿಟ್ಟರೆ ಅಲ್ಲಿನ ಹುಟ್ಟುವಳಿಯೂ ಖರ್ಚೂ ಎರಡೂ ಸಮನಾಗಿ ಇವೆ. ಎಲ್ಲಾ ಇಲಾಖೆಗಳ ಶಿಬ್ಬಂದೀ ಖರ್ಚನ್ನು ಕಡಿಮೆ ಮಾಡುವ ಕೆಲಸವು ಪೂರಯಿಸುತ್ತಾ ಬಂದಿದೆ. ಈವರ್ಷ ಮೂರುಜನ ಜಡ್ಜೀಯರುಳ್ಳ ಹೈಕೋರ್ಟು ಏರ್ಪಾಡಾಯಿತು. ಇದಕ್ಕೋಸ್ಕರ ತಗಲಿದ ಹೆಚ್ಚು ಖರ್ಚು ಮೈಸೂರು ಮತ್ತು ಚಿಕ್ಕಮಗಳೂರು ಸಬ್ ಜಡ್ಜ ಕೋರ್ಟುಗಳನ್ನು ತೆಗದುಹಾಕಿದ್ದರಿಂದ ವಿಲೆ ಆಯಿತು.

ಅಟ್ಟಕೂಳಿಗಿಂತ ತಿರಿದಕೂಳು ಲೇಸು.

ಗ್ರಾಮದ ನೌಕರರಿಗೆ ಸಂಬಳಕ್ಕೆ ಬದಲಾಗಿ ನೌಕರೀ ಇನಾಮು ಜಮೀನುಗಳನ್ನು ಕೊಡತಕ್ಕ ಅಂಶದಲ್ಲಿ ನಿಮ್ಮ ಅಭಿಪ್ರಾಯ ತಿಳಿಯಬೇಕಾಗಿ ಇದೆ.

ಕಳೆದ ಸಂವತ್ಸರದ ಹುಟ್ಟುವಳಿಯಲ್ಲಿ ಬಾಕೀ ವಸೂಲಾದ್ದು ೧॥ ಲಕ್ಷ ರೂಪಾಯಿ. ಚಲಾವಣಿ ಆಗದೆ ಇರುವ ನಾಣ್ಯಗಳನ್ನು ಮಾರಿದ್ದು ೨೫,೦೦೦ ರೂಪಾಯಿ. ಇವುಗಳನ್ನು ವಜಾಮಾಡಿದರೆ ಕಳೆದ ವರ್ಷದ ಹುಟ್ಟುವಳಿಯು ೧,೦೪,೫೦,೦೦೦ ರೂಪಾಯಿ ಆಗುವದು. ಈ ಪೈಕಿ ೯೯॥ ಲಕ್ಷ ರೂಪಾಯಿ ಖರ್ಚಾಗುವದು.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್‌ಗಳ ಉತ್ಪತ್ತಿಯು ೩,೩೨,೩೨೫ ರೂಪಾಯಿ; ಖರ್ಚು ೧,೬೩,೭೯೧ ರೂಪಾಯಿ; ಬಾಕಿ ಉಳಿದದ್ದು ೧,೬೪,೫೩೪ ರೂಪಾಯಿ. ೧೮೮೪ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಈ ಸ್ಟೇಷನ್‌ಗಳು ಇಂಡಿಯನ್ ಗವರ್ನ್ಮೆಂಟಿನ ಆಜ್ಞೆಯ ಪ್ರಕಾರ ಮೈಸೂರು ರೆಸಿಡೆಂಟರವರಿಗೆ ವರ್ಗವಾಯಿತು. ಇವುಗಳಲ್ಲಾಗುವ ಹುಟ್ಟುವಳಿಯು ಖರ್ಚುಜಾತಾ ಉಳಿದದ್ದು ಮೈಸೂರು ಗವರ್ನ್ಮೆಂಟಿಗೇ ಸೇರುತ್ತಾ ಇದೆ. ಇದು ಮೈಸೂರು ಗವರ್ನ್ಮೆಂಟಿಗೆ ಸೇರಿದ್ದೋ ಬ್ರಿಟಿಷ್ ಗವರ್ನ್ಮೆಂಟಿಗೆ ಸೇರಿದ್ದೋ ಇನ್ನೂ ವ್ಯವಸ್ಥೆಯಿಲ್ಲ.

ಮೈಸೂರು ಮತ್ತು ಬೆಂಗಳೂರು ರೇಲ್ವೆಯಲ್ಲಿ ಹುಟ್ಟುವಳಿಯು ೩,೧೧,೪೨೯ ರೂ. ಖರ್ಚು ೧,೯೦,೬೨೫ರೂ. ಜಾತಾ ಉಳಿದದ್ದು ೧,೨೦,೮೦೪ ರೂ. ಈ ಲೈನಿಗೋಸ್ಕರ ಖರ್ಚಾಗಿರತಕ್ಕದ್ದು ೪೪ ಲಕ್ಷ ರೂ. ಇದರ ಮೇಲೆ ಸೇಕಡ ೨।।। ರೂಪಾಯಿ ಬಡ್ಡಿ ಬಂದಹಾಗೆ ಆಗುವದು. ಹೋದ ಸಂವತ್ಸರ ಸ್ಟೇಟ್ ರೇಲ್ವೆಯ ತಯಾರಿಗೆ ಖರ್ಚಾದದ್ದು, ಬೆಂಗಳೂರು—ಮೈಸೂರು ಲೈನ್ ಬಗ್ಯೆ ೯೧,೪೪೩ ರೂ. ಬೆಂಗಳೂರು—ತುಮಕೂರು ಲೈನ್ ಬಗ್ಯೆ ೬,೬೪,೦೨೧ ರೂ. ಜುಮ್ಲಾ ೩,೫೫,೪೬೪ ರೂ. ಇದಲ್ಲದೆ ಈ ವರ್ಷದಲ್ಲಿ ತುಮಕೂರು ಲೈನಿಗೋಸ್ಕರ ೧,೨೫,೦೦೦ ರೂ. ಖರ್ಚಾಗಿ ಇರುತ್ತದೆ. ಇದುವರೆಗೆ ಈ ಲೈನಿಗಾಗಿ ಒಟ್ಟು ಖರ್ಚಾಗಿರುವದು ೧೪,೪೬,೭೫೫ ರೂ. ೧೮೮೪ನೇ ಇಸವಿ ಆಗಸ್ಟು ತಾರೀಖು ೧೧ರ ಲಾಗಾಯಿತು ಈ ಲೈನಿನ ಮೇಲೆ ಆಮದು ರಫ್ತು ಪ್ರಾರಂಭವಾಯಿತು. ಇದರಲ್ಲಿ ಸರಾಸರಿ ವಾರ ೧ಕ್ಕೆ ೧೦೦೦ ರೂಪಾಯಿ ಉತ್ಪತ್ತಿಯಾಗುತ್ತದೆ. ಇದರಿಂದ ಸೇಕಡ ೩। ರೂಪಾಯಿ ಗಿಟ್ಟಬಹುದು. ಈ ಲೈನನ್ನು ದಕ್ಷಿಣ ಮಹಾರಾಷ್ಟ್ರದ ಲೈನಿಗೆ ಸೇರಿಸುವದಕ್ಕೋಸ್ಕರ ಇದನ್ನು ಹರಿಹರಕ್ಕೆ ತೆಗೆದುಕೊಂಡು ಹೋಗುವದು ಉತ್ತಮ. ತುಮಕೂರಿಗೂ ಗುಬ್ಬಿಗೂ ೧೧ ಮೈಲಿ ಇದೆ. ಈಗ ಸಿದ್ಧವಾಗಿರುವ ಸಾಮಾನನ್ನು ಉಪಯೋಗಿಸಿ ಕೊಂಡು ೧। ಲಕ್ಷ ರೂಪಾಯಿ ಖರ್ಚು ಮಾಡಿದ್ದರಿಂದ ಈ ಲೈನು ಪೂರಯಿಸಿತು. ಒಂದು ವರ್ಷದ ದುರಸ್ತೀಲಾಗವತು ಕೂಡಾ ಸೇರಿಸಿದರೆ ಈ ಲೈನಿಗೆ ೨,೯೪,೯೨೪

ರೂಪಾಯಿ ಖರ್ಚು ಬಿದ್ದ ಹಾಗೆ ಆಗುತ್ತದೆ. ಬೆಂಗಳೂರಿಗೂ ಗುಬ್ಬಿಗೂ ೫೪ ಮೈಲು. ಇದಿಷ್ಟಕ್ಕೂ ಸ್ವಲ್ಪ ಹೆಚ್ಚು ಕಡಿಮೆಯಾಗಿ ರೇಲ್ವೇಸಾಲದಲ್ಲಿ ಹುಟ್ಟಿದ ೧೯,೫೬,೦೬೪ ರೂಪಾಯಿ ಖರ್ಚಾಗಿ ಇದೆ. ಮೈಸೂರಿಗೂ ಗುಬ್ಬಿಗೂ ೧೪೧ ಮೈಲು. ಇದಕ್ಕೆ ಮೈಲಿಗೆ ೪೫ ಸಾವಿರ ರೂಪಾಯಿ ಮೇರೆಗೆ ಖರ್ಚಾಗಿರುವದು ೬೩॥ ಲಕ್ಷ ರೂಪಾಯಿ. ಇಂಡಿಯಾದೇಶದ ಇತರಪ್ರದೇಶಗಳಲ್ಲಿ ಆಗುವದಕ್ಕಿಂತ ನಮ್ಮಮೈಸೂರು ಸೀಮೆಯಲ್ಲಿ ಮೈಲಿಗೆ ೨೫ ಸಾವಿರ ರೂಪಾಯಿ ಖರ್ಚು ಕಡಿಮೆಯಾಗಿ ಬಿದ್ದಿದೆ. ಬರುವ ಸಾಲಿನಿಂದ ಸರಾಸರಿ ನಮಗೆ ಸೇಕಡ ೩ ರೂಪಾಯಿ ಬಡ್ಡೀ ಬಂದಹಾಗಾಗುವದು. ಗುಬ್ಬಿಯಿಂದ ತಿಪಟೂರಿಗೆ ೩೩ ಮೈಲಿವೆ. ಇಲ್ಲಿನ ರೇಲ್ವೆಗಾಗಿ ಈ ವರ್ಷದಲ್ಲಿ ೮ ಲಕ್ಷ ರೂಪಾಯಿ ಕೊಡುವದಕ್ಕೆ ಆಗುತ್ತದೆ. ಇದು ಪೂರಯಿಸುವದಕ್ಕಾಗಿ ಬರುವ ವರ್ಷಕ್ಕೆ ೬ ಲಕ್ಷ ರೂಪಾಯಿ ಬೇಕಾಗುತ್ತದೆ. ಅಲ್ಲಿಂದ ಆಚೆಗೆ ತಿಪಟೂರವರೆಗೆ ೧೨೫ ಮೈಲು ಇದೆ. ಇದಕ್ಕೆ ಸುಮಾರು ೬೦ ಲಕ್ಷ ರೂಪಾಯಿ ಬೇಕಾಗುವದು. ಈ ಮೊಬಲಗನ್ನು ಚಾಲ್ತಿ ಹುಟ್ಟುವಳಿಯಿಂದ ಕೊಡುವದು ಅಸಾಧ್ಯ. ಇದಕ್ಕೆ ಬೇಕಾದ ಹಣವನ್ನು ಹೊರಗಿನಿಂದ ಬದಗಿಸಿ ಕೊಳ್ಳಬೇಕು. ಇದಕ್ಕೂ ತಕ್ಕತರ ದೂದು ಮಾಡುತ್ತಾ ಇದೆ. ಈ ಲೈನು ಪೂರಯಿಸಿದರೆ ಕ್ಷಾಮಕಾಲಕ್ಕೆ ಹೊರಗಿನಿಂದ ಪದಾರ್ಥಗಳು ಬರುವದಕ್ಕೆ ಅನುಕೂಲ ವಾಗಿರುವದು.

ಕ್ಷಾಮ ಬರದೆ ಇರಬೇಕಾದರೆ ತರೀ ಸಾಗುವಳಿಯನ್ನು ಹೆಚ್ಚಿಸುವದಕ್ಕೆ ನೀರಿನ ಅನುಕೂಲ್ಯವನ್ನು ಹೆಚ್ಚಿಸಬೇಕು. ಈಗ ಸಾಗುವಳೀಭೂಮಿಯ ವಿಸ್ತೀರ್ಣದ ಪೈಕಿ ೧೦೦ರಲ್ಲಿ ೧೫ರಷ್ಟು ತರೀ ಸಾಗುವಳಿಗೆ ಸೇರಿ ಇದೆ. ಈ ಭೂಮಿಗಳಿಗೆ ಕಾಲಿವೆ ಕೆರೆಗಳಿಂದ ನೀರು ಬೇಕು. ಈಗಲೇ ನಮ್ಮ ದೇಶದಲ್ಲಿ ೩೮ ಸಾವಿರ ಕೆರೆಗಳಿವೆ. ಇವುಗಳಲ್ಲಿ ಅನೇಕ ಕೆರೆಗಳು ಬಹಳ ಹೀನಸ್ಥಿತಿಯಲ್ಲಿವೆ. ಇವುಗಳನ್ನು ಸರಿಮಾಡಿಸುವದಕ್ಕೆ ಸರಕಾರದವರೂ ರೈತರೂ ಸಹ ಬಾಧ್ಯರು. ಇವರಿಬ್ಬರೂ ತಮ್ಮ ಕೆಲಸಗಳನ್ನು ಉಪೇಕ್ಷಿಸಿದ್ದರಿಂದ ಅನೇಕ ಕೆರೆಗಳು ಶಿಥಿಲವಾದವು, ಅಂದರೆ : ಸರಕಾರದವರು ಇವುಗಳನ್ನು ರಿಪೇರಿ ಮಾಡತಕ್ಕದ್ದು ತಮ್ಮದೆಂದು ತಿಳಿದು ರೈತರ ಜವಾಬುದಾರಿಯನ್ನು ತಪ್ಪಿಸಿದರು ; ತಮ್ಮ ಶಿಬ್ಬಂದೀಮೂಲಕ ರೀಪೇರಿ ಮಾಡಿಸತಕ್ಕದ್ದು ಅಸಾಧ್ಯವೆಂದು ತೋರಿದ ಮೇಲೆ ಆ ಕೆಲಸವನ್ನು ರೈತರಿಗೇ ವಹಿಸಿಬಿಟ್ಟರು ; ಅನಂತರದಲ್ಲಿ ರೈತರು ಒಟ್ಟಾಗಿ ಸೇರಿ ಈ ಕೆಲಸ ಮಾಡಿಕೊಳ್ಳಲಿಲ್ಲ ; ಸರಕಾರದವರೂ ಅವರಿಂದ ಈ ಕೆಲಸ ಮಾಡಿಸಲಿಲ್ಲ. ಈ ಕಾಮಗಾರಿಗಳನ್ನು ರೈತರು ಮಾಡುತ್ತಿದ್ದಾಗ ಅದಕ್ಕೋಸ್ಕರ ಅವರಿಗೆ ಇನಾಮುಗಳೂ ರಿಯಾಯಿತಿಗಳೂ ಇದ್ದವು. ಸರಕಾರದವರು ಈ ಕಾಮಗಾರಿಗಳನ್ನು ತಾವೇ ಮಾಡುತ್ತೇವೆಂಬದಾಗಿ ಅಂಥಾ ಇನಾಮು ಮೊದಲಾದವುಗಳನ್ನು ತಪ್ಪಿಸಿ ಪ್ರತ್ಯೇಕವಾಗಿ ತೆರಿಗೆಗಳನ್ನು ಹಾಕಿದರು. ಇದರಿಂದಲೇ ಕೆರೆಗಳೆಲ್ಲಾ ಹೀನಸ್ಥಿತಿಗೆ ಬಂದವು.

ಅಟ್ಟದಿಂದ ಬಿದ್ದವನ ದಡಿಯಿಂದ ಚಚ್ಚಿದರು.

ಎಲ್ಲಾ ಕೆರೆಗಳನ್ನೂ ಸರಕಾರದ ಖರ್ಚಿನಿಂದ ದುರಸ್ತು ಮಾಡಿಸುವದಿದು ಅಸಾಧ್ಯ. ಇದಕ್ಕೆ ಸರಿಯಾದ ಏರ್ಪಾಡು ಏನಂದರೆ: ೫೦೦ ರೂಪಾಯಿಗಿಂತ ಹೆಚ್ಚಾಗಿ ಹುಟ್ಟುವಳಿ ಇರತಕ್ಕ ಕೆರೆಗಳನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟಿನವರು ದುರಸ್ತು ಮಾಡಿಸತಕ್ಕದ್ದು. ಈ ರೀತಿಯಾಗಿ ೭೯೦ ಕೆರೆಗಳಿವೆ. ಇದರ ದುರಸ್ತು ಲಾಗವಡು ಹೆಚ್ಚಾಗುವದರಿಂದ ಇದನ್ನು ಸರಕಾರದವರೇ ವಹಿಸುವರು. ಇದಕ್ಕೆ ಕಡಿಮೆಯಾಗಿ ಹುಟ್ಟುವಳಿ ಆಗುವ ಕೆರೆಗಳನ್ನು ಗ್ರಾಮಸ್ಥರ ಸುಪರ್ದು ಮಾಡಬೇಕೆಂದು ಯೋಚಿಸಿ ಇದೆ. ಇವರ ಮೇಲಿನ ವಿಚಾರಣೆಯನ್ನು ಮುಲ್ಕೀ ಆಫೀಸರುಗಳು ತೆಗೆದುಕೊಳ್ಳುವರು. ಹೀಗೆ ಮಾಡುವದರಿಂದ ಮೈದಾನ್ ಮತ್ತು ಮಲ್ನಾಡು ಸೀಮೆಯ ರೈತರಿಗೆಲ್ಲಾ ಅನುಕೂಲವಾಗಿರುವದು. ಇವರಿಗೆ ಸುಲಭ ಮಾಡಿಕೊಡುವದಕ್ಕೋಸ್ಕರ ಈಗ ವಸೂಲಾಗುತ್ತಿರುವ ರೂಪಾಯಿಗೆ ೧ ಆಣೆ ಇರ್ರಿಗೇಷನ್ ಸೆಸ್ ಮೋಕೂಫ್ ಮಾಡಬೇಕೆಂಬದಾಗಿಯೂ, ವಿಶೇಷ ಕಾಮಗಾರಿ ಆಗಬೇಕಾದರೆ ಕೆರೆಗಳ ವಿಷಯದಲ್ಲಿ ತ್ವರ್‍ಯದಲ್ಲಾಗುವ ಕಾಮಗಾರಿಗಳನ್ನು ಮಾಡಿಕೊಳ್ಳುವದಕ್ಕೋಸ್ಕರ ತಗಲತಕ್ಕ ಲಾಗವಡನ್ನು ಗೊತ್ತು ಮಾಡಿಕೊಂಡು ತರೀ ಕಂದಾಯವನ್ನು ಯಥೋಚಿತವಾಗಿ ಕಡಿಮೆ ಮಾಡಬೇಕೆಂಬದಾಗಿಯೂ, ಸಾಲ್ ಆಬಾದ್ ಕಾಮಗಾರಿಗಿಂತ ಹೆಚ್ಚಾಗಿ ಕಾಮಗಾರಿ ಆಗಬೇಕಾದರೆ ಕೆರೆಗಳ ವಿಷಯದಲ್ಲಿ ೧—೨ ವರ್ಷದ ಕಂದಾಯವನ್ನೇ ಮೋಕೂಫ್ ಮಾಡಬೇಕೆಂಬದಾಗಿಯೂ, ಕಲ್ಲು ಮತ್ತು ಗಚ್ಚೀ ಕಾಮಗಾರಿ ಆಗಬೇಕಾದರೆ ೩—೪ ವರ್ಷದ ಕಂದಾಯವನ್ನು ಮಾಫ್ ಮಾಡಬೇಕೆಂಬದಾಗಿಯೂ, ಶಿಕಸ್ತಾಗಿರುವ ಕೆರೆಗಳ ವಿಷಯದಲ್ಲಿ ೫ ಅಥವಾ ೭ ವರ್ಷ ಕಡಮೆ ಹಾಕಬೇಕೆಂಬದಾಗಿಯೂ ಯೋಚಿಸಿ ಇದೆ. ಗ್ರಾಮಸ್ಥರು ದ್ರವ್ಯಸಹಾಯ, ಸಾಹಸ, ಐಕಮತ್ಯ ಮುಂತಾದಗುಣಗಳನ್ನು ಹೊಂದಿರದೆ ಇರುವದರಿಂದ, ಇಂಥಾ ಕೆಲಸಗಳು ನಿಂತಪಕ್ಷದಲ್ಲಿ ಸರಕಾರದಿಂದಲೇ ಈ ಕೆಲಸಗಳನ್ನು ಮಾಡಿಸಿ ಮಟ್ಟೀ ಕಾಮಗಾರಿಯನ್ನು ಮಾತ್ರ ರೈತರಿಂದ ಮಾಡಿಸಿ ಅದಕ್ಕೆ ತಕ್ಕ ರಿಯಾಯಿತಿಯನ್ನು ತೋರಿಸುವ ಹಾಗೆ ಡಿಪ್ಟೀ ಕಮಿಷನರವರಿಗೆ ಅಧಿಕಾರ ಕೊಡಲ್ಪಡುವದು. ಈ ಏರ್ಪಾಡಿನಿಂದ ಪುಷ್ಕರಾದ ರೈತರು ಸ್ವಪ್ರಯೋಜನದ ಮೇಲೆ ದೃಷ್ಟಿಯಿಟ್ಟು ಕೆರೆಗಳನ್ನು ತಾವೇ ದುರಸ್ತು ಮಾಡಿಸಿಕೊಳ್ಳಬಹುದು. ಒಂದುವೇಳೆ ಹಾಗೆ ಮಾಡದೆ ಇದ್ದಪಕ್ಷದಲ್ಲಿ ಚೌಥಾಯಿ ಏರ್ಪಾಡಿನ ಮೇರೆ ಜನಗಳು ಸ್ವಂತ ಲಾಗವುಡಿನಿಂದ ಮಾಡಿಕೊಳ್ಳುವದಕ್ಕೆ ಅಪ್ಪಣೆ ಕೊಡುವದರಿಂದ ಆಬಾದು ಆಗಬಹುದು. ಆ ಚೌಥಾಯಿಯ ಕಡಿಮೆ ಕಂದಾಯವು ಖಾಯಂ ಆಗಿ ಇರತಕ್ಕದ್ದೆಂದು ಗೊತ್ತು ಮಾಡಲ್ಪಡುವದು. ದುರಸ್ತುಬಗ್ಗೆ ಭಾರೀ ಲಾಗವಡು ತಗಲಿದರೆ ಕಂದಾಯವು ಇದಕ್ಕಿಂತಲೂ ಕಡಿಮೆಯಾಗುವದು. ಈ ಏರ್ಪಾಡಿನಿಂದ ಸರಕಾರಕ್ಕೆ ಏನೂ ನಷ್ಟವಿಲ್ಲ. ಹೀಗೆ ರೈತರಿಗೆ ಸುಲಭ ಮಾಡಿಕೊಡುವದರಿಂದ ಅವರು ಆಗ್ಯೆ ಕೆರೆಗಳನ್ನು ದುರಸ್ತು ಮಾಡಿಕೊಂಡು ವ್ಯವಸಾಯವನ್ನು ಕ್ರಮವಾಗಿ ನಡೆಸುತ್ತಿರುವರು;

ಅಷ್ಟ ಗೋಡೆಯ ಮೇಲಣ ದೀಪದ ಹಾಗೆ.

ಹಾಗಿಲ್ಲದೆ ಇದ್ದಪಕ್ಷದಲ್ಲಿ ಕೆರೆಗಳೆಲ್ಲಾ ಕೆಟ್ಟುಹೋಗಿ ಮೊದಲಿಗೆ ಮೋಸಬರುವದು. ಈಗ ನಾವು ಮಾಡಿರತಕ್ಕ ಏರ್ಪಾಡಿನಿಂದ ೧೦-೧೫ ವರ್ಷಗಳೊಳಗಾಗಿ ಈ ಸಂಸ್ಥಾನದ ಕೆರೆಗಳೆಲ್ಲಾ ಒಳ್ಳೇ ಸ್ಥಿತಿಗೆ ಬರುವವು. ನಾವು ಪೂರ್ವದಲ್ಲಿಯೇ ಹೇಳಿದಂತೆ ಸಂಸ್ಥಾನದ ತರೀ ವ್ಯವಸಾಯವ ೧೦೦ರಲ್ಲಿ ೧೫ರಷ್ಟು ಇರುವದು. ಇದನ್ನೆಲ್ಲಾ ಆಬಾದು ಮಾಡಿದಾಗ್ಯೂ ಕ್ಷಾಮ ಬರದಹಾಗೆ ಮಾಡುವದು ಅಸಾಧ್ಯ. ರೇಲ್ವೆಯನ್ನು ವೃದ್ಧಿ ಮಾಡುವದರಿಂದ ಸುಭಿಕ್ಷವಾದ ದೇಶಗಳಿಂದ ಧಾನ್ಯಗಳನ್ನು ತಂದುಕೊಳ್ಳಬಹುದು. ಬೆಂಗಳೂರಿಂದ ಹರಿಹರಕ್ಕೆ ರೇಲ್ವೆ ಹಾಕಿದರೆ ಆಮಾರ್ಗದಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಿ ೨೦೦ ಮೈಲು ಉದ್ದ ೫೦ ಮೈಲು ಅಗಲ ಈ ವಿಸ್ತೀರ್ಣದಲ್ಲಿರುವ ಸಮಸ್ತ ಜನಗಳಿಗೂ ಬಹಳ ಉಪಕಾರವಾಗಿರುವದು. ೭೬-೭೮ನೇ ಇಸವಿ ಕ್ಷಾಮದಲ್ಲಿ ಈ ಭಾಗದ ಜನರು ಬಹಳವಾಗಿ ನೊಂದುಹೋದರು. ನಮ್ಮ ಸಂಸ್ಥಾನದಿಂದ ೧,೬೦,೦೦೦೦೦ ರೂಪಾಯಿ ಖರ್ಚಾದಾಗ್ಯೂ ಕ್ಷಾಮದಲ್ಲಿ ೧೦ ಲಕ್ಷ ಜನರು ಸತ್ತರು. ಈ ಸಂವತ್ಸರದಲ್ಲಿ ಮಳೆಗಳು ಬರದೆ ಕ್ಷಾಮವು ಬಂದ ಪಕ್ಷದಲ್ಲಿ ಪಬ್ಲಿಕ್‌ವರ್ಕ್ಸ್ ಕಾಮಗಾರಿಗಳೂ ರಿಲೀಫ್ ವರ್ಕ್ಸ್ ಕಾಮಗಾರಿಗಳೂ ಪ್ರಾರಂಭಿಸ ಬೇಕಾಗುವದು. ಎಲ್ಲಾ ಗ್ರಾಮಗಳಲ್ಲಿಯೂ ಕೇಡುಗಳುಂಟಾಗದಂತೆ ತಕ್ಕ ಏರ್ಪಾಡುಗಳನ್ನು ಮಾಡುವಂತೆ ಆಲೋಚಿಸಿಯಿದೆ. ಕಳೆದ ಸಂವತ್ಸರದ ಮೀಟಿಂಗ್‌ನಲ್ಲಿ ಕೆಲವರು ಪ್ರಜಾ ಪ್ರತಿನಿಧಿಗಳು ಸರಕಾರದ ಬಂಜರು ಭೂಮಿಗಳ ಹುಲ್ಲುಬನ್ನಿಯನ್ನು ಹರಾಜು ಹಾಕುವದರಿಂದ ಕೇವಲ ಹಿಂಸೆ ಯಾಗುತ್ತದೆ ಎಂತಲೂ ಈ ಹಕ್ಕನ್ನು ಕೊಂಡುಕೊಂಡವನು ಗ್ರಾಮಸ್ಥರಿಗೆ ಸುಲಿಗೆಮುಂತಾದ ಹಿಂಸೆಗಳನ್ನು ಮಾಡುವದಕ್ಕೆ ಅಸ್ಪದ ವಾಗುತ್ತದೆ ಎಂಬ ದಾಗಿಯೂ ಇದಕ್ಕೆ ಬದಲಾಗಿ ಭೂಮಿಯ ಕಂದಾಯದಮೇಲೆ ರೂಪಾಯಿಗೆ ಕಾಲಾಣೆಯ ಕಂದಾಯವನ್ನೂ ಪ್ರತಿಯೊಂದು ದನಕ್ಕೂ ಅರ್ಧಾಣೆಯ ಕಂದಾಯವನ್ನೂ ಹಾಕುವದರಿಂದ ಈ ತೊಂದರೆಯು ಪರಿಹಾರವಾಗುವದೆಂಬದಾಗಿಯೂ ಸೂಚಿಸಿದರು. ಈ ಏರ್ಪಾಡುಗಳೂ ನಿರಾಕ್ಷೇಪಕವಾಗಿರುವದಿಲ್ಲ. ಯಾಕೆಂದರೆ; ಇದೂ ಒಂದು ಹೊಸ ಕಂದಾಯದಂತೆ ಎಣಿಸಲ್ಪಡುವದು. ದನಗಳ ಮೇಲೆ ಕಂದಾಯ ಹಾಕುವದರಿಂದ ಶ್ಯಾನುಭೋಗರಿಗೆ ಒಂದು ಹೊಸ ಅಧಿಕಾರವನ್ನು ಕೊಟ್ಟಹಾಗಾಗುವದು ಮತ್ತು ಅನೇಕ ಮೋಸಗಳಿಗೆ ಆಸ್ಪದವಾಗುವದು. ಕಳೆದ ಎರಡು ವರ್ಷಗಳಲ್ಲಿಯೂ ಹುಲ್ಲಿನಿಂದ ಎಷ್ಟು ಉತ್ಪತ್ತಿಯಾಯಿತೋ ಅದನ್ನು ಗೊತ್ತುಮಾಡಿಕೊಂಡು ಸರಾಸರಿ ಆದ ಮೊಬಲಗಿಗೆ ಆಯಾ ಗ್ರಾಮಸ್ಥರಿಗೇ ಆ ಹುಲ್ಲಿನ ಹಕ್ಕನ್ನು ಕೊಡುವದು ಉತ್ತಮವೆಂದು ಯೋಚಿಸಿಯಿದೆ. ಈ ವಿಷಯದಲ್ಲಿ ತಮ್ಮ ಇರಾದೆಯನ್ನು ತಿಳಿಸಬೇಕು.

ಇನಾಮು ಗ್ರಾಮಗಳಲ್ಲಿ ತರೀ ಜಮೀನಿನಮೇಲೆ ಇರ್ರಿಗೇಷನ್‌ಸೆಸ್ ವಸೂಲ್ ಮಾಡತಕ್ಕದ್ದು ಸರಿಯಾದ್ದಲ್ಲವೆಂದು ಹೋದಸಾರಿ ಪ್ರಸ್ತಾಪ ಬಂದಿತ್ತಷ್ಟೆ. ಈಗ ಅದನ್ನು

ಅಣ್ಣ ತನ್ನವನಾದರೆ ಅತ್ತಿಗೆ ತನ್ನವಳೆ?

ತೆಗೆದುಹಾಕುವದು ಯುಕ್ತವೆಂದು ಸರಕಾರದವರಿಗೆ ತೋರಿಯಿದೆ. ಚಿಲ್ಲರೇ ಇನಾಮುಗಳಲ್ಲಿ ಜಾಸ್ತೀ ಜಮೀನು ಇರುವದುಂಟು. ಇದನ್ನು ಫೈಸಲು ಮಾಡತಕ್ಕ ರೀತಿಯನ್ನು ಆಲೋಚಿಸಿ ಮಾಡಿರುವ ಏರ್ಪಾಡು ಏನಂದರೆ:—

ಸನ್ನದು ಮೊದಲಾದ ದಾಖಿಲೆಗಳಲ್ಲಿ ಇನಾಮಿನ ವಿಸ್ತೀರ್ಣವು ಗೊತ್ತಾದರೆ ಈ ವಿಸ್ತೀರ್ಣಕ್ಕೆ ಸೇಕಡ ೧೦ರ ಮೇರೆ ಜಾಸ್ತೀಸೇರಿಸಿ ಒಟ್ಟಾದ ವಿಸ್ತೀರ್ಣವನ್ನು ಇನಾಮಾಗಿ ಭಾಗಿಸತಕ್ಕದ್ದು ; ಇದಕ್ಕಿಂತಲೂ ಹೆಚ್ಚಾದ ಭೂಮಿ ಇದ್ದಪಕ್ಷದಲ್ಲಿ ಇಂಥಾ ಜಾಸ್ತೀಜಮೀನಿಗೆ ಪೂರಾಕಂದಾಯ ಹಾಕತಕ್ಕದ್ದು. ಅನೇಕ ಇನಾಮುದಾರರು ಅನುಭವ ಬಂದು ವಿನಹಾ ಮತ್ತಾವ ವಿಧವಾದ ದಸ್ತೈವಜುಗಳನ್ನೂ ಪಡೆದು ಇರುವದಿಲ್ಲ. ಅವರ ಇನಾಮುಗಳ ಸರಹದ್ದುಗಳು ಗೊತ್ತಾಗುವದಿಲ್ಲ. ಇಂಥಾ ಸಂದರ್ಭಗಳಲ್ಲಿ ಪ್ರತಿಯೊಂದು ಇನಾಮಿಗೂ ಸರ್ವೆಯವರು ಮಾಡಿ ಇರತಕ್ಕ ಅಂದಾಜು ಮೊಬಲಗು ೫೧ ರೂಪಾಯಿಗಿಂತ ಹೆಚ್ಚಾಗದೆ ಇದ್ದರೆ ಇಂಥಾ ಇನಾಮುಗಳು ಪೂರಾ ಖಾಯಂ ಮಾಡಲ್ಪಡತಕ್ಕದ್ದು. ಹಾಗೆ ಹೆಚ್ಚಾದ ಪಕ್ಷದಲ್ಲಿ ಹೆಚ್ಚಾದ ಮೊಬಲಗಿಗೆ ಸಂಬಂಧಪಟ್ಟ ವಿಸ್ತೀರ್ಣದಲ್ಲಿ ಅರ್ಧ ಭಾಗ ಖಾಯಂ ಆಗಿ ಇಟ್ಟು ಬಾಕಿ ಅರ್ಧಕ್ಕೆ ಪೂರಾಕಂದಾಯ ಹಾಕತಕ್ಕದ್ದು. ಯಾವಸಂದರ್ಭದಲ್ಲಿಯೂ ಸರ್ವೆಯವರ ವ್ಯಾಲ್ಯುಯೇಷರ್ನಲ್ಲಿ ಮೂರರಷ್ಟಕ್ಕಿಂತ ಹೆಚ್ಚಾಗಿ ಇನಾಂ ಖಾಯಂ ಮಾಡಕೂಡದು. ಈ ಏರ್ಪಾಡು ಜಮೀನುರೂಪವಾಗಿರುವ ಎಲ್ಲಾ ಇನಾಮುಗಳಿಗೂ ಅನ್ವಯಿಸುತ್ತದೆ. ಆದರೆ ಮಲ್ನಾಡಿನಲ್ಲಿ ಇರುವಹಾಗೆ ಇಂಥಾ ವರ್ಗದಲ್ಲಿ ಇಷ್ಟು ಮೊಬಲಗು ಇನಾಮು ಎಂದು ಕಂಡಿದ್ದರೆ ಈ ರೂಲ್ಸುಗಳು ಅವಕ್ಕೆ ಅನ್ವಯಿಸುವದಿಲ್ಲ. ಇನಾಮನ್ನು ಕೊಟ್ಟಮೇಲೆ ಅಂಥಾ ಇನಾಮು ಭೂಮಿಯಲ್ಲಿ ಬಾಗಾಯತು ಸಾಗುವಳಿ ಆಗಿ ಇದ್ದಪಕ್ಷದಲ್ಲಿ ಅಂಥಾ ಇನಾಮಿಗೆ ಬಾಗಾಯತು ದರಕ್ಕೆ ಬದಲಾಗಿ ತರೀ ದರವನ್ನೇ ದಾಖಲುಮಾಡಬೇಕೆಂದು ಗೊತ್ತಾಗಿ ಇದೆ.

ಲ್ಯಾಂಡು ರೆವಿನ್ಯು ಮತ್ತು ಲೋಕಲ್ ಫಂಡು ರೇಗುಲೇಷರ್ಗಳು ಕಳೆದ ವರ್ಷದ ಸಭೆಯಲ್ಲಿಯೇ ಚರ್ಚಿಸಲ್ಪಟ್ಟವಷ್ಟೆ. ಇವುಗಳು ಇನ್ನೂ ಮಂಜೂರಾಗಿ ಇಲ್ಲ. ಇವುಗಳ ವಿಷಯವಾಗಿ ಎಲ್ಲಾ ರೆವಿನ್ಯು ಮತ್ತು ಜುಡಿಷಲ್ ಅಧಿಕಾರಿಗಳ ಅಭಿಪ್ರಾಯವನ್ನು ತರಿಸಿಕೊಂಡು, ಇವುಗಳನ್ನೂ ಈರೆಗ್ಯುಲೇಷರ್ಗಳನ್ನೂ ಸಮರ್ಥರೂ ಅನುಭವಶಾಲಿಗಳೂ ಆದ ಕಮಿಟೀ ಅಧಿಕಾರಿಗಳ ಬಳಿಗೆ ಅಭಿಪ್ರಾಯದ ಬಗ್ಗೆ ಕಳುಹಿಸಿ ಇದೆ. ಲ್ಯಾಂಡು ರೆವಿನ್ಯು ಕೋಡಿನ ಕಮಿಟಿಯವರು ಎರಡು ಅಂಶಗಳಲ್ಲಿ ಹೊರ್ತು ಇತರ ವಿಷಯಗಳಲ್ಲಿ ವಿಶೇಷವಾಗಿ ಬದಲಾವಣೆಗಳನ್ನು ಮಾಡಿಯಿಲ್ಲ. ಆ ಎರಡು ಅಂಶಗಳಲ್ಲಿ ಮೊದಲನೇದು ಇನಾಮುದಾರರಿಗೂ ರೈತರಿಗೂ ಸಂಬಂಧಪಟ್ಟ ಮಸೂದೇಯ ೩ನೇ ಅಧ್ಯಾಯದ ಇನಾಮುದಾರರ ಮತ್ತು ರೈತರ ಪರಸ್ಪರ ಸಂಬಂಧವನ್ನು ಕುರಿತದ್ದು. ಕಮಿಟಿಯವರು ಈ ವಿಷಯದಲ್ಲಿ ಹೇಳುವದು:

ಏನೆಂದರೆ: ೧೦ ಅಥವಾ ಹೆಚ್ಚಾದ ವರ್ಷಗಳ ಸ್ವಾಧೀನಮಾತ್ರದಿಂದಲೇ ಅನುಭವದ ಷಿಕಮಿದಾರಿಯ ಹಕ್ಕು ಉಂಟಾಗಲಾರದು; ಧಾನ್ಯಮೂಲಕವಾಗಲೀ ನಗದಾಗಲೀ ಗುತ್ತಿಗೆಕೊಡತಕ್ಕ ಎಲ್ಲಾ ಕದೀಮ್ ಷಿಕಮಿದಾರರ ಹಕ್ಕಿಗೆ ಯಾವತೊಂದರೆಯೂ ಇರಕೂಡದು. ಕಮಿಟಿಯವರ ೨ನೇ ಏರ್ಪಾಡು ಏನಂದರೆ: ಮೇಲ್ಕಂಡ ರೆಗ್ಯುಲೇಷನಿನ ೧೨೪ನೇ ಸೆಕ್ಷನ್ ಬಿ. ಸಿ. ಗುರ್ತುಗಳುಳ್ಳ ವಿಷಯಗಳನ್ನು ತೆಗೆದುಹಾಕಬೇಕು. ೧೨೩ನೇ ಸೆಕ್ಷನ್ನಲ್ಲಿ ಈಗ ಜಾರಿಯಲ್ಲಿರುವ ಸೆಟಲ್‌ಮೆಂಟು ವಾಯಿದೆಯು ಪೂರಯಿಸಿದ ಮೇಲೆ ಹೊಸದಾಗಿ ಸೆಟಲ್‌ಮೆಂಟ್ ಮಾಡುವದರಲ್ಲಿ ಸ್ವಂತ ದ್ರವ್ಯದಿಂದಾಗಲೀ ಸ್ವಂತ ಸಾಧನಗಳಿಂದಾಗಲೀ ಮಾಡಿದ ಅಭಿವೃದ್ಧಿಯ ಮೇಲೆ ಹೆಚ್ಚುಕಂದಾಯವನ್ನು ಹಾಕದೆ ಭೂಗುಣ, ಸ್ಥಳವಿಶೇಷ ಜಿನಸೀ ಧಾರಣೆ, ಆಮದುರಫ್ತಿನ ಸೌಲಭ್ಯ ಮುಂತಾದವುಗಳನ್ನು ಯೋಚಿಸಿ ಹೊಸಕಂದಾಯವನ್ನು ಹಾಕಬೇಕು. ಇವುಗಳಲ್ಲಿ ೧ನೇದು ಸರಕಾರದ ಖರ್ಚಿನಿಂದ ಮಾಡಿದ ಕಾಮಗಾರಿಯಿಂದ ಜಮೀನು ಅಭಿವೃದ್ಧಿ ಆಗುವದು ; ೨ನೇದು ಸ್ವಂತವಾದ ಲಾಗವಡಿನಿಂದ ಸ್ವಾಭಾವಿಕವಾದ ಅನುಕೂಲ್ಯಗಳನ್ನು ಉಪಯೋಗಿಸಿಕೊಂಡು ಜಮೀನನ್ನು ಅಭಿವೃದ್ಧಿಮಾಡುವದು ; ೩ನೇದು ವ್ಯವಸಾಯದಿಂದ ಅಭಿವೃದ್ಧಿ ಮಾಡುವದು. ಈ ಮೂರು ವಿಷಯಗಳಲ್ಲಿಯೂ ಹೊಸದಾಗಿ ಕಂದಾಯವನ್ನು ಹಾಕುವದಕ್ಕೆ ಇದರಿಂದ ಯಾವ ಪ್ರತಿ ಬಂಧಕವೂ ಇರಕೂಡದು.

ಇದರಲ್ಲಿ ೧ನೇದು ನಿರಾಕ್ಷೇಪಕವಾದದ್ದು. ಎರಡನೇದು ಸರಿಯಾದ್ದಲ್ಲ. ಯಾಕಂದರೆ, ಭೂಮಿಯ ಕೆಳಗೆಸ್ವಭಾವಸಿದ್ಧವಾಗಿ ನೀರು ಇರುವದು. ಈ ನೀರನ್ನು ಉಪಯೋಗಿಸಿ ಕೊಳ್ಳಬೇಕಾದರೆ ರೈತರು ದ್ರವ್ಯವನ್ನಾದರೂ ಖರ್ಚು ಮಾಡಬೇಕು; ಅಥವಾ ತಾವಾದರೂ ಕಷ್ಟಪಟ್ಟು ಅಗೆಯಬೇಕು. ರೈತನು ವಿಶೇಷವಾಗಿ ಶ್ರಮಪಟ್ಟು ದ್ರವ್ಯವನ್ನು ವೆಚ್ಚಮಾಡಿ ತೋಡಿಸಿದ ಬಾವೀನೀರಿಗೆ ಕಂದಾಯವನ್ನು ವಸೂಲು ಮಾಡತಕ್ಕದ್ದು ಶುದ್ಧ ಅಸಂಗತವು. ೩ನೇದರಲ್ಲಿ ವ್ಯವಸಾಯದ ಅಭಿವೃದ್ಧಿಯ ಮೇಲೆ ಹೊಸ ಕಂದಾಯ ಹಾಕಬೇಕೆಂದು ನಮೂದಿದೆ. ಇದೂ ನಿರಾಕ್ಷೇಪಕವಾಗಿಯಿಲ್ಲ. ಆದಕಾರಣ ಇದನ್ನೂ ತೆಗೆದುಹಾಕುವದು ಉತ್ತಮ. ಮೇಲೆ ಹೇಳಿದಹಾಗೆ ಹೊಸದಾಗಿ ಸೆಟಲ್‌ಮೆಂಟ್ ಮಾಡತಕ್ಕ ಕಾಲದಲ್ಲಿ ಜಮೀನು ಇರುವಸ್ಥಳ, ಆಮದರಫ್ತು, ಭೂಗುಣ ಮೊದಲಾದವುಗಳನ್ನೆಲ್ಲಾ ಯೋಚಿಸಿ ಕಂದಾಯ ಹಾಕುವದರಿಂದ ರೈತರಿಗೆ ಬಹಳ ಉಪಕಾರವಾಗುತ್ತದೆ. ಇದರಿಂದ ಪುನಃ ಸೆಟಲ್‌ಮೆಂಟ್ ಮತ್ತು ಭೂ ತರಗತಿಗಳನ್ನು ವಿಂಗಡಿಸತಕ್ಕದ್ದು ಅವಶ್ಯಕವಾಗಿ ಇರುವದಿಲ್ಲ. ಈ ವಿಷಯಗಳಲ್ಲಿ ನಿಮ್ಮ ಅಭಿಪ್ರಾಯಗಳನ್ನು ತಿಳಿಯಬೇಕಾಗಿಯಿದೆ.

ಅಧಿಕಮಾಸ ಬರಗಾಲದಲ್ಲಿ ಬಂದ ಹಾಗೆ.

ವೈದ್ಯ ಮತ್ತು ವಿದ್ಯಾಭ್ಯಾಸದ ಇಲಾಖೆಗಳ ಶಿಬ್ಬಂದಿಯ ವಿಷಯದಲ್ಲಿ ಆಗಿರತಕ್ಕ ಏರ್ಪಾಡುಗಳು ನಿಮಗೆ ತಿಳಿದೇಯಿದೆ. ನೇಟಿವ ಜನರಿಗೆ ಅನುಕೂಲವಾಗಿ ಇರುವದಕ್ಕೋಸ್ಕರ ವೈದ್ಯದ ತಾಪೇದಾರೀ ಉದ್ಯೋಗಸ್ಥರಲ್ಲಿ ಯೂರೋಪಿಯನರಿಗೆ ಬದಲಾಗಿ ನೇಟಿವಗಳೇ ನೇಮಿಸಲ್ಪಡುವರು. ವಿದ್ಯಾಭ್ಯಾಸದ ಇಲಾಖೆಗಳಲ್ಲಿನ ನೌಕರರಿಗೆ ಜಾಜಬಿ ಸಂಬಳಗಳು ಇರುವದರಿಂದ ಅವರಿಗೆ ಉತ್ಸಾಹವು ಇರುವದಿಲ್ಲವೆಂದು ಎಣಿಸಿ ಬಡತೀಗ್ರೇಡುಗಳನ್ನು ಏರ್ಪಾಡುಮಾಡಿ ಇದೆ. ಇದರಿಂದ ಆ ಯಿಲಾಖೆಯವರೆಲ್ಲಾ ಬಹಳ ಉತ್ಸಾಹದಿಂದ ಕೆಲಸ ಮಾಡುವರು.

೧೮೮೩-೮೪ನೇ ವರ್ಷದಲ್ಲಿ ಕಲ್ಕತ್ತಾದಲ್ಲಿ ನಡೆದ ಎಗ್ಸಿಬಿಷನಿಗೆ ಈ ಸಂಸ್ಥಾನದಿಂದಲೂ ಕೆಲವು ವಸ್ತುಗಳನ್ನು ಕಳುಹಿಸಿಯಿತ್ತು. ಇನ್ನೂ ಅನೇಕ ಶ್ಲಾಘ್ಯವಾದ ವಸ್ತುಗಳನ್ನು ಕಳುಹಿಸುವದಕ್ಕೆ ಸಾವಕಾಶ ಇಲ್ಲದೆ ಹೋಯಿತು. ಈ ಎಗ್ಸಿಬಿಷನಿಗಾಗಿ ವಸ್ತುಗಳನ್ನು ಕಳುಹಿಸುವದಕ್ಕೆ ಒಂದು ಕಮಿಟಿಯು ಏರ್ಪಾಡಾಗಿ ಇತ್ತು. ಅದರ ರಿಪೋರ್ಟು ಇನ್ನೂ ಬಂದುಇಲ್ಲ. ಅದು ಬಂದಕೂಡಲೆ ತಮ್ಮ ತಿಳುವಳಿಕೆಗಾಗಿ ಕಳುಹಿಸಿಕೊಡುತ್ತೆ.

ಮೈಸೂರಿಂದ ಕಲ್ಕತ್ತಾದಲ್ಲಿ ನಡೆದ ಎಗ್ಸಿಬಿಷನಿಗೆ ಕಳುಹಿಸಿದ ವಸ್ತುಗಳು ಬಹಳ ಸ್ವಲ್ಪವಾದಾಗ್ಯೂ ಅವುಗಳಿಗಾಗಿ ಬಂದು ಇರತಕ್ಕ ಇನಾಮುಗಳು ಬಹಳ ತೃಪ್ತಿಕರವಾಗಿ ಇವೆ. ಈ ಇನಾಮುಗಳು ಯಾವವೆಂದರೆ—ಎರಡು ಚಿನ್ನದ ಬಿರುದುಗಳು ಒಂಭತ್ತು ಉತ್ತಮವಾದ ಸರಟಿಫಿಕೇಟುಗಳು ಮತ್ತು ಬೆಳ್ಳಿಯ ಬಿರುದುಗಳು, ಹನ್ನೊಂದು ಸೆಕೆಂಡ್ ಕ್ಲಾಸು ಸರಟಿಫಿಕೇಟುಗಳು ಮತ್ತು ಹಿತ್ತಾಳೇ ಬಿರುದುಗಳು, ಎಂಟು ಥರ್ಡ್ ಕ್ಲಾಸು ಸರಟಿಫಿಕೇಟುಗಳು. ಇಲ್ಲಿಂದ ಕಳುಹಿಸಿದ ವಸ್ತುಗಳಲ್ಲಿ ಬಹಳ ಶ್ಲಾಘಿಸಲ್ಪಟ್ಟವುಗಳು ಯಾವವೆಂದರೆ—ದಂತದ ಕೆತ್ತನೇ ಕೆಲಸ, ಗಂಧದ ಚಿತ್ರಕೆಲಸ, ಧಾನ್ಯವಿಶೇಷಗಳು, ರೇಷ್ಮೇ ಬಟ್ಟೆಗಳು, ಪರಿಮಳ ಮತ್ತು ಔಷಧದ್ರವ್ಯಗಳು, ಜೇನುತುಪ್ಪ, ಕಾಫಿ ಮೊದಲಾದ ಪದಾರ್ಥಗಳು, ರಂಗಸ್ವಾಮಿ ಪಿಳ್ಳೆಯವರಿಂದ ತಯಾರಾದ ತಸ್ವೀರುಗಳು, ಎಂಜನಿಯರಿಂಗ್ ಸ್ಕೂಲ್ ವಿದ್ಯಾರ್ಥಿಗಳು ಬರೆದ ನಕ್ಷೆಗಳು. ಅಪ್ಪಾವುಸೆಟ್ಟರು ಕಳುಹಿಸಿಕೊಟ್ಟ ರೇಲ್ವೇಗಾಡಿಯ ನಮೂನೆಗಳು ಅತ್ಯಂತ ಶ್ಲಾಘನೀಯವಾಗಿದ್ದ ಕಾರಣ ಇತರ ರೇಲ್ವೆಯವರೂ ಈ ಕಂಪೆನಿಯವರಿಂದ ಗಾಡಿಗಳನ್ನು ಅಪೇಕ್ಷಿಸುತ್ತಾ ಇದ್ದಾರೆ. ಇದು ಅತ್ಯಂತ ತೃಪ್ತಿಕರವಾಗಿ ಇದೆ. ಬೊಂಬಾಯಿ ಮತ್ತು ಮದರಾಸು ಪಟ್ಟಣಗಳಲ್ಲಿ ಎಗ್ಸಿಬಿಷನ್ ಆಗುವವು. ಇದಕ್ಕಾಗಿ ಈ ದೇಶದಲ್ಲಾಗುವ ನಾನಾವಿಧವಾದ ವಸ್ತುಗಳನ್ನು ಬೆಂಗಳೂರಿನಲ್ಲಿ ಕೂಡಿಹಾಕುತ್ತಾ ಇದೆ.

ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹದ್ದುರವರು ಪ್ರತಿವರ್ಷದಲ್ಲಿಯೂ ಸೇರುವ ಈ ಸಭೆಯು ಅಭಿವೃದ್ಧಿಯಾಗುವ ವಿಷಯದಲ್ಲಿ ಬಹಳ ಆಸಕ್ತರಾಗಿ ಇದ್ದಾರೆ. ಈ ಸಭೆಯು ಪ್ರತಿವರ್ಷದಲ್ಲಿಯೂ ವೃದ್ಧಿಯಾಗಿ ಸಕಲಜನರೂ ಕ್ಷೇಮವನ್ನು ಹೊಂದುವದ್ಯೆ

ಅವರಿಗೆ ಮುಖ್ಯವಾದ ಅಭಿಲಾಷೆಯಾಗಿ ಇರುತ್ತದೆ. ತಾವು ಸಮಸ್ತರೂ ಸರಕಾರದ ಆಡಳಿತಗಳನ್ನೆಲ್ಲಾ ಚನ್ನಾಗಿ ತಿಳಿದುಕೊಂಡು ಅವುಗಳಲ್ಲಿ ಯಾವವಿಧವಾದ ಲೋಪಗಳು ಇದ್ದಾಗ್ಯೂ ಅವುಗಳನ್ನು ಸರಕಾರಕ್ಕೆ ತಿಳಿಸುತ್ತಾ ಬರಬೇಕು; ಸಕಲಪ್ರಜೆಗಳ ಸ್ಥಿತಿಯನ್ನೂ ಅಭಿವೃದ್ಧಿಪಡಿಸುವದಕ್ಕೋಸ್ಕರ ತಕ್ಕ ಯೋಚನೆಗಳನ್ನು ಕೂಡ ಹೇಳಬೇಕು. ಹೀಗೆ ಮಾಡುವವರಿಂದ ರಾಜ್ಯಪರಿಪಾಲನೆಯು ಚನ್ನಾಗಿ ನಡೆಯುವದು. ಈ ಪ್ರಕಾರ ಪ್ರಜಾಪಾಲನೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚೆಮಾಡುವದರಲ್ಲಿಯೂ ಸರಕಾರದವರ ಉದ್ದೇಶಗಳನ್ನು ತಿಳಿದುಕೊಳ್ಳುವದರಲ್ಲಿಯೂ ತಮಗಿರತಕ್ಕ ಆದರಣೆಯನ್ನು ಕಂಡು ಸರಕಾರದವರು ಅತ್ಯಂತ ಸಂತೋಷಭರಿತರಾಗಿ ಇದ್ದಾರೆ. ತಾವು ಈ ಸಭೆಗೆ ದಯಮಾಡಿಸಿದ್ದದ್ದಕ್ಕಾಗಿ ನಾವೆಲ್ಲರೂ ಕೃತಜ್ಞರಾಗಿ ಇದ್ದೇವೆ.

೩. ಆ ರೋ ಗ್ಯ ವಿ ಚಾ ರ .

(ಆ ಹಾ ರ .)

ಪ್ರಾಣಿಗಳ ಶರೀರ ಮತ್ತು ಮನಸ್ಸಿನ ವ್ಯಾಪಾರಗಳಿಗೆಲ್ಲಾ ಆಧಾರ ಭೂತವಾದದ್ದು ಆಹಾರವು. ಪ್ರತಿನಿಮಿಷದಲ್ಲಿಯೂ, ನಮ್ಮ ಶರೀರದ ಪದಾರ್ಥಗಳಲ್ಲಿ ಕೆಲವು ಕೆಟ್ಟು ಹೋಗಿ, ಜಲಮಲಗಳೊಡನೆ ಸ್ವಲ್ಪವೂ, ನಮ್ಮ ನಿಶ್ಶ್ವಾಸದ ಗಾಳಿಯೊಡನೆ ಸ್ವಲ್ಪವೂ, ರೋಮಕೂಪಗಳಿಂದ ಸ್ವಲ್ಪವೂ ಈಚೆಗೆ ಹೊರಡುವದು. ಈ ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವದಕ್ಕೆ ಒಂದು ಉಪಾಯ ಉಂಟು. ಒಬ್ಬ ಮನುಷ್ಯನು ಭೋಜನವಾದ ಕೂಡಲೆ ಒಂದು ತಕ್ಕಡಿಯಲ್ಲಿ ಕೂತುಕೊಂಡು ತಿರುಗಿ ಭೋಜನಕಾಲ ಬರುವವರಿಗೂ ಅಲ್ಲಿಯೇ ಇದ್ದರೆ ಈತನ ತೂಕವು ಪ್ರತಿ ನಿಮಿಷದಲ್ಲಿಯೂ ಸ್ವಲ್ಪಸ್ವಲ್ಪವಾಗಿ ಕಡಿಮೆಯಾಗುತ್ತಾ ಕಡೆಗೆ ಬಹಳ ಕಡಿಮೆಯಾಗುವದು. ಹೀಗೆ ಶರೀರದಿಂದ ಈಚೆಗೆ ಹೊರಟು ನಷ್ಟವಾದ ಪದಾರ್ಥಗಳನ್ನೆಲ್ಲಾ ಪುನಃ ಸೇರಿಸುವದಕ್ಕೋಸ್ಕರ ನಾವು ಆಹಾರವನ್ನು ತೆಗೆದುಕೊಳ್ಳುವೆವು. ಅನಂತರದಲ್ಲಿ ತಕ್ಕಡಿಯ ಮೇಲೆ ಕೂತರೆ ತೂಕವು ಪೂರ್ವದಷ್ಟೇ ಇರುವದು.

ಆರೋಗ್ಯವಾಗಿ ಇರಬೇಕಾದರೆ ನಮ್ಮ ಶರೀರವು ಯಾವಯಾವ ಪದಾರ್ಥಗಳಿಂದ ಆಗಿ ಇದೆಯೋ ಅಂಥಾವುಗಳೆಲ್ಲಾ ನಮ್ಮ ಆಹಾರದಲ್ಲಿ ಸೇರಿ ಇರಬೇಕು. ನಾವು ಭುಜಿ

ಅಷ್ಟು ನೆಟ್ಟಗೆ ಆಲದ ಮರವಾದರೆ ನೇಣು ಹಾಕಿಕೊಳ್ಳಬಹುದೆ ?

ಸುವ ಪದಾರ್ಥಗಳು ಸುಲಭವಾಗಿ ಜೀರ್ಣಿಸುವಹಾಗೆ ಪಾಕ ಮುಂತಾದವುಗಳಿಂದ ಶುದ್ಧಿ ಯಾಗಬೇಕು. ಭುಜಿಸುವವರು ತಾವು ಇರತಕ್ಕ ದೇಶ ಕಾಲಸ್ಥಿತಿಗೂ,ಉದ್ಯೋಗಕ್ಕೂ, ದೇಹ ಧರ್ಮಾದಿಗಳಿಗೂ ಅನುಸಾರವಾಗಿ ಇರತಕ್ಕಷ್ಟು ಆಹಾರವನ್ನು ಮಾತ್ರ ತೆಗೆದು ಕೊಳ್ಳಬೇಕು. ಅಂದರೆ : ಕಷ್ಟ ಕೆಲಸಗಳನ್ನು ಮಾಡುತ್ತಾ ದೇಹದಾರ್ಢ್ಯವುಳ್ಳವರು ನಿರು ದ್ಯೋಗಿಗಳಾಗಿ ಬಲಹೀನರಾಗಿ ಇರುವವರಿಗಿಂತ ಹೆಚ್ಚಾಗಿ ಭುಜಿಸಬಹುದು, ಅಂದರೆ ದೇಹಶ್ರಮವನ್ನು ಪಡುತ್ತಾ ದಾರ್ಢ್ಯವಿರುವವರು ನಿರುದ್ಯೋಗಿಗಳೂ ಬಲಹೀನರೂ ಆಗಿ ಇರುವವರಿಗಿಂತ ಹೆಚ್ಚಾಗಿ ಭುಜಿಸಬಹುದು. ಅನುಭವಶಾಲಿಗಳು ಯಾವವಸ್ತುಗಳು ಸುಲಭವಾಗಿ ಜೀರ್ಣಕ್ಕೆ ಬರುವವೆಂದು ನಿಷ್ಕರ್ಷೆಮಾಡಿ ಇದ್ದಾರೋ ಅಂಥಾ ವಸ್ತುಗಳನ್ನೇ ತಂದು ಶರೀರದ ದ್ರವ್ಯಗಳೊಡನೆ ಸುಲಭವಾಗಿ ಸೇರಿಕೊಳ್ಳುವದಕ್ಕೆ ಅನುಕೂಲವಾಗಿ ಅವು ಗಳನ್ನು ೀಯಿಸಿ ಭುಜಿಸಬೇಕು. ಪ್ರಾಣಿಗಳ ಶರೀರವು ಯಾವಯಾವ ದ್ರವ್ಯಗಳ ಸಂಯೋ ಗದಿಂದ ಆಗಿ ಇರುವದಂದರೆ: ಆಕ್ಸಿಜನ್ ಎಂಬ ಪ್ರಾಣಾಧಾರಕವಾಯು, ಹೈಡ್ರೋಜನ್ ಎಂಬ ಜಲಧಾತು, ಪೆಟ್ಲುಪ್ಪಿನಲ್ಲಿರುವ ನೈಟ್ರೋಜನ್ ಧಾತು, ಅಂಗಾರ, ಪೊಟಾಷ್‌ನಲ್ಲಿರುವ ಪೊಟಾಸಿಯಂ ಧಾತು, ಉಪ್ಪಿನಲ್ಲಿರುವ ಸೋಡಿಯಂ ಮತ್ತು ಕ್ಲೋರೀನ್ ಧಾತುಗಳು ಸುಣ್ಣದಲ್ಲಿರುವ ಕಾಲ್ಸಿಯಂ ಧಾತು, ಭೇದಿಯ ಉಪ್ಪಿನಲ್ಲಿರುವ ಮ್ಯಾಗ್ನೀಸಿಯಂ ಧಾತು ಕಬ್ಬಿಣ, ಕೆಂಪು ದೀಪದ ಕಡ್ಡಿಯಕೊನೆಗೆ ಹತ್ತಿಸಿರುವ ರಂಜಕ, ಗಂಧಕ.

ಆಕ್ಸಿಜನ್ ಮತ್ತು ಹೈಡ್ರೋಜನ್ ಅಂಶಗಳು ಸಮಸ್ತ ಭೋಜ್ಯ ವಸ್ತುಗಳಲ್ಲಿಯೂ ನೀರಿನಲ್ಲಿಯೂ ಇರುವವು. ಪ್ರಾಣಿಗಳ ನರಗಳಿಗೂ ಖಂಡ ಮೂಳೆಗಳೇ ಮೊದಲಾದ ಶರೀರದ ಸಮಸ್ತ ಭಾಗಗಳಿಗೂ ಆಧಾರ ಭೂತವಾದದ್ದು ನೈಟ್ರೋಜನ್. ಆಹಾರವು ಜೀರ್ಣ ಕ್ಕೆ ಬರುವಂತೆ ಮಾಡತಕ್ಕ ಜಲರೂಪವಾದ ಜೊಲ್ಲು, ಗ್ಯಾಸ್ಟ್ರಿಕ್ ಜ್ಯೂಸ್, (ಜಾಠರಾಗ್ನಿ ಪಿತ್ತದ ನೀರು, ಪ್ಯಾಂಕ್ರಿಯಾಟಿಕ್ ಜ್ಯೂಸ್ ವೃಕ್ಕಕದಲ್ಲಿರುವ ರಸ, ಎಂಬ ದ್ರವ್ಯಗಳಲ್ಲೆಲ್ಲಾ ಈಧಾತುವುಇದೆ. ಶರೀರವ್ಯಾಪಾರವು ಸರಿಯಾಗಿ ನಡೆಯಬೇಕಾದರೆ ಈ ಧಾತುವು ವಿಶೇಷವಾ ಇರತಕ್ಕ ಪದಾರ್ಥವನ್ನು ಭುಜಿಸಬೇಕು. ಶರೀರಕ್ಕೆ ಈ ಧಾತುವು ಕಡಿಮೆಯಾದಲ್ಲಿ ಅದ ವ್ಯಾಪಾರವು ಕಡಮೆಯಾಗಿ ಅನೇಕ ರೋಗಗಳು ಬರುವವು. ಭೋಜನ ಪದಾರ್ಥಗಳನ್ನು ವಿಧವಿಧವಾಗಿ ವಿಂಗಡಿಸುವದರಲ್ಲಿ ಈ ಧಾತುವು ಹೆಚ್ಚಾಗಿದ್ದ ಪದಾರ್ಥವು ಉತ್ತಮವಾ ದ್ದೆಂಬದಾಗಿಯೂ ಕಡಿಮೆಯಾಗಿ ಇರುವದು ಮಧ್ಯಸ್ಥವೆಂತಲೂ ವೈದ್ಯರು ನಿರ್ಣಯಿ ಇದ್ದಾರೆ. ಕಷ್ಟ ಕೆಲಸವನ್ನು ಮಾಡುವ ಜನರು ದಿನ ೧ಕ್ಕೆ ೩೦೦ರಿಂದ ೫೦೦ ಗುಲಗಂ ಜಿಯ ತೂಕ ನೈಟ್ರೋಜನ್ ಇರುವ ಪದಾರ್ಥಗಳನ್ನು ಭುಜಿಸಬೇಕು. ಕೆಲಸಮಾಡ ಸೋಮಾರಿಗಳಾಗಿ ಇರುವವರು ೨೦೦ ಗುಲಗಂಜಿಯ ತೂಕ ನೈಟ್ರೋಜನ್ ಇರುವ ಪದಾರ್ಥವನ್ನು ಭುಜಿಸಬೇಕು.

ಅರಮನೇ ಬದುಕಿಗೆ ಆಕಾಶವೇ ಕಾವಲು.

ನಮ್ಮ ಆಹಾರಗಳ ಪೈಕಿ:—

ಗೋಧಿಯಲ್ಲಿ ೧ ಪೌಂಡಿಗೆ		೧೬೦	ಗುಲಗಂಜಿಯ ತೂಕ ನೈಟ್ರೊಜನ್ ಇದೆ.
ಬೆಣ್ಣೆಯಲ್ಲಿ	,,	೪೪	,,
ಮಜ್ಜಿಗೆ ಯಲ್ಲಿ	,,	೪೩	,,
ಗಿಣ್ಣಿನಲ್ಲಿ	,,	೩೦೫	,,
ಕೆನೆಹಾಲಿನಲ್ಲಿ	,,	೪೮೩	,,
ಜೋಳದಲ್ಲಿ	,,	೧೨೦	,,
ಹಾಲಿನಲ್ಲಿ	,,	೪೪	,,
ಬಟಾಣಿಯಲ್ಲಿ	,,	೨೪೮	,,
ಆಲೂ ಗಡ್ಡೆಯಲ್ಲಿ	,,	೨೨	,,
ಅಕ್ಕಿಯಲ್ಲಿ	,,	೬೮	,,
ತರಕಾರಿಯಲ್ಲಿ	,,	೧೪	,,

ಅಂಗಾರವು ಶರೀರದಲ್ಲಿ ಮುಖ್ಯವಾದ ಭಾಗವು. ಇದಕ್ಕೂ ಅಕ್ಸಿಜನ್‌ಗೂ ಸಂಯೋಗವಾಗುವದರಿಂದ ಶರೀರದಲ್ಲಿ ಶಾಖವೂ ಶಕ್ತಿಯೂ ಉಂಟಾಗುವವು. ಇದು ನಾವು ಭೋಜನಮಾಡುವ ಸಮಸ್ತ ಪದಾರ್ಥಗಳಲ್ಲಿಯೂ ಇರುತ್ತದೆ. ಕಷ್ಟಮಾಡತಕ್ಕವರು ೫೦೦೦ ಗುಲಗುಂಜಿಯ ತೂಕ, ಇಲ್ಲದವರು ೩೫೦೦ ಗುಲಗುಂಜಿಯ ತೂಕ, ಅಂಗಾರವಿರುವ ಪದಾರ್ಥವನ್ನು ಭುಜಿಸಬೇಕು.

ಅಂಗಾರವು ಗೋಧಿಯಲ್ಲಿ		೨೩೦೦	ಗುಲಗಂಜಿಯ ತೂಕ ಇದೆ.
ಬೆಣ್ಣೆಯಲ್ಲಿ	,,	೬೪೫೦	,,
ಮಜ್ಜಿಗೆ ಯಲ್ಲಿ	,,	೩೮೩	,,
ಗಿಣ್ಣಿನಲ್ಲಿ	,,	೩೩೪೪	,,
ಕೆನೆಹಾಲಿನಲ್ಲಿ	,,	೧೯೪೩	,,
ಜೋಳದಲ್ಲಿ	,,	೩೦೬೦	,,
ಹಾಲಿನಲ್ಲಿ	,,	೫೯೯	,,
ಬಟಾಣಿಯಲ್ಲಿ	,,	೨೬೯೯	,,
ಆಲೂ ಗಡ್ಡೆಯಲ್ಲಿ	,,	೩೬೯	,,
ಅಕ್ಕಿಯಲ್ಲಿ	,,	೨೩೩೨	,,
ತರಕಾರಿಯಲ್ಲಿ	,,	೪೨೦	,,

ಪೊಟಾಸಿಯಂ ಎಂಬುವದೂ ಸೋಡಿಯಂ ಎಂಬುವದೂ ಆರೋಗ್ಯವಾಗಿರುವದಕ್ಕೆ ಮುಖ್ಯವಾಗಿ ಬೇಕಾದವುಗಳು. ಸೋಡಿಯಂ ಎಂಬುವದು ಕ್ಲೋರೀನ್ ಎಂಬದರ ಜೊತೆಗೆ ಸೇರಿದರೆ ಉಪ್ಪಾಗುವದು. ಈ ವುಪ್ಪನ್ನೇ ನಾವು ಬಹಳವಾಗಿ ಬಳಸುತ್ತೇವೆ. ಈ ಉಪ್ಪು ಕುಡಿಯುವ ನೀರಿನಲ್ಲೂ ಸ್ವಲ್ಪಮಟ್ಟಿಗೆ ಸೇರಿ ಇರುತ್ತದೆ. ನಮ್ಮ ಶರೀರ

ಕ್ರಮ ಏಷಗೋಳಃ ” ಎಂಬ ಸಿದ್ಧಾಂತಶೇಖರದಲ್ಲಿನ ಶ್ಲೋಕರೀತಿಯಾಗಿ ಅಯಸ್ಕಾಂತಮ ಣಿಗಳಿಂದ (ಸೂಜೀಕಲ್ಲಿನಿಂದ) ಸುತ್ತಲ್ಪಟ್ಟ ಕಬ್ಬಿಣವು ಮಧ್ಯದಲ್ಲಿ ಹ್ಯಾಗೆ ನಿಲ್ಲುವದೋ ಹಾಗೆಯೇ ಈ ಭೂಮಿಯೂ ಆಕರ್ಷಣ ಶಕ್ತಿಯಿಂದ ಅಂತರಿಕ್ಷದಲ್ಲಿ ನಿಂತು ಇದೆ ಎಂದು, ಸ್ಪಷ್ಟವಾಗುವದು. “ ಕಾರ್ಯಂ ಕಾರಣಮಧ್ಯಸ್ಥಂ ಭೂರ್ಮಧ್ಯೇಂಡಸ್ಯ ಸರ್ವತಃ ” ಎಂಬ ರೋಮಕಸಿದ್ಧಾಂತದಲ್ಲಿನ ಶ್ಲೋಕರೀತಿಯಾಗಿ ಭೂಮಿಗೆ ಆಧಾರವಿಲ್ಲದ್ದು ಗೊತ್ತಾಗುತ್ತದೆ ; ಮತ್ತು “ ಪಂಚಮಹಾಭೂತಮಯಸ್ತಾರಾಗಣ ಪಂಜರೆ ಮಹೀ ಗೋಳಃ । ಖೇಯಸ್ಕಾಂತಾಂತಸ್ಥೋಲೋಹ ಇವಾವಸ್ಥಿತೋವೃತ್ತಃ ” ಎಂಬ ವರಾಹ ಮಿಹಿರ ಸಿದ್ಧಾಂತದಲ್ಲಿನ ಶ್ಲೋಕರೀತಿಯಾಗಿ ಪಾಂಚಭೂತಗಳಿಂದುಂಟಾದ ಗೋಳವು ಅಯಸ್ಕಾಂತಗಳ ಮಧ್ಯಲ್ಲಿದ ಸಿಕ್ಕಿದ ಕಬ್ಬಿಣದಹಾಗೆ ಆಕಾಶದ ಮಧ್ಯದಲ್ಲಿ ಸಿಕ್ಕಿಬಿದ್ದಿರುವದೆಂದು ತಿಳಿಯುವದು. “ ಭಪಂಜರಸ್ಯ ಭ್ರಮಣಾವಲೋಕಾದಾಧಾರ ಶೂನ್ಯೋ ಕುರಿತಿ ಪ್ರತೀತಿಃ ” ಎಂದು ಭಾಸ್ಕರಾಚಾರ್ಯರು ಹೇಳಿ ಇದ್ದಾರೆ. ಹೀಗೆಯೇ ಇನ್ನಾವ ಸಿದ್ಧಾಂತವನ್ನು ನೋಡಿದರೂ ಸಿದ್ಧಾಂತಿಗಳೆಲ್ಲರೂ ಒಂದೇ ರೀತಿಯಾಗಿ ಈ ಭೂಮಂಡಲವು ನಿರಾಧಾರವಾಗಿ ಅಂತರಿಕ್ಷದಲ್ಲಿ ಹೊಗೇ ಬುಟ್ಟಿಯಂತೆ ತೇಲಾಡುತ್ತಾ ಇರುವದೆಂದೇ ಹೇಳುವರಾದ್ದರಿಂದ ಆದಿಶೇಷ ಆದಿಕೂರ್ಮ ದಿಗ್ಗಜಗಳು ಈ ಭೂಮಿಯನ್ನು ಧರಿಸಿ ಇವೆ ಎಂಬುವದು ನಿರಾಧಾರವಾದ ಮಾತಾಗಿ ಇದೆ.

ಮೇಲೆ ಹೇಳಿರುವ ಪ್ರಕಾರ ನಮ್ಮ ಹಿಂದೂ ಸಿದ್ಧಾಂತಿಗಳೆಲ್ಲರೂ ಹೇಳುವದಲ್ಲದೆ ಇಂಗ್ಲೀಷು ಸಿದ್ಧಾಂತಿಗಳೂ ಸಹ ಹೀಗೆಯೇ ಹೇಳುವದರಿಂದಲೂ ಅನೇಕರು ಈ ಭೂಮಿಯನ್ನು ಸುತ್ತಿಬಂದು ಇರುತ್ತಾರೆಂದು ಪೂರ್ವದಲ್ಲಿಯೇ ತೋರಿಸಿ ಇರುವದರಿಂದಲೂ ಪುರಾಣದಲ್ಲಿ ಹೇಳುವ ಮಾತು ನಿಶ್ಚಯವೆಂಬುವದಕ್ಕೆ ಏನು ಆಧಾರವೋ ತಿಳಿಯದು. ಈ ಭೂಗೋಳದ ಮೇಲೆ ಎಲ್ಲಾ ಕಡೆಯಲ್ಲಿಯೂ ಜನರು ವಾಸವಾಗಿದ್ದಾರೆಂಬುವದು ಮೇಲೆ ಬರೆದಿರುವ ಶ್ಲೋಕದಿಂದಲೇ ಗೊತ್ತಾಗುವದು. ಇದಲ್ಲದೆ “ ಯೆ ಯತ್ರತ್ಯವಸೀಂ ತಲಸ್ಥಾ ಮಾತ್ಮಾನಮಸ್ಯಾಉಪರಿಸ್ಥಿತಂಚ । ಸಮನ್ಯತೇತ್ರಃ ಕುಚತುರ್ಥಸಂಸ್ಥಾಮಿಥಶ್ಚತೇತಿರ್ಯ ಗಿವಾಮನಂತಿ ” ಎಂಬದಾಗಿ ಸಿದ್ಧಾಂತಶಿರೋಮಣಿಯಲ್ಲಿ ಹೇಳಿಯಿರುವದು. ಈ ಭೂಮಂಡಲದ ಮೇಲೆ ವಾಸಮಾಡುವವರು ಎಲ್ಲರೂ ತಮ್ಮನ್ನು ತಾವು ಮೇಲ್ಗಡೆ ಯಿರುವಂತೆಯೂ ಇತರರನ್ನು ತಮಗೆ ತಿರ್ಯಕ್ ಅಂದರೆ ಅಡ್ಡವಾಗಿಯೂ, ತಮಗೆ ಕೆಳಗಡೆಯೂ ಇರುವಂತಲೂ ಭಾವಿಸುವರು ಎಂದು ತಾತ್ಪರ್ಯವು. “ ಉಪರ್ಯ್ಯಾತ್ಮಾನಮನ್ಯೋನ್ಯಂ ಕಲ್ಪಯಂತಿ ಸುರಾಸುರಾಃ । ಅನ್ಯೇಪಿ ಸಮಸೂತ್ರಸ್ಥಾ ಮನ್ಯಂತೇಧಃಪರಸ್ಪರಂ ॥ ಭದ್ರಾಶ್ವಕೇತುಮಾಲಸ್ಥಾ ಲಂಕಾಸಿದ್ಧಪುರಾಶ್ರಿತಾಃ । ಸರ್ವತ್ರೈವಂ ಮಹೀಗೋಳೆ ಸ್ವಸ್ಥಾನಮುಪರಿಸ್ಥಿತಂ ” ಎಂದು ಸೂರ್ಯಸಿದ್ಧಾಂತ ಗೋಳಾಧ್ಯಾಯದಲ್ಲಿ ಹೇಳಲ್ಪಟ್ಟು ಇದೆ. ಮೇಲಿನ ಶ್ಲೋಕಕ್ಕೆ

ಜ್ಯೋತಿಷ.

ಆಟಯ ಎಂಬುವದು ಆನೆ ಕೊಟ್ಟಿ ...

ಏನು ತಾತ್ಪರ್ಯವೋ ಅದೇ ಇದಕ್ಕೂ ತಾತ್ಪರ್ಯವು. "ಅಧಃಶಿರಸ್ಕಾ ... ಭೂಯಾ ಮನುಷ್ಯಾ ಯಿವ ನೀರತೀರೆ। ಅನಾಕುಲಾಸ್ತಿರ್ಯಗಧಸ್ಥಿತಸ್ಥಾ ತಿಷ್ಠ ... ಯಧಾತ್ರ" ಎಂಬ ಭಾಸ್ಕರಾಚಾರ್ಯರ ಗೋಳಾಧ್ಯಾಯದಲ್ಲಿನ ಶ್ಲೋಕದ ... ಕೆಳಗೆ ಇರುವವರು, ನಾವು ಹ್ಯಾಗೆ ಅನಾಕುಲರಾಗಿ ಸ್ವಸ್ಥವಾಗಿ ಇದ್ದೇವೋ ಅವರೂ ಇದ್ದಾರೆಂತಲೂ ಸ್ಪಷ್ಟವಾಗಿ ಹೇಳಲ್ಪಟ್ಟು ಇದೆ. ಯಾವದಾದರೂ ... ಕಿತ್ತಲೇಹಣ್ಣಿನ ಮೇಲೆ ಎಲ್ಲಾ ಕಡೆಯಲ್ಲಿಯೂ ಅನಾಕುಲಿಗಳಾಗಿ ತಿರುಗಾಡು ... ಎಂಬುವದು ಎಲ್ಲರಿಗೂ ಸ್ಪಷ್ಟವಾಗಿಯೇ ಇದೆ. ಬೆಲ್ಲದ ಮುದ್ದೆಗೆ ಇರುವೆಗಳು ... ಕೊಂಡು ಕೆಳಗೆ ಮೇಲೆ ಪಾರ್ಶ್ವದಲ್ಲಿ ಸಂಚರಿಸುವದನ್ನು ಎಲ್ಲರೂ ಪ್ರಾಯಶಃ ನೋಡಿ ... ಇದ್ದಾರೆ. "ಮನ್ಯಂತೆ ಖೇಯತೋಗೋಳಃ ತಸ್ಯ ಕೋರ್ಧ್ವಂ ಕ್ವವಾಪ್ಯಧಃ" ಎಂ ... ದಾಗಿ ಮೇಲೆ ಹೇಳಿದ ಶ್ಲೋಕದಿಂದ ಈ ಭೂಗೋಳಕ್ಕೆ ಕೆಳಗೆ ಮೇಲೆ ಎಂಬುವದಿಲ್ಲವೆಂ ... ತಿಳಿದು ಬರುವದಲ್ಲವೆ? ಈ ಭೂಮಂಡಲದ ಮೇಲಿರುವ ಸಮಸ್ತ ಜನರಿಗೂ ತಲೆ ... ಮೇಲೆ ಆಕಾಶವೂ ಕೆಳಗೆ ಭೂಮಿಯೂ ಇರುವವು ಇದೇರೀತಿಯಾಗಿ ಇಂಗ್ಲಿ ... ಜ್ಯೋತಿಷ್ಕರು ಭೂಗೋಳಕ್ಕೆ ಆಕೃಷ್ಟಶಕ್ತಿ ಯಿರುವದರಿಂದ ಸಕಲವಸ್ತುಗಳನ್ನು ಭೂಮಿಯು ಸೆಳೆದು ಹಿಡಿಯುವದರಿಂದ ಮನುಷ್ಯರು ಭೂಮಿಯನ್ನು ಬಿಟ್ಟು ಇನ್ನೆಲ್ಲಿ ... ಬೀಳುವದಕ್ಕೆ ಆಸ್ಪದವಿಲ್ಲವೆಂದು ಹೇಳುವರು. "ಆಕೃಷ್ಟಶಕ್ತಿಶ್ಚ ಮಹೀತಯಾ ಯತ್ ಖಸ್ಥಂ ಗುರು ಸ್ವಾಭಿಮುಖಂ ಸ್ವಶಕ್ತ್ಯಾ। ಆಕೃಷ್ಯತೇ ತತ್ಪತತೀವಭಾತಿ ಸಮೇ ಸಮಂತಾತ್ ಕ್ವಪತತ್ವಿಯಂಖೇ" ಎಂಬ ಭಾಸ್ಕರಾಚಾರ್ಯರ ಸಿದ್ಧಾಂತದ ರೀತಿಯಾಗಿ ಭೂಮಿಗೆ ಆಕೃಷ್ಟಶಕ್ತಿ ಇದೆ ಎಂತಲೂ ಅದು ಸಮಸ್ತದ್ರವ್ಯಗಳನ್ನೂ ತನಗೆ ಅಭಿಮುಖವಾಗಿ ಆ ಶಕ್ತಿಯಿಂದಲೇ ಎಳೆಯುವದೆಂತಲೂ ಭೂಮಿಯು ಇನ್ನೆಲ್ಲಿಯೂ ಬೀಳುವದಕ್ಕೆ ಮಾರ್ಗವಿಲ್ಲವೆಂತಲೂ ಸ್ಪಷ್ಟವಾಗಿದೆ. ಆದ್ದರಿಂದ ಭೂಮಿಯ ಕೆಳಗಡೆಯೂ ಜನಗಳು ಇರುವದು ದುರವಗಾಹವಲ್ಲವು. ನಮಗೆ ಕೆಳಗಡೆಯಲ್ಲಿ ಅಮರಿಕಾ ಖಂಡವಿದೆ. ಅಲ್ಲಿಯೂ ಇಂಗ್ಲೀಷು ಜನರು ಅನೇಕರು ಬಹು ನಾಗರೀಕವುಳ್ಳವರಾಗಿ ಬಹಳ ಚಮತ್ಕಾರಿಗಳಾಗಿ ಅನೇಕ ವ್ಯಾಪಾರಗಳನ್ನು ನಡಿಸುತ್ತಾ ಇದ್ದಾರೆ. ಆ ದೇಶದಿಂದ ಅನೇಕ ಪದಾರ್ಥಗಳು ಈ ದೇಶಕ್ಕೆ ಬರುತ್ತವೆ. ಇದಲ್ಲದೆ ಬೊಂಬಾಯಿ ಪಟ್ಟಣದಿಂದ ಅನೇಕರು ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಹೋಗಿ ವಿದ್ಯಾವಂತರಾಗಿ ಬಂದು ಇರುತ್ತಾರೆ. ಇಷ್ಟು ಪ್ರಮಾಣಗಳು ಇರುವಾಗ್ಯೆ ಭೂಮಿಗೆ ಆಧಾರವು ಏನೂ ಇಲ್ಲವೆಂದೂ ಅದಕ್ಕೆ ಆಕರ್ಷಣಶಕ್ತಿಯು ಇರುವದೆಂದೂ ಈ ಶಕ್ತಿ ಬಲದಿಂದಲೇ ಜನರು ಎಲ್ಲಾ ಕಡೆಯಲ್ಲಿಯೂ ಸೌಖ್ಯವಾಗಿ ವಾಸಮಾಡುತ್ತಾ ಇದ್ದಾರೆಂದೂ ನಂಬದೆ ಇರತಕ್ಕ ಜನರ ಮೌಢ್ಯಕ್ಕಿಂತಹೆಚ್ಚಾದ ಮೌಢ್ಯವು ಏನೂ ಇರಲಾರದೆಂದು ಸ್ಪಷ್ಟವಾಗಿ ಇದೆ. ಇಂಥಾ ಆಕರ್ಷಣಶಕ್ತಿಯು ಭೂಮಿಗೆ ಇದೆ ಎಂಬುವದಕ್ಕೆ ಇತರಪ್ರಮಾಣಗಳನ್ನು ಅನೇಕವಾಗಿ ಮುಂದೆ ತಿಳಿಸುವೆವು.

ಕೋ॥ ಕೇ॥ ವೆಂ॥

೫. ಅಭಿನಯ ಸೋಮಯಾಜಿಯ ಕಥೆ.

ಉಜ್ಜಿನೀನಗರದಲ್ಲಿ ಸತ್ಯೇಂದ್ರನೆಂಬ ಒಬ್ಬ ರಾಯನು ರಾಜ್ಯ ಪರಿಪಾಲನೆಯನ್ನು ಮಾಡಿಕೊಂಡಿದ್ದನು. ಈತನ ಬಳಿಯಲ್ಲಿ ವೇದ ವೇದಾಂಗ ಪುರಾಣೇತಿಹಾಸಾದಿ ಸಕಲಕಲಾ ಪ್ರವೀಣನಾದ ಅಭಿನಯ ಸೋಮಯಾಜಿ ಎಂಬ ಒಬ್ಬ ವಿದ್ವಾಂಸನು ಇದ್ದನು. ಈ ವಿದ್ವಾಂಸನು ಎಲ್ಲಾ ಭಾಷೆಗಳಿಗಿಂತಲೂ, ಯಥೋಚಿತವಾಗಿ ಮಾತನಾಡುತ್ತಾ ಪ್ರಾಯಶಃ ತನ್ನ ಅಭಿಪ್ರಾಯಗಳನ್ನೆಲ್ಲಾ ಸಂಜ್ಞೆಗಳಿಂದ ತಿಳಿಯಪಡಿಸುವ ಅಭಿನಯಪೂರ್ವಕ ಭಾಷೆಯೇ ಸರ್ವೋತ್ಕೃಷ್ಟವೆಂದು ತಿಳಿದು, ಒಂದಾನೊಂದು ದಿನ ರಾಜನ ಸಮೀಪಕ್ಕೆ ಹೋಗಿ ತನ್ನ ಅಭಿಪ್ರಾಯವನ್ನು ಆತನಿಗೆ ತಿಳಿಸಿ, ಎಲ್ಲಾ ಪಾಠಶಾಲೆಗಳಲ್ಲಿಯೂ ಮನೋಭಾವಗಳನ್ನು ಸಾಜ್ಞೆಗಳಿಂದ ತಿಳಿಯಪಡಿಸುವ ಭಾಷೆಯನ್ನು ಕಲಿಸುವದಕ್ಕೋಸ್ಕರ ತಕ್ಕ ಏರ್ಪಾಡುಗಳನ್ನು ಮಾಡಿಸಬೇಕೆಂದು ಹೇಳಿದನು. ರಾಯನು ಆತನ ಮಾತನ್ನು ಕೇಳಿ ತನ್ನಲ್ಲಿ ತಾನೇ ನಕ್ಕು, ಆದರೂ ಮುಖಭಂಗವನ್ನು ಮಾಡಬಾರದೆಂದು ಎಣಿಸಿ, ಆತನನ್ನು ಕುರಿತು "ಎಲೈ ಸಕಲವಿದ್ಯಾವಿಶಾರದನಾದ ಅಭಿನಯ ಸೋಮಯಾಜಿಯೇ, ಈ ಏರ್ಪಾಡು ನೀನು ಹೇಳುವದಕ್ಕೆ ಮುಂಚೆಯೇ ಆಗಿ ಇದೆ. ಬರ್ಬರ ದೇಶದಲ್ಲಿ ಒಂದು ಪಾಠಶಾಲೆ ಇದೆ. ಅಲ್ಲಿ ಮಹಾವಿದ್ವಾಂಸನಾದ ಒಬ್ಬ ಬ್ರಾಹ್ಮಣನು ಈ ಅಭಿನಯ ಶಾಸ್ತ್ರವನ್ನು ಬೋಧಿಸುತ್ತಾ ಇದ್ದಾನೆ. ಆ ದೇಶವು ಇಲ್ಲಿಗೆ ಬಹಳ ದೂರದಲ್ಲಿದೆ; ಹಾಗಲ್ಲದೆ ಸಮೀಪದಲ್ಲಿಯೇ ಇದ್ದರೆ ನಾನೂ ನಿನ್ನ ಜೊತೆಯಲ್ಲಿ ಬಂದು ಆತನನ್ನು ತೋರಿಸುತ್ತಾ ಇದ್ದೆ" ಎಂದು ಹೇಳಿದನು. ಅಭಿನಯ ಸೋಮಯಾಜಿಯು "ಆದೇಶವು ಸಪ್ತಸಮುದ್ರದ ಆಚೆ ಇದ್ದರೂ ಚಿಂತೆ ಇಲ್ಲ. ನೀನು ಅಷ್ಟುದೂರ ಬರಬೇಕಾದದ್ದೂ ಅವಶ್ಯಕವಿಲ್ಲ. ನೀನು ಹೇಳಿದ ಮಹಾನುಭಾವನನ್ನು ನೋಡಬೇಕೆಂದು ನಾನು ಅತ್ಯಂತ ಕುತೂಹಲ ಪೂರ್ಣನಾಗಿ ಇದ್ದೇನೆ. ತಕ್ಕ ಅನುಕೂಲವನ್ನು ಮಾಡಿಕೊಟ್ಟರೆ, ನಾನು ಈಗಲೇ ಅಲ್ಲಿಗೆ ಹೋಗಿ ಆತನ ದರ್ಶನವನ್ನು ಮಾಡಿಕೊಂಡು ಬರುತ್ತೇನೆ" ಎಂದು ಹೇಳಿದನು. ಆ ಮಾತನ್ನು ಕೇಳಿ ರಾಯನು ಹಾಗೆಯೇ ಆಗಲಿ ಎಂದು ಆತನಿಗೆ ಅಪ್ಪಣೆಯನ್ನು ಕೊಟ್ಟು ಕಳುಹಿಸಿ, ತಾನು ಹೇಳಿದ ಮಾತು ಸುಳ್ಳಾಗುವನಲ್ಲಾ ಎಂದು ಮನಸ್ಸಿನಲ್ಲಿ ತಹ ತಹ ಪಡುತ್ತಾ, ಆ ವಿದ್ವಾಂಸನು ಬರ್ಬರದೇಶಕ್ಕೆ ಹೋಗಿ ಮುಟ್ಟುವದರೊಳಗಾಗಿ, ಅಲ್ಲಿನ ಪಾಠಶಾಲೆಯವರ ಬಳಿಗೆ ಇಲ್ಲಿ ನಡೆದ ವೃತ್ತಾಂತಗಳನ್ನೆಲ್ಲಾ ತಿಳಿಸಿ ಹ್ಯಾಗಾದರೂ ತನ್ನ ಮಾನವನ್ನು ಕಾಪಾಡಬೇಕೆಂದು ಭೃತ್ಯರನ್ನು ಟಾಕೊಟಾಕು ಕಳುಹಿಸಿದನು. ಆ ಪಾಠಶಾಲೆಯ ವಿದ್ವಾಂಸರು ಈ ವಿಚಿತ್ರವಾದ ವರ್ತಮಾನವನ್ನು ಕೇಳಿದ ಕೂಡಲೆ ತಾವು ಮಾಡಬೇಕಾದ ಉಪಾಯವನ್ನು ಆಲೋಚಿಸುತ್ತಾ ಇದ್ದರು. ಅಷ್ಟರಲ್ಲಿಯೇ ಅಭಿನಯ ಸೋಮಯಾಜಿಯೂ ಹೋಗಿ ಸೇರಿದ್ದರಿಂದ ಅವರು ಅಧೈರ್ಯಪಡದೆ ಆತನನ್ನು ಎದುರುಗೊಂಡು ಕರೆದುಕೊಂಡು

ಅಲ್ಪರ ಸಂಗ ಅಭಿಮಾನ ಭಂಗ.

ಹೋಗಿ ಬೇಕಾದ ಸನ್ಮಾನಗಳನ್ನೆಲ್ಲಾ ಮಾಡಿ ಕುಶಲಪ್ರಶ್ನೆಗಳಿಗೆ ಉಪಕ್ರಮಿಸಲು, ಈ ವಿದ್ವಾಂಸನು ಅವರ ಮಾತಿಗೆ ಪ್ರತ್ಯುತ್ತರವನ್ನು ಕೊಡದೆ ಕೊಡದೆ ಅತ್ಯಂತ ಆತುರದಿಂದ ಅಭಿನಯ ಶಾಸ್ತ್ರವನ್ನು ಹೇಳುವ ವಿದ್ವಾಂಸನನ್ನು ತಾನು ನೋಡಬೇಕಾದ್ದರಿಂದ ಆತನು ಎಲ್ಲಿ ಎಂದು ಕೇಳಿದನು. ಅದಕ್ಕೆ ಆ ವಿದ್ವಾಂಸರು ದೇಶಾಂತರಗಳಲ್ಲಿ ತನ್ನ ವಿದ್ಯಾ ಕೌಶಲ್ಯವನ್ನು ತೋರಿಸಿ ಪ್ರಖ್ಯಾತಿಯನ್ನು ಪಡೆಯಬೇಕೆಂದು ಆತನು ಆವೂರನ್ನು ಬಿಟ್ಟು ೪ ದಿನವಾಯಿತೆಂತಲೂ, ಆತನು ಬರುವದಕ್ಕೆ ಎಷ್ಟು ದಿನಗಳಾಗುವದೋ ಗೊತ್ತಿಲ್ಲವೆಂತಲೂ ಹೇಳಿದರು. ಅಭಿನಯ ಸೋಮಯಾಜಿಯು ಎಷ್ಟುವರ್ಷಗಳಾದರೂ ತಾನು ಆತನನ್ನು ನಿರೀಕ್ಷಿಸಿಕೊಂಡು ಅಲ್ಲಿಯೇ ಇರುವೆನೆಂದು ಹೇಳಿದನು. ಆ ವಿದ್ವಾಂಸರೆಲ್ಲರೂ ಆತನ ಮಾತನ್ನು ಕೇಳಿ, ತಮ್ಮ ಪ್ರಯತ್ನವು ವ್ಯರ್ಥವಾದ್ದರಿಂದ ಉಪಾಯಾಂತರವನ್ನು ಯೋಚಿಸಿ, ನಿರಕ್ಷರ ಕುಕ್ಷಿಯೂ ಒಂದು ಕಣ್ಣು ಕುರುಡೂ ಆಗಿದ್ದ ಸರ್ವಾನಿಷ್ಟ ಶಿರೋಮಣಿ ಎಂಬ ಒಬ್ಬ ಪಂಚೇಬ್ರಾಹ್ಮಣನನ್ನು ಹಿಡಿದುಕೊಂಡು ಬಂದು ವಸ್ತ್ರಾಭರಣಗಳಿಂದ ಅವನನ್ನು ಅಲಂಕರಿಸಿ, ನವರತ್ನಖಚಿತವಾದ ಪೀಠದ ಮೇಲೆ ಅವನನ್ನು ಕುಳ್ಳಿರಿಸಿ, ತಮಗೆ ಬಂದಿರತಕ್ಕ ಗಂಡಾಂತರವನ್ನು ಅವನೊಡನೆ ಹೇಳಿ ಮೌನವಾಗಿ ಇದ್ದುಕೊಂಡು ಯಾವದಾದರೂ ಒಂದು ಉಪಾಯದಿಂದ ಬಂದಿರತಕ್ಕ ಅಪಾಯವನ್ನು ತಪ್ಪಿಸ ಬೇಕೆಂದು ಹೇಳಿಕೊಂಡು, ಅವನಿಂದ ಅಭಯವನ್ನು ಪಡೆದು, ಅನಂತರದಲ್ಲಿ ಅಭಿನಯ ಸೋಮಯಾಜಿಯ ಬಳಿಗೆ ಬಂದು "ಅಯ್ಯಾ ವಿದ್ವಾಂಸರೇ, ನಿಮ್ಮ ಅದೃಷ್ಟವಶದಿಂದ ನಮ್ಮ ಅಭಿನಯದ ವಿದ್ವಾಂಸನು ನಿನ್ನೇ ದಿನ ಬಂದನು. ಆತನ ದರ್ಶನಕ್ಕೆ ತಾವು ಯಾವಾಗ ದಯಮಾಡಿದರೂ ಕರೆದುಕೊಂಡು ಹೋಗುತ್ತೇವೆ" ಎಂದು ಹೇಳಿದರು. ಅದಕ್ಕೆ ಅಭಿನಯ ಸೋಮಯಾಜಿಯು ಈಗಲೇ ಬರುತ್ತೇನೆಂದು ಹೇಳಿದ್ದರಿಂದ, ಆ ವಿದ್ವಾಂಸರು ಆತನನ್ನು ಸರ್ವಾನಿಷ್ಟ ಶಿರೋಮಣಿಯ ಬಳಿಗೆ ಕರೆದು ಕೊಂಡುಹೋಗಿ, ಇಬ್ಬರಿಗೂ ಸಮಾಗಮನವನ್ನು ಮಾಡಿಸಿ, ಮುಂದೆ ತಮಗೆ ಏನು ಅವಮಾನವಾದೀತೋ ಎಂದು ವಿಚಾರದಿಂದ ಮೈಮರೆದು ಎಲ್ಲರೂ ಅಲ್ಲಿಯೇ ನಿಂತಿದ್ದರು.

ಉಜ್ಜನೀ ನಗರದ ವಿದ್ವಾಂಸನು ಈ ಅಭಿನಯದ ಕೃತಕ ವಿದ್ವಾಂಸನನ್ನು ನೋಡಿ, ಒಂದು ಬೆರಳು ತೋರಿಸಿದನು. ಅದಕ್ಕೆ ಸರ್ವಾನಿಷ್ಟ ಶಿರೋಮಣಿಯು ಎರಡು ಬೆರಳು ತೋರಿಸಿದನು. ಈತನು ಮೂರು ಬೆರಳು ತೋರಿಸಿದನು. ಈ ಪಂಚೇ ಬ್ರಾಹ್ಮಣನು ಮುಷ್ಟಿಯನ್ನು ತೋರಿಸಿದನು. ಉಜ್ಜನೀನಗರದವನು ಸಮೀಪದಲ್ಲಿದ್ದ ಒಂದು ಕಿತ್ತಲೇ ಹಣ್ಣನ್ನು ತೋರಿಸಿದನು. ಸರ್ವಾನಿಷ್ಟ ಶಿರೋಮಣಿಯು ಹತ್ತಿರ ಇಟ್ಟಿದ್ದ ನೀರಿನ ಪಾತ್ರೆಯನ್ನು ತೋರಿಸಿದನು. ಕೂಡಲೆ ಉಜ್ಜನೀ ನಗರದವನು ಸಂತೋಷಭರಿತನಾಗಿ, ಮೇಲಕ್ಕೆ ಎದ್ದು, ಸರ್ವಾನಿಷ್ಟನಿಗೆ ಸಾಷ್ಟಾಂಗ ದಂಡಪ್ರಣಾಮವನ್ನು ಮಾಡಿ, ತನ್ನ ದೇಶಕ್ಕೆ

ಹೋಗಿ ಬರುತ್ತೇನೆಂದು ಉಳಿದ ವಿದ್ವಾಂಸರ ಅಪ್ಪಣೆಯನ್ನು ಕೇಳಿದನು. ಅವರು ನಡೆದ ಸಂಗತಿಗಳನ್ನೆಲ್ಲಾ ಪ್ರತ್ಯಕ್ಷವಾಗಿ ನೋಡುತ್ತಾ ಇದ್ದಾಗ್ಯೂ ಅಭಿಪ್ರಾಯವು ಗೊತ್ತಾಗದೆ ಇದ್ದುದರಿಂದ, ಅವನನ್ನು ಕುರಿತು "ನಮ್ಮ ಅಭಿನಯ ವಿದ್ವಾಂಸನ ಪಾಂಡಿತ್ಯವು ಎಂಥಾದ್ದು? ತಮ್ಮ ಪ್ರಶ್ನೆಗಳಿಗೆ ಆತನು ಕೊಟ್ಟ ಉತ್ತರಗಳು ಎಂಥಾವು?" ಎಂದು ಕೇಳಿದರು. ಅದಕ್ಕೆ ಅಭಿನಯ ಸೋಮಯಾಜಿಯು "ಹೇಳತಕ್ಕದ್ದೇನಿದೆ! ಆತನು ಅಮೋಘವಾದ ಪಾಂಡಿತ್ಯವುಳ್ಳವನು. ಕುಬೇರನ ನವನಿಧಿಗಳನ್ನು ಕೊಡುತ್ತೇನೆಂದು ಹುಡುಕಿದರೂ ಇಂಥಾ ಮಹಾನುಭಾವನು ಸಿಕ್ಕಲಾರನು. ಮೊದಲು, ನಾನು ಸಕಲ ಪ್ರಪಂಚಕ್ಕೂ ಆಧಾರಭೂತನೂ ಪೂಜಾ ಯೋಗ್ಯನೂ ಆದ ದೇವರು ಒಬ್ಬನೇ ಎಂದು ಸೂಚಿಸುವದಕ್ಕೆ ಒಂದು ಬೆರಳು ತೋರಿಸಿದೆನು. ಆತನು ವಿಷ್ಣು ಮಹೇಶ್ವರರಿಬ್ಬರೂ ಪೂಜಾಯೋಗ್ಯರಲ್ಲವೇ ಎಂದು ಸೂಚಿಸುವದಕ್ಕೆ ನನಗೆ ಎರಡು ಬೆರಳನ್ನು ತೋರಿಸಿದನು. ಬ್ರಹ್ಮ ವಿಷ್ಣು ಮಹೇಶ್ವರರು ಮೂರು ಮಂದಿಯೂ ಯಾಕೆ ಆಗಬಾರದೆಂದು ಮೂರು ಬೆರಳು ತೋರಿಸಿದೆನು. ಒಂದು ಮೂರ್ತಿಯೇ ಮೂರು ಭಾಗಗಳಾಗಿ ಇದ್ದಾನೆಂದು ಸೂಚಿಸುವದಕ್ಕೆ ಆತನು ಮುಷ್ಟಿಯನ್ನು ತೋರಿಸಿದನು. ದೇವರು ನಮಗೆ ಜೀವನಕ್ಕೆ ಅನುಕೂಲವಾದ ವಸ್ತುಗಳನ್ನಲ್ಲದೆ ಭೋಗಕ್ಕೆ ಉಪಯುಕ್ತವಾದವುಗಳನ್ನೂ ಸೃಷ್ಟಿಸಿ ಇದ್ದಾನೆ ನೋಡು ಎಂಬದಾಗಿ ಕಿತ್ತಲೇ ಹಣ್ಣನ್ನು ತೋರಿಸಿದೆನು. ಅದಕ್ಕೆ ಆತನು ಸಮೀಪದಲ್ಲಿದ್ದ ನೀರಿನಪಾತ್ರೆಯನ್ನು ತೋರಿಸಿ, ಪಾಮರರು ಭೋಗ್ಯವಸ್ತುಗಳನ್ನು ಬಯಸುವರು; ಆದರೆ ಪಂಡಿತರಾದವರು ಸಕಲ ಚರಾಚರ ಪ್ರಾಣಿಗಳೂ ಸಕಲ ಲೋಕಗಳೂ ಸರ್ವವೂ ಜಲಸ್ವರೂಪವುಳ್ಳವುಗಳಾದ್ದರಿಂದ ಇಂಥಾ ನೀರನ್ನೇ ಸರ್ವೋತ್ಕೃಷ್ಟವಾದದ್ದೆಂದು ಎಣಿಸುವರು ಎಂದು ಸೂಚಿಸಿದನು. ನನಗೆ ಪರಮ ಸಂತೋಷವಾಯಿತು" ಎಂದು ಹೇಳಿ ಹೊರಟುಹೋದನು. ಆಗ ಆ ವಿದ್ವಾಂಸರು ಸರ್ವಾನಿಷ್ಟ ಶಿರೋಮಣಿಯು ಒಳಗೆ ಬಂದು, ನಡೆದ ಸಂಗತಿಯನ್ನೆಲ್ಲಾ ಸರಿಯಾಗಿ ಹೇಳೆಂದು ಅವನನ್ನು ಕೇಳಿದರು. ಅದಕ್ಕೆ ಸರ್ವಾನಿಷ್ಟಶಿರೋಮಣಿಯು "ನೀವು ಕರೆದು ತಂದ ವಿದ್ವಾಂಸನು ದುರಹಂಕಾರಿಯು. ಅವನು ನನ್ನ ಸಮೀಪಕ್ಕೆ ಬಂದ ಕೂಡಲೆ ನನ್ನ ಮುಖವನ್ನು ನೋಡಿ ನಿನಗೆ ಒಂದೇ ಕಣ್ಣೆಂದು ಒಂದು ಬೆರಳು ತೋರಿಸಿದನು. ಅದಕ್ಕೆ ನನ್ನ ಒಂದು ಕಣ್ಣೇ ನಿನ್ನ ಎರಡು ಕಣ್ಣುಗಳಿಗೂ ಸಮವೆಂದು ಎರಡು ಬೆರಳು ತೋರಿಸಿದೆನು. ಅವನು ನಮ್ಮಿಬ್ಬರಿಂದಲೂ ಸೇರಿ ಮೂರೇ ಕಣ್ಣೆಂದು ಮೂರು ಬೆರಳು ತೋರಿಸಿದನು. ಇಂಥಾ ಮಾತನ್ನು ಕೇಳಿ ನನಗೆ ಬಹಳ ಸಿಟ್ಟು ಬಂದದ್ದರಿಂದ ಇಂಥಾ ಮಾತುಗಳನ್ನು ಆಡಿದರೆ ನಿನ್ನನ್ನು ಗುದ್ದಿಬಿಡುವೆನೆಂದು ಮುಷ್ಟಿಯನ್ನು ತೋರಿಸಿದೆನು. ಅದಕ್ಕೆ ಅವನು ನಿಮ್ಮ ದೇಶದಲ್ಲಿ ಇಂಥಾ ಪದಾರ್ಥ ಸಿಕ್ಕುವದೇ ಎಂದು ಒಂದು ಕಿತ್ತಲೇಹಣ್ಣನ್ನು ತೋರಿಸಿದನು. ಅದಕ್ಕೆ ನಾನು ಕೋಪದಿಂದ ಮೈಮರೆದು ಅವನ ಮೇಲೆ ನೀರು ಸುರಿಯಬೇಕೆಂದು ನೀರಿನ ಪಾತ್ರೆಗೆ ಕೈಹಾಕಿದೆನು. ಅಷ್ಟರಲ್ಲಿ ಅವನು ತನ್ನನ್ನು ಮನ್ನಿಸಬೇಕೆಂದು ನನಗೆ ನಮಸ್ಕಾರಮಾಡಿದ್ದರಿಂದ ಅವನನ್ನು

ಸುಮ್ಮನೆ ಬಿಟ್ಟುಬಿಟ್ಟೆನು" ಎಂದುಹೇಳಿದನು. ಹೀಗೆ ಒಂದು ವಿಷಯದಲ್ಲಿಯೇ ವಿದ್ವಾಂಸನ ಆಲೋಚನೆಗೂ ಬುದ್ಧಿಹೀನನ ಆಲೋಚನೆಗೂ ಬಹಳ ತಾರತಮ್ಯ ಇರುವದು.

೬. ಮೈಸೂರು ಗಜೆಟ್ ಸಂಗ್ರಹ.

೨೧ನೇ ಸೆಪ್ಟಂಬರ್.—ಮೆ॥ ಪಿ. ಎಸ್. ಅಚ್ಯುತರಾವ್ ಎಲ್. ಎಂ. ಎಸ್. ಅವರೂ ಮೆ॥ಎಂ. ಆರ್. ವೈದ್ಯನಾಥಶಾಸ್ತ್ರಿ ಬಿ. ಎ, ಎಂ. ಬಿ. ಸಿ. ಎಂ. ಅವರೂ, ಈಸೆಪ್ಟಂಬರು ೯ರಿಂದಲೂ, ಮೆ॥ ಪಿ. ರಾಮಾನುಜಲನಾಯಿಡು ಎಲ್. ಎಂ. ಎಸ್. ಅವರು ಕೆಲಸದ ಮೇಲೆ ಬಂದಕಾಲದಿಂದಲೂ, ೪ನೇ ಗ್ರೇಡು ಅಸಿಸ್ಟೆಂಟ್ ಸರ್ಜನ್‌ರಾಗಿ ಇರತಕ್ಕದ್ದು.

೨೪ನೇ ಸೆಪ್ಟಂಬರು.—ಕೋಲಾರ ಡಿಸ್ಟ್ರಿಕ್ಟ್ ಬಾಗೇಪಲ್ಲಿ ತಾಲ್ಲೂಕಿನ ಅಮಲ್‌ದಾರ್ ಅಬ್ದುಲ್ ಅಜೀಜ್ ಸಾಹೇಬರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳ ರಜಾ ಕೊಟ್ಟಿದೆ.

೧೧ನೇ ಅಕ್ಟೋಬರು.—ಅಫೀಷಿಯೇಟಿಂಗ ಎಗ್ಸಿಕ್ಯೂಟಿವ್ ಎಂ॥ ಸಯ್ಯದು ಯೂಸೂಫ' ಸಾಹೇಬರು ೮ನೇ ತಾರೀಖಿನಲ್ಲಿ ಅ॥ ಎಂ॥ ಮೆ॥ ಇ. ಆರ್. ಸುಬ್ಬರಾಯ ರವರಿಂದ ಕಡೂರು ಡಿವಿಜನ್ ಚಾರ್ಜನ್ನು ತೆಗದುಕೊಂಡರು.

೨೧ನೇ ಅಕ್ಟೋಬರು.—ಬೆಂಗಳೂರು ಡಿ॥ ಫಾರೆಸ್ಟು ಅ॥ ಕನ್‌ಸರ್ವೇಟರ್ ಮೆ॥ ಸಿ. ನಾರಾಯಣರಾಯರು ಅಕ್ಟೋಬರು ೨೦ರಲ್ಲಿ ತಮ್ಮ ಚಾರ್ಜನ್ನು ಫಾರೆಸ್ಟ್ ಅ॥ ಅಪ್ರೆಂಟಿಸ್ ಮೆ॥ ಎಸ್. ಎ. ಬಾಪೂರಾಯರಿಗೆ ಒಪ್ಪಿಸಿರುತ್ತಾರೆ.

೨೮ನೇ ಅಕ್ಟೋಬರು.—ಮೈಸೂರು ಡಿ॥ ಡಿ॥ ಕ॥ ಅಬ್ದುಲ್ ಖಾದರ್‌ಖಾನ್ ಬಹದೂರವರು ಅಕ್ಟೋಬರು ೨೪ರಲ್ಲಿ ಫಾರೆಸ್ಟ್ ಅ॥ ಕನ್‌ಸರ್ವೇಟರ್‌ಮೆ॥ಸಿ. ನಾರಾಯಣರಾಯರಿಗೆ ಮೈಸೂರು ಡಿ॥ ಫಾರೆಸ್ಟ್ ಸೂಪರಿಂಟೆಂಡೆಂಟ್ ಕೆಲಸದ ಚಾರ್ಜನ್ನು ಒಪ್ಪಿಸಿದರು.

೨೧ನೇ ಅಕ್ಟೋಬರು.—ಕೋಲಾರ ಡಿ॥ ಗೌರಿಬಿದನೂರು ಅಮಲ್‌ದಾರ್ ಮೆ॥ರ ಕೆ. ಶೇಷಯ್ಯಂಗಾರರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯಿತು ಒಂದು ತಿಂಗಳು ಪ್ರಿವಿಲೆಜ್ ರಜಾ ಕೊಟ್ಟಿದೆ.

ಆಸಲಿಗೆ ಮೋಸ ಲಾಭಕ್ಕೆ ಗುದ್ದಾಟ.

೩ಂನೇ ಅಕ್ಟೋಬರು.—ಅಮಲ್‌ದಾರರ ವರ್ಗಾವರ್ಗಿಗಳು.—ಮೆ॥ ಕೆ. ರಾಮಸ್ವಾಮಯ್ಯಂಗಾರರಿಗೆ ಮೈಸೂರಿಂದ ಶಿವಮೊಗ್ಗೆಗೆ. ಮೆ॥ ಕೆ. ರಾಮಚಂದ್ರರಾಯರಿಗೆ ಗುಂಡ್ಲುಪೇಟೆಯಿಂದ ಮೈಸೂರಿಗೆ. ಬಾದರ್‌ಅಲ್ಲೀಯವರಿಗೆ ಹಾಸನದಿಂದ ಗುಂಡ್ಲುಪೇಟೆಗೆ.

ಮೆ॥ ಕೆ. ರಾಮಚಂದ್ರರಾಯರನ್ನು ೨ನೇ ಗ್ರೇಡಿನಿಂದ ೧ನೇ ಗ್ರೇಡಿಗೂ, ಬಾದರಲ್ಲೀಯವರನ್ನು ೩ನೇದರಿಂದ ೨ನೇದಕ್ಕೂ, ಮೆ॥ ಗೋಪಾಲ ಕೃಷ್ಣಯ್ಯಂಗಾರರನ್ನು ೪ನೇದರಿಂದ ೩ನೇದಕ್ಕೂ, ಮೆ॥ ಗುಂಡಪ್ಪನವರನ್ನು ೫ನೇದರಿಂದ ೪ನೇದಕ್ಕೂ ಬಡತಿ ಮಾಡಿ ಇದೆ.

ಹಾಸನದ ಮುನಸೀಫ್ ಮೆ॥ ಸಿ. ವೆಂಕಟರಾಯರಿಗೆ ಇದೇ ಇಸವಿ ಜುಲೈ ೩೦ರಲ್ಲಿ ಕೊಟ್ಟರಜಾ ಅಲ್ಲದೆ ಸಿಕ್ ಸರಟಿಫಿಕೇಟಿನ ಮೇಲೆ ೬ ತಿಂಗಳ ರಜಾ ಕೊಟ್ಟು ಇದೆ.

೧೯೧೪ನೇ ಇಸವಿ ಅಕ್ಟೋಬರು ತಾರೀಖು ೨೫ರವರೆಗೆ ಕಾಲಸ್ಥಿತಿಯ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.—ಮಳೆಬಿದ್ದು ಪೈರೆಲ್ಲಾ ಒಳ್ಳೇಸ್ಥಿತಿಯಲ್ಲಿ ಇದೆ. ಕೆಲವು ಕಡೆ ಹುರಳಿಯನ್ನು ಬಿತ್ತಿದ್ದಾರೆ. ದನಗಳು ಹುಲ್ಲು ನೀರುಗಳಿಂದ ಸೌಖ್ಯವಾಗಿವೆ. ಕುಡಿಯುವಕ್ಕೆ ಸಾಕಾದಷ್ಟು ನೀರು ಇದೆ. ರೂಪಾಯಿ ೧ಕ್ಕೆ ಅಕ್ಕಿ ೧೦ ಸೇರು, ರಾಗಿ ೨೬ಸೇರು, ಹುರಳಿ ೨೦॥ ಸೇರು.

ಕೋಲಾರ ಡಿಸ್ಟ್ರಿಕ್ಟು.—ಎಲ್ಲಾ ಕಡೆಯೂ ಚನ್ನಾಗಿ ಮಳೆ ಆಯಿತು. ಪೈರು ಚನ್ನಾಗಿದೆ. ಕೆಲವು ಕೆರೆಗಳಿಗೆ ಎರಡು ತಿಂಗಳಿಗಾಗುವಷ್ಟು ನೀರು ಬಂತು. ಕೆಲವು ಕಡೆ ಹುಚ್ಚೆಳ್ಳು, ಗೋಧಿ, ಉದ್ದು ಮೊದಲಾದವುಗಳನ್ನು ಬಿತ್ತಿದ್ದಾರೆ. ದನಗಳಿಗೆ ಹುಲ್ಲೂ ನೀರೂ ಬೇಕಾದಷ್ಟು ಇದೆ. ರೂಪಾಯಿ ೧ಕ್ಕೆ ದಪ್ಪ ಅಕ್ಕಿ ೧೨—೧೪ ಸೇರು, ರಾಗಿ ೨೩—೩೬ ಸೇರು.

ತುಮಕೂರು ಡಿಸ್ಟ್ರಿಕ್ಟು.—ಡಿಸ್ಟ್ರಿಕ್ಟಿನಲ್ಲೆಲ್ಲಾ ಬಹಳ ಮಳೆಯಾಯಿತು. ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಸೀರ್‍ಯ, ಚಿತ್ರದುರ್ಗ ಈ ತಾಲ್ಲೂಕುಗಳಲ್ಲಿ ಕೆಲವು ಕೆರೆಗಳಿಗೆ ೫ ತಿಂಗಳಿಗಾಗುವಷ್ಟು ನೀರು ಬಂದಿದೆ. ಅನೇಕ ಸ್ಥಳಗಳಲ್ಲಿ ಹುರಳಿ, ರಾಗಿ, ಬತ್ತ, ಗೋಧಿ, ಕಡಲೆ, ಹತ್ತಿ, ಸಾಮೆ, ಮೊದಲಾದವುಗಳನ್ನು ಬಿತ್ತಿದ್ದಾರೆ. ಹೊಳಲುಕೆರೆ, ಮದ್ದಗಿರಿ, ಸೀರ್‍ಯ ಮತ್ತು ಇನ್ನು ಕೆಲವು ತಾಲ್ಲೂಕುಗಳಲ್ಲಿ, ಜವಾರಿ, ರಾಗಿ, ಹೆಸರು, ಉದ್ದು, ಬತ್ತ, ಕಬ್ಬು, ನಾಟಿರಾಗಿ, ಇವುಗಳ ಪೈರು ಆಯಿತು. ಕುಡಿಯುವ ನೀರಿಗೂ ದನಗಳ ಮೇವಿಗೂ ಕಡಮೆಯಿಲ್ಲ. ರೂಪಾಯಿ ೧ಕ್ಕೆ ಅಕ್ಕಿ ೧೧॥—೧೨ ಸೇರು, ದಪ್ಪ ಅಕ್ಕಿ ೧೨—೧೫ ಸೇರು, ರಾಗಿ ೨೫—೩೦ ಸೇರು, ಹುರಳಿ ೧೬—೨೪ ಸೇರು.

ಆಳಲ ಭಕ್ತಿ ಮಳಲ ಸೇವೆ.

ಮೈಸೂರು ಡಿಸ್ಟ್ರಿಕ್ಟ್.—ಮೈಸೂರಿನಲ್ಲಿ ಮಳೆ ಆಯಿತು. ಎಲ್ಲಾ ತಾಲ್ಲೂಕುಗಳಲ್ಲಿಯೂ ಸಾಧಾರಣವಾಗಿ ಚನ್ನಾಗಿಯೇ ಮಳೆಯಾಯಿತು. ಈಚೆಗೆ ಪೈರು ಚನ್ನಾಗಿ ಇದೆ. ಉದ್ದು, ಹೆಸರು, ಕಡಲೆ, ಹುರಳಿ, ಹುಚ್ಚೆಳ್ಳು, ಇವುಗಳನ್ನು ಬಿತ್ತಿದ್ದಾರೆ. ಕೆರೆಗಳಿಗೆಲ್ಲಾ ಸ್ವಲ್ಪಸ್ವಲ್ಪ ನೀರು ಬಂತು. ರೂಪಾಯಿಗೆ ದುಯ್ಯಂ ಅಕ್ಕಿ ೧೪ ಸೇರು, ರಾಗಿ ೨೪ ಸೇರು, ಹುರಳಿ ೨೮ ಸೇರು.

ಶಿವಮೊಗ್ಗಾ ಡಿಸ್ಟ್ರಿಕ್ಟ್.—ಶಿವಮೊಗ್ಗಾದಲ್ಲಿ ಸ್ವಲ್ಪಮಳೆ ಆಯಿತು. ಎಲ್ಲಾ ಕಡೆಯೂ ಮಳೆ ಬಿತ್ತು. ದಾವಣಗೆರೆ ತಾಲ್ಲೂಕಿನಲ್ಲಿ ಮೂರುಪಾಲು ಪೈರೆಲ್ಲಾ ನಾಶವಾಯಿತು. ಈಗ ಇರುವದಕ್ಕೂ ಇನ್ನೂ ಮಳೆ ಬೇಕು. ಚನ್ನಗಿರಿಯಲ್ಲಿಯೂ ಪೈರು ಒಣಗುತ್ತಾ ಇದೆ. ಚನ್ನಗಿರಿ, ಷಿಕಾರಪುರ, ಸೊರಾಬ್, ತಾಲ್ಲೂಕುಗಳಲ್ಲಿ ರಾಗೀ ಬೆಳೆ ಆಯಿತು. ನಗರ, ಸಾಗರ, ಸೊರಾಬ್ ತಾಲ್ಲೂಕುಗಳಲ್ಲಿ ಅಡಿಕೇ ಫಸಲು ಆಯಿತು. ಶಿವಮೊಗ್ಗಾದಲ್ಲಿ ಎಣ್ಣೆಗಾರ ಜೋಳ, ಕುರಸಣಿ, ಎಳ್ಳು ಇವುಗಳನ್ನೂ, ಚನ್ನಗಿರಿಯಲ್ಲಿ ಕಡಲೆ, ಮತ್ತು ಎಣ್ಣೆಗಾರಜೋಳವನ್ನೂ ಬಿತ್ತಿದ್ದಾರೆ. ಜನರು ಜ್ವರ, ಚಳಿ, ಅತಿಸಾರ ರೋಗಗಳಿಂದ ಪೀಡಿತರಾಗಿ ಇದ್ದಾರೆ. ಚನ್ನಗಿರಿ ಮತ್ತು ಷಿಕಾರಪುರದ ತಾಲ್ಲೂಕುಗಳಲ್ಲಿ, ದನಗಳು ರೋಗದಿಂದ ನರಳುತ್ತಿವೆ. ರೂಪಾಯಿ ೧ಕ್ಕೆ ಅಕ್ಕಿ ೧೪-೧೬ ಸೇರು, ರಾಗಿ ೨೧—೩೮ ಸೇರು, ಜೋಳ ೧೮—೩೨ ಸೇರು.

ಕಡೂರು ಡಿಸ್ಟ್ರಿಕ್ಟ್.—ಎಲ್ಲಾ ಕಡೆಯೂ ಒಳ್ಳೇ ಮಳೆಯಾಯಿತು. ಬತ್ತ, ರಾಗಿ, ಕಬ್ಬು, ಹುರಳಿ, ಜೋಳ, ಕಾಫಿ, ಅಡಿಕೆ, ಯಾಲಕ್ಕಿ, ಮೆಣಸು, ಮೊದಲಾದವುಗಳ ಬೆಳೆ ಚನ್ನಾಗಿ ಯಿದೆ. ಕೊಪ್ಪದ ತಾಲ್ಲೂಕಿನಲ್ಲಿ ರಾಗಿ, ಯಾಲಕ್ಕಿ, ಅಡಿಕೆ, ಕಾಫಿ, ಇವುಗಳ ಫಸಲು ಆಯಿತು. ದನಗಳು ಸೌಖ್ಯವಾಗಿವೆ. ರೂಪಾಯಿ ೧ಕ್ಕೆ ಅಕ್ಕಿ ೧೪-೨೪ ಸೇರು, ರಾಗಿ ೨೨-೩೮ ಸೇರು.

೭. ವೃತ್ತಾಂತ ಸಂಗ್ರಹ.

ಸೋಲಾಪುರದಲ್ಲಿ ಹಿಂದೂಜನರ ಉತ್ಸವವು ನಡೆಯುತ್ತಿದ್ದಾಗ ೩೮ ಜನ ಮಹಮ್ಮದೀಯರು ಅವರ ಮೇಲೆ ಬಿದ್ದು ಬಹಳ ತಂಟೆ ಮಾಡಿದರು. ಇದಕ್ಕಾಗಿ ಕೆಲವರಿಗೆ ೧ ವರ್ಷವೂ, ಕೆಲವರಿಗೆ ೬—೯ ತಿಂಗಳೂ ಖೈದಾಗ ಬೇಕೆಂದು ನಿಷ್ಕರ್ಷೆಯಾಯಿತು. ಆದರೆ ಈ ಮೊಕದ್ದಮೆಯು ಅಪೀಲಾಗಿ ೧ ವರ್ಷದ ಖೈದು ೨ ತಿಂಗಳಿಗೂ, ಮಿಕ್ಕದ್ದು ೧ ತಿಂಗಳಿಗೂ ಕಡಿಮೆ ಆಯಿತು. ಈ ಜನರೆಲ್ಲರೂ ಮುಂದಕ್ಕೆ ತಾವು ಸರಿಯಾಗಿ ನಡೆದು ಕೊಳ್ಳುವೆವು ಎಂಬುವದಕ್ಕೆ ಜಾಮೀನು ಕೊಡಬೇಕೆಂದು ಫೈಸಲಾಯಿತು.

ಅಶನ ವಸನಕ್ಕಿದ್ದಮೇಲೆ ವ್ಯಸನವ್ಯಾಕೆ ?

ಮದರಾಸು ಹೈಕೋರ್ಟು ಜಡ್ಜಿಗಳು ಡಿಸ್ಟ್ರಿಕ್ಟ್ ಕೋರ್ಟುಗಳ ಏರ್ಪಾಡುಗಳನ್ನು ಯೋಚಿಸಿ ಶಿರಸ್ತೇದಾರರಿಗೂ ರಿಕಾರ್ಡು ಕೀಪರುಗಳಿಗೂ ಸಂಬಳ ಹೆಚ್ಚು ಮಾಡಬೇಕೆಂದು ಯೋಚಿಸಿ ಇದ್ದಾರೆ.

ನಮ್ಮ ಇಂಡಿಯಾ ದೇಶದಲ್ಲಿರುವ ನಮ್ಮ ರಾಜರಿಂದ ಪಾಲಿತವಾದ ರಾಜ್ಯಗಳಲ್ಲಿ ೩,೩೩೪,೦೦,೦೦,೦೦೦ ಜನರು ಇದ್ದಾರೆ; ೧೧,೯೦,೦೦,೦೦೦ ರೂ. ಉತ್ಪತ್ತಿ ಯಾಗುತ್ತದೆ; ೨,೩೪,೦೩೪ ಮಂದಿ ಶಿಪಾಯಿಗಳು ಇದ್ದಾರೆ; ೩೨,೩೭೦ ಫಿರಂಗಿ ಗಳಿವೆ. ಮಹಮ್ಮದ ರಾಜ್ಯಗಳಲ್ಲಿ ೧,೩೪,೦೦,೦೦೦ ಜನರಿದ್ದಾರೆ; ೫,೨೪,೦೦,೦೦೦, ರೂ. ಉತ್ಪತ್ತಿ ಆಗುತ್ತದೆ; ೩೪,೩೭ ಮಂದಿ ಶಿಪಾಯಿಗಳಿದ್ದಾರೆ; ೮೬೫ ಫಿರಂಗಿಗಳಿವೆ.

ಪೋಸ್ಟಾಫೀಸಿನ ಡಿರೆಕ್ಟರುಗಳೆಲ್ಲರೂ ಮನಿಯಾರ್ಡರ್ ವಿಷಯದಲ್ಲಿ ಮಾಡಿಯಿರತಕ್ಕ ಹುಕುಂ ಏನಂದರೆ: ಆಕ್ಟೋಬರು ತಾರೀಖು ೧ರ ಲಾಗಾಯತು ಟಪಾಲ್ ಜವಾನರು ರಸೀತಿಯ ಜೊತೆಯಲ್ಲಿಯೇ ಹಣವನ್ನೂ ತೆಗೆದುಕೊಂಡು ಹೋಗಿ ರುಜು ಹಾಕಿಸಿಕೊಂಡು ಕೂಡಲೆ ಹಣವನ್ನು ಕೊಡುವರು. ಇದರಿಂದ ಅನೇಕರಿಗೆ ಕಷ್ಟ ತಪ್ಪುವದು.

ಸೆಪ್ಟಂಬರು ೨೪ನೇ ತಾರೀಖಿನಲ್ಲಿ ಇಲಾಯತಿಯ ಸಮೀಪದಲ್ಲಿ ಒಂದು ಹಡಗು ಮುಳುಗಿ ಹೋಯಿತು. ಅದರಲ್ಲಿ ಇದ್ದ ಜನರಲ್ಲಿ ೫೮ ಮಂದಿ ಬದುಕಿದರು. ಆದರೆ ಅನೇಕ ದೊಡ್ಡ ಮನುಷ್ಯರೂ ಹಡಗಿನ ಯಜಮಾನನೂ ಮುಳುಗಿ ಸತ್ತರು.

ಅಕ್ಟೋಬರು ೯ನೇ ತಾರೀಖಿನಲ್ಲಿ ಷಾಂಘೆ ಎಂಬ ಪಟ್ಟಣದ ಹತ್ತರ ಫ್ರೆಂಚರಿಗೂ ಚೀಣಾದವರಿಗೂ ಯುದ್ಧವಾಯಿತು. ಇದರಲ್ಲಿ ಫ್ರೆಂಚರಕಡೆ ೩೦ ಜನ ನಷ್ಟವಾದರು. ಇದೇ ತಾರೀಖಿನಲ್ಲಿ ಕೀಲಂಗ್ ಎಂಬ ಸ್ಥಳದಲ್ಲಿ ಮತ್ತೊಂದು ಯುದ್ಧವಾಯಿತು. ಇದರಲ್ಲಿ ಫ್ರೆಂಚರಕಡೆ ೧೮ ಜನರೂ ಚೀಣಾದವರಕಡೆ ೨೫೦ ಜನರೂ ಸತ್ತರು. ಅಕ್ಟೋಬರು ೧೦ರಲ್ಲಿ ಲ್ಯಾಂಗ್ಸ್ನ ಎಂಬಸ್ಥಳದಲ್ಲಿ ಪುನಃ ಮತ್ತೊಂದು ಯುದ್ಧವಾಯಿತು. ಚೀಣಾದವರ ಕಡೆ ೩ ಸಾವಿರ ಜನರು ಸತ್ತದ್ದಲ್ಲದೆ ಅವರ ಸೈನ್ಯಾಧಿಪತಿಯೂ ಸತ್ತನು. ಫ್ರೆಂಚರಕಡೆ ೧೧೦ ಜನರು ಸತ್ತರು.

ಲಂಡನ್ ಪಟ್ಟಣದಲ್ಲಿ ಕೋತಿಗಳ ವಿದ್ಯಾಭ್ಯಾಸಕ್ಕೋಸ್ಕರ ಒಂದು ಪಾಠಶಾಲೆಯನ್ನು ಏರ್ಪಡಿಸಿ ಇದ್ದಾರೆ. ಬಹಳ ಗಟ್ಟಿಗರಾದ ೧೦—೧೨ ಮಂದಿ ವಿದ್ವಾಂಸರು ಕೋತಿಗಳಿಗೆ ಮಾತನಾಡುವದನ್ನು ಕಲಿಸುತ್ತಾ ಇದ್ದಾರೆ. ಮರದಲ್ಲಿ ಅಕ್ಷರಗಳನ್ನು ಮಾಡಿ ಬಣ್ಣ

ಹಾಕಿ ಅವುಗಳ ಎದುರಿಗೆ ಇಡುವರು. ಅವು ಇವರು ಹೇಳಿದ ಶಬ್ದಗಳಿಗೆ ತಕ್ಕ ಅಕ್ಷರಗಳನ್ನು ತೆಗೆದುಕೊಟ್ಟರೆ ಅವುಗಳಿಗೆ ಒಂದು ಬೊಂಡಾ ಆಗಲೀ ರೊಟ್ಟೀ ಆಗಲೀ ಕೊಡುವರು. ಈರೀತಿಯಲ್ಲಿ ಕೋತಿಗಳು ಬಹಳ ಉಚ್ಛ್ರಾಯಸ್ಥಿತಿಗೆ ಬಂದಿವೆಯಂತೆ.

ನಾಗಪೂರ್ ಪ್ರಾಂತ್ಯದಲ್ಲಿ ಟೋಂಟಿಯಾಬಿಲ್ ಎಂಬ ಒಬ್ಬ ಕಳ್ಳ ನಿದ್ದಾನೆ. ಇವನು ಅನೇಕ ಅಕೃತ್ಯಗಳನ್ನು ಮಾಡಿ ಇದ್ದಾನೆ. ಇವನು ಈ ಕಳ್ಳತನವನ್ನು ಬಿಟ್ಟು ಗೃಹಸ್ಥನಾಗಿರಬೇಕೆಂಬ ಅಭಿಲಾಷೆಯಿಂದ, ತಾನು ಬಹಿರಂಗವಾಗಿ ಪೋಲೀಸ್ ಜವಾನರಿಗೆ ವಶನಾದರೆ ತನ್ನ ಮೇಲೆ ಬರತಕ್ಕ ಅಪರಾಧಗಳನ್ನೆಲ್ಲಾ ವಿಮೋಚನೆ ಮಾಡಿಸತಕ್ಕ ವಕೀಲನಿಗೆ ೧೦,೦೦೦ ರೂಪಾಯಿ ಕೊಡುವಂತೆ ಪ್ರಕಟಿಸಿ ಇದ್ದಾನೆ.

ಆಫ್ರಿಕಾ ಖಂಡದಲ್ಲಿ ಟಿಕ್ ಟಿಃ ಎಂಬ ಜನರು ಇದ್ದಾರೆ. ಈ ಕಲಿಯುಗದ ವಾಮನಮೂರ್ತಿಗಳಲ್ಲಿ ಬಹಳ ಉದ್ದವಾಗಿರುವವರು ೪ ಅಡಿಗಳಿಗಿಂತ ಎತ್ತರವಾಗಿ ಇಲ್ಲ.

ಇಲಾಯತಿಯಲ್ಲಿ ಒಬ್ಬ ರೈತನ ಹೆಂಡತಿಯು ನಾಲ್ಕು ಜನ ಹೆಣ್ಣುಮಕ್ಕಳನ್ನು ಹೆತ್ತಳು. ಎಲ್ಲರೂ ಕ್ಷೇಮವಾಗಿ ಇದ್ದಾರಂತೆ.

ಎಫ್. ಎಸ್. ಛತ್ತರ್ ಜಿ ಸರ್ಜ್ಞರವರು ೫೦೦೦ರೂಪಾಯನ್ನು ಬಡ್ಡಿಗೆ ಹಾಕಿ ಅದರ ಉತ್ಪತ್ತಿಯಿಂದ ಕಲ್ಕತ್ತಾ ವೈದ್ಯಪಾಠಶಾಲೆಯಲ್ಲಿ ಬುದ್ಧಿವಂತರಾದ ನಮ್ಮದೇಶದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವದಾಗಿ ಏರ್ಪಾಡುಮಾಡಿ ಇದ್ದಾರೆ.

ಕಾಬೂಲಿನಲ್ಲಿ ಒಬ್ಬ ಮೌಲ್ವಿಯು ಇದ್ದನು. ಈತನು ಬಹಳ ಒಳ್ಳೇವನೆಂದು ಪ್ರಸಿದ್ಧಿಯನ್ನು ಪಡೆದು ಇದ್ದನು. ಒಂದಾನೊಂದು ದಿನ ಈತನಿಗೂ ಕೆಲವರು ದುಷ್ಟರಿಗೂ ಜಗಳಬಂತು. ಅಲ್ಲಿನ ನವಾಬರಾದ ಅಮೀರರು ಈ ಜಗಳವನ್ನು ನೋಡಿ ಈ ಮಹಮ್ಮದೀಯ ವೈದಿಕನಮೇಲೆ ಕೋಪಿಸಿ ಆತನನ್ನು ಸಾಯುವವರಿಗೂ ಹೊಡಿಸಿದನು.

ಕಲ್ಕತ್ತೆಯ ಜೈಲಿನಲ್ಲಿ ಒಬ್ಬ ಹೆಂಗಸನ್ನು ಗಲ್ಲಿಗೆ ಹಾಕಿದರು. ಇವಳು ಆಭರಣದಮೇಲಿನ ಆಸೆಯಿಂದ ಇನ್ನೊಬ್ಬಳನ್ನು ಕೊಂದಳಂತೆ. ದರಿಯಾಪ್ತಿಯಲ್ಲಿಯೂ ಸಾಯುವಾಗಲೂ ಸಹ ಅವಳು ಆ ತಪ್ಪು ತಾನು ಮಾಡಲೇ ಇಲ್ಲವೆಂತಲೂ ತನ್ನನ್ನು ಗಲ್ಲಿಗೆ ಹಾಕುವದು ಅನ್ಯಾಯವೆಂತಲೂ ಕೂಗಿ ಕೊಳ್ಳುತ್ತಿದ್ದಳಂತೆ.

ಕಳೆದ ತಿಂಗಳು ತಾರೀಖು ೭ ರಲ್ಲಿ ಚಂಬಾ ದೇಶದ ಮಹಾರಾಜರವರಿಗೆ ಪಟ್ಟಾಭಿಷೇಕವಾಯಿತು.

ಅಳಿದ ಊರಿಗೆ ಉಳಿದವನೇ ಗೌಡ.

ಚೇಳು ಕಡಿದರೆ ಮಾವಿನ ಬೀಜದ ತಿರುಳನ್ನು ಪುಡಿಮಾಡಿ ನೀರಿನಲ್ಲಿ ಕಲಸಿ ಪಟ್ಟು ಹಾಕಿ ಬೆಂಕಿಯಲ್ಲಿ ಕಾಸಿಕೊಂಡರೆ ೧೦-೧೫ ನಿಮಿಷಗಳೊಳಗಾಗಿ ಲಘುವಾಗುವದು.

ಕಲ್ಕತ್ತೆಯಲ್ಲಿ ಥಳಥಳಿಸುತ್ತಿದ್ದ ಒಂದು ಕೆಂಪಿನ ಉಂಗುರವು ಹರಾಜು ಆಯಿತು. ಅದರ ಕಾಂತಿಯನ್ನು ಕಂಡು ಜನರು ಬೆರಗಾಗಿ ೪೦೦-೫೦೦ ರೂಪಾಯಿವರೆಗೂ ಟೆಂಡರ ಖಾಸ್ತು ಮಾಡಿದರು. ಅಷ್ಟರಲ್ಲಿಯೇ ಒಬ್ಬ ವರ್ತಕನು ಅದು ಖೋಟಾಕಲ್ಲೆಂದು ಹೇಳಿದನು. ಆಗ ಇತರವರ್ತಕರೆಲ್ಲಾ ತಮ್ಮ ದರಖಾಸ್ತುಗಳನ್ನು ವಾಪಸು ತೆಗೆದುಕೊಂಡರು. ಮಾರನೇದಿನ ಅದನ್ನು ಪುನಃ ಹರಾಜು ಹಾಕಿದರು. ಆಗ ಕೆಲವರು ಚಿಲ್ಲರೇ ವರ್ತಕರೆಲ್ಲಾ ಸೇರಿ ಇದನ್ನು ೨೦೦ ರೂಪಾಯಿಗೆ ತೆಗೆದು ಕಟ್ಟಣದಿಂದ ಮಣಿಯನ್ನು ಈಚೆಗೆ ತೆಗೆಯಲು ಅದು ಒಂದು ಕಾಸೂ ಬಾಳದ ಕಲ್ಲಾಗಿತ್ತು.

೮. ಒಗಟಿಗಳು.

(೧) * ವೃಕ್ಷಾಗ್ರವಾಸೀ ನತು ಪಕ್ಷಿರಾಜಃ ॥ ತ್ರಿಣೇತ್ರಧಾರೀ ನ ಚ ಶೂಲಪಾಣಿಃ ॥
ಜಲಾಂತರಸ್ಥೋ ನತುಮೇಘ ರಾಜಃ ನದೇವರಕ್ಷೋರಗಮಾನುಷೇಷು ॥

(೨) * ತೃತೀಯಂ ಭವರಾಜೇಂದ್ರ ಚತುರ್ಥಂ ಪಂಚಮಂ ತವ ॥
ಪ್ರಥಮಂ ತವಶತ್ರೂಣಾಂ ದ್ವಿತೀಯಂ ಮಯಿ ತಿಷ್ಠತು ॥

(೩) ಹುಟ್ಟುತಲಿ ಹಸುರಹುದು ಪಚ್ಚೆತಾನಲ್ಲ ॥
ಬೆಳೆಯುತಲಿ ಕೆಂಪಹುದು ಮಾಣಿಕ್ಯವಲ್ಲ ॥
ಕಟ್ಟಕಡೆಯಲಿ ಕಪ್ಪುಕಸ್ತೂರಿ ಅಲ್ಲ ॥
ಇದು ಹೇಳಬಲ್ಲ ಜಾಣರಿಗೆ ಅರಿದಲ್ಲ ॥

(೪) ಮಗ್ಗಾಗಿ ಅರಳುವದು ಪುಷ್ಪತಾನಲ್ಲ ॥
ಉಗ್ಗಡಿಸಿ ನೋಡಿದರೆ ಪರಿಮಳವು ಇಲ್ಲ ॥
ರಾಜ ರಾಜರ ಮುಂದೆ ಮೇಲೊಪ್ಪುತಿಹುದಲ್ಲ ॥
ಇದು ಹೇಳಬಲ್ಲ ಜಾಣರಿಗೆ ಅರಿದಲ್ಲ ॥

೧ನೇ ಸಂಚಿಕೆಯಲ್ಲಿನ ಒಗಟಿಗಳಿಗೆ ಉತ್ತರ.

(೧) ಆಲದಮರ. (೨) ನವಿಲು. (೩) ಒಂದುದಿನ. (೪) ಹಲಸಿನ ಹಣ್ಣು.

---

* ಆನೆಕಲ್ಲುತಾ॥ ಅತ್ತಿಬೆಲೇ ಸ್ಕೂಲ್ ಮಾಸ್ಟರು ಕಳುಹಿಸಿದ್ದು.

ಹಿತಬೋಧಿನಿ.

ತಾರಣಸಂವತ್ಸರ,—ಮಾರ್ಗಶಿರಮಾಸ.

ಸಂಪುಟ ೧.] ಡಿಸೆಂಬರ್. [ಸಂಚಿಕೆ ೩.

೧. ವೈದ್ಯಶಾಸ್ತ್ರ.

ವೈದ್ಯಶಾಸ್ತ್ರವು ಎರಡು ಭಾಗವಾಗಿದೆ. ಮೊದಲನೇ ಭಾಗಕ್ಕೆ ಆರೋಗ್ಯವು ಕಟ್ಟು, ರೋಗಗಳು ಬರದಹಾಗೆ ಆಹಾರವ್ಯವಹಾರಗಳ ವಿಷಯವಲ್ಲಿಯೂ, ಸ್ನಾನಪಾನಾದಿಗಳ ವಿಷಯವಲ್ಲಿಯೂ ದೇಹಸಾಧನ ವಿಷಯವಲ್ಲಿಯೂ ಅನುಭವಶಾಲಿಗಳು ಬರೆದು ಇರತಕ್ಕ ಆರೋಗ್ಯ ಸೂತ್ರಗಳು. ಈ ಸೂತ್ರಗಳ ವಿಷಯವನ್ನೆಲ್ಲಾ ನಾವು ಆರೋಗ್ಯವಿಚಾರವೆಂಬದಾಗಿ ಬರೆಯುತ್ತಾ ಇದ್ದೇವೆ. ಅವುಗಳಿಗೆ ಅನುಸಾರವಾಗಿ ನಡೆದುಕೊಂಡರೆ ಪ್ರಾಯಶಃ ರೋಗಗಳು ಬರುವದಿಲ್ಲ. ಈ ಆರೋಗ್ಯ ಸೂತ್ರಗಳು ರೋಗ ಬರುವದಕ್ಕೆ ಮುಂಚೆ ಉಪಯೋಗಕರಗಳು. ರೋಗಪೀಡಿತರಾದವರು ಆ ರೋಗಗಳನ್ನು ಔಷಧಗಳಿಂದಲೇ ನಿವಾರಣೆ ಮಾಡಿಕೊಳ್ಳಬೇಕು. ಬಂದಿರತಕ್ಕ ರೋಗವನ್ನು ನಿವಾರಣೆ ಮಾಡಿಕೊಳ್ಳತಕ್ಕ ವಿಷಯವನ್ನು ತಿಳಿಸುವದೇ ವೈದ್ಯಭಾಗವು. ಈ ಭಾಗವನ್ನು ಎಲ್ಲರೂ ತಿಳಿದುಕೊಳ್ಳತಕ್ಕದ್ದು ಆವಶ್ಯಕವು. ಕೆಲವು ರೋಗಗಳು ತಲೆಯಲ್ಲಿಯೂ, ಕೆಲವು ಕೈಕಾಲುಗಳಲ್ಲಿಯೂ, ಕೆಲವು ಎದೆ ಹೊಟ್ಟೆ ಮುಂತಾದ ಪ್ರದೇಶಗಳಲ್ಲಿಯೂ ಬಾಧೆಯನ್ನು ಉಂಟುಮಾಡುವವು. ಕೆಲವು ರೋಗಗಳು ಬಂದಾಗ ಸರ್ವಾಂಗದಲ್ಲಿಯೂ ನೋವು ತೋರುವದು. ಈ ರೋಗಗಳನ್ನು ವಿಚಾರಮಾಡಿ ಅವುಗಳಿಗೆ ತಕ್ಕ ಚಿಕಿತ್ಸೆಗಳನ್ನೆಲ್ಲಾ ತಿಳಿಸುವದಕ್ಕೆ ಮುಂಚೆ ಮನುಷ್ಯ ಶರೀರದ ಪ್ರತಿಭಾಗಗಳನ್ನು ಆ ಭಾಗಗಳ ವ್ಯಾಪಾರಗಳನ್ನೂ ತಿಳಿದುಕೊಳ್ಳುವದು ಮುಖ್ಯವಾದದ್ದರಿಂದ ಮೊದಲು ಅವುಗಳನ್ನು ಸ್ವಲ್ಪಮಟ್ಟಿಗೆ ಇಲ್ಲಿ ಹೇಳುವೆವು.

ಅಟ್ಟಪಾಯಸದಲ್ಲಿ ಕೆರಾ ಇಟ್ಟಹಾಗೆ.

ಮನುಷ್ಯನ ಶರೀರದಲ್ಲಿ ಇರತಕ್ಕ ಚರ್ಮಮಾಂಸಗಳನ್ನು ತೆಗೆದು ಬಿಟ್ಟರೆ ಎಲುಬುಗಳ ಆಕಾರವು ಇಲ್ಲಿ ಬರೆದಿರುವ ಚಿತ್ರದಂತಿರುವದು.



1. ಹಣೆಯ ಮೂಳೆ.
2. ನಡುನೆತ್ತಿಯ ಮೂಳೆ
3. ಕಿವಿಯಹಿಂಭಾಗದ ಮೂಳೆ.
4. ಹಲ್ಲುಗಳು.
5. ಗಡ್ಡದ ಮೂಳೆ.
6. ಹೆಕ್ಕತ್ತಿನ ಮೂಳೆಗಳು.
7. ಭುಜದ ಕೀಲು.
8. ಎಡತೋಳಿನ ಮೂಳೆ.
9. ಗುಂಡಿಗೇಕಂಭದ ಮೂಳೆ.
10. ಬಲತೋಳಿನಮೂಳೆ.
11. ನಡುವಿನ ಮೂಳೆಗಳು.
12. ಕೂಪಕವು.
13. ಮೊಳಕೈ ಹೊರಪಕ್ಕದ ಮೂಳೆ.
14. ಮೊಳಕೈ ಬಲಪಕ್ಕದ ಮೂಳೆ.
15. ಕೈಕಂಕಣದ ಕೀಲು.
16. ಬೆರಳುಗಳು.
17. ತೊಡೇಕೀಲು.
18. ತೊಡೆಮೂಳೆ.
19. ಮೊಳಕಾಲು ಕೀಲು.
20. ಹೊರಗಡೆಯ ಹಿಂಗಾಲಿನ ಮೂಳೆ.
21. ಒಳಗಡೆಯ ಮುಂಗಾಲು ಕುದುರೇಮೂಳೆ.
22. ಕಾಲುಕಂಕಣದಕೀಲು
23. } ಪಾದದ ಮೂಳೆಗಳು.
24. }

ಅಟ್ಟ್ಯಾಪೋದು ಆರುಕೋಟಲೆ, ತಿರದುಂಬೋದು ಪರಮಸುಖ.

ಇದರಲ್ಲಿ ಬೆನ್ನಿನಲ್ಲಿ ೨೬ ಮೂಳೆಗಳೂ, ತಲೆಯಲ್ಲಿ ೮ ಮೂಳೆಗಳೂ, ಮುಖದಲ್ಲಿ ೧೪ ಮೂಳೆಗಳೂ, ಎದೆಯಲ್ಲಿ ೧ ಮೂಳೆಯೂ, ಪಕ್ಕೆಗಳಲ್ಲಿ ೨೪ ಮೂಳೆಗಳೂ, ಬೆನ್ನಿನಲ್ಲಿ ಕೈಗಳಲ್ಲಿ ೬೪ ಮೂಳೆಗಳೂ, ಕಾಲಿನಲ್ಲಿ ೬೨ ಮೂಳೆಗಳೂ ಇವೆ. ಶರೀರಕ್ಕೆಲ್ಲಾ ಆಧಾರಭೂತವಾದವುಗಳು ಈ ಮೂಳೆಗಳೇ. ಈ ಮೂಳೆಗಳ ಮೇಲೆ ಮಾಂಸ, ರಕ್ತನಾಳಗಳು, ಚರ್ಮ, ಇವು ಒಂದರ ಮೇಲೊಂದು ಕ್ರಮವಾಗಿ ಇವೆ. ಶರೀರದಲ್ಲೆಲ್ಲಾ ಪೊಳ್ಳಿಲ್ಲದೆ ಗಟ್ಟಿಯಾಗಿ ರತಕ್ಕವುಗಳು ಕೈಕಾಲುಗಳು. ತಲೆಯೂ ಮುಂಡವೂ ಪೊಳ್ಳುಗಳು. ತಲೆಯಲ್ಲಿ ಮೆದುಳು ಸೇರಿಕೊಂಡಿದೆ. ಎದೆಯಲ್ಲಿ ಹೃದಯವೂ ಈ ಹೃದಯದ ಎರಡು ಪಾರ್ಶ್ವಗಳಲ್ಲಿಯೂ ಎರಡು ಶ್ವಾಸ ಕೋಶಗಳೂ ಇವೆ. ಹೊಟ್ಟೆಯಲ್ಲಿ ಯಕೃತ್ಖಂಡವೂ (Liver) ಪ್ಲೀಹವೂ (Spleen.) ವೃಕ್ವಕವೂ (Pancreas) ಮಲದ್ವಾರಗಳೂ, ಗಂಡಸರಲ್ಲಿ ಮೂತ್ರಕೋಶವೂ, ಹೆಂಗಸರಲ್ಲಿ ಗರ್ಭಕೋಶವೂ, ಇರುತ್ತವೆ. ಅನ್ನಕೋಶವು ಬಾಯಿಯಿಂದ ಬಂದು ನಾಳದಹಾಗೆ ಹೊಟ್ಟೆಯವರಿಗೂ ಬಂದು, ಅಲ್ಲಿ ವಿಸ್ತಾರವಾಗಿ ಚಿಕ್ಕ ಕರುಳಾಗಿ, ಅನಂತರದಲ್ಲಿ ದೊಡ್ಡ ಕರುಳಾಗಿ, ಹೊಟ್ಟೆಯಲ್ಲೆಲ್ಲಾ ಹರಡಿಕೊಂಡು, ಕೊನೆಗೆ ಮಲವಿಸರ್ಜನೆಯಾಗತಕ್ಕ ರಂಧ್ರವಾಗಿ ಪರಿಣಮಿಸುವದು. ರಕ್ತನಾಳಗಳು ಶರೀರದ ಸಕಲ ಭಾಗಗಳಲ್ಲಿಯೂ ತುಂಬಿಕೊಂಡಿವೆ. ಈ ನಾಳಗಳು ಎರಡುಮೂರು ವಿಧಗಳುಂಟು. ಹೃಯದಿಂದ ಈಚೆಗೆ ಬರುವ ರಕ್ತವು ಮೊದಲು ದೊಡ್ಡನಾಳಗಳ ಮುಖಾಂತರವಾಗಿ ಹರಿದು ಸಣ್ಣಸಣ್ಣ ನಾಳಗಳನ್ನು ಪ್ರವೇಶಿಸಿ ದೇಹದ ಸಮಸ್ತ ಅವಯವಗಳನ್ನೂ ಪೋಷಿಸುತ್ತಾ ಕಡೆಗೆ ಕೊಳಬಿಯಹಾಗಿರುವ ನಾಡಿಗಳ ಮುಖಾಂತರ ಹೃದಯಕ್ಕೇ ಬಂದು ಬೀಳುವದು. ಹೃದಯದಿಂದ ಈಚೆಗೆ ಬರುವ ರಕ್ತವು ಶುದ್ಧವಾಗಿ ಅಂದರೆ ಕೆಂಪಗೂ, ಅದಕ್ಕೆ ಹೋಗಿ ಬೀಳುವ ರಕ್ತವು ಅಶುದ್ಧವಾಗಿ ಅಂದರೆ ಸ್ವಲ್ಪ ಕಪ್ಪಗೂ ಇರುವದು. ಹೃದಯದಿಂದ ಈಚೆಗೆ ಶುದ್ಧವಾದ ರಕ್ತವನ್ನು ತರುವ ದೊಡ್ಡ ನಾಡಿಗೆ ರಕ್ತನಾಡಿಯೆಂದೂ, ಹೃದಯಕ್ಕೆ ಅಶುದ್ಧವಾದ ರಕ್ತವನ್ನು ತೆಗೆದುಕೊಂಡು ಹೋಗುವ ದೊಡ್ಡ ನಾಡಿಗೆ

ಬೃಹನ್ನಾಡಿಯೆಂದೂ ಹೇಳುವರು. ಈ ರೀತಿಯಲ್ಲಿ ರಕ್ತವು ದೇಹವೆಲ್ಲಾ ನಿರಂತರವೂ ಚರಿಸುತ್ತಿರುವದು. ನಾಳಗಳಲ್ಲಿ ಕೆಲವು ರಬ್ಬರಿನಹಾಗೆ ಎಳೆದರೆ ಉದ್ದವಾಗಿ ಬಿಟ್ಟರೆ ಚಿಕ್ಕದಾಗತಕ್ಕವುಗಳಾಗಿ ಇರುವ ಕಾರಣ ರಕ್ತವು ಈ ನಾಳಗಳಲ್ಲಿ ಹರಿಯುವಾಗ ಇವು ಬಡಿದುಕೊಳ್ಳುವಂತೆ ಕಾಣಬರುವವು. ಹೀಗೆ ಬಡಿದುಕೊಳ್ಳುವದನ್ನೇ ನಾವು ನಾಡೀಚಲನವೆಂದು ಹೇಳುತ್ತೇವೆ. ಆರೋಗ್ಯಸ್ಥಿತಿಯಲ್ಲಿರುವಾಗ, ೧ ನಿಮಿಷಕ್ಕೆ ಮಕ್ಕಳ ನಾಡಿಯು ಬಾಲ್ಯಾರಭ್ಯ ಒಂದು ವರ್ಷ ತುಂಬುವವರೆಗೆ ೧೪೦ ಸಾರಿಯೂ, ಆಮೇಲೆ ೩ ವರ್ಷ ತುಂಬುವವರೆಗೆ ೧೨೦ ಸಾರಿಯೂ, ಅನಂತರ ೭ ವರ್ಷದವರೆಗೆ ೧೦೦ ಸಾರಿಯೂ ಆಮೇಲೆ ೧೨ ವರ್ಷದವರೆಗೆ ೯೦ ಸಾರಿಯೂ, ತದನಂತರ ೫೦ ವರ್ಷದವರೆಗೆ ೭೫ ಸಾರಿಯೂ, ಮುದುಕತನದಲ್ಲಿ ೭೦ ಸಾರಿಯೂ ನಾಡಿಯು ಬಡಿದುಕೊಳ್ಳುವದು. ನಾಡೀ ನೋಡತಕ್ಕ ಸ್ಥಳಗಳು ಕೈಯಲ್ಲಿ ಮಾತ್ರವೇ ಇಲ್ಲ. ಕತ್ತಿನಲ್ಲಿಯೂ ತೊಡೆಯಲ್ಲಿಯೂ ಇನ್ನೂ ಅನೇಕ ಸ್ಥಳಗಳಲ್ಲಿಯೂ ಕೂಡ ನೋಡಬಹುದು. ಸಾಮಾನ್ಯವಾಗಿ ಶರೀರವು ಆರೋಗ್ಯಸ್ಥಿತಿಯಲ್ಲಿರುವಾಗ ನಾಡಿಯು ಮೇಲೆ ಹೇಳಿದಷ್ಟು ಸಾರಿ ಬಡಿದುಕೊಳ್ಳುವದು. ಇದಾಗ್ಯೂ ಕೆಲವರಿಗೆ ಮಾತ್ರ ಆರೋಗ್ಯವಾಗಿ ಇರುವಾಗಲೂ ನಾಡಿಯು ನಿಧಾನವಾಗಿ ಇರುವದುಂಟು; ಆದರೆ ಶ್ರಮಪಟ್ಟಾಗ ದಿನಹಾ ಇಂಥಾ ಸಂದರ್ಭಗಳಲ್ಲಿ ನಾಡಿಯು ೧೦ ಸಾರಿ ಹೆಚ್ಚಾಗಿ ಆಗಲೀ ೧೦ ಸಾರಿ ಕಡಿಮೆಯಾಗಿ ಆಗಲೀ ಬಡಿದುಕೊಂಡರೆ ಅದು ರೋಗಚಿಹ್ನೆಯೆಂದು ತಿಳಿದುಕೊಂಡು ರೋಗವನ್ನು ಪರೀಕ್ಷಿಸಿ ಅದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಬೇಕು. ನಿರ್ಣಯವಾದ ಸಂಖ್ಯೆಗಿಂತ ಹೆಚ್ಚಾಗಿ ಬಡಿದುಕೊಂಡರೆ ಜ್ವರವೆಂದು ಗೊತ್ತು ಮಾಡಬಹುದು. ನಾಡಿಯು ನಿಧಾನವಾಗಿದ್ದರೆ ನಿಶ್ಶಕ್ತಿಯೆಂದು ತಿಳಿಯಬೇಕು, ಒಂದು ಸಾರಿ ವೇಗವಾಗಿಯೂ ಒಂದುಸಾರಿ ನಿಧಾನವಾಗಿಯೂ ಬಡಿದುಕೊಂಡರೆ ಜ್ವರವು ಸನ್ನಿಹಿತವಾಗಿದೆ ಯೆಂದು ಗೊತ್ತಾಗುತ್ತದೆ. ವಾಂತಿಭೇದಿಯ ಉಪದ್ರದಲ್ಲಿ ನಾಡಿಯು ಅತಿ ನಿಧಾನವಾಗಿ ಇರುವದು. ಶ್ವಾಸಕೋಶವು ಉಸುರನ್ನು ಎಳೆದುಕೊಂಡಾಗ ಊದಿಕೊಳ್ಳುತ್ತದೆ ಮತ್ತು ಉಸುರು

ಅಣ್ಣಾಪ್ಪ ಊರಿನಲ್ಲಿದ್ದರೂ ಸರಿ, ದಂಡಿನಲ್ಲಿದ್ದರೂ ಸರಿ.

ಚಿಟ್ಟಾಗ ಸಂಕುಚಿತವಾಗುತ್ತದೆ. ದೇಹಕ್ಕಾಗಲೀ ಮನಸ್ಸಿಗಾಗಲೀ ಆಯಾಸ ಬರುವ ಕೆಲಸವನ್ನು ಮಾಡಿದಾಗ ಉಚ್ಛ್ವಾಸ ನಿಶ್ವಾಸಗಳು ಹೆಚ್ಚಾಗುತ್ತವೆ. ಆರೋಗ್ಯಸ್ಥಿತಿಯಲ್ಲಿರುವ ಜನರು ೧ ನಿಮಿಷಕ್ಕೆ ೧೫ರಿಂದ ೧೮ ಸಾರಿವರಿಗೆ ಉಸುರು ಬಿಡುತ್ತಾರೆ. ಹೀಗೆ ಉಸುರು ಬಿಡತಕ್ಕದ್ದರಲ್ಲಿಯೂ ಬಹಳ ಹೆಚ್ಚು ಕಡಮೆಗಳಿದ್ದರೆ ಬಹುಶಃ ಶ್ವಾಸಕೋಶವು ಕೆಟ್ಟು ಇದೆ ಯೆಂದು ಗೊತ್ತು ಮಾಡಬೇಕು. ಮಕ್ಕಳು ಮಾತ್ರ ಹುಟ್ಟಿದ್ದು ಮೊದಲು ಎರಡು ವರ್ಷ ದವರಿಗೂ ೧ ನಿಮಿಷಕ್ಕೆ ೩೫ ಸಾರಿಯೂ, ಎರಡರಿಂದ ಒಂಭತ್ತು ವರ್ಷದ ವರಿಗೆ ಎಚ್ಚರವಾಗಿರುವಾಗ ೧೮ ಸಾರಿಯೂ ನಿದ್ದೆ ಮಾಡುವಾಗ ೨೩ ಸಾರಿ ಯೂ, ಒಂಭತ್ತರಿಂದ ಹದಿನೈದು ವರ್ಷದವರಿಗೆ ಎಚ್ಚರವಾಗಿದ್ದಾಗ ೨೦ ಸಾರಿಯೂ, ಮಲಗಿದ್ದಾಗ ೧೮ ಸಾರಿಯೂ, ಉಸುರು ಬಿಡುತ್ತಾರೆ.

ಬಾಯಿಯ ವಾಸನೆಯನ್ನು ನೋಡಿ ಜನರ ರೋಗವನ್ನು ನಿಷ್ಕರ್ಷಿಸ ಬಹುದು. ಬಹುಮೂತ್ರದಲ್ಲಿ ಬಾಯಿಯಿಂದ ಸ್ವಲ್ಪವಾಗಿ ಸೇಬಿನ ಹಣ್ಣಿನವಾಸ ನೆಯು ಹೊರಡುವದು. ಅಜೀರ್ಣಸಂಬಂಧವಾದ ರೋಗದಲ್ಲಿ ಒಂದು ವಿಧ ವಾದ, ಹುಳಿವಾಸನೆಯೂ ಜಲಾಂಶದೊಡನೆ ಸೇರಿದ ಗಂಧಕದ ವಾಸನೆಯೂ ಬರುವವು. ಮೂತ್ರರೋಗದವರ ಬಾಯಿಂದ ಮೂತ್ರದ ವಾಸನೆಯೂ ಸನ್ನಾಯಿ ಮುಂತಾದವುಗಳನ್ನು ವಿಶೇಷವಾಗಿ ಕುಡಿದು ಬರುವ ರೋಗವುಳ್ಳ ವರ ಬಾಯಿಂದ ಮೈಲುತುತ್ತದೊಡನೆ ಸೇರಿದ ಹುಳಿವಾಸನೆಯೂ ಬರುವವು.

೨. ಆ ರೋ ೦ ಗ್ಯ ವಿ ಚಾ ರ.

ಆರೋಗ್ಯವುಳ್ಳ ಜನರು ಭುಜಿಸಬೇಕಾದ ಆಹಾರದ ಪ್ರಮಾಣವು ವಯಸ್ಸಿಗೂ, ದೇಶಕಾಲಸ್ಥಿತಿಗೂ, ದೇಹಧರ್ಮಕ್ಕೂ, ಆಹಾರವಸ್ತು ವಿಶೇಷಕ್ಕೂ, ಮಾಡುವ ಕಷ್ಟಕೆಲಸಕ್ಕೂ ಅನುಗುಣವಾಗಿ ನಾನಾವಿಧವಾ ಗಿರುವದು. ಸಾಧಾರಣವಾಗಿ ಪುರುಷರು ಸ್ತ್ರೀಯರಿಗಿಂತ ಹೆಚ್ಚಾಗಿ ಕಷ್ಟ ಮಾಡುವದಕ್ಕೋಸ್ಕರ ಈ ಕಾರಣ ಅವರಿಗೆ ಆಹಾರವೂ ಹೆಚ್ಚಾಗಿ ಬೇಕು.

ಪ್ರಾಯದವರಿಗಿಂತ ಚಿಕ್ಕವರಿಗೆ ಅಂಗಾರಾಂಶವು ಇರುವ ಪದಾರ್ಥವು ಆರುಪಾಲು ಹೆಚ್ಚಾಗಿಯೂ, ನೈಟ್ರೋಜನ್ ಇರುವ ಪದಾರ್ಥವು ಮೂರು ಪಾಲು ಹೆಚ್ಚಾಗಿಯೂ ಬೇಕು. ಹತ್ತು ವರ್ಷದ ಮಕ್ಕಳಿಗೆ ದೊಡ್ಡವರು ಭುಜಿಸುವದರಲ್ಲಿ ಅರ್ಧಪಾಲೂ, ಹದಿನಾಲ್ಕು ವರ್ಷದವರಿಗೆ ದೊಡ್ಡವರಷ್ಟೇ ಆಹಾರವೂ ಅವಶ್ಯಕವು.

ನಮ್ಮ ಶರೀರಗಳು ಶಾಖವಾಗಿ ಇರುವದಕ್ಕೆ ಆಹಾರವೇ ಮುಖ್ಯವಾಗಿ ಕಾರಣಭೂತವಾದದ್ದು. ನಮ್ಮ ಆಹಾರದಲ್ಲಿನ ಅಂಗಾರಾಂಶವು ವಾಯುವಿನಲ್ಲಿರುವ ಆಕ್ಸಿಜನ್ ಎಂಬ ಪ್ರಾಣಾಧಾರಕಾಂಶದೊಡನೆ ಸೇರಿ ಶರೀರಕ್ಕೆ ಶಾಖವನ್ನು ಉಂಟುಮಾಡುವದು. ಈ ಶಾಖದಿಂದಲೇ ಶೀತಪ್ರದೇಶಗಳಲ್ಲಿಯೂ ಶೀತಕಾಲಗಳಲ್ಲಿಯೂ ಜನರಿಗೆ ಅಧಿಕವಾದ ಆಹಾರವು ಅವಶ್ಯಕವಾಗಿರುವದು. ಇದಲ್ಲದೆ ದೇಹಶ್ರಮವನ್ನು ಪಡತಕ್ಕವರಿಗೂ ಆಹಾರವು ಹೆಚ್ಚಾಗಿ ಬೇಕು.

ಜನರಲ್ಲಿ ಕೆಲವರು ಆಕಾರದಲ್ಲಿ ದೊಡ್ಡವರಾಗಿಯೂ, ಕೆಲವರು ಅಧಿಕವಾದ ಬಲವುಳ್ಳವರಾಗಿಯೂ, ಕೆಲವರು ರಕ್ತಪುಷ್ಟಿಯುಳ್ಳವರಾಗಿಯೂ, ಕೆಲವರು ದೃಢಕಾಯರಾಗಿಯೂ, ಇರುವರು. ಈ ಕಾರಣದಿಂದಲೂ ಆಹಾರಗಲ್ಲಿ ಪರಸ್ಪರ ತಾರತಮ್ಯ ಉಂಟು. ಕೆಲವರು ದುರಭ್ಯಾಸದಿಂದ ಚಿಕ್ಕಂದಿನಿಂದಲೂ ಹೆಚ್ಚಾಗಿ ಭುಜಿಸುವರು. ಸಾಧಾರಣವಾಗಿ ದೊಡ್ಡವರು ಸುಮಾರು ತೂಕದಲ್ಲಿ ೧|| ಅಥವಾ ೨ ಸೇರಿನಷ್ಟು ಘನರೂಪವಾದ ಪದಾರವನ್ನೂ, ೨ ಅಥವಾ ೩|| ಸೇರಿನಷ್ಟು ಜಲರೂಪವಾದ ಪದಾರ್ಥವನ್ನೂ ಭುಜಿಸುವರು. ಘನರೂಪವಾದ ಎಲ್ಲಾ ಆಹಾರವಸ್ತುಗಳಲ್ಲಿಯೂ ತಕ್ಕಮಟ್ಟಿಗೆ ನೀರು ಇದ್ದೇ ಇರುವದು. ಸುಲಭವಾಗಿ ಜೀರ್ಣಿಸದ ಪದಾರ್ಥಗಳನ್ನೂ ಚನ್ನಾಗಿ ಬೇಯಿಸದೆ ಇರುವುಗಳನ್ನೂ ತಿನ್ನುವದರಿಂದ ನಷ್ಟವೂ ದೇಹಕ್ಕೆ ಬಾಧಕವೂ ಮಾತ್ರವೇ ಅಲ್ಲದೆ ಮತ್ತೆ ಬೇರೆ ಇಲ್ಲ. ಯಾಕಂದರೆ, ಹಾಗೆ ಭುಜಿಸಿದ ಪದಾರ್ಥಗಳು ಜೀರ್ಣಕ್ಕೆ ಬಾರದೆ ಮಲರೂಪವಾಗಿ ವಿಸರ್ಜನೆಯಾಗುವವೇ ಹೊರ್ತು ದೇಹಕ್ಕೆ ಹತ್ತುವದಿಲ್ಲ.

ಯಾರಾಗಲೀ ಎಷ್ಟೆಷ್ಟು ಹೆಚ್ಚಾಗಿ ಕಷ್ಟಕೆಲಸ ಮಾಡುತ್ತಾ ಬರುವರೋ ಆಹಾರವೂ ಅಷ್ಟಷ್ಟು ಹೆಚ್ಚುತ್ತಾ ಬರಬೇಕು. ಹಾಗಿಲ್ಲದ ಕಷ್ಟ ಮಾತ್ರ ಮಾಡುತ್ತಾ ಬಂದರೆ, ಶಕ್ತಿಯು ಕಡಮೆಯಾಗಿ ಆರೋಗ್ಯವು ಕೆಡುವದು. ಸಾಮಾನ್ಯವಾಗಿ ಕಷ್ಟ ಮಾಡತಕ್ಕವನಿಗೆ ದಿನ ೧ಕ್ಕೆ ನೀರೂ ಸೇರಿಕೊಂಡು ಅವನ ಶರೀರದ ತೂಕದಲ್ಲಿ ೬೦ರಲ್ಲಿ ಒಂದು ಭಾಗದಷ್ಟು ಆಹಾರ ಬೇಕು.

ಆಹಾರವು ಸಾಲದೆ ಹೋದರೆ ಹಿಂದುಗಡೆಯೇ ದಣಿವೂ, ಯಾವ ಕೆಲಸ ಮಾಡುವದಕ್ಕೂ ಮನಸ್ಸಿಲ್ಲದೆ ಬೇಸರವೂ, ರೋಗವೂ, ಕೃಶತ್ವವೂ ಪ್ರಾಪ್ತವಾಗುವವು. ಹಸಿವಿನ ಆತುರದಿಂದ ಸುಲಭವಾಗಿ ಜೀರ್ಣಕ್ಕೆ ಬರದ ಪದಾರ್ಥಗಳನ್ನು ತಿನ್ನುವದರಿಂದಲೂ ದೇಹಕ್ಕೆ ಬಾಧಕ ವುಂಟು.

ಆಹಾರವನ್ನು ಭುಜಿಸದೆ ಉಪವಾಸ ಮಾಡುವದರಿಂದ ಬಹಳ ನಷ್ಟ ಉಂಟು. ಮೊದಲು ಶರೀರದ ಚರ್ಮವೆಲ್ಲಾ ಜಬ್ಬುಲು ಜಬ್ಬುಲಾಗುವದು. ಮೈಮೂಳೆಗಳು ಮೊದಲಿಗಿಂತ ಸ್ಪಷ್ಟವಾಗಿ ಕಾಣಬರುವವು. ಬುದ್ಧಿಯು ಮಂಕಾಗುವದು. ಯಾವಕೆಲಸ ಮಾಡುವದಕ್ಕೂ ಬೇಸರ ಉಂಟಾಗಿರುವದು. ಬಾಯಿ ಒಣಗಿ ಅಂಟಂಟಾಗುವದು. ಹೊಟ್ಟೆನೋಯುವದು. ಕತ್ತಿನಮೇಲೂ, ಎದೆಯಮೇಲೂ, ಭುಜಗಳಮೇಲೂ ಚರ್ಮವು ಹುರುಪು ಹುರುಪಾಗುವದು.

ಆಹಾರವನ್ನು ಮಿತಿಮೀರಿ ಭುಜಿಸುವದರಿಂದಲೂ ಅನೇಕ ಬಾಧಕಗಳುಂಟು. ಯಾವ ರೋಗವೂ ಇಲ್ಲದೆ ಆರೋಗ್ಯಸ್ಥಿತಿಯಲ್ಲಿರುವ ಜನರಲ್ಲಿ ಕೆಲವರು ತಮ್ಮ ಶರೀರಕ್ಕೆ ಅವಶ್ಯಕವಾಗಿರುವದಕ್ಕಿಂತಲೂ ಹೆಚ್ಚಾಗಿ ಭುಜಿಸುವರು. ಆದರೆ ಹೀಗೆ ಭುಜಿಸಿದವರು ಯಾವಬಾಧಕವೂ ಇಲ್ಲದೆ ಇರುವದು ಅಪರೂಪ. ಯಾವನಾಗಲೀ ತನ್ನ ಜೀರ್ಣಕೋಶಕ್ಕೆ ಎಷ್ಟುಶಕ್ತಿಯಿರುವದೋ ಅಷ್ಟೇ ಆಹಾರವನ್ನು ಕಾಲಕ್ಕೆ ಸರಿಯಾಗಿ ಭುಜಿಸುತ್ತಾ ಬಂದರೆ, ದೇಹಕ್ಕೆ ಯಾವಬಾಧಕವೂ ಇಲ್ಲದೆ ಬಹುದಿವಸ ಬದುಕುವನು.

ಅಬದ್ಧಕ್ಕೆ ಅಪ್ಪಣೆಯೇ ಅಂದರೆ, ಬಾಯಿಗೆ ಬಂದಹಾಗೆ.

ಜೀರ್ಣಶಕ್ತಿ ಸಾಲದವರೂ ಉಪವಾಸಮಾಡಿದವರೂ ಆತುರದಿಂದ ಆಹಾರವನ್ನು ಹೆಚ್ಚಾಗಿ ಭುಜಿಸುವರು. ಇದು ಬಹಳ ಕೆಟ್ಟದ್ದು. ಯಾಕಂದರೆ, ಹಾಗೆ ಹೆಚ್ಚಾಗಿ ತಿಂದ ಪದಾರ್ಥಗಳು ದೇಹದಲ್ಲಿಯೇ ನಿಂತು, ಕೊಳೆತು, ಕಾರ್ಬಾನಿಕ್ ಆಸಿಡ್ ಎಂಬ ವಿಷಮಯವಾದ ಸಂಕಲಿತ ಪದಾರ್ಥವನ್ನೂ ಗಂಧಕದೊಡನೆ ಸೇರಿದ ಹೈಡ್ರೋಜನ್ ಧಾತುವನ್ನೂ ಉತ್ಪತ್ತಿಮಾಡುವದು. ಇದರಿಂದಲೇ ಅಜೀರ್ಣವು ಪ್ರಾರಂಭವಾಗಿ, ಕರುಳುಗಳು ಕೆಟ್ಟು, ದೇಹವು ನಾನಾರೋಗಗಳಿಗೆ ಗುರಿಯಾಗುವದು.

ನಮ್ಮಲ್ಲಿ ಕೆಲವರು ದಿನ ೧ಕ್ಕೆ ಒಂದೇ ಸಾರಿಯೂ ಕೆಲವರು ೨ಸಾರಿಯೂ ಮತ್ತು ಕೆಲವರು ೩ಸಾರಿಯೂ ಊಟಮಾಡುವರು. ಹೀಗೆ ತಾರತಮ್ಯವಿರುವದಕ್ಕೆ ಅಭ್ಯಾಸವೇ ಕಾರಣವೆಂದು ಕೆಲವರು ನಂಬಿ ಇರುವರು. ಆದರೆ ಇದು ದೇಹಕ್ಕೆ ಬಾಧಕವೇ ಹೊರತು ಮತ್ತೆ ಬೇರೆ ಇಲ್ಲ. ಕೆಲವರು ರಾತ್ರಿಕಾಲ ಹೊರತು ಸದಾಕಾಲವೂ ಸಿಕ್ಕಿದ್ದನ್ನೆಲ್ಲಾ ತಿನ್ನುತ್ತಾ ಇರುವರು. ಹೀಗೆಮಾಡುವದರಿಂದ ಜೀರ್ಣಕೋಶವು ಸ್ವಲ್ಪವೂ ವಿರಾಮವಿಲ್ಲದೆ ಕೆಟ್ಟು ಹೋಗುವದು.

ಹಗಲು ಕೆಲಸಮಾಡುತ್ತಿರುವವರು ಸಾಧಾರಣವಾಗಿ ೫ ಘಂಟೆಗೆ ಒಂದುಸಾರಿ ಅಂದರೆ ದಿನಕ್ಕೆ ಮೂರುಸಾರಿ ಊಟಮಾಡಬಹುದು. ಮಕ್ಕಳು ದಿನಕ್ಕೆ ನಾಲ್ಕುಸಾರಿ ಊಟಮಾಡಬೇಕು. ಬೆಳಗ್ಗೆ ಮಧ್ಯಾಹ್ನ ಸಾಯಂಕಾಲಗಳಲ್ಲಿ ಅಂದರೆ ದಿನಕ್ಕೆ ಮೂರುಸಾರಿ ಊಟಮಾಡುವವರು ತಾವು ದಿನ ೧ಕ್ಕೆ ತಿನ್ನಬೇಕಾದ ಪದಾರ್ಥವನ್ನು ೯ ಭಾಗಮಾಡಿ ಅದರಲ್ಲಿ ೩ಭಾಗವನ್ನು ಬೆಳಗ್ಗೆಯೂ, ೪ ಭಾಗಗಳನ್ನು ಮಧ್ಯಾಹ್ನದಲ್ಲಿಯೂ, ೨ ಭಾಗಗಳನ್ನು ಸಾಯಂಕಾಲದಲ್ಲಿಯೂ ಭುಜಿಸಬೇಕು. ಮಧ್ಯಾಹ್ನದಲ್ಲಿ ಹೊತ್ತು ಮೀರಿ ಊಟಮಾಡುವವರು ೯ರಲ್ಲಿ ನಾಲ್ಕು ಭಾಗಗಳನ್ನೂ, ಸಾಯಂಕಾಲಕ್ಕೆ ಸ್ವಲ್ಪ ಮುಂಚೆ ಅದರಲ್ಲಿ ಅರ್ಧಪಾಲನ್ನೂ ಭುಜಿಸಬೇಕು.

೩. ಕಣ್ಣುಗಳನ್ನು ಕಾಪಾಡುವ ಕ್ರಮ.

“ ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ ” ಎಂಬಂತೆ ಮನುಷ್ಯ ದೇಹದಲ್ಲಿರುವ ಇಂದ್ರಿಯಗಳಲ್ಲೆಲ್ಲಾ ನೇತ್ರೇಂದ್ರಿಯವು ಅತ್ಯಂತ ಮುಖ್ಯವಾದದ್ದು. ಕಣ್ಣಿಗೆ ಸಾಧಾರಣವಾಗಿ ಶರೀರದಲ್ಲಿರುವ ರಕ್ತಪ್ರವಾಹದ ಸಂಬಂಧವಿದ್ದು ಶರೀರಕ್ಕೆ ಯಾವಯಾವ ಅವಸ್ಥೆಗಳು ಪ್ರಾಪ್ತವಾಗುವವೋ ಅವುಗಳೆಲ್ಲಾ ಇದಕ್ಕೂ ಪ್ರಾಪ್ತವಾಗುವವಾದ್ದರಿಂದ ಶರೀರಸೌಖ್ಯಕ್ಕೆ ಕೊರತೆ ಬಂದರೆ ಇದಕ್ಕೆ ಬಾಧೆಯುಂಟಾಗುವದು.

ಈ ಮುಖ್ಯವಾದ ಇಂದ್ರಿಯವನ್ನು ಕಾಪಾಡುವ ಕ್ರಮವು ತಿಳಿಯದೆ ಇದ್ದರೆ ಉಂಟಾಗುವ ಬಾಧಕಗಳು ಅನೇಕವಾಗಿರುವವು. ಅವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ಹೇಳುವೆವು. ಕಣ್ಣಿಗೆ ಬಾಧಕ ಉಂಟಾಗುವದಕ್ಕೆ ಮುಖ್ಯಕಾರಣಗಳ್ಯಾವವೆಂದರೆ: (೧) ಕಣ್ಣು ಚುಚ್ಚುವಷ್ಟು ಬಹಳ ಪ್ರಕಾಶಮಾನವಾಗಿರುವ ಬೆಳಕನ್ನಾಗಲೀ ಮಂಕಾಗಿರುವ ಬೆಳಕನ್ನಾಗಲೀ ನೋಡುತ್ತಾ ಬಲಾತ್ಕಾರವಾಗಿ ಕಣ್ಣು ತೆರೆದುಕೊಂಡಿರುವದು. (೨) ಕಾಲಮೀರಿ ನಿದ್ದೆಬಿಟ್ಟು ಎಚ್ಚೆತ್ತು ಇರುವದು. (೩) ಕಣ್ಣು ಉರಿಯುತ್ತಿದ್ದಾಗಲಾಗಲೀ ಬಹಳ ದಣಿದು ಇರುವಾಗಲಾಗಲೀ ಏನಾದರೂ ಕೆಲಸ ಮಾಡುತ್ತಾ ಇರುವದು.

ಇವುಗಳಲ್ಲಿ ೧ನೇದು.—ಅಸ್ತಮಯ ಕಾಲದಲ್ಲಿ ಸಂಧ್ಯಾರಾಗವು ಕಡಿಮೆಯಾಗುತ್ತಾ ಇದ್ದಾಗ ಕೆಲಸಮಾಡುವದಕ್ಕೆ ಪ್ರಾರಂಭಿಸುವದೂ, ಕಣ್ಣುಗಳನ್ನು ಬಲಾತ್ಕಾರವಾಗಿ ಬಿಟ್ಟುಕೊಂಡು ನೋಡುವದೂ ಎಲ್ಲೆಲ್ಲಿಯೂ ಎಲ್ಲರಿಗೂ ವಾಡಿಕೆಯುಂಟು. ಇದು ಕೆಟ್ಟದ್ದು. ಇದಲ್ಲದೆ ಅನೇಕರಿಗೆ ರೋಗವು ತೀರಿ ಸೌಖ್ಯವಾಗುವಾಗಲೂ ಕಣ್ಣಿಗೆ ಬಾಧೆಯುಂಟಾಗುವದು.

ಈ ವಿಷಯದಲ್ಲಿ ಮಕ್ಕಳ ವಿಷಯವಾಗಿಯೂ ವಿದ್ಯಾರ್ಥಿಗಳ ವಿಷಯವಾಗಿಯೂ ತಂದೆತಾಯಿಗಳೂ ಉಪಾಧ್ಯಾಯರೂ ತುಂಬಾ ಜಾಗರೂಕರಾಗಿ ಇರಬೇಕು. ಸಾಯಂಕಾಲದಲ್ಲಿ ಬೆಳಕು ಕಡಿಮೆಯಾದಾಗಲೂ ರಾತ್ರಿ

ವೇಳೆಗಳಲ್ಲಿ ದೀಪದ ಬೆಳಕು ಕಡಿಮೆಯಾಗಿ ಇರುವಾಗಲೂ ಅವರು ಓ
ದಂತೆ ನೋಡಿಕೊಳ್ಳಬೇಕು. ಕೆಲವರು ದಾರಿಯಲ್ಲಿ ಹೋಗುತ್ತಾ ಬ
ಬಾರಿಗೂ ಪುಸ್ತಕವನ್ನು ತೆರೆದು ಮುಚ್ಚುತ್ತಾ ಗೋಣಗುಟ್ಟಿಕೊಂಡು ಹೋ
ವದುಂಟು. ಇದುಕೂಡದು. ಇದಲ್ಲದೆ ಅವರು ತಾವು ನೋಡುವ ಪದಾ
ಗಳನ್ನು ಕಣ್ಣಿಗೆ ಹತ್ರ ಇಟ್ಟುಕೊಳ್ಳದಂತೆಯೂ, ತಲೆಯನ್ನು ಬಗ್ಗಿ
ಕೊಂಡು ಇರದೆ ಇರುವಂತೆಯೂ ನೋಡಿಕೊಳ್ಳಬೇಕು. ಕಣ್ಣಿಗೆ ವ್ಯಾಪ
ರವು ಅಧಿಕವಾಗಿರುವ ಸಮಯದಲ್ಲಿ, ಪುಸ್ತಕಗಳಾಗಲೀ, ಇತರ ವಸ್ತು
ಗಳಾಗಲೀ, ಸಾಧಾರಣವಾಗಿ ಅಥವಮಪಕ್ಷ ೧೦ ಅಂಗುಲದ ದೂರಕ್ಕೆ ಕಡಿಮೆ
ಯಿಲ್ಲದಂತೆಯೂ, ೨೦ ಅಂಗುಲದ ದೂರಕ್ಕೆ ಹೆಚ್ಚಿಲ್ಲದಂತೆಯೂ ಇರಬೇಕು.
ಕಣ್ಣಿಗೆ ಆವಶ್ಯಕವಾಗಿರುವ ಬೆಳಕಿನ ಪ್ರಮಾಣವು ಬಹಳ ಸ್ವಲ್ಪವಾಗಿರು
ವದು. ಬೆಳಕು ನಾಲ್ಕುಕಡೆಯೂ ವ್ಯಾಪಿಸಿ ಅದರ ಕಿರಣಗಳು ಎಷ್ಟು
ಕೆಳಕ್ಕೆತಗ್ಗಿ ಕಣ್ಣಿನಲ್ಲಿ ಪ್ರವೇಶಿಸಿದರೆ ಅಷ್ಟುಒಳ್ಳೇದು. ಎಲ್ಲಾಕಡೆಯೂ
ಏಕರೀತಿಯಾಗಿ ಪ್ರಸರಿಸುವ ಹಗಲಿನ ಬೆಳಕೇ ಇದಕ್ಕೆ ಉದಾಹರಣೆಯಾಗಿ
ಇದೆ. ಒಂದುಕಡೆ ಬೆಳಕನ್ನೂ ಮತ್ತೊಂದುಕಡೆ ಕತ್ತಲೆಯನ್ನೂ ಬಿಟ್ಟು
ಬಿಟ್ಟು ನೋಡುವದು ಬಹಳ ಸಂಕಟವಾಗಿರುವದು. ಈರೀತಿಯಾಗಿ ಸಾ
ಸಾರಿಗೂ ತಾವು ಉದ್ಯೋಗಿಸಿದ ಕೆಲಸ ಮುಗಿಯಬೇಕೆಂಬ ಆತುರದಿಂದ
ಹೊತ್ತುಮುಳುಗುತ್ತಿರುವಾಗಲೂ ಕೆಲಸಮಾಡುತ್ತಿರುವರು. ಇದು ಬಹಳ
ಕೆಟ್ಟದ್ದು. ಆದ್ದರಿಂದ ಯಾರೇ ಆಗಲೀ ಈ ಕಟ್ಟವಾಡಿಕೆಗೆ ಆಸ್ಪದವಿಲ್ಲ
ದಂತೆ ಜಾಗರೂಕರಾಗಿ ಇರಬೇಕು. ರಾತ್ರಿಕಾಲಗಳಲ್ಲಿಯೂ ಸ್ವಲ್ಪಬೆಳ
ಕಿನಲ್ಲಿ ಕೆಲಸಮಾಡಬಾರದು. ರಾತ್ರಿಕಾಲದಲ್ಲಿ ಕೆಲಸಮಾಡುವಾಗ ಕಣ್ಣಿಗೆ
ಉಪದ್ರ ಉಂಟಾದರೆ ಆ ಕ್ಷಣವೇ ಮತ್ತೊಂದು ಬೆಳಕನ್ನು ಇಟ್ಟುಕೊಳ್ಳ
ಬೇಕು; ಇಲ್ಲದಿದ್ದರೆ ಅಧಿಕವಾಗಿ ದೃಷ್ಟಿಯಿಟ್ಟು ಮಾಡತಕ್ಕ ಕೆಲಸವನ್ನು
ಆದಿನ ನಿಲ್ಲಿಸಿಬಿಡಬೇಕು.

೨ನೇದು.—ಮೇಲೆ ಹೇಳಿದ ರೀತಿಯಾಗಿ ಸಾಕಾದಷ್ಟು ಬೆಳಕು
ಇದ್ದಾಗ್ಯೂ ಕಣ್ಣಿಗೆ ಉರಿಯುವದು ಮುಂತಾದ ಸಂಕಟಗಳು ಬರುವವೆಂದು

ತಿಳಿದುಬಂದರೆ ಆಕ್ಷಣವೇ ಕೆಲಸಮಾಡುವದನ್ನು ಬಿಟ್ಟುಬಿಡಬೇಕು. ಸ್ವಲ್ಪ ಹೊತ್ತು ಕಣ್ಣಿಗೆ ವಿಶ್ರಾಂತಿಯನ್ನುಕೊಟ್ಟು ಆಮೇಲೆ ಬೇಕಾದರೆ ಪುನಃ ಕೆಲಸಕ್ಕೆ ಪ್ರಾರಂಭಿಸಬಹುದು. ಸ್ವಲ್ಪಹೊತ್ತು ಕಣ್ಣುಗಳನ್ನು ಮುಚ್ಚಿಕೊಂಡು ಇದ್ದಾಗ್ಯೂ, ಇಲ್ಲದೆ ಮಲಗಿ ಸ್ವಲ್ಪ ನಿದ್ರೆಹೋದಾಗ್ಯೂ, ಅಥವಾ ಗಾಳಿಯಲ್ಲಿ ತಿರುಗಾಡುತ್ತಾ ದೂರದಲ್ಲಿರುವ ದೊಡ್ಡದೊಡ್ಡ ಪದಾರ್ಥಗಳನ್ನೂ ಹಸುರಾಗಿರುವ ಪದಾರ್ಥಗಳನ್ನೂ ನೋಡುತ್ತಾಇದ್ದಾಗ್ಯೂ ಕಣ್ಣಿಗೆ ಬಾಧೆಯುಂಟಾಗಲಾರದು.

ಕ್ಷೀಣೇದು.—ಕಣ್ಣಿನ ಬಲ ಹೀನತ್ವದಿಂದ ಲಾಗಲೀ ದೇಹಸಾಮರ್ಥ್ಯಕ್ಕೆ ಕೊರತೆಯುಂಟಾದಾಗಲಾಗಲೀ ಅಥವಾ ಈ ಎರಡರಿಂದಲಾಗಲೀ ಕಣ್ಣಿಗೆಕೇಡು ಬರುವದು. ಮನುಷ್ಯನು ರೋಗಿಯಾಗಿ ಇದ್ದಾಗಲೂ ಅಕಸ್ಮಾತ್ತಾಗಿ ಕಣ್ಣಿಗೆ ಕೇಡು ಸಂಭವಿಸುವದು ಉಂಟು. ಈರೀತಿಯಲ್ಲಿಯೇ ತಿರುಗುತ್ತಿರುವ ಬೆಳಕೂ ಕಣ್ಣಿಗೆ ಅಸಹ್ಯಕರವಾಗಿಯೂ, ಬಾಧಕರವಾಗಿಯೂ ಇರುವದು. ಆಕಾಶದಲ್ಲಿನ ಅನೇಕ ಜ್ಯೋತಿಗಳನ್ನು ಏಕಕಾಲದಲ್ಲಿ ನೋಡುವದು ಕೆಟ್ಟದ್ದು. ಥಳಥಳ ಗುಟ್ಟುತ್ತಿರುವ ಬಳ್ಳೀ ಬೆಳಕನ್ನು ಕಪ್ಪುಗಾಜಿನ ಮುಚ್ಚಳದಿಂದ ಮುಚ್ಚಿದರೆ ಆ ಜ್ಯೋತಿಸ್ಸ್ವರೂಪವಾದ ಪ್ರಕಾಶವು ಉಂಟಾಗುವದು. ಈಪ್ರಕಾರವಾಗಿ ಸಹಿಸಕೂಡದ ಬೆಳಕನ್ನು ನೋಡುವದರಿಂದ ಕಣ್ಣು ಉರಿಯುವದು. ಆದ್ದರಿಂದ ಬೆಳಕನ್ನು ಕಪ್ಪುಗಾಜಿನ ಮುಚ್ಚಳದಿಂದ ಮುಚ್ಚಬಾರದು.

ಕಣ್ಣುಗಳನ್ನುಕಾಪಾಡುವ ಕ್ರಮದಲ್ಲಿ ಮತ್ತೊಂದುವಿಷಯವುಂಟು. ಬೆಳಕಿಗಾಗಿ ಪಾರ್ಶ್ವದ ಗೋಡೆಗಳಲ್ಲಿಟ್ಟಿರುವ ಕಿಟಕಿಯು ಬೆಳಕಿಗೆ ಅಭಿಮುಖವಾಗಿ ನಾವು ನೋಡುತ್ತಾ ಇರಕೂಡದು. ಆಕಾಶದಲ್ಲಿರುವ ಬೆಳಕೂ ಮೇಲಿನಿಂದ ಕೆಳಕ್ಕೆ ಬರುವ ಬೆಳಕೂ ತಲೆಯನ್ನು ಬಗ್ಗಿಸಿಕೊಂಡು ಮಾಡುವಕೆಲಸಕ್ಕೆ ವಿನಹಾ ಮಿಕ್ಕಾದ್ದಕ್ಕೆಲ್ಲಾ ಯೋಗ್ಯವಾದವುಗಳು. ಬರವಣಿಗೇ ಕೆಲಸವನ್ನು ಮಾಡುವಾಗಲೂ, ಓದುವಾಗಲೂ ಬಲಗೈ ನೆರಳು ತಗಲದೆ ಇರುವದಕ್ಕೋಸ್ಕರ ಎಡಗಡೆಯಿಂದ ಬೆಳಕು ಬೀಳುತ್ತಿರಬೇಕು.

ಯಾವವಿಷಯದಲ್ಲಿಯೂ ಬೆಳಕು ಕೆಳಗಿನಿಂದ ಮೇಲಕ್ಕೆ ಬರುವದಕ್ಕಿಂತ ಮೇಲಿನಿಂದ ಕೆಳಕ್ಕೆ ಬರುವದು ಬಹಳ ಒಳ್ಳೇದು. ಈವಿಷಯಗಳಲ್ಲೆಲ್ಲಾ ಎಲ್ಲರೂ ಜಾಗರೂಕರಾಗಿ ಇರಬೇಕು.

ಹೆಚ್ಚು ಬೆಳಕಿನಿಂದಲಾಗಲೀ ಸೂರ್ಯನು ಶುಭ್ರವಾದ ಪ್ರದೇಶಗಳ ಮೇಲೆ ತಗಲಿ ಪ್ರತಿಫಲಿಸಿದ ಬೆಳಕಿನಿಂದಲಾಗಲೀ ಕಣ್ಣಿಗೆ ಅಸಹ್ಯಉಂಟಾದರೆ, ಸ್ವಲ್ಪ ನೀಲವರ್ಣವಾಗಿಯಾಗಲೀ ಬೂದೀ ಬಣ್ಣವಾಗಿ ಆಗಲೀ ಇರುವ ಸುಲೋಚನಗಳನ್ನು ಇಟ್ಟುಕೊಂಡು ನೋಡುತ್ತಾ ಇದ್ದಪಕ್ಷದಲ್ಲಿ ಆಬೆಳಕು ಕಣ್ಣಿಗೆ ತಗುಲುವದಿಲ್ಲವಾದ್ದರಿಂದ ಬಹಳ ಒಳ್ಳೇದು. ಈ ಸುಲೋಚನಗಳನ್ನು ಇಟ್ಟುಕೊಳ್ಳುವದರಲ್ಲಿ ವಯಸ್ಸು ಹೆಚ್ಚಿದ ಹಾಗೆಲ್ಲಾ ಕುಂದಕ ಬರುವದರಿಂದ ಅವುಗಳನ್ನು ಆಗಾಗ್ಯೆ ಡಾಕ್ಟರುಗಳಿಗೆ ತೋರಿಸಿ ಬದಲಾಯಿಸುತ್ತಾ ಇರಬೇಕು. ಕಣ್ಣುಗಳಿಗೆ ಅವುಗಳನ್ನು ಬಿಡುವದಕ್ಕೆ ಆಗದಷ್ಟು ನೋವು, ದೌರ್ಬಲ್ಯ, ಮೊದಲಾದ ಸ್ಪಷ್ಟವಾದ ವ್ಯಾಧಿಗಳು ಸಂಭವಿಸಿದರೆ, ಸಮರ್ಥನಾದ ನೇತ್ರ ವೈದ್ಯನಿಗೆ ತೋರಿಸಿ ಪರಿಹಾರ ಮಾಡಿಕೊಳ್ಳಬೇಕು.

೪. ರಷ್ಯಾ ಚಕ್ರವರ್ತಿ ಬಡಿಗಿಯಾಗಿದ್ದದ್ದು.

೧೬೭೨ನೇ ಇಸವಿಯಲ್ಲಿ ರಷ್ಯಾದೇಶದ ಚಕ್ರವರ್ತಿಯಾದ ಪೀಟರ ದಿ ಗ್ರೇಟ್ ಎಂಬುವನು ಹುಟ್ಟಿದನು. ಆ ಕಾಲದಲ್ಲಿ ರಷ್ಯಾಜನಗಳು ಬಹಳ ಅನಾಗರಿಕರಾಗಿದ್ದರು. ಪೀಟರಿಗೆ ೧೮ ವರ್ಷಗಳಾದ ಕೂಡಲೆ ತನ್ನ ದೇಶೀಯರನ್ನು ನಾಗರಿಕರನ್ನಾಗಿ ಮಾಡಬೇಕೆಂಬದಾಗಿ ಕುತೂಹಲವುಳ್ಳವನಾದನು. ತನ್ನ ದೇಶದ ಜನರು ಐಶ್ವರ್ಯವಂತರೂ ನಾಗರಿಕರೂ ಆಗಬೇಕಾದರೆ ಅವರು ಪರದೇಶಗಳಿಗೆಹೋಗಿ ವ್ಯಾಪಾರದಲ್ಲಿ ಬುದ್ಧಿವಂತರಾಗಬೇಕು ನಿಷ್ಕರ್ಷೆ ಮಾಡಿ,ಇಂಥಾವ್ಯಾಪಾರಕ್ಕೆ ಉಪಯೋಗವಾದವುಗಳು ಹಡಗುಗಳು ಯೋಚಿಸಿ, ಅವುಗಳನ್ನು ಕಟ್ಟುವಂಥಾ ಮುಖ್ಯವಾದ ವಿದ್ಯೆಗಳನ್ನು

ತಾನು ಮೊದಲು ಕಲಿತುಕೊಂಡು ಅನಂತರದಲ್ಲಿ ತನ್ನ ಪ್ರಜೆಗಳಿಗೆಲ್ಲಾ ಕಲಿಸಬೇಕೆಂದು ನಿಶ್ಚಯಿಸಿ, ತನ್ನ ರಾಜ್ಯಭಾರವನ್ನು ಮಂತ್ರಿಗಳಿಗೆ ಒಪ್ಪಿಸಿ, ಸಾಮಾನ್ಯನಂತೆ ವೇಷವನ್ನು ಹಾಕಿಕೊಂಡು, ಯೂರೋಪು ಖಂಡದ ದೇಶಗಳನ್ನೆಲ್ಲಾ ಸಂಚರಿಸಿ, ಅಲ್ಲಿ ಪ್ರತಿಯೊಂದು ದೇಶದಲ್ಲಿಯೂ ಪ್ರಸಿದ್ಧವಾಗಿದ್ದ ಸಕಲ ವಿದ್ಯೆಗಳನ್ನೂ ತಿಳಿದುಕೊಂಡು, ಹಾಲೆಂಡಿಗೆ ಸೇರಿದ ಸಾರ್ಡೆಂ ಪಟ್ಟಣಕ್ಕೆ ಬಂದು, ಅಲ್ಲಿ ಒಂದುವರುಷದ ವರಿಗೂ ಬಡಗೀ ಕೆಲಸವನ್ನು ಮಾಡಿ ಬಂದ ಕೂಲೀದುಡ್ಡಿನಿಂದ ಸಾಧಾರಣರಂತೆ ಜೀವಿಸುತ್ತಿದ್ದನು. ಅನಂತರ ಈ ಬಡಗೀ ಕೆಲಸದಲ್ಲಿ ಸಮರ್ಥನಾಗಿ ತನ್ನ ರಾಜಧಾನಿಗೆ ಹೊರಡಬೇಕೆಂಬದಾಗಿ ಯೋಚಿಸಿ ಬಂದಾನೊಂದು ದಿನ ಹೀಗೆಂದು ಮಾತನಾಡಿಕೊಳ್ಳುತ್ತಿದ್ದನು. "ನಾನು ಬಂದು ಬಹಳ ದಿವಸವಾಯಿತು. ಈಗ ನನ್ನ ದೇಶಕ್ಕೆ ಹೋಗಬೇಕು. ಇಲ್ಲಿರತಕ್ಕ ಸಮಸ್ತ ಜನಗಳಿಗೂ ನನಗೂ ಸ್ನೇಹವಾಗಿ ಯಿದೆ. ಇವರಲ್ಲೆಲ್ಲಾ ಸ್ಟ್ಯೈರ್ಮಿಟ್ಸ್ ಎಂಬುವನು ಬಹಳ ಪ್ರಾಮಾಣಿಕನು. ನನ್ನ ಪೂರ್ವೋತ್ತರಗಳನ್ನು ಅವನೊಂದಿಗೆ ಹೇಳೋಣವೇ ಎಂದು ಬಂದು ಕಾಲದಲ್ಲಿ ಮನಸ್ಸು ಬರುವದು." ಹೀಗೆ ಅಂದುಕೊಳ್ಳುತ್ತಿದ್ದ ಕಾಲಕ್ಕೆ ಸರಿಯಾಗಿ ಸ್ಟ್ಯೈರ್ಮಿಟ್ಸ್ ಎಂಬುವನು ಬಂದು ಪೀಟರನನ್ನು ನೋಡಿ

ಸ್ಟ್ಯೈರ್ "ಅಯ್ಯಾ ಪೀಟರೇ, ನೀನು ಇನ್ನೂ ಇಲ್ಲಿಯೇ ಇದ್ದೀಯ? ನಿನ್ನ ಪೂರ್ವೋತ್ತರಗಳನ್ನು ನನ್ನೊಡನೆ ಹೇಳಬೇಕೆಂದು ಅಂದುಕೊಂಡೆಯಲ್ಲಾ. ಅದೇನು ?

ಪೀಟರು.—ಇನ್ನೇನೂ ವಿಶೇಷವಿಲ್ಲ. ನಾನು ಪ್ರಯಾಣ ಮಾಡುತ್ತೇನೆ.

ಸ್ಟ್ಯೈರ್ಮಿಟ್ಸ್.—ನಮ್ಮನ್ನೆಲ್ಲಾ ಬಿಟ್ಟು ಎಲ್ಲಿಗೆ ಹೋಗುತ್ತೀಯೆ ?

ಪೀ.—ನಮ್ಮ ಊರಿಗೆ ಹೋಗುತ್ತೇನೆ. ನಾನು ಇಲ್ಲಿಗೆ ಬಂದು ಒಂದು ವರ್ಷದ ಮೇಲಾಯಿತು.

ಸ್ಟ್ಯೈರ್.—ಅಯ್ಯೋ! ನೀನು ಹೋದ ಪಕ್ಷದಲ್ಲಿ ನಮ್ಮೆಲ್ಲರಿಗೂ ಬಹಳ ದುಃಖ ಪ್ರಾಪ್ತಿಯಾಗುವದು. ಇದಲ್ಲದೆ ನಮ್ಮ ಯಜಮಾನನು ನಿನ್ನಲ್ಲಿ

ಬಹಳ ವಿಶ್ವಾಸವುಳ್ಳವನಾಗಿ ಇದ್ದಾನೆ. ನೀನು ಹೊರಟು ಹೋದರೆ ಆತನು ಬಹಳವಾಗಿ ವ್ಯಸನ ಪಡುವನು.

ಪೀ.—ನೀವೆಲ್ಲರೂ ನನ್ನ ವಿಷಯದಲ್ಲಿ ಇಷ್ಟು ವಿಶ್ವಾಸವನ್ನು ಇಟ್ಟು ಇರುವದನ್ನು ನೋಡಿ ನನಗೆ ಬಹಳ ಸಂತೋಷವಾಗಿ ಇದೆ. ಆದರೆ ನಾನು ಇಲ್ಲಿ ಇರುವವರಿಗೂ ನಿಮಗೆ ಪ್ರಾಮುಖ್ಯವು ಕಡಮೆಯಲ್ಲವೆ?

ಸ್ಟ್ಯಾರ್ಕ.—ಹಾಗಲ್ಲಪ್ಪಾ ಅಲ್ಲ. ನಾನು ನಿನ್ನನ್ನು ಅಗಲಿ ಇರಲಾರೆನು. [illegible] ಹಿತವಾಗಿ ಇದ್ದೆವು. ನಿನ್ನ ವಿಷಯದಲ್ಲಿ [illegible] ಹಾಗೆಯೇ ಇದೆ. ನಿನ್ನ ದೇಶವೂ ನನ್ನ ದೇಶವೂ ಎರಡೂ ಒಂದೇ ಅಷ್ಟೆ. ನಾವಿಬ್ಬರೂ ಯಾಕೆ ಅಗಲಿರಬೇಕು. ನಡಿ. ಹೊರಟು ಹೋಗೋಣ.

ಸ್ಟ್ಯಾರ್ಕ.—ನೀನು ಹೇಳುವದೆಲ್ಲಾ ನಿಜ. ಇದಲ್ಲದೆ ನನ್ನ ತಂದೆ ತಾಯಿಗಳು ನನ್ನ ಆಗಮನವನ್ನೇ ನಿರೀಕ್ಷಿಸಿಕೊಂಡಿರುತ್ತಾರೆ. ಆದಾಗ್ಯೂ ಪುನಃ ನಮ್ಮ ದೇಶಕ್ಕೆ ಹೋಗುವದಕ್ಕೆ ಧೈರ್ಯವಿಲ್ಲ. ನಿನ್ನನ್ನು ಬಿಟ್ಟಿರುವದಕ್ಕೂ ಇಷ್ಟವಿಲ್ಲ. ಆದಕಾರಣ ನೀನುತಾನೇ ಯಾತಕ್ಕೆ ಹೋಗುತ್ತೀಯೆ?

ಪೀ.—ನನಗೆ ಊರಿನಲ್ಲಿ ಕೆಲಸವಿರುವದು. ಪ್ರತಿಯೊಬ್ಬನೂ ತಾನುಮಾಡಬೇಕಾದ ಕೆಲಸವನ್ನು ಮೊದಲು ಮಾಡಬೇಕಷ್ಟೆ?

ಸ್ಟ್ಯಾರ್ಕ.—ಅಹುದು. ಗುರುಗಳು ಹೀಗೆತಾನೇ ಹೇಳುವರು.

ಪೀ.—ಧೈರ್ಯಶಾಲಿಯೂ ಹಾಗೆಯೇ ಹೇಳುವನು. ನನಗೆ ಇಲ್ಲಿ ಅಷ್ಟು ಅವಶ್ಯಕವಾದ ಕೆಲಸವೇನೂ ಇಲ್ಲವಷ್ಟೆ. ನಾನು ನಿನ್ನನ್ನು ಪುನಃ ನೋಡುವೆನು.

ಸ್ಟ್ಯಾರ್ಕ.—ಅಯ್ಯಾ, ನೀನು ಹೋಗುವದಕ್ಕೆ ಮೊದಲು ನಿನಗೆ ಒಂದು ರಹಸ್ಯವನ್ನು ಹೇಳಲಪೇಕ್ಷಿಸುತ್ತೇನೆ.

ಅಕ್ಷರ ಬಾರದವನಿಗೆ ಶಿಕ್ಷೆಯೇ ಮುಖ್ಯ.

ಪೀ.—ನಿನಗೆ ನಾಚಿಕೆ ಬರುವ ವಿಷಯವಾದರೆ ಹೇಳಬೇ

ಸ್ಟ್ರೈಕ್.—ಇಲ್ಲ. ಇಲ್ಲ. ನಾಚಿಕೆ ಯೇನೂ ಇಲ್ಲ. ಆ ವಿಷ
ಊರಿಗೆ ಹೋಗದಂತೆ ಭಯಪಡಿಸತಕ್ಕಂಥಾದ್ದು.
ಮಾಸ್ಕೋ ಪಟ್ಟಣದಲ್ಲಿ.

ಪೀ.—ಮಾಸ್ಕೋ ಪಟ್ಟಣದಲ್ಲಿ ಹುಟ್ಟಿದರೆ

ಸ್ಟ್ರೈಕ್.—ಅದು ನನ್ನ ಅಭಿಪ್ರಾಯ
ಕೆಲವರು ಸಿಪಾಯಿ

ನೋಡಿ, “ ಈ ದ
ಚಾಕರಿಗೆ ಇಟ್ಟುಕೊಳ್ಳಬೇಕೆಂ
ವವು ” ಎಂದು ಹೇಳಿ, ಅವನು ಏನು
ಅದು ಇಂಥಾದ್ದೆಂದು ನನಗೆ ತಿಳಿಯುವದಕ್ಕೆ
ಹೆಗಲಿನಮೇಲೆ ಒಂದು ತುಪಾಕಿಯನ್ನು ಹೊರಿಸಿ
ಗಕ್ಕೆ ಹೊರಡಿಸಿಕೊಂಡು ಹೋದನು.

ಪೀ.—ಓಹೊ ! ನಿನ್ನನ್ನು ಸಿಪಾಯಿಯಾಗಿ ನೇಮಕವ

ಸ್ಟ್ರೈಕ್.—ಇರಬಹುದು. ಆದರೆ ಅದು ನನಗೆ ಆಗ ಗೊ

ಪೀ.—ನೀನು ಚಕ್ರವರ್ತಿಯ ನೌಕರನಾಗಿದ್ದುಕೊಂಡ
ಗೆ ಬಂದೆ ?

ಸ್ಟ್ರೈಕ್.-ಅಹಾ ! ನಾನು ಹೇಳಬೇಕೆಂದಿದ್ದ ರಹಸ್ಯವೇ ಇದು
ಯು ನನ್ನನ್ನು ಸಿಪಾಯಿಯಾಗಿ ಮಾಡಿಕೊಳ್ಳಬೇಕೆಂದು
ಶುದ್ಧ ತಪ್ಪು. ನಾನು ಶೂರನಾಗಿರತಕ್ಕ ಸ್ವಭಾವವ
ಕೆಲಸವು ನನಗೆ ಸರಿಬೀಳಲಿಲ್ಲ. ನನ್ನನ್ನು ಇಲ್ಲಿಗೆ
ಹೋಗು ಎಂದು ಬೈಯುತ್ತಲೂ ಹೊಡೆಯುತ್ತಲೂ
ಕಾಲವಲ್ಲಿ ಒಂದುದಿನ ಬೆಳಗ್ಗೆ ಬಹಳ ಚಳಿಯಾಗಿ ಇದ್ದ

ಅಲಂಗದ ಮೇಲೆ ಕಾವಲು ಕಾಯುವದಕ್ಕೆ ನ್ನನನ್ನು ನೇಮಕ ಮಾಡಿದರು. ಆಗ ನಾನು ಹೇಳದೆ ಕೇಳದೆ ಓಡಿಬಂದೆನು.

ಪೀ.—ಹಾಗಾದರೆ ನೀನು ದಂಡಿನಿಂದ ತಪ್ಪಿಸಿಕೊಂಡು ಬಂದವನು !

ಸ್ಟ್ಯಾರ್ವ.—ಹಾಗಾದರೆ ಇದೂ ಒಂದು ಅಪರಾಧವೋ? ನನಗೂ ಈ ಹೆದರಿಕೆ ಇತ್ತು.

ಪೀ.—ಅಯ್ಯೋ ಹುಚ್ಚನೇ ! ಈಗ ನೀನು ಸಿಕ್ಕಿದರೆ ನಿನ್ನನ್ನು ಗುಂಡಿನ ಬಾಯಿಗೆ ಕಟ್ಟಿಸುವರಲ್ಲಾ !

ಸ್ಟ್ಯಾರ್ವ.-ಈ ಭಯದಿಂದಲೇ ನಾನು ಒಬ್ಬರಿಗೂ ತಿಳಿಯದಂತೆ ಇಲ್ಲಿ ಒಂದು ಜೀವಿಸಿಕೊಂಡು ಇದ್ದೇನೆ. ನನ್ನ ರಹಸ್ಯವನ್ನು ನಿನಗೆ ತಿಳಿಸಿದೆನು. ಇದನ್ನು ನೀನು ಯಾರಿಗೂ ಹೇಳಲಾರೆ ಯೆಂದು ನಂಬಿ ಇದ್ದೇನೆ. ನೀನೂ ನನ್ನ ಹಾಗೆ ಅಪರಾಧಮಾಡಿ ಓಡಿಬಂದು ಇದ್ದೀಯೋ ಏನೋ ಎಂದು ತಿಳಿದುಕೊಂಡು ಇದ್ದೇನೆ.

ಪೀ.—ಏನಂದೆ? ನಾನು ಅಪರಾಧಿಯೆ ? ಬಿಡು ! ಚನ್ನಾಯಿತು.

ಸ್ಟ್ಯಾರ್ವ.—ಚಿಂತೆಯಿಲ್ಲ. ನಿನ್ನನ್ನು ನೋಡಿದರೆ ನಿನ್ನ ಪೂರ್ವೋತ್ತರಗಳು ಗೊತ್ತಾಗುವದಿಲ್ಲ. ಅದು ಹ್ಯಾಗಾದರೂ ಇರಲಿ. ನೀನು ಊರಿಗೆ ಹೋದಮೇಲೆ ಯಾರೊಂದಿಗೂ ನನ್ನ ಪ್ರಸ್ತಾಪವನ್ನು ಮಾಡಬೇಡ. ನನ್ನ ವಿಷಯವೇನಾದರೂ ಚಕ್ರವರ್ತಿಗೆ ತಿಳಿದದ್ದೇ ಆದರೆ ಬಹಳ ಪ್ರಮಾದ ಉಂಟಾಗುವದು.

ಪೀ.—ನಾನು ಎಷ್ಟು ಗುಟ್ಟಾಗಿ ಇಟ್ಟುಕೊಂಡಿದ್ದರೂ ಚಕ್ರವರ್ತಿಗೆ ಈಗ ನಿನ್ನ ವಿಷಯು ಎಷ್ಟು ತಿಳಿದು ಇದೆಯೋ ಅಷ್ಟು ತಿಳಿಯಲೇ ತಿಳಿಯುವದು. ಆತನು ಚಮತ್ಕಾರದಿಂದ ಅಪರಾಧಗಳನ್ನೆಲ್ಲಾ ಗೊತ್ತುಮಾಡುತ್ತಾನೆಂದು ಹೇಳಿಕೊಳ್ಳುತ್ತಾರೆ. ಅದು ಹ್ಯಾಗಾದರೂ ಇರಲಿ. ಸಿಪಾಯಿ ಆಗುವದಕ್ಕೆ ಇಷ್ಟವಿಲ್ಲದವರನ್ನು ಸಿಪಾಯಾಗಿ ನೇಮಿಸಿ ಆ ಕೆಲಸದಿಂದ ತಪ್ಪಿಸಿಕೊಂಡು ಓಡಿ ಹೋ

ದರೆ ಅವನನ್ನು ಗುಂಡಿನ ಬಾಯಿಗೆ ಕಟ್ಟಿಸುವಹಾಗೆ ಕಟ್ಟಲೆಮಾಡ ತಕ್ಕ ಮನುಷ್ಯನು ಎಂದಿಗೆ ತಾನೇ ಚಕ್ರವರ್ತಿಯಾದಾನು ? ಅವನು ಕಿರಾತನೇ ಸರಿ.

ಸ್ಟ್ರೈರ್.—ಸಾಕು, ಸಾಕು, ನಮ್ಮ ಚಕ್ರವರ್ತಿಯನ್ನು ಬಯ್ಯಬೇಡ. ಆತನನ್ನು ಬೈದದ್ದಕ್ಕಾಗಿ ನೀನಾದ್ದರಿಂದ ಕ್ಷಮಿಸಿದೆ. ಆತನು ಎಂಥಾವನಾದರೂ ಆಗಲಿ. ಆತನು ಕ್ಷೇಮವಾಗಿ ಇರತಕ್ಕದ್ದೇ ನನಗೆ ಬೇಕಾದದ್ದು. ನೀನು ಇನ್ನು ಹೋಗಿಬಿಟ್ಟು ಬಾ ; ಆದರೆ ನನ್ನ ವಿಷಯವನ್ನು ಮಾತ್ರ ಯಾರಿಗೂ ಹೇಳಬೇಡ.

ಪೀ.—ನನ್ನಿಂದ ನಿನಗೆ ಯಾವ ಬಾಧಕವೂ ಆಗಲಾರದು. ದೇವರ ದಯೆ ಯಿದ್ದರೆ ನನ್ನ ಮೂಲಕವೇ ನಿನಗೆ ಒಳ್ಳೇದಾಗುವದು.

(ಹೀಗೆಂದು ಹೇಳಿ ಪೀಟರನು ತನ್ನ ದೇಶವನ್ನು ಕುರಿತು ಹೋದನು.)

ಕೂಡಲೆ ಸ್ಟ್ರೈರ್‌ಮೆಟ್ಸ್ ಎಂಬುವನು ರಹಸ್ಯವಾಗಿ ತಾನೂ ತನ್ನ ಊರಿಗೆ ಹೋಗಿ ಒಬ್ಬರಿಗೂ ತಿಳಿಯದಹಾಗೆ ಒಂದೆರಡು ದಿನಗಳಿದ್ದು ಮೂರನೇ ದಿನ ಊರನ್ನು ಬಿಟ್ಟು ಹೋಗುವದಕ್ಕೆ ಸನ್ನದ್ಧನಾಗಿ ತಾಯಿಯ ಅಪ್ಪಣೆ ಯನ್ನು ಕೇಳಿದನು.

ತಾಯಿ.—ಇಷ್ಟು ಜಾಗ್ರತೆಯಾಗಿ ನಮ್ಮನ್ನೆಲ್ಲಾ ಬಿಟ್ಟು ಹೋಗುವೆಯೋ?

ಸ್ಟ್ರೈರ್.—ತಾಯಿಯೇ, ಮಾಡತಕ್ಕದ್ದೇನು ! ನಾನು ಇಲ್ಲಿ ಇರುವದು ಯಾರಿಗಾದರೂ ಗೊತ್ತಾದರೆ ನನ್ನನ್ನು ಗುಂಡಿನ ಬಾಯಿಗೆ ಕಟ್ಟು ವರು. ನಾನು ಪುನಃ ಸಾರ್ಡಂಪಟ್ಟಣಕ್ಕೆ ಹೋಗಿ ದ್ರವ್ಯವನ್ನು ಸಂಪಾದಿಸಿ ನಿನ್ನನ್ನೂ ನಿನ್ನ ಸೊಸೆಯನ್ನೂ ಕರೆಸಿಕೊಳ್ಳುತ್ತೇನೆ. ಇದಲ್ಲದೆ ನಾನು ಇಲ್ಲಿ ಇರುವದರಿಂದ ಬಹಳ ವಿಪತ್ತು ಉಂಟು. ನನಗೆ ಅಪ್ಪಣೆಯನ್ನು ಕೊಡು. ಓಹೊ ! ಅದ್ಯಾರೊ ಬಾಗಲು ತಟ್ಟುತ್ತಾರೆ ! ನಾನು ಅವಿತುಕೊಳ್ಳುತ್ತೇನೆ. ಅನಂತರದಲ್ಲಿ ಬಾ ಗಲು ತೆಗೆ. (ಎಂದು ಹೇಳಿ ಅವಿತುಕೊಂಡನು)

ಪೀ.—(ಒಳಕ್ಕೆ ಬಂದು.)—ಅಯ್ಯಾ ಸ್ಟ್ರೈರ್‌ಮೆಟ್ಸ್, ನಿನ್ನನ್ನು ನಾನು

ಕಿಟಕಿಯಲ್ಲಿ ನೋಡಿದೆನಷ್ಟೆ. ಯಾತಕ್ಕೆ ಅವಿತುಕೊಳ್ಳುತ್ತೀ ? ಈಚೆಗೆ ಬಾ.

ಸ್ಟ್ರ್ಯಾ.—ಓಹೋ ಪೀಟರ್, ನಿನ್ನನ್ನು ನೋಡುವ ಅದೃಷ್ಟವು ನನಗೆ ಲಭಿಸಿತು. ಇದು ಸಮುದ್ರತೀರವೂ ಅಲ್ಲ ! ಇಲ್ಲಿ ಹಡಗಗಳು ಕಟ್ಟುವದೂ ಇಲ್ಲ ! ನೀನು ಇಲ್ಲಿ ಇರುವವಕ್ಕೆ ಕಾರಣವೇನು ?

ಪೀ.—ಇಲ್ಲಿ ಚಕ್ರವರ್ತಿಯು ಒಂದು ಅರಮನೆಯನ್ನು ಕಟ್ಟಿಸುತ್ತಾ ಇದ್ದಾನೆ.

ಸ್ಟ್ರ್ಯಾ.—ಚಕ್ರವರ್ತಿಯು ಈ ಪಟ್ಟಕ್ಕೆ ಬಂದಿರುವಂತೆ ವರ್ತಮಾನವಿದೆ. ಅದು ನಿಜವೋ ?

ಪೀ.—ಅಹುದು ಆತನು ಈಗತಾನೆ ಈಬೀದಿಗೆ ಬಂದನು.

ಸ್ಟ್ರ್ಯಾ.—ನನಗೂ ಹಾಗೆಯೇ ವರ್ತಮಾನ ತಿಳಿಯಿತು ; ಆದರೆ ನಾನು ಆತನನ್ನು ನೋಡಲಿಲ್ಲ. ಅದು ಹಾಗಿರಲಿ. ನೀನು ನನ್ನನ್ನು ಹ್ಯಾಗೆ ಗೊತ್ತು ಮಾಡಿದೆ ?

ಪೀ.—ಹೀಗೆಯೇ ಈಬೀದಿಯಲ್ಲಿ ಬರುತ್ತಾ ಇದ್ದು ಬಾಗಲ ಮೇಲೆ ನಿಮ್ಮ ತಾಯಿಯ ಹೆಸರನ್ನು ನೋಡಿದೆನು. ಹಾಗೆಯೇ ಅರಮನೆಗೆ ಹೋದ ಕೂಡಲೆ ನಿನ್ನ ಜ್ಞಾಪಕವು ಬಂತು.

ಸ್ಟ್ರ್ಯಾ.—ಏನು ! ಅರಮನೆಗೆ !

ಪೀ.—ನಾನು ಯಾವಾಗಲೂ ನನ್ನ ಮನೆಯನ್ನು ಅರಮನೆಯೆಂದು ಕರೆದು ಕೊಳ್ಳುತ್ತೇನೆ. ಇದನ್ನು ನೀನೂ ಬಲ್ಲೆಯಷ್ಟೆ.

ಸ್ಟ್ರ್ಯಾ.—ಅದು ಸರಿಯೆ. ನೀನು ಯಾವಾಗಲೂ ವಿಚಿತ್ರಪುರುಷನು.

ಪೀ.—ನಿಮ್ಮ ತಾಯಿಯ ಹೆಸರು ಜ್ಞಾಪಕಕ್ಕೆ ಬಂದಕೂಡಲೆ ಈ ಬಳ್ಳೆ ಉಡುಪುಗಳನ್ನು ಧರಿಸಿ ಆಕೆಯಿಂದ ನಿನ್ನ ವರ್ತಮಾನವನ್ನು ವಿಚಾರಿಸಿ ತಿಳಿದುಕೊಳ್ಳುವವಕ್ಕೆ ಬಂದೆನು.

ಸ್ಟ್ರ್ಯಾ.—ಓಹೊ ! ದೊಡ್ಡಮನುಷ್ಯನ ವೇಷವನ್ನು ಹಾಕಿಕೊಂಡು ಬಂದಿದ್ದೀಯೆ ! ನಿನಗೆ ಇಂಥಾ ದಿವ್ಯವಾದ ವಸ್ತ್ರಗಳು ಎಲ್ಲಿದೊರಕಿದವು

ಪೀ.—ಸಾಕು. ನಿನ್ನ ಅವಿವೇಕದ ಮಾತುಗಳನ್ನು ನಿಲ್ಲಿಸಪ್ಪ.

ಸ್ಟ್ರೈರ್.-ಪೂರ್ವ ಸ್ನೇಹಿತರೊಡನೆ ಮಾತನಾಡತಕ್ಕ ರೀತಿಯು ಇದೆ? ನಿನಗೆ ಕೋಪ ಬಂತೇನೊ? ನನ್ನ ಅವಿವೇಕದ ಮಾತುಗಳನ್ನು ಮನಸ್ಸಿಗೆ ತಾರದೆ ನನ್ನನ್ನು ಕ್ಷಮಿಸು. ನನ್ನ ಕ್ಷೇಮಲಾಭವನ್ನು ವಿಚಾರಿಸುವದಕ್ಕೆ ನೀನು ಬಂದದಕ್ಕಾಗಿ ನಿನಗೆ ವಂದಿಸುವೆನು.

ಪೀ.—ಅಯ್ಯಾ ಸ್ಟ್ರೈರ್‌ಮೆಟ್ಸ್, ನನಗೂ ನಿನಗೂ ಇರತಕ್ಕ ಸ್ನೇಹದಲ್ಲಿ ನಿನ್ನಮೇಲೆ ನನಗೆ ಎಂದಿಗಾಗಲೀ ಕೋಪ ಬಂದೀತೆ? ನಾನು ಸಲಿಗೆಯಿಂದ ಆಡಿದೆನೇಹೊರ್ತು ಕೋಪದಿಂದ ಅಲ್ಲ.

ಸ್ಟ್ರೈರ್.—ನಾನು ಸಾರ್ಡ್ಡಂಗೆ ಹೊರಟು ಇದ್ದೇನೆ. ನೀನೂ ನನ್ನೊಡನೆ ಬರುವ ಪಕ್ಷದಲ್ಲಿ ನಾನು ಬಹಳ ಸಂತೋಷ ಪಡುವೆನು.

ಪೀ.—ನನಗೆ ಈ ದೇಶದಲ್ಲಿ ಹೆಚ್ಚು ಕೂಲಿ ಸಿಕ್ಕುವದು.

ಸ್ಟ್ರೈರ್.—ನಾನು ಬಹಳ ದುರದೃಷ್ಟವಂತನು. ನಮ್ಮ ತಾಯಿಯನ್ನೂ ಪ್ರಿಯೆಯನ್ನೂ ಮಿತ್ರನಾದ ನಿನ್ನನ್ನೂ ತೊರೆದು ಹೊರಟು ಹೋಗಬೇಕು. ಇಲ್ಲಿ ಎಷ್ಟುದಿನವಿದ್ದರೂ ಸದಾ ಪ್ರಾಣಭಯದಲ್ಲಿಯೇ ಇರಬೇಕು. ನನಗೆ ಹೋಗಿ ಬರುವದಕ್ಕೆ ಅಪ್ಪಣೆಕೊಡು.

ಪೀ.—ನೀನು ಇಲ್ಲಿಗೆ ಹ್ಯಾಗೆಬಂದೆ?

ಸ್ಟ್ರೈರ್.—ನನ್ನ ತಾಯಿಯನ್ನೂ ಪ್ರಿಯೆಯನ್ನೂ ನೋಡಬೇಕೆಂಬ ಅಭಿಲಾಷೆಯಿಂದ ಜೀವದ ಮೇಲಣ ಆಸೆಯನ್ನು ಕೂಡ ಬಿಟ್ಟು ರಹಸ್ಯದಲ್ಲಿ ಇಲ್ಲಿಗೆ ಬಂದೆನು. ಈದಿನ ಪುನಃ ಪ್ರಯಾಣಮಾಡಿ ಹೊರಟು ಹೋಗುವೆನು.

ಪೀ.—ಈಗ ನಿನ್ನ ವಿಷಯವನ್ನು ಸರಕಾರಕ್ಕೆ ತಿಳಿಸಿದರೆ ನನಗೆ ಬಹಳ ದೊಡ್ಡ ಬಹುಮಾನ ದೊರೆಯುವದು.

ಸ್ಟ್ರೈರ್.—ಅಯ್ಯೊ ಪೀಟರ್! ನಿನ್ನ ಅಪಹಾಸದ ಮಾತುಗಳು ಸಾಕು. ನಮ್ಮ ತಾಯಿಯು ಈ ಮಾತನ್ನು ಕೇಳಿದರೆ ಹೆದರಿಕೊಳ್ಳುವಳು.

ನಾನು ಈಗ ಹೊರಡುತ್ತೇನೆ. ಅಲ್ಲಿ ನಿನ್ನ ಸ್ನೇಹಿತರಿಗೆ ಏನಾದರೂ ಸಮಾಚಾರವನ್ನು ಹೇಳಬೇಕೋ ? ಓಹೊ ಪೀಟರ್ ! ಅಲ್ಲಿ ಕೆಲವರು ಸಿಪಾಯಿಗಳೂ ಒಬ್ಬ ಅಧಿಕಾರಿಯೂ ನಮ್ಮ ಮನೇಕಡೆಗೇ ಬರುತ್ತಾ ಇದ್ದಾರೆ. ಏನು ವಿಪತ್ತು ಬರುವದೋ ತಿಳಿಯದು. ಕ್ಷಮಿಸು. ನಾನು ಹೋಗಿ ಅವಿತುಕೊಳ್ಳುವೆನು.

ಪೀ.—ಅವರು ನನ್ನ ಸ್ನೇಹಿತರು. ಅವರಿಂದ ನಿನಗೆ ಏನೂ ಭಯವಿಲ್ಲ. ಸುಮ್ಮನಿರು.

ಸ್ಟ್ಯಾರ್ಲ.—ಹಾಗಾದರೆ ಚಿಂತೆಯಿಲ್ಲ. ಆದರೂ ಅವರಲ್ಲಿ ಒಬ್ಬನು ಪೂರ್ವದಲ್ಲಿ ನನ್ನ ಮೇಲೆ ಇದ್ದ ಉದ್ಯೋಗಸ್ಥನಂತೆ ಕಾಣುವನು.

ಉದ್ಯೋಗಸ್ಥನು.—ಮಹಾಸ್ವಾಮಿ, ರಾಜಧಾನಿಯಿಂದ ತಮಗೆ ಎಕ್ಸ್‌ಪ್ರೆಸ್ಸಾಗಿ ಒಂದು ಕಾಗದ ಬಂದು ಇದೆ. ಸ್ವೀಕರಿಸಬೇಕು.

ಸ್ಟ್ಯಾರ್ಲ.—ಅಯ್ಯಾ ಪೀಟರೇ, ಮಹಾಸ್ವಾಮಿ ಎಂದು ಬರೆದು ಇದೆಯಲ್ಲ. ಇದರ ಅಭಿಪ್ರಾಯವೇನು.

ಉ.—ಎಲೈ ನೀಚನೇ ! ರಷ್ಯಾದೇಶದ ಚಕ್ರವರ್ತಿಗಳನ್ನು ನೀನು ತಾನು ಎಂದು ಮಾತನಾಡಿಸುತ್ತೀಯ ? ಭಯಭಕ್ತಿಗಳಿಂದ ದೂರನಿಲ್ಲು.

ಸ್ಟ್ಯಾರ್ಲವೆಟ್ಸ್ ತಾಯಿ.—(ನಮಸ್ಕಾರಮಾಡಿ) ಮಹಾಸ್ವಾಮಿ, ನನಗೆ ಇವನು ಒಬ್ಬನೇ ಮಗನು. ಇವನಿಗೆ ಹಿಂದೂ ಮುಂದೂ ತಿಳಿಯದು. ಅವನ ಅಪರಾಧಗಳನ್ನೆಲ್ಲಾ ಕ್ಷಮಿಸಿ ಕಾಪಾಡಬೇಕು.

ಸ್ಟ್ಯಾರ್ಲ.—ತಾಯಿಯೇ, ನಿನಗೆ ಏನಾದರೂ ಹುಚ್ಚು ಹಿಡಿಯಿತೊ ? ಇಂಥಾ ಕುಚೋದ್ಯಗಳನ್ನು ಆಗಾಗ್ಯೆ ಮಾಡುತ್ತಾ ಇರುವದು ನಮ್ಮ ಪೀಟರಿಗೆ ಸ್ವಭಾವ. ಅಯ್ಯಾ ಪೀಟರ್, ಇನ್ನೂ ನಿನ್ನ ಹಾಸ್ಯವನ್ನು ಬಿಡಲೊಲ್ಲೆಯಾ ? ಸಾಕು. ಇಲ್ಲಿಗೆ ಮುಗಿಸು.

ಉ.—ಎಲೈ ತುಂಟನೇ, ನೀನು ಪೂರ್ವದಲ್ಲಿ ಸೈನ್ಯದಲ್ಲಿ ಸೇರಿಯಿದ್ದು ಓಡಿ ಹೋದವನಲ್ಲವೆ ? ನೀನು ರಾಜದ್ರೋಹಿಯು. ನಿನ್ನನ್ನು

ಗುಂಡಿನ ಬಾಯಿಗೆ ಕಟ್ಟಿಸುತ್ತೇನೆ. ಎಲೈ ಸಿಪಾಯಿಗಳೆ, ಇವನನ್ನು ಹಿಂಗಟ್ಟುಮುರಿ ಕಟ್ಟಿ ಎಳೆದುಕೊಂಡು ನಡಿಯಿರಿ.

(ಆಗಲೇ ಶಿಪಾಯಿಗಳು ಅವನನ್ನು ಹಿಡಿದು ಹಿಂಗಟ್ಟುಮುರಿ ಕಟ್ಟಿದರು.)

ಸ್ಕಾರ್ಟ್ರ.—ಓಹೋ ಪೀಟರ್, ನನ್ನ ಅವತಾರವು ಮುಗಿಯಿತು. ನನಗೆ ಇಂಥಾ ಅವಸ್ಥೆ ಬಂದರೂ ನೀನು ಇನ್ನೂ ಓದುತ್ತಾ ಇದ್ದೀಯಲ್ಲ! ನಿನ್ನ ಹೃದಯವು ಎಂಥಾದ್ದು ?

ಸ್ಕಾರ್ಟ್ರಮೆಟ್ಸ್ ತಾಯಿ.—ಅಯ್ಯಾ ಉದ್ಯೋಗಸ್ಥನೇ ನನ್ನ ಮಗನಿಗೆ ಪ್ರಾಣ ದಾನವನ್ನು ಮಾಡು.

ಉ.—ಅದು ಯಾರಿಗೂ ಅಸಾಧ್ಯ. ಇವನನ್ನು ಈ ದಿನ ಸಾಯಂ ಕಾಲದೊಳಗಾಗಿ ಗುಂಡಿನ ಬಾಯಿಗೆ ಕಟ್ಟುವರು.

ಪೀ.—(ಕಾಗದವನ್ನು ಓದಿ ಮುಗಿಸಿ) ಅಯ್ಯಾ ಉದ್ಯೋಗಸ್ಥನೇ, ಈತನಿಂದ ನನಗೆ ಬಹಳ ಕೆಲಸವಿದೆ. ಇವನ ಕಟ್ಟುಗಳನ್ನು ಬಿಚ್ಚು.

ಉ.—ಮಹಾಸ್ವಾಮಿಯವರ ಅಜ್ಞೆಯಂತಾಗಲಿ.

ಸ್ಕಾರ್ಟ್ರ.—(ತನ್ನಷ್ಟಕ್ಕೆ ತಾನೇ) ತಿರುಗಿ ಮಹಾಸ್ವಾಮಿಗಳೆ ? ಏನೋ ವಿಶೇಷವಿದೆ. ನಾನು ಸಾರ್ಡಾಂ ಪಟ್ಟಣವನ್ನು ಬಿಟ್ಟು ಬಂದಾಗ ನಮ್ಮ ದೇಶದ ಚಕ್ರವರ್ತಿಯು ಬಡಗಿಯ ವೇಷವನ್ನು ಹಾಕಿ ಕೊಂಡು ಹಡಗುಗಳನ್ನು ಕಟ್ಟುವದನ್ನು ಕಲಿಯುತ್ತಾ ಇದ್ದಾನೆಂದು ಕೇಳಿ ಇದ್ದೆನು. ಆ ಚಕ್ರವರ್ತಿಯೇ ನಮ್ಮ ಪೀಟರೋ ಏನೋ!

ಪೀ.—ಅಯ್ಯಾ ಸ್ಕಾರ್ಟ್ರಮೆಟ್ಸ್ ನನ್ನ ರಹಸ್ಯವು ನಿನಗೆ ಈಗ ತಿಳಿಯಿತು.

ಸ್ಕಾರ್ಟ್ರ.—ಹಾಗಾದರೆ ನೀನೇ ಚಕ್ರವರ್ತಿಯೊ ?

ಪೀ.—ಜನರೆಲ್ಲರೂ ಹಾಗೆಯೇ ಭಾವಿಸುವರು.

(ಸ್ಕಾರ್ಟ್ರಮೆಟ್ಸ್, ಅವನ ತಾಯಿ, ಇಬ್ಬರೂ ಪೀಟರಿಗೆ ನಮಸ್ಕರಿಸಿದರು.)

ಆನೇಕಂಡು ಶ್ವಾನ ಬೊಗುಳಿದ ಹಾಗೆ.

ಪೀ.—ಅಯ್ಯಾ ಸ್ನೇಹಿತನೇ ಏಳು. ಎಲ್ಲೈ ವೃದ್ಧಳೇ ನೀನೂ ಏಳು. ನಿನಗೂ ನಿನ್ನ ಮಗನಿಗೂ ಸಕಲೈಶ್ವರ್ಯಗಳನ್ನೂ ಸಕಲ ಬಿರುದು ಗಳನ್ನೂ ಕೊಟ್ಟಿ ಇದ್ದೇನೆ. ನಾಳೇದಿನವೇ ಈತನಿಗೆ ಲಗ್ನವನ್ನು ಬೆಳಸು. ಕೂಡಲೆ ಈತನು ರಾಜಧಾನಿಗೆ ಬರಲಿ. ಈತನನ್ನು ಅಲ್ಲಿ ಹಡಗುಗಳನ್ನು ಕಟ್ಟುವರಿಗೆಲ್ಲಾ ವಿಚಾರ ಕರ್ತನನ್ನಾಗಿ ನೇ ಮಿಸಿದ್ದೇನೆ.

ಸ್ಟ್ಯಾರ್ಲ್.—ಅಯ್ಯಾ ಪೀಟರ್, ಅಯ್ಯೋ ! ಕ್ಷಮಿಸಬೇಕು. ಮಹಾಸ್ವಾಮಿ, ನನಗೆ ಹಿಂದೂ ಮುಂದೂ ತಿಳಿಯುವದಿಲ್ಲ. ನಿನ್ನೊಂದಿಗೆ ಹ್ಯಾಗೆ ಮಾ ತನಾಡಬೇಕೋ ನಿನಗೆ ಹ್ಯಾಗೆ ವಂದಿಸಬೇಕೋ ನನಗೆ ತಿಳಿಯದು. ಅಯ್ಯಾ ಪೀಟರೇ, ಕ್ಷಮಿಸು. ಮಹಾಸ್ವಾಮಿ, ಕ್ಷಮಿಸಬೇಕು. ಇದೇನಾದರೂ ಸ್ವಪ್ನವೋ ಏನೋ !

ಪೀ.—ಅಯ್ಯಾ ಸ್ಟ್ಯಾರ್ಮೆಸ್ಸ್, ಪುನಃ ನಿನ್ನನ್ನು ಕಾಣುವೆನು. (ಎಂದು ಹೇಳಿ ಎಲ್ಲರಿಗೂ ಕೈ ಮುಗಿದು ಹೊರಟುಹೋದನು.)

ಸ್ಟ್ಯಾರ್ಲ್.—ಅಯ್ಯಾ ಉದ್ಯೋಗಸ್ಥನೇ ! ನನ್ನನ್ನು ಯಾವಾಗ ಗುಂಡಿನ ಬಾಯಿಗೆ ಕಟ್ಟಿಸುವಿ.

ಉ.—(ಕೈ ಮುಗಿದುಕೊಂಡು) ಸ್ವಾಮಿ ! ತಪ್ಪಾಯಿತು. ಕ್ಷಮಿಸ ಬೇಕು. ಸೇವಕನಮೇಲೆ ಕಟಾಕ್ಷವಿಟ್ಟು ಸಮಯ ಬಂದಾಗ ಮಹಾಸ್ವಾಮಿಯವರೊಂದಿಗೆ ಸಿಫಾರಸು ಮಾಡಬೇಕು. (ಎಂದು ಹೇಳಿ ಹೊರಟುಹೋದನು.)

ಸ್ಟ್ಯಾರ್ಲ್.—ಈಗ ಸ್ವಲ್ಪಹೊತ್ತಿಗೆ ಮುಂಚೆ ತಾಯಿಯನ್ನೂ ಪ್ರಿಯೆಯನ್ನೂ ತೊರೆದು ಹೋಗಬೇಕಲ್ಲಾ ಎಂದು ಅತ್ಯಂತ ದುಃಖವುಳ್ಳವನಾಗಿದ್ದೆ ? ಈಗ ಸಮಸ್ತ ದುಃಖಗಳೂ ಪರಿಹಾರವಾಗಿ ಸಕಲ ಸಂಪತ್ತುಗಳೂ ಪ್ರಾಪ್ತವಾದವು. ಇದು ದೈವಕೃತವೇ ಹೊರ್ತು ಮತ್ತೆ ಬೇರೆಯಿಲ್ಲ.

ಹೀಗೆ ಲೋಕದಲ್ಲಿ ಕಷ್ಟ ಸುಖಗಳು ಬರುವದು ಗೊತ್ತಾಗುವದಿಲ್ಲ.

೫. ಜ್ಯೋತಿಷ.

ಅನುಲೋಮಗತಿರ್ನೌಸ್ಥಃ ಪಶ್ಯತ್ಯಚಲಂವಿಲೋಮಗಂಯದ್ವತ್ ।
ಅಚಲಾನಿಭಾನಿ ತದ್ವತ್ಸಮಪಶ್ಚಿಮಗಾನಿ ಲಂಕಾಯಾಂ ॥ (ಆರ್ಯಭಟ್ಟ)

ಈ ಭೂಗೋಳವು ಆಕಾಶಬುಟ್ಟಿಯಂತೆ ಅಂತರಿಕ್ಷದಲ್ಲಿ ನಿರಾಧಾರವಾಗಿ ತನ್ನ ಪರಮಶಕ್ತಿಯಿಂದಲೇ ನಿಂತು ಇರುವದೆಂದು ಹಿಂದೆಯೇ ನಿರ್ಣಯಿಸಿ ಇದ್ದೇವಷ್ಟೆ. ಗೋಳಕ್ಕೆ ಆವೃತ್ತಿಯುಂಟು ಅಂದರೆ ಈ ಗೋಳವು ಬುಗುರಿಯಂತೆ ಘೆರ್ರನೆ ತನ್ನನ್ನು ತಾನೇ ಸುತ್ತುತ್ತಿರುವದು ಎಂಬ ಅಂಶವನ್ನು ಇಲ್ಲಿ ನಿರ್ಣಯಿಸುವೆವು. ಮೇಘಗಳಿಲ್ಲದೆ ಆಕಾಶವು ನಿರ್ಮಲವಾಗಿರುವ ಯಾವದಾದರೂ ಒಂದುದಿನ ರಾತ್ರಿ ಪೂರ್ವಾಭಿಮುಖವಾಗಿ ನಿಂತು ನಾವು ಆಕಾಶಮಂಡಲವನ್ನು ನೋಡುತ್ತಾ ಇದ್ದರೆ, ನಕ್ಷತ್ರಗಳು ಕ್ರಮೇಣ ಒಂದೊಂದಾಗಿ ಕ್ಷಿತಿಜದಿಂದ ಮೇಲಕ್ಕೆ ಎದ್ದು ಬರುತ್ತಿರುವವು; ಪಶ್ಚಿಮಾಭಿ ಮುಖವಾಗಿ ನಿಂತು ನೋಡುತ್ತಾ ಬಂದರೆ, ಪೂರ್ವದಲ್ಲಿ ಎದ್ದ ನಕ್ಷತ್ರಗಳೆಲ್ಲಾ ಒಂದೊಂದಾಗಿ ಕ್ಷಿತಿಜದ ಕೆಳಕ್ಕೆ ಹೋಗುತ್ತಾ ಕಣ್ಣಿಗೆ ಮರೆಯಾಗುವವು. ಹೀಗೆಯೇ ರಾತ್ರಿಯಲ್ಲಿ ಚಂದ್ರನೂ ಹಗಲಿನಲ್ಲಿ ಸೂರ್ಯನೂ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳಗುವರು. ಹೀಗೆ ಸೂರ್ಯಚಂದ್ರ ನಕ್ಷತ್ರಗಳಿಗೆ ಉದಯಾಸ್ತಮಯಗಳು ಆಗುವದಕ್ಕೆ ಮೂರು ಕಾರಣಗಳನ್ನು ಊಹಿಸಬಹುದು. ಯಾವವೆಂದರೆ:—

(೧) ಈ ಭೂಗೋಳವು ಅದರ ಮೇಲೆ ವಾಸಮಾಡುತ್ತಿರುವ ನಮಗೆ ಕಾಣಬರುವಂತೆ ಒಂದೇಕಡೆ ಇದ್ದುಕೊಂಡು ಚಂದ್ರಸೂರ್ಯ ನಕ್ಷತ್ರಗಳು ಪ್ರತಿದಿನವೂ ಸುತ್ತಿ ಬರುವದರಿಂದ ಇವುಗಳಿಗೆ ಉದಯಾಸ್ತಮಯಗಳಾಗುವವು. ಹ್ಯಾಗೆಂದರೆ:



‘ ಭೂ ’ ಎಂಬ ಭೂಮಿಯ ಮೇಲೆ ‘ ಮ ’ ಎಂಬ ಪ್ರದೇಶದಲ್ಲಿರುವವನಿಗೆ ‘ ಪೂ ಮ ಪ ’ ಎಂಬ ಮಂಡಲವೇ ಕ್ಷಿತಿಜವಾಗುವದು. ‘ ಪೂ ’ ಎಂಬ ಅಕ್ಷರವಿರುವ ಪ್ರದೇಶವನ್ನೇ ಪೂರ್ವ ದಿಕ್ಕೆಂತಲೂ

'ಪ' ಇರುವ ಪ್ರದೇಶವು ಪಶ್ಚಿಮವೆಂತಲೂ, 'ಉ' ಇರುವ ಪ್ರದೇಶವು ಉಚ್ಚ್ಯವೆಂತಲೂ, 'ನ' ಇರುವ ಪ್ರದೇಶವು ಅಧೋಬಿಂದುವೆಂತಲೂ ಭಾವಿಸೋಣ. ಆಗ ಸೂರ್ಯನು 'ಪ' ಎಂಬ ಪ್ರದೇಶದಲ್ಲಿರುವಾಗ 'ಮ' ಎಂಬ ಪ್ರದೇಶದಲ್ಲಿರುವವನಿಗೆ ಉದಯ ಸೂರ್ಯನಾಗುವನು, 'ಉ' ಬಳಿಗೆ ಬಂದಾಗ ಮಧ್ಯಾಹ್ನಗತ ಸೂರ್ಯನಾಗುವನು, 'ಪ' ಬಳಿಗೆ ಬಂದಾಗ ಅಸ್ತಂಗತ ಸೂರ್ಯನಾಗುವನು, ಅಲ್ಲಿಂದ ಕೆಳಕ್ಕೆ ಬಂದಾಗ ಸೂರ್ಯನು ಕಾಣದೆ ಹೋಗುವನು ಅಂದರೆ ರಾತ್ರಿಯಾಗುವದು. ಪುನಃ ಸೂರ್ಯನು 'ಪೂ' ಬಳಿಗೆ ಬರುವವರಿಗೂ ರಾತ್ರಿಯಾಗಿಯೇ ಇರುವದು. ಆದ್ದರಿಂದ ಈ ಗೋಳವು ಸ್ಥಿರವಾಗಿದ್ದುಕೊಂಡು ಚಂದ್ರಸೂರ್ಯ ನಕ್ಷತ್ರಗಳು ಇದನ್ನು ಪ್ರತಿದಿನವೂ ಸುತ್ತುತ್ತಾ ಇದ್ದರೆ ಇವುಗಳಿಗೆ ಉದಯಾಸ್ತಮಯಗಳಾಗುವದರಲ್ಲಿ ಸಂಶಯವಿಲ್ಲ.

(೨) ಸೂರ್ಯನೂ ನಕ್ಷತ್ರಗಳೂ ಚಲಿಸದೆ ಒಂದೇಕಡೆ ನಿಂತಿದ್ದು ಭೂಗೋಳವು ಬುಗರಿಯಂತೆ ಘರ್ರನೆ ತನ್ನನ್ನು ತಾನು ಸುತ್ತುತ್ತಾ ಇದ್ದರೆ ಆ ಸೂರ್ಯನಕ್ಷತ್ರಗಳಿಗೆ ಉದಯಾಸ್ತಮಯಗಳಾಗುವವು. ಹ್ಯಾಗೆಂದರೆ:



ಇಲ್ಲಿ 'ಸೂ' ಎಂಬ ಅಕ್ಷರವಿರುವ ಪ್ರದೇಶದಲ್ಲಿ ಸೂರ್ಯನು ಇರುವನೆಂದೂ 'ಕ ಗ ಚ ಜ' ಎಂಬುವದು ಈ ಭೂಗೋಳವೆಂದೂ ಈಗೋಳವು 'ನ' ಕಡೆಯಿಂದ 'ಗ' ಇರುವ ದಿಕ್ಕಿಗೆ ಪ್ರದಕ್ಷಿಣೆಯಾಗಿ ತಿರುಗುತ್ತಾ ಇದೆಯೆಂತಲೂ ಭಾವಿಸೋಣ. ಆಗ ಗೋಳದ ಆವೃತ್ತಿಯ ದೆಸೆಯಿಂದ ನಾವು 'ಕ' ಬಳಿಗೆ ಬಂದಾಗ ಸೂರ್ಯನು ಆಗತಾನೇ ನಮ್ಮ ದೃಷ್ಟಿಗೆ ಬೀಳುವನುಅಂದರೆ ಉದಯವಾದಹಾಗೆ ಕಾಣುವನು. ನಾವು 'ಗ' ಬಳಿಗೆ

ಬಂದಾಗ ಸೂರ್ಯನು ನಮ್ಮ ತಲೆಯ ಮೇಲಕ್ಕೆ ಬರುವನು. ನಾವು 'ಚ' ಬಳಿಗೆ ಬಂದಾಗ ಸೂರ್ಯನು ಆಗತಾನೇ ಮರೆಯಾಗುವನು ಅಂದರೆ ನಮಗೆ ಸಾಯಂಕಾಲವಾಗುವದು. ನಾವು 'ಜ' ಬಳಿಗೆ ಬಂದಾಗ ಅರ್ಧ ರಾತ್ರಿಯಾಗುವದು. ಇದಲ್ಲದೆ 'ಕ' ಇರುವ ಪ್ರದೇಶಕ್ಕೆ 'ಕ ಟ' ಎಂಬ ಮಂಡಲವೂ, 'ಗ' ಇರುವ ಪ್ರದೇಶಕ್ಕೆ 'ದ ಗ ತ' ಎಂಬ ಮಂಡಲವೂ 'ಚ' ಇರುವ ಪ್ರದೇಶಕ್ಕೆ 'ಡ ಚ' ಎಂಬ ಮಂಡಲವೂ 'ಜ' ಇರುವ ಪ್ರದೇಶಕ್ಕೆ 'ನ ಜ' ಎಂಬ ಮಂಡಲವೂ ಕ್ಷಿತಿಜಗಳಾಗುವವು. (ಇಲ್ಲಿ ಮಂಡಲಗಳನ್ನು ರೇಷೆಗಳಿಂದಲೇ ತೋರಿಸಿ ಇದ್ದೇವೆ.) ಹೀಗೆ ನಮ್ಮ ಕ್ಷಿತಿಜವು ಗೋಳದ ಆವೃತ್ತಿಯ ದೆಸೆಯಿಂದ ಸೂರ್ಯನಿಗೆ ಎದುರಾಗಿ ಬಂದಾಗ ಉದಯವೂ ಬರುತ್ತಾ ಬರುತ್ತಾ ಮಧ್ಯಾಹ್ನವೂ ತದನಂತರ ಸೂರ್ಯಾಸ್ತಮಯವೂ ರಾತ್ರಿಯೂ ಉಂಟಾಗುವವು. ಆದ್ದರಿಂದ ಸೂರ್ಯನು ಬಂದೇ ಕಡೆ ಸ್ಥಿರವಾಗಿದ್ದರೂ ಭೂಗೋಳದ ಆವೃತ್ತಿಯ ದೆಸೆಯಿಂದ ಚಂದ್ರ ಸೂರ್ಯ ನಕ್ಷತ್ರಗಳಿಗಳಿಗೆ ಉದಯಾಸ್ತಮಯಗಳುಂಟಾಗುವವು. ಈ ಅಂಶದಲ್ಲಿ ಸಂಶಯವಿಲ್ಲ.

(೩) ಚಂದ್ರ ಸೂರ್ಯ ನಕ್ಷತ್ರಗಳೂ ಭೂಗೋಳವೂ ಸರ್ವಾಪ ಸವ್ಯವಾಗಿಯಾಗಲೀ ಅಥವಾ ಬಂದೇ ಕಡೆಯಾಗಲೀ ತಿರುಗುವದರಿಂದ ಆ ಚಂದ್ರ ಸೂರ್ಯ ನಕ್ಷತ್ರಗಳಿಗೆ ಉದಯಾಸ್ತಮಯಗಳಾಗಬಹುದು.

ಈ ಪ್ರಕಾರವಾಗಿ ಮೂರು ಬಗೆಯಾಗಿ ಚಂದ್ರ ಸೂರ್ಯ ನಕ್ಷತ್ರಗಳಿಗೆ ಉದಯಾಸ್ತಮಯಗಳಾಗ ಬಹುದು. ಇವುಗಳಲ್ಲಿ ಯಾವದು ಸಿದ್ಧಾಂತ ? ನಮ್ಮ ಕಣ್ಣುಗಳಿಗೆ ಕಾಣಿಸುವಂತೆ ನಂಬತಕ್ಕದ್ದೇ ಆದರೆ ಮೊದಲನೇದೇ ನಿಶ್ಚಯವಾದ್ದೆಂದು ತೋರುವದು. ಯಾಕಂದರೆ, ಈ ಭೂಗೋಳವು ಸುತ್ತುವ ವಿಷಯದಲ್ಲಿ ಅದರ ಭ್ರಮಣೆಯು ನಮ್ಮ ಕಣ್ಣಿಗೆ ಗೊತ್ತಾಗುವದಿಲ್ಲ. ಇದಲ್ಲದೆ ನಮ್ಮ ಮನೆಗಳೂ ಸುತ್ತೂ ಇರುವ ಮನೆಗಳು ಗಿಡಗಳು ಮೊದಲಾದವುಗಳೂ ಅವುಗಳನ್ನು ಎಲ್ಲೆಲ್ಲಿ ನೋಡಿರುವೆವೊ ಅಲ್ಲಲ್ಲಿಯೇ ಇರುವವೇ ಹೊರತು ಸಮೀಪದಲ್ಲಿ ಇದ್ದವುಗಳು ದೂರಕ್ಕೆ

ಹೋಗುವದಿಲ್ಲ, ಮತ್ತು ದೂರದಲ್ಲಿದ್ದವುಗಳು ಸಮೀಪಕ್ಕೆ ಬರುವದಿಲ್ಲ. ಆದ್ದರಿಂದ ಈ ಭೂಗೋಳಕ್ಕೆ ಚಕ್ರ ಭ್ರಮಣೆ ಅಂದರೆ ಆವೃತ್ತಿಯು ಇಲ್ಲವೆಂದೇ ತೋರುವದು. ಆದರೆ ಹೀಗಾಗುವದಕ್ಕೆ ದೃಷ್ಟಿ ದೋಷ ವೆಂದು ಹೇಳ ಬೇಕು. ಹ್ಯಾಗೆಂದರೆ, ಮೇಲೆ ಹೇಳಿದ ಶ್ಲೋಕದ ರೀತಿ ಯಾಗಿ ವೇಗವಾಗಿ ಚಲಿಸುತ್ತಿರುವ ಹಡಗದಲ್ಲಿ ಕೂತಿರುವನಿಗೆ ಹಡಗದ ಭ್ರಮಣೆಯು ಗೊತ್ತಾಗುವದಿಲ್ಲ. ಇದಲ್ಲದೆ ಹಾಗೆ ಹೋಗುತ್ತಾ ಇರುವ ನಿಗೆ ದಡದ ಮೇಲಿರುವ ಬೆಟ್ಟಗಳೂ ಗಿಡಗಳೂ ಓಡಿ ಹೋಗುವಂತೆ ಕಾಣಿ ಸುವವು. ಅತಿ ವೇಗವಾಗಿ ಓಡುತ್ತಲಿರುವ ಹೊಗೇ ಬಂಡಿಯಲ್ಲಿ ಕುಳಿತು ಪ್ರಯಾಣ ಮಾಡುವವನಿಗೂ ಆ ಬಂಡಿಯ ಚಲನವು ಸ್ವಲ್ಪವಾದರೂ ಗೊತ್ತಾಗುವದಿಲ್ಲ, ಮತ್ತು ಆ ಬಂಡಿಯ ಕಿಟಕೀ ಮಾರ್ಗವಾಗಿ ಹೊರಗಡೆ ಕಾಣಬರುವ ಗುಟ್ಟಗಳೂ ಗಿಡಗಳೂ ಬಹಳ ವೇಗವಾಗಿ ಚಲಿಸುವಂತೆ ಕಾಣಬರುವವು. ಇದು ಪ್ರಾಯಶಃ ಎಲ್ಲರಿಗೂ ಸ್ಪಷ್ಟವಾಗಿ ತಿಳಿದೇ ಇದೆ. ಆದ್ದರಿಂದ ಈ ಭೂಗೋಳ ಚಲನೆಯು ನಮಗೆ ಗೊತ್ತಾಗದಮಾತ್ರಕ್ಕೇನೇ ಭೂಮಿಗೆ ಚಲನೆ ಇಲ್ಲವೆಂದು ಹೇಳುವದು ಸರಿಯಾದ್ದಲ್ಲವೆಂದು ಮೇಲೆ ಹೇಳಿದ ವಿಷಯಗಳಿಂದ ಎಲ್ಲರಿಗೂ ಸ್ಪಷ್ಟವಾಗಿ ತಿಳಿಯುವದು. ಆದ ಕಾರಣ ಗ್ರಹ ನಕ್ಷತ್ರಗಳ ಉದಯಾಸ್ತಮಯಗಳ ವಿಷಯದಲ್ಲಿ ಮೇಲೆ ಹೇಳಿದ ಮೂರು ಅಂಶಗಳಲ್ಲಿ ನಿಶ್ಚಯವಾದದ್ದನ್ನು ಬುದ್ಧಿ ಸಾಮರ್ಥ್ಯ ದಿಂದಲೂ ಶೋಧನೆಗಳಿಂದಲೂ ತಿಳಿದುಕೊಳ್ಳಬೇಕಾಗಿದೆ.

ಈ ಭೂಗೋಳಕ್ಕೆ ಆವೃತ್ತಿ ಅಂದರೆ ಚಕ್ರ ಭ್ರಮಣೆಯುಂಟು. ಎಂಬುವದಕ್ಕೆ ಪ್ರಮಾಣಗಳನ್ನು ಬರೆಯುವದಕ್ಕೆ ಮೊದಲು ಈ ಆವೃತ್ತಿಯ ದೆಸೆಯಿಂದ ಅಹೋ ರಾತ್ರಿಗಳಾಗುವವು ಎಂಬುವದನ್ನು ತಿಳಿದುಕೊಳ್ಳು ವದು ಆವಶ್ಯಕವಾಗಿರುವದರಿಂದ ಆ ವಿಷಯವನ್ನು ಇಲ್ಲಿ ಬರೆಯುವೆವು.

ಒಂದು ಕಿತ್ತಲೇ ಹಣ್ಣನ್ನೂ ಒಂದು ದೀಪವನ್ನೂ ತೆಗೆದು ಕೊಂಡು ಒಂದು ಕತ್ತಲೇ ಮನೆಗೆ ಹೋಗೋಣ. ಕಿತ್ತಲೇ ಹಣ್ಣನ್ನು ಭೂಮಿ ಯೆಂದೂ ದೀಪವನ್ನು ಸೂರ್ಯನೆಂದೂ ಭಾವಿಸೋಣ. ಕಿತ್ತಲೇ ಹಣ್ಣಿಗೆ

ಇದ್ದಮತಿ ಹಾರೀತೂ ಸಿದ್ಧಿಗಣೇಶ.

ಮಧ್ಯ ಪ್ರದೇಶದಲ್ಲಿ ಹಾದು ಹೋಗುವಂತೆ ಒಂದು ದಬ್ಬಳವನ್ನು ಚುಚ್ಚಿ ಯಾವದಾವರೂ ಒಂದು ಪದಾರ್ಥದ ಮೇಲೆ ಇಲ್ಲಿ ಬರೆದು ಇರುವಂತೆ ಇಡೋಣ. ಆ ಕಿತ್ತಲೇ ಹಣ್ಣಿಗೆ ಒಂದು ಗುಂಡು ಸೂಜಿಯನ್ನು ತಲೆಮಾತ್ರ ಕಾಣಬರುವಂತೆ ಒಳಕ್ಕೆ ಹೋಗುವ ವರಿಗೂ ಚುಚ್ಚೋಣ. ಈ ಗುಂಡು ಸೂಜಿಯ ತಲೆಯೇ ಭೂಮಿಯ ಮೇಲಿರುವ ಒಬ್ಬಾನೊಬ್ಬ ಮನುಷ್ಯನೆಂದು ಭಾವಿಸೋಣ. ಈ ದಬ್ಬಳವನ್ನು ಮೆಲ್ಲಗೆ ನುಲುಚುತ್ತಾ ಬಂದಲ್ಲಿ ಕಿತ್ತಲೇ ಹಣ್ಣಿಗೆ ಚಕ್ರ ಭ್ರಮಣೆ ಉಂಟಾಗುವದು. ದಬ್ಬಳದಿಂದ ಚುಚ್ಚಲ್ಪಟ್ಟಿರುವ 'ಕ ವ' ಎಂಬ ಅಕ್ಷರಗಳಿರುವ ಬಿಂದು ಮಾತ್ರ ಪ್ರದೇಶಗಳಿಗೆ ಚಲನೆಯಿಲ್ಲ. 'ಕ' ಎಂಬ ಕಡೆಯ ಬಿಂದುಮಾತ್ರ ಪ್ರದೇಶಕ್ಕೆ ಉತ್ತರ ಧೃವ ವೆಂತಲೂ, 'ವ' ಬಳಿಯಲ್ಲಿರುವ ಬಿಂದುಮಾತ್ರ ಪ್ರದೇಶಕ್ಕೆದಕ್ಷಿಣ ಧೃವ



ವೆಂತಲೂ ಜ್ಯೋತಿಷ್ಕರು ಹೇಳುವರು. ಈ ಎರಡು ಪ್ರದೇಶಗಳನ್ನು ಸೇರಿಸುವ 'ಕ ವ' ಎಂಬ ರೇಖೆಗೆ ಅಕ್ಷ ರೇಖೆ ಯೆಂದು ಹೆಸರು. ಈ ರೇಖೆಯು ಇಲ್ಲಿ ದಬ್ಬಳದ 'ಕ ವ' ಎಂಬ ಅಂಶದಿಂದತೋರಿಸಲ್ಪಟ್ಟಿದೆ. ಮೇಲೆ ಹೇಳಿದ ಎರಡು ಧೃವಗಳಿಗೂ ಸಮ ದೂರದಲ್ಲಿರುವಂತೆ ಭೂಗೋಳದ ಸುತ್ತುಮುತ್ತಲೂ ಒಂದು ರೇಖೆಯನ್ನೆಳೆದರೆ ಈ ರೇಖೆಯನ್ನು ವಿಷುವದ್ರೇಖೆಯೆಂದು ಹೇಳುವರು. ಈ ರೇಖೆಯು 'ರ ಗ' ಎಂಬ ಅಕ್ಷರಗಳಿರುವ ಪ್ರದೇಶದ ಮೇಲೆ ಹಾಯ್ದು ಹೋಗುವದು. ಸ್ವಲ್ಪ ಕಾಣುತ್ತಿರುವ ಗುಂಡು ಸೂಜಿಯ ತಲೆಯು ಈ ರೇಖೆಯಲ್ಲಿ 'ರ' ಕಡೆ ಇದೆ ಯೆಂದು ಭಾವಿಸೋಣ. ಈಗ ದಬ್ಬಳವನ್ನು ಅಪ್ರದಕ್ಷಿಣವಾಗಿ ನುಲಚುತ್ತಾ ಬಂದರೆ ಕಿತ್ತಲೇ ಹಣ್ಣು ಒಂದು ಸುತ್ತಿನಲ್ಲಿ ಕಾಲು ಪಾಲು ತಿರುಗುವದರಲ್ಲಿ ಮುಂಚೆ ಬೆಳಕಿನಲ್ಲಿ 'ರ' ಬಳಿಯಲ್ಲಿದ್ದ ಗುಂಡು ಸೂಜಿಯ ತಲೆಯು ಬೆಳಕುಬಿದ್ದಿರುವ ಪ್ರದೇಶದ ಕೊನೆಗೆ ಬರುವದು. ಇನ್ನು ಸ್ವಲ್ಪ ತಿರುಗಲು ಅದಕ್ಕೆ ಬೆಳಕೇ ಬೀಳುವದಿಲ್ಲ. ಸೂರ್ಯಾಸ್ತಮಾನ

ವಾಯಿತು. ಇನ್ನೊಂದು ಕಾಲುಭಾಗ ಹಣ್ಣು ತಿರುಗಲು ಗುಂಡು ಸೂಜಿಯು ತಲೆಯು ಕತ್ತಲಾಗಿರುವ ಪ್ರದೇಶದ ಮಧ್ಯಭಾಗದಲ್ಲಿರುವದು. ಮತ್ತೊಂದು ಕಾಲುಭಾಗ ಹಣ್ಣು ತಿರುಗಲು ಗುಂಡುಸೂಜಿಯ ತಲೆಯು ಆಗ ತಾನೆ ಬೆಳಕಿಗೆ ಬರುವದು. ಸೂರ್ಯೋದಯ ವಾಗುತ್ತಾ ಇದೆ. ಇನ್ನೊಂದು ಕಾಲು ಭಾಗ ಹಣ್ಣು ತಿರುಗಲು ದೀಪವು ಪೂರ್ವದಂತೆ ಯಥಾಪ್ರಕಾರವಾಗಿ ಸೂಜಿಯ ತಲೆಯ ಮೇಲೆ ಇರುವದು. ಇಲ್ಲಿಗೆ ಹಣ್ಣು ಒಂದು ಸುತ್ತು ತಿರುಗಿದಹಾಗಾಗುವದು. ಅದ್ದರಿಂದ ಸೂಜಿಯ ತಲೆಗೆ ಸರಿಯಾಗಿದ್ದ ದೀಪವು ಕತ್ತಲೇ ಹಣ್ಣಿನ ಭ್ರಮಣದಿಂದ ಅಸ್ತಮಯವಾಗಿ ಪುನಃ ಉದಯವಾಗಿ ಯಥಾಪ್ರಕಾರ ಸ್ಥಳಕ್ಕೆ ಬಂದಂತೆ ಕಾಣಬರುವದು. ಸ್ಕೂಲುಗಳಲ್ಲಿ ಉಪಯೋಗಿಸುವ ಗೋಳವನ್ನು ತೆಗೆದುಕೊಂಡು ಅದಕ್ಕೆ ಸ್ವಲ್ಪ ದೂರದಲ್ಲಿ ಗೋಳದ ವಿಷುವದ್ರೇಖೆಗೆ ಸಮನಾಗಿ ಒಂದು ದೀಪವನ್ನ ಇಡೋಣ; ಗೋಳವು ತಿರುಗುತ್ತಾಯಿದ್ದರೂ ಅಥವಾ ತಿರುಗದೆಯಿದ್ದರೂ ದೀಪಕ್ಕೆ ಅಭಿಮುಖವಾಗಿರುವ ಗೋಳಾರ್ಧಕ್ಕೆ ಬೆಳಕೂ ಮತ್ತೊಂದು ಅರ್ಧಕ್ಕೆ ನೆರಳೂ ಬಿದ್ದಿರುವದು. ಗೋಳವು ತಿರುಗದೆ ಇದ್ದಾಗ ಬೆಳಕು ಬಿದ್ದಿರುವ ಗೋಳಾರ್ಧದಲ್ಲಿನ ಪ್ರದೇಶಗಳಿಗೆ ಬೆಳಕೂ ಮತ್ತೊಂದು ಅರ್ಧದಲ್ಲಿನ ಪ್ರದೇಶಗಳಿಗೆ ನೆರಳೂ ಬಿದ್ದಿರುವವು. ಗೋಳವನ್ನು ತಿರುಗಿಸಲು ಪ್ರತಿಯೊಂದು ಸ್ಥಳವೂ ಕ್ರಮವಾಗಿ ಬೆಳಕಿಗೆ ಬಂದು ಪುನಃ ನೆರಳಿಗೆ ಬರುವದು. ಈ ಪ್ರಕಾರ ದೀಪವು ಚಲಿಸದೆ ಒಂದೇ ಕಡೆ ಇದ್ದಾಗ್ಯೂ ಗೋಳದ ಚಕ್ರಭ್ರಮಣೆಯಿಂದ ಪ್ರತಿಯೊಂದು ಪ್ರದೇಶಕ್ಕೂ ಬೆಳಕೂ ಕತ್ತಲೆಯೂ ಪುನಃ ಪುನಃ ಬೀಳುತ್ತಿರುವವು. ಈ ಗೋಳವೇ ಭೂಗೋಳವೆಂದೂ ದೀಪವೇ ಸೂರ್ಯನೆಂದೂ ಭಾವಿಸಿದರೆ ಈ ಗೋಳದ ಮೇಲಿರುವ ಎಲ್ಲಾ ಪ್ರದೇಶಗಳಿಗೂ ಬೆಳಕು ಕತ್ತಲೆಗಳು ಅಂದರೆ ಅಹೋರಾತ್ರಿಗಳು ಆಗುವವು. ಈ ವಿಷಯವು ಎಲ್ಲರಿಗೂ ಸ್ಪಷ್ಟವಾಗಿಯೇ ಇದೆ.

ಕೋ॥ ಕಂ॥ ವೆಂ॥

ಇದ್ದವರು ಮೂವರು ಕದ್ದವರು ಯಾರು.

೬. ಕೆರೊಸೀನ್ ಎಣ್ಣೆ.

ನಮ್ಮ ದೇಶದಲ್ಲಿಯೂ ಇತರ ದೇಶಗಳಲ್ಲಿಯೂ ದೀಪವನ್ನು ಉರಿಸುವದಕ್ಕೋಸ್ಕರ ಕೈಯೆಣ್ಣೆ, ಬಳ್ಳೆಣ್ಣೆ, ಹಿಪ್ಪೇಯೆಣ್ಣೆ, ಕೊಬ್ಬರೀ ಎಣ್ಣೆ, ನೆಲಗಡಲೇಕಾಯಿ ಎಣ್ಣೆ, ಕೆರೋಸೀನ್ ಎಣ್ಣೆ, ಮೈಣದ ಬತ್ತಿ, ಕೊಬ್ಬಿನಿಂದ ಮಾಡಿದ ಬತ್ತಿ, ಇದ್ದಲಿನ ಗಾಳಿ ಮೊದಲಾದ ಅನೇಕ ವಸ್ತುಗಳನ್ನು ಉಪಯೋಗಿಸುತ್ತಾರೆ. ಇವುಗಳಲ್ಲಿ ಮೈಣದಬತ್ತಿ ಮೊದಲಾದ ಕೆಲವು ವಸ್ತುಗಳು ಸ್ವಲ್ಪಹೆಚ್ಚು ಬೆಲೆಯುಳ್ಳವುಗಳಾದಕಾರಣ ಅವು ಐಶ್ವರ್ಯವಂತರಿಗಲ್ಲದೆ ಬಡವರಿಗೆ ಸುಲಭವಾಗಿ ಸಿಕ್ಕಲಾರವು ಮತ್ತು ನಮ್ಮ ದೇಶಗಳಲ್ಲಿ ಎಲ್ಲರ ಮನೆಗಳಲ್ಲಿಯೂ ಬಳಸುವ ಇತರವಾದ ಎಣ್ಣೆಗಳು ಕಿರೊಸೀನ್ ಎಣ್ಣೆಯಷ್ಟು ಪ್ರಕಾಶವಾಗಿ ಉರಿಯಲಾರವು. ನ್ಯಾಯವಾಗಿ ಯೋಚಿಸಿ ನೋಡಿದರೆ ಈ ಕೆರೊಸೀನ್ ಎಣ್ಣೆಯೇ ಬಡವರು ಮೊದಲುಗೊಂಡು ಪ್ರಭುಗಳವರಿಗೂ ಎಲ್ಲರೂ ಸುಲಭವಾಗಿ ಉಪಯೋಗಿಸಬಹುದಾದ ದೀಪಪ್ರಕಾಶ ಸಾಧನವೆಂದು ತೋರುವದು. ಈ ಎಣ್ಣೆಗೆ ಕ್ರಯವು ಸುಲಭವಾಗಿಯೂ ಬೆಳಕು ಹೆಚ್ಚಾಗಿಯೂ ಇರುವದರಿಂದ ಲೋಕದಲ್ಲಿ ಇದರ ಘನತೆಯು ಹೆಚ್ಚುತ್ತಾ ಹೆಚ್ಚುತ್ತಾ ಬೇರೇ ಎಣ್ಣೆಗಳಿಗೆ ಬದಲಾಗಿ ಸಕಲರೂ ಇದನ್ನೇ ಉಪಯೋಗಿಸುವರೆಂದು ನಂಬಿ ಇದ್ದೇವೆ.

ಕೆರೊಸೀನ್ ಎಣ್ಣೆಯು ಎಳ್ಳು, ಹರಳು ಮೊದಲಾದ ವೃಕ್ಷಸಂಬಂಧವಾದ ಪದಾರ್ಥಗಳಿಂದ ತೆಗೆದ ವಸ್ತುವೂ, ಮೀನೀನ ಎಣ್ಣೆಯಂತೆ ಪ್ರಾಣಿ ಶರೀರದಿಂದ ತೆಗೆದ ವಸ್ತುವೂ ಅಲ್ಲ. ಆದರೂ ಇದರ ನಿಜಸ್ಥಿತಿಯನ್ನು ತಿಳಿಯದವರು ಅನೇಕರು ಇದು ಒಂದು ಜಂತುವಿನ ದೇಹದಿಂದ ತೆಗೆದ ಅಶುಚಿ ಪದಾರ್ಥವೆಂದು ತಿಳಿದು ಇದನ್ನು ಮುಟ್ಟದೇಲೇ ಇರುವರು.

ಈ ಕೆರೊಸೀನ್ ಎಣ್ಣೆಯನ್ನು ಭೂಮಿಯಲ್ಲಿ ಆಳವಾದ ಗಣಿಗಳಿಂದ ತೆಗೆಯುವರು. ಈ ಎಣ್ಣೆಯು ಇದ್ದಲು ಇರುವ ಸ್ಥಳಗಳಲ್ಲಿಯೂ, ಪೂರ್ವದಲ್ಲಿ ಅಡವಿಗಳಿದ್ದು ಈಗ ಹೂತು ಹೋಗಿರುವ ಸ್ಥಳಗಳಲ್ಲಿಯೂ ಸಿಕ್ಕುತ್ತದೆ. ಇದು ಭೂಮಿಯ ಎಲ್ಲಾ ಭಾಗಗಳಲ್ಲಿಯೂ ಸಿಕ್ಕುವದಾದರೂ

ಇಬ್ಬರ ಜಗಳ ಮೂರನೇವನಿಗೆ ಲಾಭ.

ಇದುವರಿಗೂ ಅಮೆರಿಕಾ ಖಂಡದಲ್ಲಿಯೇ ಇದನ್ನು ಹೆಚ್ಚಾಗಿ ಗಣಿಗಳಿಂದ ತೆಗೆಯುತ್ತಿರುವರು. ಈ ಎಣ್ಣೆಯು ಭೂಮಿಯಲ್ಲಿ ಇದೆಯೆಂದು ತಿಳಿದು ಇವನ್ನು ತೆಗೆಯುವವಕ್ಕೆ ಪ್ರಾರಂಭವಾಗಿ ಸುಮಾರು ೬೫ ವರ್ಷಗಳಾಯಿತು. ಅದಕ್ಕೆ ಮುಂಚೆ ಅಲ್ಲಿನ ಜನರಿಗೆ ಇದು ಇದೆಯೆಂಬ ವಿಷಯ ಮಾತ್ರ ತಿಳಿದು ಇತ್ತು. ಇದನ್ನು ಪೂರ್ವದಲ್ಲಿ ಜನರು ವಾತರೋಗ ಮುಂತಾದ ವ್ಯಾಧಿಗಳು ಬಂದಾಗ ಮೇಲೆ ಸವರುತ್ತಲೂ ಚಳಿಯನ್ನು ನಿವರ್ತಿ ಮಾಡಿಕೊಳ್ಳುವದಕ್ಕಾಗಿ ಹೊಟ್ಟೆಗೆ ತೆಗದುಕೊಳ್ಳುತ್ತಲೂ ಇದ್ದರು. ಗಣಿಗಳಲ್ಲಿ ಇಳಿಯುವವರು ಕೂಡ ಚಳಿಯನ್ನು ತಡೆಯಲಾರದೆ ಇದನ್ನು ವಾಡಿಕೆಯಾಗಿ ಕುಡಿಯುತ್ತಾ ಬರುವರು. ಹೀಗೆ ಇದನ್ನು ಕುಡಿಯುವವರ ದೇಹ ಸಾಧ್ಯವನ್ನು ನೋಡಿದರೆ ಇದೂ ಬಹಳ ಶ್ಲಾಘ್ಯವಾದ ಔಷಧಿಯೆಂದು ತೋರುತ್ತದೆ.

ಯಾವದಾದರೂ ಒಂದು ಪ್ರದೇಶದಲ್ಲಿ ಈ ಎಣ್ಣೆಯು ಸಿಕ್ಕುವಹಾಗಿದ್ದರೆ ಆ ಪ್ರದೇಶದಲ್ಲೆಲ್ಲಾ ಇದರ ವಾಸನೆಯು ಸುತ್ತಿಕೊಂಡು ಅಲ್ಲಿರುವ ಹಳ್ಳ ಕೊಳ್ಳಗಳ ನೀರು ಜಿಸ್ಡು ಜಿಡ್ಡಾಗಿರುವದು. ಪ್ರಾಯಶಃ ಆ ಪ್ರದೇಶವು ಜಾಗಾಗಿ ಹಳ್ಳಗಳಿಂದ ತುಂಬಿ ಇರುವದು. ಇಂಥಾ ಸ್ಥಳದಲ್ಲಿ ಈ ಎಣ್ಣೆಯು ಇದೆ ಎಂದು ತಿಳಿದ ಬಡನೆಯೇ ಅನೇಕರು ಕೆಲಸಗಾರರು ಆಕೆಲಸಕ್ಕಾಗಿಯೇ ಇಟ್ಟುಕೊಂಡಿರುವ ಒಂದು ವಿಧವಾದ ಯಂತ್ರವನ್ನು ತಂದು ಅದರ ಸಹಾಯದಿಂದ ಭೂಮಿಯನ್ನು ಅಗೆದು, ೫೦೦—೬೦೦ ಅಡಿಗಳ ಕೆಳಗೆ ಇರುವ ಎಣ್ಣೆಯನ್ನು ಮೇಲಕ್ಕೆ ತೆಗೆಯುವರು. ಕೆಲವುಕಡೆ ಮೇಲ್ಕಂಡ ಗುರುತುಗಳೆಲ್ಲಾ ಇದ್ದಾಗ್ಯೂ ಕಷ್ಟಪಟ್ಟು ಅಗೆದ ಮೇಲೆ ಎಣ್ಣೆ ಸಿಕ್ಕದೆ ಹೋಗುವದೂ ಉಂಟು, ಮತ್ತೂ ಕೆಲವು ವೇಳೆಗಳಲ್ಲಿ ಅಪರಿಮಿತವಾಗಿ ಸಿಕ್ಕುವಹಾಗಿದ್ದು ಥಟ್ಟನೆ ಚದರಿ ಹೋಗುವದೂ ಉಂಟು. ರೂಢಿಯಾಗಿ ಬಳಾಗಿದ ಬಾವಿಗಳಲ್ಲಿ ಇದು ಹೆಚ್ಚಾಗಿ ಸಿಕ್ಕುವದು. ಕೆಲವು ವೇಳೆ ವಿಶೇಷವಾಗಿ ದ್ರವ್ಯವನ್ನು ವೆಚ್ಚಮಾಡಿ ತಕ್ಕ ಪ್ರಯತ್ನಗಳನ್ನೆಲ್ಲಾ ಮಾಡಿದಾಗ್ಯೂ ಏನೂ ಸಿಕ್ಕದೆ ಹೋಗುವದೂ ಉಂಟು. ಹಾಗಲ್ಲದೆ ಬಂದೊಂದು

ವೇಳೆ ಸ್ವಲ್ಪ ಪ್ರಯತ್ನ ಮಾಡಿದಮಾತ್ರಕ್ಕೆ ಅಮಿತವಾಗಿ ಎಣ್ಣೆ ದೊರೆಯುವದೂ ಉಂಟು. ಯಾವದಾದರೂ ಒಂದು ಅಡವಿಯಲ್ಲಿ ಈ ಎಣ್ಣೆಯು ಸಿಕ್ಕುವದಕ್ಕೆಮೊದಲಾದರೆ ತತ್ಕ್ಷಣವೇ ಆ ಅಡವಿಯು ಒಂದು ಪಟ್ಟಣವಾಗುವದು; ಎಣ್ಣೆಯು ತೀರಿ ಹೋದ ಒಡನೆಯೇ ಆ ಪಟ್ಟಣವು ಪುನಃ ಕಾಡಾಗುವದು.

ಇತರ ಪ್ರದೇಶಗಳಿಂದ ಹೊಸದಾಗಿ ಆ ಪಟ್ಟಣಕ್ಕೆ ಹೋದವರಿಗೆ ಮೊದಲು ಅಲ್ಲಿ ಅದರ ವಾಸನೆಯು ಅಸಹ್ಯಕರವಾಗಿದ್ದರೂ ಕೆಲವು ದಿನಗಳಾದ ಮೇಲೆ ಅದೇ ಅತ್ಯಂತ ಹಿತಕರವಾಗಿರುವದು. ಈ ಎಣ್ಣೆಯನ್ನು ಇಟ್ಟುಕೊಂಡು ಇರುವವರು ಬೆಂಕಿಯ ವಿಷಯದಲ್ಲಿ ಸ್ವಲ್ಪ ಅಜಾಗರೂಕರಾಗಿದ್ದರೆ ಬಹಳ ಅಪಾಯ ಬರುವದು.

ಈ ಕೆರೊಸೀನ್ ಎಣ್ಣೆಯು ದೇಶದಿಂದ ದೇಶಕ್ಕೆ ತೆಗೆದುಕೊಂಡು ಹೋಗಿ ವರ್ತಕ ಮಾಡುವ ವಸ್ತುವಾಗಿ ಇರುವದರಿಂದಲೂ, ಅದನ್ನು ಗಣಿಗಳಿಂದ ಸುಲಭವಾಗಿ ತೆಗೆಯುವದಕ್ಕೆ ತಕ್ಕ ಸಾಧನಗಳೆಲ್ಲಾ ಇರುವದರಿಂದಲೂ, ಇದನ್ನು ತೆಗೆದು ಮಾರುವವರು ಐಶ್ವರ್ಯವಂತರಾಗುವದಕ್ಕೆ ಇದೂ ಒಂದು ಸಾಧನವಾಗಿ ಇದೆ. ಇದರ ಸಹಾಯದಿಂದ ಅನೇಕರು ಬಡವರು ಐಶ್ವರ್ಯವಂತರಾಗಿ ಇರುತ್ತಾರೆ. ಈ ಎಣ್ಣೆಯ ಕ್ರಯವು ಪೂರ್ವಕ್ಕಿಂತ ಬಹಳ ಸ್ವಲ್ಪವಾಗಿದ್ದರೂ ಅದನ್ನು ಮಾರುವವರಿಗೆ ಬರುವ ಲಾಭವು ಮಿತಿ ಇಲ್ಲದೆ ಇರುವದು. ಆ ದೇಶದಲ್ಲಿ ಒಂದು ಕಂಪೆನಿಯವರು ಈ ಎಣ್ಣೆಯನ್ನು ತೆಗೆಯುವದಕ್ಕೆ ಬಾವಿಯನ್ನು ಅಗೆಯುವದಕ್ಕೋಸ್ಕರ ೨೦ ಸಾವಿರ ರೂಪಾಯಿ ಖರ್ಚು ಮಾಡಿದರು. ಅವರ ಅದೃಷ್ಟಕ್ಕೆ ಸರಿಯಾಗಿ ಅಲ್ಲಿ ಅವರಿಗೆ ಬೇಕಾದಷ್ಟು ಎಣ್ಣೆಯೂ ಸಿಕ್ಕಿತು. ಹೀಗೆ ಸಿಕ್ಕಿದ ಒಂದು ವಾರದಲ್ಲಿಯೇ ಅವರ ಅಸಲು ಎದ್ದುಹೋಗಿ ಅದರ ಹನ್ನೆರಡರಷ್ಟು ಲಾಭವು ಬಂತು. ಇಷ್ಟುಮಾತ್ರವಲ್ಲದೆ ಅವರು ಉಳಿದ ಎಣ್ಣೆಯನ್ನು ಮಾರುತ್ತಾ ದಿನ ೧ಕ್ಕೆ ಸುಮಾರು ಎರಡುಸಾವಿರ ರೂಪಾಯಿಗಳನ್ನು ಸಂಪಾದಿಸುತ್ತಾ

ಇದ್ದಾರೆ. ಈಗ ಆ ದೇಶದಿಂದ ನಮ್ಮ ದೇಶಕ್ಕೆ ಸಂವತ್ಸರ ೧ಕ್ಕೆ ಸುಮಾರು ೨೫ ಲಕ್ಷ ರೂಪಾಯಿ ಬಾಳುವಷ್ಟು ಎಣ್ಣೆ ಬರುತ್ತಾ ಇದೆ.

ಈ ವಿಧವಾಗಿ ಈ ಎಣ್ಣೆಯು ಸಿಕ್ಕುವದು ಇತರ ದೇಶಗಳಲ್ಲಿ ಮಾತ್ರವೇ ಅಲ್ಲ. ನಮ್ಮ ದೇಶದಲ್ಲೂ ಸಿಕ್ಕುವ ಅನೇಕ ಚಿಹ್ನೆಗಳು ಕಾಣಬರುತ್ತಿವೆ. ಬ್ರಿಟಿಷ್‌ಬರಮಾಕ್ಕೆ ಸಮೀಪದಲ್ಲಿರುವ ಬಂದುದ್ವೀಪ ಮೊದಲುಮಾಡಿಕೊಂಡು ಆ ದೇಶದಲ್ಲಿ ಬಹು ದೂರದವರಿಗೂ ಈ ಎಣ್ಣೆಯು ವ್ಯಾಪಿಸಿಕೊಂಡು ಇದೆ. ಅಲ್ಲಿ ಕೆಲವು ಸ್ಥಳಗಳಲ್ಲಿ ಎಣ್ಣೆಯು ಹೆತ್ತುಕೊಂಡು ಅಶುದ್ಧವಾಗಿ ಇದೆ. ಮತ್ತು ಕೆಲವು ಸ್ಥಳಗಳಲ್ಲಿ ಪರಿಶುದ್ಧವಾಗಿ ಇದೆ. ಹೀಗೆಯೇ ಇನ್ನುಮೇಲೆ ಈ ದೇಶದ ಎಲ್ಲಾ ಪ್ರದೇಶಗಳಲ್ಲಿಯೂ ನಿರ್ಮಲವಾದ ಎಣ್ಣೆಯು ಸಿಕ್ಕಬಹುದು.

ಈ ಎಣ್ಣೆಯಲ್ಲಿ ಮೇಲು ಬೀಡು ಎಂದು ಎರಡು ವಿಧಗಳುಂಟು. ಬೀಡುಎಣ್ಣೆಯು ಅತಿ ಜಾಗ್ರತೆಯಾಗಿ ಹತ್ತಿಕೊಂಡು, ಪೆಟ್ಟಿಗೆಗಳೇ ಒಡೆದು, ಅಪಾಯವನ್ನುಂಟುಮಾಡುವದಾದ್ದರಿಂದ ಮೇಲು ಎಣ್ಣೆಯನ್ನೇ ನೋಡಿ, ಕೊಂಡು ಕೊಳ್ಳಬೇಕು.

೨. ದಿವಾನರ ಹುಕುಂ.

ಅಕ್ಟೋಬರು ತಾ|| ೧೪—ಇನಾಮು ಗ್ರಾಮಗಳ ಶಾನುಭೋಗರ ಮೇಲೆ ಇನಾಮುದಾರರು ತಮಗೆ ವಿಧೇಯರಾಗಿ ಮಾತ್ರವೇ ಇಲ್ಲವೆಂದು ಚಾರ್ಜುತಂದರೆ ಇದಕೋಸ್ಕರ ಹಕ್ಕುದಾರೀ ಕೆಲಸವನ್ನು ತಪ್ಪಿಸಕೂಡದು. ಅಂಥಾ ಶಾನುಭೋಗರು ಸರಿಯಾಗಿ ಲೆಖ್ಖ ವಿಡದೆ ಇನಾಮುದಾರರಿಗೆ ಅವಿಧೇಯರಾಗಿ ಇದ್ದರೆ ನಿಮ್ಮನ್ನು ಡಿಸಮಿಸ ಮಾಡುತ್ತೇವೆಂದು ಅವರಿಗೆ ಎಚ್ಚರಿಸತಕ್ಕದ್ದು.

ಈಡು ಇಟ್ಟರೆ ನಾಡು ನಂಬುವದು.

ಅಕ್ಟೋಬರು ತಾ॥೨೩—ಪ್ರತಿಯೊಂದು ಡಿಸ್ಟ್ರಿಕ್ಟಿಗೂ ೪೦ ರೂಪಾಯಿನ ತಲಬಿನ ಮೇಲೆ ಒಬ್ಬ ಆಗ್ರಿಕಲ್ಚರಲ್ ಇನ್ಸ್ಪೆಕ್ಟರನ್ನು ನೇಮಿಸಬೇಕೆಂದು ಸರಕಾರದವರಿಗೆ ತಾತ್ಪರ್ಯವಿದೆ. ಇಂಥಾ ಕೆಲಸವನ್ನು ಅಪೇಕ್ಷಿಸುವವರು ವ್ಯವಸಾಯಶಾಸ್ತ್ರ, ರಸಗಂಧಕಾದಿ ಪದಾರ್ಥತತ್ವವನ್ನು ಹೇಳುವ ಶಾಸ್ತ್ರ, ಓಷಧಿಶಾಸ್ತ್ರ, ಸರ್ವೇವಿಷಯ, ಇವುಗಳಲ್ಲಿ ಪರೀಕ್ಷೆ ಕೊಟ್ಟು ಇರಬೇಕು. ಈ ಇನ್ಸ್ಪೆಕ್ಟರುಗಳು ಡಿಸ್ಟ್ರಿಕ್ಟ ಕಮಿಷನರ ಆಜ್ಞೆಯಲಿದ್ದುಕೊಂಡು ತಾವಿರತಕ್ಕ ಡಿಸ್ಟ್ರಿಕ್ಟುಗಳಲ್ಲಿ ನಡಿಯತಕ್ಕ ವ್ಯವಸಾಯದ ವಿಷಯದಲ್ಲಿ ಮೇಲ್ವಿಚಾರಣೆಯನ್ನು ತೆಗೆದು ರಿಪೋರ್ಟು ಮಾಡುತ್ತಾ ಇರಬೇಕು. ಡಿಸ್ಟ್ರಿಕ್ಟುಗಳ ಬೇರೆಬೇರೆ ಭಾಗಗಳಲ್ಲಿ ಕೆಲವು ಭೂಮಿಗಳನ್ನು ಶಾಸ್ತ್ರರೀತಿಯಲ್ಲಿ ವ್ಯವಸಾಯಮಾಡಿಸಿ ಅಂಥಾ ವ್ಯವಸಾಯ ಶಾಸ್ತ್ರವನ್ನು ಜನರಿಗೆಲ್ಲಾ ತಿಳಿಸಬೇಕು. ಗವರ್ನಮೆಂಟು ಪ್ಲಾಂಟೇಷನ್ನುಗಳ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳಬೇಕು. ಈ ಇನ್ಸ್ಪೆಕ್ಟರುಗಳು ಮುಂದೆ ಡಿಪಟೀ ಅಮಲ್ದಾರರಾಗಬೇಕಾದರೆ ಯಾವಯಾವ ವಿಷಯಗಳು ತಿಳಿಯಬೇಕೋ ಅಂಥಾವುಗಳನ್ನು ತಿಳಿಯತಕ್ಕ ವಿಷಯಗಳಲ್ಲಿ ಡಿಸ್ಟ್ರಿ ಕಮಿಷನರು ಇವರನ್ನು ನೇಮಿಸಬೇಕು. ೧೮೮೪ನೇ ಇಸವಿಯಲ್ಲಿ ಪ್ಯಾಸ್‌ಮಾಡಿದ ಮೈಸೂರು ವಿದ್ಯಾರ್ಥಿಗಳ ಪೈಕಿ ೪ ಜನರನ್ನು ಇನ್ಸ್ಪೆಕ್ಟರುಗಳಾಗಿ ನೇಮಿಸಿ ಇದೆ. ಬೆಂಗಳೂರು ಡಿಸ್ಟ್ರಿಗೆ ಮ॥ ನೀಲಕಂಠರಾಯರನ್ನೂ, ಕೋಲಾರ ಡಿಸ್ಟ್ರಿಕ್ಟಿಗೆ ಮ॥ ಶ್ರೀನಿವಾಸರಾಯರನ್ನೂ, ತುಮಕೂರು ಡಿಸ್ಟ್ರಿಕ್ಟಿಗೆ ಮ॥ ವೆಂಕಟದಾಸಪ್ಪನವರನ್ನೂ, ಮೈಸೂರು ಡಿಸ್ಟ್ರಿಕ್ಟಿಗೆ ಮ॥ ಶ್ಯಾಮಯ್ಯಂಗಾರರನ್ನೂ, ನೇಮಿಸಿ ಯಿದೆ. ಈ ಡಿಸ್ಟ್ರಿಕ್ಟುಗಳ ಡಿಸ್ಟ್ರಿ ಕಮಿಷನರುಗಳು ಈ ಇನ್ಸ್ಪೆಕ್ಟರುಗಳಿಂದ ಕೆಲಸ ತೆಗೆದುಕೊಳ್ಳುವ ರೀತಿಯನ್ನು ರಿಪೋರ್ಟು ಮಾಡತಕ್ಕದ್ದು. ಎಳಂದೂರು ಸೇತುರಾಯರು ೧೮೮೩ನೇ ಇಸವಿಯಲ್ಲಿ ಈ ಪರೀಕ್ಷೆ ಕೊಟ್ಟರು. ಕುದುರೆಗಳ ಮತ್ತು ದನಗಳ ರೋಗಗಳ ವೈದ್ಯಗಳನ್ನು ಕಲಿತುಕೊಳ್ಳುವದಕ್ಕೋಸ್ಕರ ಇವರಿಗೆ ೧ ವರ್ಷದವರಿವಿಗೂ ತಿಂಗಳಿಗೆ ೨೦ ರೂಪಾಯಿ ಸ್ಕಾಲರ್‌ಷಿಪ್ ಮಾಡಿ ಇದೆ. ಇನ್ನೂ ಮಿಕ್ಕಾದ ಡಿಸ್ಟ್ರಿಕ್ಟುಗಳಿಗೆ ವಿದಾರ್ಥಿಗಳು ಪರೀಕ್ಷೆಕೊಟ್ಟು ಬಂದಹಾಗೆಲ್ಲಾ ಏರ್ಪಾಡು ಮಾಡುತ್ತೆ. ಡಿಸ್ಟ್ರಿ ಅಮಲ್‌ದಾರರ ಆಫೀಸಿಗೆ ಸಾದಿಲ್‌ವಾರು ತಿಂಗಳಿಗೆ ೫ ರೂಪಾಯಿ ಯಿತ್ತು. ಈಗ ೮ ರೂಪಾಯಿ ಮಾಡಿ ಯಿದೆ.

೮. ಮೈಸೂರು ಗಜೆಟ್ ಸಂಗ್ರಹ.

ನವೆಂಬರು ತಾರೀಖು ೨೫.—ಕೋಲಾರ ಮುನಸೀಫರು ಮ॥ ಇ. ಸಿ. ಶಿವಜ್ಞಾನಪಿಳ್ಳೆಯವರಿಗೆ ೩ನೇ ಗ್ರೇಡಿನಿಂದ ೨ನೇ ದಕ್ಕೆ ಬಡತಿಯಾಯಿತು. ಮ॥ ಎಂ. ಕೃಷ್ಣರಾವ್ ಎಂ. ಎ ಅವರು ಕಳೆದ ಆಗಸ್ಟು ೧ ರಿಂದಲೂ, ಮ॥ ರಘುನಾಥರಾಯರವರು ನವೆಂಬರು ೨೦ರಿಂದಲೂ

ಈ ಮುಖಕ್ಕೆ ಯಾಕೆ ಮೇಲುಗೋಟೆಯ ನಾಮ ?

ಮೆ॥ ನಾಗೇಶರಾಯರು ನವೆಂಬರ್ ೨೦ ರಿಂದಲೂ ೬ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರಾಗಳಾಗಿ ಇರತಕ್ಕದ್ದು. ಮೈಸೂರು ಫಸ್ಟ್‌ಕ್ಲಾಸು ಮುನಸಿಫ್ ಮೆ॥ ಸಿ. ಶ್ರೀನಿವಾಸಯ್ಯಂಗಾರರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ೬ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರಾಗಿ ಇರತಕ್ಕದ್ದು. ಸ್ಪೆಷಲ್ ಡ್ಯೂಟಿಯ ಮೇಲಿರುವ ಮೆ॥ ಎ. ಕೃಷ್ಣಸ್ವಾಮಿಅಯ್ಯಂಗಾರರು ದಿವಾನರ ಆಫೀಸಿನಲ್ಲಿಯೇ ಕೆಲಸ ನೋಡುತ್ತಾ ನಾಲ್ಕನೇ ಗ್ರೇಡ್ ಅ॥ ಕಮಿಷನರಾಗಿ ಇರುವಂತೆ ನೇಮಕವಾಗಿ ಇದೆ ಮೆ॥ ದಳವಾಯಿ ದೇವರಾಜ ಅರಸಿನವರು ಮೈಸೂರು ಡಿ॥ ಟ್ರೆಜರೀ ಚಾರ್ಜಿನಲ್ಲಿ ೬ನೇ ಗ್ರೇಡ್ ಅ॥ ಕ॥ ರಾಗಿಯಿರುವಂತೆ ಮೊಕರೂರಾಗಿದೆ. ೨ನೇ ಗ್ರೇಡ್ ಅ॥ಕ॥ ರಾಗಿರತಕ್ಕ ಮೆ॥ ಎ. ಚಲುವಯ್ಯಂಗಾರರನ್ನು ಮೈಸೂರಿಂದ ಕೋಲಾರಕ್ಕೆ ವರ್ಗಮಾಡಿ ಇದೆ ಮೆ॥ ದೇವರಾಜ ಅರಸಿನವರಿಗೆ ಮಿಲಿಟೆರಿ ಆಟೋಚಿಯ ಕೆಲಸ ಗೊತ್ತಾಗಿಯಿದೆ. ಸೂಪ ನ್ಯೂಮರರಿ ಸಬಾರ್ಡಿನೇಟ್ ಜಡ್ಜಿಗಳಾಗಿ ಇದ್ದ ಮೆ॥ ವಿ. ಪಿ. ಮಾಧವರಾವ್ ಬಿ. ಎ, ಅವರ ಫಸ್ಟ್‌ಗ್ರೇಡ್ ಅ॥ ಕ॥ರಾಗಿಯೂ, ಮೆ॥ ಇ. ಚಿದಂಬರಮಯ್ಯನವರು ಸೆಕೆಂಡ್ ಗ್ರೇಡ್ ಅ॥ ಕ ರಾಗಿಯೂ, ಮೆ॥ ಬಿ. ತಿರುಮಲಾಚಾರಿ ಬಿ. ಎಲ್. ಅವರು ೩ನೇ ಗ್ರೇಡ್ ಅ॥ ಕ॥ ರಾಗಿಯೂ ಇರುವಂತೆ ಮೊಕರೂರಾಗಿದೆ.

೯. ವೃತ್ತಾಂತ ಸಂಗ್ರಹ.

ಗೋದಾವರಿಬಾಯಿ ಎಂಬ ಒಬ್ಬ ವಿಧವೆಯು ಉತ್ತರಾದಿಮಠದ ಸ್ವಾಮಿಗಳಿಗೆ ಬರೆದಿದ್ದ ವಿಜ್ಞಾಪನಾ ಪತ್ರಿಕೆ ಏನೆಂದರೆ:—

ಸ್ವಾಮಿ, ತಾವು ಮದರಾಸು ಪಟ್ಟಣಕ್ಕೆ ದಯಮಾಡಿಸುತ್ತೀರೆಂಬ ವರ್ತಮಾನವನ್ನು ಕೇಳಿ ನಮಗೆಲ್ಲಾ ಬಹಳ ಆನಂದ ಉಂಟಾಗಿತ್ತು. ಅದರೊಳಗಾಗಿ ತಾವು ನಮ್ಮ ಹಣೇಬರಹವನ್ನು ಗೊತ್ತುಮಾಡುವದಕ್ಕಾಗಿ ದಯಮಾಡಿಸುತ್ತೀರೆಂದು ಕೇಳಿದ ನಮಗೆ ಉಂಟಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ನಿಮ್ಮ ಆಗಮನವನ್ನೇ ಅತಿ ಕುತೂಹಲದಿಂದ ನಿರೀಕ್ಷಿಸಿಕೊಂಡು ಇದ್ದೆವು. ನಮ್ಮ ಸ್ಥಿತಿಯನ್ನು ಕುರಿತು ವಾಕ್ಯಾರ್ಥ ಮಾಡಿ ನಿಷ್ಕರ್ಷಿಸುವದಕ್ಕೋಸ್ಕರ ಪಂಡಿತರ ಸಮಾಜವನ್ನು ಏರ್ಪಡಿಸುತ್ತೀರೆಂದು ಕೇಳಿ ನಮ್ಮ ದುರವಸ್ಥೆಯನ್ನು ನೋಡಲಾರದೆ ಶ್ರೀ ಮಹಾ ವಿಷ್ಣುವೇ ತಮ್ಮ ಸ್ವರೂಪವಾಗಿ ಈ ಲೋಕದಲ್ಲಿ ಅವತರಿಸಿ ನಮ್ಮ ಸಂಕಟಗಳನ್ನು ನಿವಾರಣೆ ಮಾಡುತ್ತಾನೆಂದು ತಿಳಿದು ಇದ್ದೆವು. ನೀವು ಸಭೆಯನ್ನು ಸೇರಿಸಿ ವಾಕ್ಯಾರ್ಥಗಳನ್ನು ಮಾಡಿ ವಿಧವೆಯರೆಲ್ಲಾ ಸಾಯುವವರಿಗೂ ಈ ಸ್ಥಿತಿಯಲ್ಲಿಯೇ ಇರುವಂತೆ ನಿಷ್ಕರ್ಷೆ ಮಾಡಿದಿರಂತೆ,

ಈರಣ್ಣನ ಮುಂದೆ ಬಸವಣ್ಣ.

ವರು ನಮ್ಮ ಮೇಲಿನ ಕರುಣೆಯಿಂದ ನಮಗೂ ಲೋಕಕ್ಕೂ ಕ್ಷೇಮಕರವಾದ ಶಾಸ್ತ್ರಸಂಮತವಾದ ಏರ್ಪಾಡುಗಳನ್ನು ತಮಗೆ ತೋರಿಸಿದರು. ದುಷ್ಟರೂ ಲೋಕಕಂಟಕರೂ ಆದ ಕೆಲವರು ಮೂಢರ ದುರಾಲೋಚನೆಯಿಂದ ಪ್ರೇರಿತರಾಗಿ ತಾವು ಆ ಏರ್ಪಾಡುಗಳನ್ನು ನಿರಾಕರಿಸಿದಹಾಗೆ ತಿಳಿಯಬಂತು. ಇದರಿಂದ ನಮಗೆ ಬಹಳ ಖೇದಉಂಟಾಗಿ ಇದೆ. ತಾವು ಬಹಳ ವಿದ್ಯಾವಂತರು; ಸಕಲ ಧರ್ಮಜ್ಞರು; ಲೋಕವ್ಯವಹಾರಗಳನ್ನೆಲ್ಲಾ ಯೋಚಿಸಿ ತಿಳಿದುಕೊಂಡು ಇರುವವರು. ಈ ಆಜನ್ಮ ವಿಧವಾವಸ್ಥೆಯಿಂದ ಉಂಟಾಗುವ ಪಾಪಕೃತ್ಯಗಳನ್ನೆಲ್ಲಾ ತಾವು ಕೇಳಿ ಇರಬಹುದು. ತಾವು ಇಂಥಾ ಕ್ರೂರವಾದ ಸಿದ್ಧಾಂತವನ್ನು ಮಾಡಿ ಇರತಕ್ಕದ್ದು ಉತ್ತಮ ಸ್ತ್ರೀಜಾತಿಯ ದುರದೃಷ್ಟವೇ ಸರಿ. ವಿದ್ಯಾವಂತರಾದ ಸ್ತ್ರೀಪುರುಷರು ಮತಗಳನ್ನೆಲ್ಲಾ ನಿರಾಕರಿಸಿ ಶಾಸ್ತ್ರಸಂಮತವಾಗಿಯೇ ಪ್ರವೇಶಿಸಿದರೆ ತಮಗೂ ತಮ್ಮಂಥಾ ಇತರ ಗುರುಗಳಿಗೂ ಬಹಳ ಅವಮಾನವಾದೀತು. ಸ್ತ್ರೀಪುರುಷರು ಹೀಗೆ ಮಾಡುವದಿಲ್ಲ ಎಂಬುವದಕ್ಕೆ ಯಾವ ದೃಷ್ಟಾಂತವೂ ಇಲ್ಲ. ಲೋಕದಲ್ಲಿ ಎಲ್ಲರೂ ದಿನೇ ದಿನೇ ವಿದ್ಯಾವಂತರಾಗುತ್ತಾ ಇದ್ದಾರೆ. ಮೂಢರನ್ನು ಆಜ್ಞೆಯಿಂದಲೂ ಭಯಪಡಿಸುವದರಿಂದಲೂ ಗೆಲ್ಲಬಹುದು. ಬುದ್ಧಿವಂತರು ಸರಿಯಾದ ಕಾರಣಗಳನ್ನು ತೋರಿಸಿದ ಹೊರ್ತು ವಶವಾಗುವದಿಲ್ಲ. ತಾರತಮ್ಯಜ್ಞರಾದ ತಾವು ಕಾಲಸಂದರ್ಭಗಳನ್ನು ಯೋಚಿಸಿ ನಡೆಯತಕ್ಕದ್ದು ಉತ್ತಮ; ಹಾಗಲ್ಲದೆ ತಾವೂ ನಮ್ಮ ತಾಯಿತಂದೆಗಳೂ ಪ್ರಸನ್ನರಾಗದ ಪಕ್ಷದಲ್ಲಿ ನಿಮ್ಮನ್ನೂ ಆ ತಂದೆತಾಯಿಗಳನ್ನೂ ಅವಿವೇಕಿಗಳಲ್ಲಿ ಗಣನೆ ಮಾಡಿ ಶಾಸ್ತ್ರೋಕ್ತವಾಗಿ ಲೋಕಕ್ಕೆ ಅನುಕೂಲವಾಗಿರುವ ಸನ್ಮಾರ್ಗವನ್ನು ಅನುಸರಿಸುವೆವು. ಆಮೇಲೆ ತಮ್ಮಂಥಾ ಗುರುಗಳು ಸಾವಿರಜನ ಸೇರಿದರೂ ನಮ್ಮನ್ನು ಏನೂ ಮಾಡಲಾರಿರಿ. ಈಗಲಾದರೂ ತಾವು ಈ ವಿಷಯವನ್ನು ಕುರಿತು ಆಲೋಚಿಸತಕ್ಕದ್ದು ಯುಕ್ತವಾಗಿದೆ. ಬ್ರಾಹ್ಮಣರು ಸ್ವಧರ್ಮವನ್ನೂ ಸ್ವಭಾಷೆಯನ್ನೂ ಬಿಟ್ಟು ಮ್ಲೇಂಛರ ಭಾಷೆಯನ್ನು ಕಲಿತು ಅವರ ಸೇವೆ ಮಾಡಿ ವೈದ್ಯಶಾಲೆಗಳಲ್ಲಿ ಶವಗಳನ್ನು ಮುಟ್ಟಿ ಕುಯಿದು ಉದರಪೋಷಣೆ ಮಾಡಿಕೊಳ್ಳುತ್ತಲೂ, ಬ್ರಾಂದಿ ಮುಂತಾದವುಗಳನ್ನು ಕುಡಿಯುತ್ತಲೂ, ಅಧರ್ಮ ವ್ಯಾಪಾರ ಉಳ್ಳವರಾಗಿ ಇದ್ದಾರಷ್ಟೆ. ಇವುಗಳೆಲ್ಲಾ ಆಗಬಹುದೆಂದು ಶ್ರುತಿಗಳೂ ಸ್ಮೃತಿಗಳೂ ಹೇಳುತ್ತವೋ? ಹಾಗಿಲ್ಲದಿದ್ದರೆ ಇಂಥಾ ಜನರಿಗೆ ತಾವು ಏನು ಶಿಕ್ಷೆಯನ್ನು ಮಾಡಿ ಇದ್ದೀರಿ? ಪುರುಷರು ಗೃಹಸ್ಥಾಶ್ರಮಕ್ಕೆ ವಿರೋಧವಾಗಿ ಎಷ್ಟು ಕೆಲಸಗಳನ್ನು ಮಾಡುವದಿಲ್ಲ? ಅಂಥಾ ಅಧರ್ಮಗಳಿಗೆ ಶಿಕ್ಷೆ ಮಾಡುತ್ತೀರೊ! ಇವನ್ನೆಲ್ಲಾ ನೋಡಿದರೆ ತಮಗೆ ಇರತಕ್ಕ ಅಧಿಕಾರವು ಪುರುಷರು ಮಾಡುವ ಅಧರ್ಮಗಳನ್ನೆಲ್ಲಾ ಮುಚ್ಚಿಕೊಳ್ಳುವದಕ್ಕೋಸ್ಕರವೂ ಸ್ತ್ರೀಯರ ತಪ್ಪುಗಳನ್ನು ಬಯಲುಮಾಡುವದಕ್ಕೋಸ್ಕರವೂ ಎಂದು ತೋರುವದಲ್ಲವೆ? ತಮಗೂ ವಿಧವೆಯರಾದ ಮಕ್ಕಳೂ

ಉಂಬೋಕೆ ಉಡೋಕೆ ಅಣ್ಣಪ್ಪ, ಕೆಲಸಕ್ಕೆ ಮಾತ್ರ ದೊಣ್ಣಪ್ಪ.

ವೊನ್ಮಕ್ಕಳೂ ಇದ್ದರೆ ನೀವು ಮಾಡಿ ಇರತಕ್ಕ ನಿರ್ಣಯವು ಅನ್ಯಾಯವೆಂದು ತಿಳಿದು ಕೊಳ್ಳುವದಕ್ಕೆ ಆಸ್ಪದವಿತ್ತು. ದನಗಳ ಮೈಮೇಲಿನ ಗಾಯದಿಂದ ಮಾಂಸವನ್ನು ಕುಕ್ಕಿತ್ತು ತಿನ್ನುವ ಕಾಗೆಗಳಿಗೆ ಆ ದನಗಳಿಗಾಗುವ ನೋವು ತಿಳಿದೀತೆ! ವೃತ್ತಿಕೆ ಯನ್ನು ಉಪಯೋಗಿಸುವ ವಿಷಯದಲ್ಲಿ ಶಾಸ್ತ್ರದಲ್ಲಿ ಏನೂ ಹೇಳಲಿಲ್ಲವಾದ್ದರಿಂದ ಕೂಡದೆಂದು ಹೇಳಿದಿರಿ. ಆದರೂ ಶಿಷ್ಯರೆಲ್ಲಾ ಕೇಳಿಕೊಂಡದ್ದರಿಂದ ಉಪಯೋಗಿಸಿ ಕೊಳ್ಳಬಹುದೆಂದು ನೀವು ಅಪ್ಪಣೆಕೊಡಲಿಲ್ಲವೆ? ಹಾಗೆಯೇ ನಮಗೂ ಯಾಕೆ ಅಪ್ಪಣೆ ಕೊಡಕೂಡದು? ಈಗಲಾದರೂ ತಾವು ಈ ಪಟ್ಟಣವನ್ನು ಬಿಟ್ಟು ಹೊರ ಡುವದಕ್ಕೆ ಮುಂಚೆಯೇ ಈ ವಿಷಯಗಳನ್ನೆಲ್ಲಾ ಚನ್ನಾಗಿ ಯೋಚಿಸಿ ಸರಿಯಾದ ತೀರ್ಪನ್ನು ಮಾಡಬೇಕು. ಹಾಗಿಲ್ಲದಿದ್ದರೆ ಸಕಲ ಮತಗಳೂ ನಾಶವಾಗುವದಕ್ಕೋಸ್ಕರ ನಾ ವೆಲ್ಲರೂ ಸೇರಿ ತಪಸ್ಸು ಮಾಡಿ ದ್ರೌಪದಿಯು ಕೀಚಕರಿಗೆ ಮಾಡಿದಹಾಗೆ ನಾವೆಲ್ಲರೂ ನಮ್ಮ ತಪೋಬಲದಿಂದ ಮಠಾಧಿಪತಿಗಳನ್ನೆಲ್ಲಾ ನಿರ್ಮೂಲಮಾಡುವೆವು.

ಜಾನಕಮ್ಮನೆಂಬ ಮತ್ತೊಬ್ಬ ವಿಧವೆಯು ಬಂದು ಮದರಾಸು ಪತ್ರಿಕೆಯ ಎಡಿಟರವರಿಗೆ ಬರೆದು ಇರುವದೇನಂದರೆ:—

ನಾನು ಮೈಸೂರು ಸಂಸ್ಥಾನದ ಐಶ್ವರ್ಯವಂತನಾದ ಒಬ್ಬಾನೊಬ್ಬ ಅಧಿಕಾರಿಯ ಮಗಳು. ನನ್ನ ತಂದೆಯು ಲಾ, ಸಕಲವಿದ್ಯೆಗಳು, ಶಾಸ್ತ್ರ ಮೊದಲಾದವುಗಳನ್ನೆಲ್ಲಾ ಚನ್ನಾಗಿ ತಿಳಿದವನಾದರೂ ನನ್ನನ್ನು ಅತ್ಯಂತ ಚಿಕ್ಕವಯಸ್ಸಿನ ಹುಡುಗನಿಗೆ ಕೊಟ್ಟು ಮದುವೆ ಮಾಡಿದನು. ನನ್ನ ಗಂಡನು ಮದುವೆಯಾದ ಎರಡುವರ್ಷದಲ್ಲಿಯೇ ಪರಲೋಕಗತನಾ ದನು. ಹೀಗೆ ನಾನು ಬದುಕಿ ಇರುವವರಿಗೂ ದುರ್ದೆಶೆಯನ್ನು ಅನುಭವಿಸಬೇಕಾಗಿಬಂತು. ಬೆಳಗಿನ ಜಾವದಲ್ಲಿ ಅರುಣೋದಯವನ್ನು ನೋಡುತ್ತಲೇ ಇನ್ನು ಹಗಲೆಲ್ಲಾ ಹ್ಯಾಗೆಕಳೆ ಯಬೇಕೆಂಬ ಚಿಂತೆಯುಂಟಾಗುವದು. ರಾತ್ರಿಯಲ್ಲಿ ದೀರ್ಘನಿದ್ರೆಯನ್ನು ಮಾಡಿದ ನನ್ನ ಗಂಡನ ಮುಖವು ಸ್ವಪ್ನದಲ್ಲಿ ಬಂದು ನನ್ನ ತಲೆದಿಂಬಿನಮೇಲೆ ಪಿಶಾಚಸ್ವರೂಪವಾಗಿ ಕಾಣಬರುವದು. ಸೂರ್ಯೋದಯವಾಗುತ್ತಲೇ ರಾತ್ರಿಯಲ್ಲಿಪಟ್ಟ ದುಃಖಗಳೆಲ್ಲಾ ನೆನ ಪಿಗೆ ಬರುತ್ತವೆ. ಯಾರೂ ನನ್ನನ್ನು ಸೇರಗೊಡಿಸರು. ಒಳ್ಳೇ ಬಟ್ಟೆಗಳನ್ನು ಹೊದಿಯುವದಕ್ಕೂ, ಒಡವೆಗಳನ್ನು ಇಟ್ಟುಕೊಳ್ಳುವದಕ್ಕೂ, ಯಾವ ತಮಾಷೆಯನ್ನು ನೋಡುವದಕ್ಕೂ ನನಗೆ ಮಾರ್ಗವಿಲ್ಲ. ನನ್ನ ಅಕ್ಕತಂಗಿಯರೂ ಅತ್ತಿಗೆನಾದಿನಿಯರೂ ತಮ್ಮತಮ್ಮ ಗಂಡಂದಿರೊಂದಿಗೆ ಸಂತೋಷವಾಗಿ ಮಾತನಾಡುವದನ್ನು ನಾನು ಹ್ಯಾಗೆ ನೋಡಲಿ! ಆದರೆ ದೇವರಸಾಕ್ಷಿಯಾಗಿ ಅವರಿಗೂ ನನಗೂ ಇರುವ ತಾರತಮ್ಯಕ್ಕಾಗಿ ಹೀಗೆ ಹೇಳುತ್ತೇನೇ ಹೊರ್ತು ಹೊಟ್ಟೇಕಿಚ್ಚಿನಿಂದ ಅಲ್ಲ. ನಾನು ಚಿಕ್ಕವಳಾಗಿಯ

ಸ್ಫುರದ್ರೂಪಿಯಾಗಿಯೂ ಇದ್ದೇನೆ. ವಿಶೇಷ ದಿವಸಗಳಲ್ಲಿ ನನ್ನ ಬಂಧುಗಳು, ಸ್ನೇಹಿತರು ನೆರೆಹೊರೆಯವರು, ಇವರ ಮನೆಗಳಿಗೆ ದೊಡ್ಡಹೆಂಗಸರೊಂದಿಗೆ ಕೂಡ ಹೋಗುವದಕ್ಕಿಲ್ಲ. ಈ ಕಾರಣಗಳಿಂದ ಯಾವ ಹಿಂದುವಾಗಲೀ ಪುನರ್ವಿವಾಹ ಕೂಡದೆಂಬುವದಕ್ಕೆ ಕಾರಣಗಳಿದ್ದರೆ ಅವುಗಳನ್ನು ತೋರಿಸಬಾರದೆ ?

ತಂತೀಸಹಾಯದಿಂದ ಒಂದು ದೇಶದವರು ಮತ್ತೊಂದು ದೇಶದವರೊಡನೆ ಮಾತನಾಡುವರು. ಎಷ್ಟು ದೂರದೇಶದಲ್ಲಿದ್ದರೂ ಸಮೀಪದಲ್ಲಿ ಕುಳಿತು ಮಾತನಾಡಿದರೆ ಎಷ್ಟು ಗಟ್ಟಿಯಾಗಿ ಕೇಳಿಸುವದೋ ಅಷ್ಟು ಗಟ್ಟಿಯಾಗಿ ಕೇಳಿಸುವದು. ಹೀಗೆ ಮಾತನಾಡುವದಕ್ಕೆ ಟೆಲಿಫೋನ್ ಎಂದು ಹೆಸರು. ಬ್ರಾಡ್‌ಫರ್ಡ್ ವೇಕ್‌ಫೀಲ್ಡ್ ಎಂಬ ಎರಡು ಪಟ್ಟಣಗಳಲ್ಲಿ ರತಕ್ಕ ಇಬ್ಬರು ಚತುರಂಗದ ಆಟಗಾರರು ಈ ತಂತಿಯ ಸಹಾಯದಿಂದ ಮಾತನಾಡುತ್ತಾ ಕಾಯಿಗಳನ್ನು ನಡಿಸಿದರು. ನಾಲ್ಕು ಘಂಟೆಗಳೊಳಗಾಗಿ ಬ್ರಾಡ್‌ಫರ್ಡಿನವನು ಗೆದ್ದನು.

ಟೀಪುಸುಲ್ತಾನರವರ ಮೊಮ್ಮಕ್ಕಳು ಷಹಜಾದಾ ಅಹಮದ್ಅಲಿ ಮೋಜಮಾನ್ ಎಂಬುವರು ಚಿನಸೂರಾಪಟ್ಟಣದಲ್ಲಿ ಮೃತಪಟ್ಟರು. ಇವರಿಗೆ ಸಾಯುವಾಗ್ಯೆ ೭೦ ವರ್ಷ ವಯಸ್ಸು.

ಕ್ಲರ್ಕನ್‌ವೇಲ್ ಎಂಬ ಸ್ಥಳದಲ್ಲಿ ಒಂದು ವಿಚಿತ್ರವಾದ ಗಿಡವಿದೆ. ಇದು ಸುಮಾರು ಮುಂಡೀವುದ್ದವಿದೆ. ಇದು ಬೆಳೆಯುತ್ತಾ ಇದ್ದಾಗ್ಯೂ ಇದಕ್ಕೆ ಜೀವವಿದೆಯೆಂದು ಗೊತ್ತಾಗುವದೇ ಇಲ್ಲ. ಈ ಗಿಡದಲ್ಲಿ ಎಲೆಗಳೇನೂ ಇಲ್ಲದೆ ಅವುಗಳಿಗೆ ಬದಲಾಗಿ ಬೆಣಚುಕಲ್ಲಿನ ಉಂಗುರಗಳು ಹುಟ್ಟುತ್ತವೆ. ಈ ಗಿಡವು ಕಪ್ಪಾಗಿಯೂ ಬಹಳ ಬರಟಾಗಿಯೂ ಇದೆ. ಅನೇಕ ವಿದ್ವಾಂಸರು ಇದನ್ನು ನೋಡುವದಕ್ಕೆ ಹೋಗಿ ಕಾರಣವನ್ನು ತಿಳಿಯದೆ ಆಶ್ಚರ್ಯಪಟ್ಟು ಹೊರಟು ಹೋದರು. ಇದನ್ನು ಕೊಟ್ಟರೆ ೧೦೦೦ ರೂಪಾಯಿ ಕೊಡುವಂತೆ ಅನೇಕರು ಆ ಗಿಡದ ಯಜಮಾನನನ್ನು ಕೇಳಿದರಂತೆ. ಆದರೂ ಆತನು ಕೊಡಲಿಲ್ಲ.

ಅಮೆರಿಕಾದೇಶದಲ್ಲಿ ಷಿಕಾಗೊ ಎಂಬ ಪಟ್ಟಣವಿದೆ. ಈ ಪಟ್ಟಣದಲ್ಲಿ ಒಬ್ಬ ಹೆಂಗಸು ಸುಮಾರು ೨೦ ವರ್ಷಕ್ಕೆ ಮುಂಚೆ ಆಹಾರದ ಜೊತೆಯಲ್ಲಿ ಕಾಣದೆ ಒಂದು ಸೂಜಿಯನ್ನು ನುಂಗಿ ಇದ್ದಳು. ಈಕೆಗೆ ೧೪ ವರ್ಷದ ಒಬ್ಬ ಮಗನಿರುತ್ತಾನೆ. ಇವನಿಗೆ ಕೆಲವು ದಿವಸಗಳ ಕೆಳಗೆ ಪಕ್ಕೆಯಲ್ಲಿ ಬಹಳ ನೋವಾಯಿತು. ಕೂಡಲೆ ಒಬ್ಬ ವೈದ್ಯನನ್ನು ಕರೆಸಿದರು. ಆತನು ಆ ಭಾಗವನ್ನು ಕತ್ತರಿಸಿ ನೋಡಲಾಗಿ ಅವನ [illegible] ಪೂರ್ವದಲ್ಲಿ ನುಂಗಿಯಿದ್ದ ಸೂಜಿಯು ಅಲ್ಲಿ ಸಿಕ್ಕಿತು.

ಈಸುವವನಿಗೆ ಮೀಸೆ ಭಾರವೆ ?

ಮೈಸೂರು ಮಹಾರಾಜರವರ ಪ್ರೈವೇಟ್‌ಸೆಕ್ರೆಟರಿ ಮೆ॥ ಡಬ್ಲಿಯು. ಎ. ಪೋರ್ಟರ್ ಸಾಹೇಬರವರು ವಿಲಾಯಿತಿಗೆ ಹೋಗುವರೆಂತಲೂ ಅವರಿಗೆ ಬದಲಾಗಿ ಮೆ॥ ಮೇಜರ್ ಬಿ. ಎಂ. ಮರ್ರ್ಯ್‌ಸಾಹೇಬರವರು ಬರುವರೆಂಬದಾಗಿಯೂ ವರ್ತಮಾನವಿದೆ.

ವಿಲಾಯಿತಿಯಲ್ಲಿ ಸಾರಾಯಿ ಮುಂತಾದವುಗಳನ್ನು ಕುಡಿಯುವದರಿಂದ ಅನೇಕರು ಸಾಯುವರು. ಈ ದುರ್ವಿದ್ಯೆಯು ಅಭ್ಯಾಸವಾದಮೇಲೆ ಅದನ್ನು ಬಿಡುವದು ಬಹುಕಷ್ಟ. ಅಭ್ಯಾಸವಾದಮೇಲೂ ಈ ಹೆಂಡಕುಡುಕತನವನ್ನು ಬಿಡುವದಕ್ಕೋಸ್ಕರ ಒಬ್ಬ ವೈದ್ಯನು ಒಂದು ಔಷಧವನ್ನು ಕಲ್ಪಿಸಿ ಅದರಿಂದ ಅನೇಕರಿಗೆ ಬಿಡಿಸಿದನಂತೆ. ಆ ಔಷಧದ ಕ್ರಮವೂ ಅದನ್ನು ತೆಗೆದುಕೊಳ್ಳುವ ರೀತಿಯೂ ಏನಂದರೆ : ಅನ್ನಭೇದಿ ೨೦ ಗುಲಗಂಜಿಯತೂಕ, ಮ್ಯಾಗ್ನೀಸಿಯಂ ಎಂಬ ಭೇದಿಯುಪ್ಪು ೪೦ ಗುಲಗಂಜಿಯತೂಕ, ಪೆಪ್ಪರಮೆಂಟ್ ೪೪ ಡ್ರಾಂ ತೂಕ, ಜಾಯಿಕಾಯಿದ್ರೃತಿ ೪ ಡ್ರಾಂ ತೂಕ, ಇಷ್ಟು ಸೇರಿಸಿ ದಿನಕ್ಕೆ ೨ ಸಾರಿ ಅರ್ಧಔನ್ಸ್‌ತೂಕ ತೆಗೆದುಕೊಳ್ಳಬೇಕು.

ಡಾಕ್ಟರ್ ಕಾಚ್‌ಸಾಹೇಬರವರು ವಾಂತಿಭೇದಿಯ ಉಪದ್ರವು ಸಾಂಕ್ರಮಿಕವಾದದ್ದೆಂದು ಹೇಳುವರು. ಡಾಕ್ಟರ್ ಕ್ಲೀನ್‌ಸಾಹೇಬರು ಈ ಮಾತು ಅಬದ್ಧವೆಂದು ಹೇಳಿ ಈ ಅಂಶವನ್ನು ಪರೀಕ್ಷೆಮಾಡಿ ತೋರಿಸುವದಕ್ಕೋಸ್ಕರ ಆ ವಾಂತಿಭೇದಿಸಂಬಂಧವಾದ ಮಲವನ್ನು ನುಂಗಿದರಂತೆ. ಇದರಿಂದ ಅವರಿಗೆ ಏನೂ ಬಾಧಕವಾಗಲಿಲ್ಲವೆಂದು ತಿಳಿಯಬರುತ್ತೆ.

ಇಬ್ಬರು ಹಿಂದುಗಳು ಮಹಮ್ಮದ್‌ಮತಕ್ಕೆ ಸೇರಿದರು. ಅವರು ಈಗ ಕಂದಹಾರಿಗೆ ಹೋಗಿ ಅಲ್ಲಿನ ತುರುಕರಿಂದ ೫೦೦೦ ರೂಪಾಯಿ ವರಿಗೆ ಬಹುಮಾನ ಹೊಂದಿ ಬಂದು ಇರುತ್ತಾರೆ.

ಪೂನಾದಲ್ಲಿ ದಕ್ಷಿಣಪೇಪರ್‌ಮಿಲ್‌ಕಂಪೆನಿ ಯೆಂದು ಒಂದು ಕಂಪೆನಿಯು ಏರ್ಪಾಡಾಗಿ ಇದೆ. ಇದಕ್ಕೆ ೫೦೦ ರೂಪಾಯಿನ ೮೦೦ ಷೇರು ಅಂದರೆ ೪ ಲಕ್ಷ ರೂಪಾಯಿನ ಬಂಡವಾಳ ಉಂಟು. ಇದರ ಡೈರೆಕ್ಟರುಗಳಾಗಿ ಕೊಲ್ಲಾಪುರದ ದಿವಾನರಾದ ಮೆ॥ ಜಯಸಿಂಗರವರು, ಸರದಾರ್ ರಾವ್‌ಬಹದೂರ್ ಮೆ॥ ವಿಜಯರಂಗಂ ಮೊದಲ್ಯಾರರು, ಖಾನ್‌ಬಹದೂರು ದುರಾಬ್ಜಿ ಪದಂಜಿಯವರು, ಇನ್ನೂ ಅನೇಕ ದೊಡ್ಡಮನುಷ್ಯರು ಸೇರಿ ಇದ್ದಾರೆ. ಈ ಕಂಪೆನಿಯಲ್ಲಿ ನಮ್ಮ ಹಿಂದೂದೇಶಕ್ಕೆ ಬೇಕಾದಷ್ಟು ಕಾಗದಗಳನ್ನು ಇಲ್ಲಿಯೇ ಮಾಡಬೇಕೆಂದು ಏರ್ಪಾಡು ಮಾಡಿಕೊಂಡು ಇದ್ದಾರೆ.

ಉಂಟುಮಾಡಿದ ದೇವರು ಊಟವ ಕೊಡಲಾರನೊ ?

ಪ್ರೊಫೆಸರ್ ಮಾಸ್ಲೆ ಎಂಬಾತನು ಬೆನ್ನಿನಮೂಳೆ ಯಿಲ್ಲದೆ ಮೃದುವಾದ ಶರೀರವುಳ್ಳ ಒಂದು ಹುಳವನ್ನು ನೋಡಿದನಂತೆ. ಇದಕ್ಕೆ ಸುಮಾರು ೧೧ ಸಾವಿರ ಕಣ್ಣುಗಳಿವೆಯಂತೆ.

ಇಂದೂರು ಮಹಾರಾಜರು ರಾಘೋಜಿಲಾಲ್‌ಚಂದ್ ಎಂಬಾತನಮೇಲೆ ದಾವಾ ಮಾಡಿ ಇದ್ದಾರೆ. ಈ ಮೊಕದ್ದಮೆಯನ್ನು ಆದೇಜಿಲ್ಲಾ ಜಡ್ಜ ಮ॥ ಶ್ರೀನಿವಾಸರಾಯರು ಪರ್ಯಾಪ್ತಿ ಮಾಡುತ್ತಾರೆ. ಇದರಲ್ಲಿ ಪ್ರತಿವಾದಿಯು ಮಹಾರಾಜರ ಸಾಕ್ಷಿಯು ಈ ಮೊಕದ್ದಮೆಗೆ ಆವಶ್ಯಕವಾದದ್ದೆಂಬದಾಗಿಯೂ, ಅವರಿಗೆ ಸಮ್ಮನ್ ಕೊಡದೆಹೋದರೆ ಮೊಕದ್ದಮೆಯಲ್ಲಿ ಬಹಳ ಅನ್ಯಾಯ ನಡಿಯುವದೆಂಬದಾಗಿಯೂ, ರುಜುವಾತು ಮಾಡಿದ್ದರಿಂದ ಮಹಾರಾಜರವರು ಹಾಜರಾಗಬೇಕೆಂದು ಆರ್ಡರ್ ಮಾಡಿ ಇದ್ದಾರೆ.

ರಷ್ಯಾದೇಶದ ಚಕ್ರವರ್ತಿಗಳನ್ನು ಮೋಸದಿಂದ ಕೊಲ್ಲಬೇಕೆಂದು ಕೆಲವರು ಪಿತೂರಿ ಮಾಡಿಕೊಂಡಿದ್ದರು, ಇವರಲ್ಲಿ ಅನೇಕರು ಸಿಕ್ಕಿ ಅವರನ್ನು ಗಲ್ಲಿಗೆ ಹಾಕಿದರು

ಗವರ್ನರ್‌ಜನರ್ ರೈಪನ್ ಸಾಹೇಬರವರು ಹೊರಟು ಹೋಗುವದು ಸರಿಯಷ್ಟೆ. ಇವರ ಜ್ಞಾಪಕಾರ್ಥವಾಗಿ ಶಾಶ್ವತವಾದ ಯಾವದಾದರೂ ಒಂದು ಕೆಲಸ ಮಾಡಬೇಕೆಂದು ಅನೇಕರು ಹಣ ಕೂಡಿಹಾಕುತ್ತಾ ಇದ್ದಾರೆ. ಹೀಗೆ ಕೂಡಿಹಾ ಬಡವರಿಗೆಲ್ಲಾ ಬೇರೆ ಬೇರೆ ಕಸಬು ಕಲಿಸುವದಕ್ಕೋಸ್ಕರ ಒಂದು ವರ್ತಕಸ್ಥಾನವನ್ನು ಮಾಡಬೇಕೆಂದು ಕೆಲವರು ತಾತ್ಪರ್ಯಪಟ್ಟು ಇದ್ದಾರೆ. ಇದು ಸರ್ವೋತ್ಕೃಷ್ಟವಾದ ಕೆಲಸ.

ಪುದುಕೋಟೇ ಮಹಾರಾಜರಾದ ರಾಮಚಂದ್ರ ಟಾಂಡಿಮಾನ್ ಬಹದೂರವರಿಗೂ ಅವರ ಪುತ್ರ ಪೌತ್ರಾದಿಗಳಿಗೂ ಇಂಗ್ಲಿಷಗವರ್ನ್ಮೆಂಟಿನಲ್ಲಿ ೧೧ ತೋಪು ಆಗತಕ್ಕದ್ದೆಂಬದಾಗಿಯೂ, ಅವರಿಗ ಹಿಸ್ ಹೈನೆಸ್ ಎಂಬ ಬಿರುದು ಇರತಕ್ಕದ್ದೆಂಬದಾಗಿಯೂ ಇಂಡಿಯಾ ಚಕ್ರವರ್ತಿನಿಯವರು ಏರ್ಪಾಡು ಮಾಡಿ ಇದ್ದಾರೆ.

---

*೧೦. ಒಗಟೆಗಳು.

(೧.) ಸ್ಥಾಣುರ್ಭವಾನ್ ಮೂಲವಿಹೀನ ಏವ ಪುತ್ರೋವಿಶಾಖೋ ರಮಣೀ
ತ್ವಪರ್ಣಾ । ಪರೋಪನೀತೈಃ ಕುಸುಮೈರಜಸ್ರಂ ಫಲತ್ಯಭೀಷ್ಟಂ
ಕಿಮಿದಂ ವಿಚಿತ್ರಂ ॥

(೨.) ಚತುರ್ಥಜಃ ಪಂಚಮಗಃ ದೃಷ್ಟ್ವೈವ ಪ್ರಥಮ ಸಂಭವಾಂ । ತೃತೀಯಂ
ತತ್ರ ನಿಕ್ಷಿಪ್ಯ ದ್ವಿತೀಯಮುತರತ್ಯಸೌ ॥

---

*ಆನೆಕಲ್ಲು ತಾ॥ ಅತ್ತಿಬೆಲೆ ಸ್ಕೂಲ್ ಅ॥ ಮಾ॥ ರಾಮಸ್ವಾಮಯ್ಯಂಗಾರರು ಕಳುಹಿಸಿದವುಗಳು.

ಉಗುರಲ್ಲಿ ಹೋಗುವದಕ್ಕೆ ಕೊಡಲಿಯೇಕೆ ?

(೩.) ಸಿರಿವಂತನಾದ ಅದ್ವಯುವಾದಿಗೆ.—

ಗಜಶಿಲೀಗ್ರಾಮದಲ್ಲಿರುವ ಗ್ರಾಮಸಿಂಹಾರೂಢನು ಮಾಡುವ ಬಡಕು. ಈ ದಾರೀತಲೆ, ಬಿಳೀರೆಕ್ಕೆ, ಗರುಡದಿನ, ಏಕಾಕ್ಷನ ವಾರದ ವರಿಗೆ ಇಲ್ಲಿ ಜಲವರ್ಣದವರು ನಾಲ್ಕನೇ ಯೋಗದವರೊಡನೆ ನಾನು ನಾಲ್ಕನೇ ತಾರೆಯಲ್ಲಿ ಇದ್ದೇನೆ. ಅಲ್ಲಿ ಏಕದೃಷ್ಟಿಗಳು ನಾಲ್ಕನೇ ಯೋಗದವರೊಂದಿಗೆ ತಮ್ಮ ಶುಭಕ್ಕೆ ಎಲೆಯನ್ನು ಕಳುಹಿಸುವದು. ತರುವಾಯ. ಇಲ್ಲಿ ಚಿಕ್ಕಗ್ರಾಮ ಸಿಂಹಾರೂಢನಿಗೆ ಗಾರ್ದಭಸಂವತ್ಸರದ ದೊಡ್ಡಮ್ಮನ ತಿಂಗಳು ಕರೀರೆಕ್ಕೆ ಗಜತಿಥಿ ಲಕ್ಷ್ಮೀತಮ್ಮನ ವಾರ ಬುರುಡೇ ನಕ್ಷತ್ರದಲ್ಲಿ ಕಲ್ಯಾಣವನ್ನು ನಿರ್ಣಯಿಸಿ ಇರುವದ್ದರಿಂದ ಬೇಕಾದ ಸಾಮಾನುಗಳು ಅಂದರೆ: ಸರ್ಪಾರಂಭ ಧಾನ್ಯ, ಬೊಕ್ಕಬಾಯವನ ಧಾನ್ಯ, ಶರಧಿಯ ಮಗನ ಧಾನ್ಯ, ಇಳೆಯಮಗನಧಾನ್ಯ, ಸುರಹೀನ ಧಾನ್ಯ, ಮುಂದಗಮನನ ಧಾನ್ಯ, ಕತ್ತೆಹೆಸರವನ ಧಾನ್ಯ, ಅಲರುಣಿಯ ಧಾನ್ಯ, ಮೃತ್ಯುಂಜಯಪ್ರಿಯ ಎಂಬ ಪದಾರ್ಥಗಳನ್ನೂ, ಭಸ್ಮಧಾರಿಗಳು, ನಾಮಧಾರಿಗಳು, ನರಧಾರಿಗಳು, ಜೋಗೀಪಾತ್ರೆಯವರು, ಮೂರು ಕಣ್ಣಿನವರು, ದದ್ದಮೈಯ್ಯವರು, ಗಳಕಂಟಕದವರು, ಬೆಂದಫಲ, ಪಣಿಲತೇಸೊಪ್ಪು, ಹುಳುವಿನ ಎಂಜಲು, ಕರುವಿನ ಎಂಜಲು, ಮದನಚಾಪದ ರಸ, ತಾಯಿಯ ಕೊಂದವನ ರಸ, ತಂದೆಯ ಕೊಂದವನ ರಸ, ಈ ಮುಸ್ತೈದಿಗಳನ್ನು ಕುರುಡನ ಕೊಂದಕಲ್ಲು, ಬಿಲ್ಲಪ್ಪನಕುದುರೆಗಳ ಮೇಲೆ ಹೇರಿಸಿಕೊಂಡು ಅಗತ್ಯ ದಯಮಾಡಿಸುವದು.—ಇಂತೀಅರ್ಥ

೨ನೇ ಸಂಚಿಕೆಯಲ್ಲಿನ ಒಗಟುಗಳಿಗೆ ಉತ್ತರ.

(೧) ತೆಂಗಿನಕಾಯಿ. (೨) ಯೋಗಗಳು. (ರಾಜನೇ, ಆಯುಷ್ಮಂತನಾಗಿರು—ನಿನಗೆ ಸೌಭಾಗ್ಯ ಶೋಭನಗಳಾಗಲಿ. ನಿನ್ನ ಶತ್ರುಗಳಿಗೆ ವಿಷ್ಕಂಭವಾಗಲಿ. ನನ್ನಲ್ಲಿ ಪ್ರೀತಿಯಿಡು.) (೩) ನೇರಳೇಹಣ್ಣು. (೪) ಛತ್ರಿ.

ಹಿತಬೋಧಿನಿ.

ಸಂಪುಟ ೨.] ಜನವರಿ. [ಸಂಚಿಕೆ ೬.

೧. ವೈದ್ಯಶಾಸ್ತ್ರ.

ಕಳೆದ ಸಂಚಿಕೆಯಲ್ಲಿ ಶರೀರಸ್ಥಿತಿಯನ್ನೂ, ಅದರ ಅಂಗಾಂಗಗಳನ್ನೂ, ಅವುಗಳ ವ್ಯಾಪಾರಗಳನ್ನೂ, ನಾಡೀಚಲನೆ ಮುಂತಾದವುಗಳನ್ನೂ ಸೂಕ್ಷ್ಮ ವಾಗಿ ಸೂಚಿಸಿ ಇದ್ದೇವಷ್ಟೆ. ಈಗ, ರೋಗಗಳನ್ನೂ, ಅವುಗಳು ಬರುವ ದಕ್ಕೆ ಕಾರಣಗಳನ್ನೂ, ಅವುಗಳನ್ನು ನಿವರ್ತಿ ಮಾಡುವದಕ್ಕೆ ತಕ್ಕ ಚಿಕಿತ್ಸೆ ಮೊದಲಾದವುಗಳನ್ನೂ ಹೇಳುವದಕ್ಕೆ ಮೊದಲು ರೋಗಿಗಳನ್ನು ಇಟ್ಟು ಕೊಳ್ಳುವ ವಿಧವನ್ನು ಸ್ವಲ್ಪಮಟ್ಟಿಗೆ ಇಲ್ಲಿ ಹೇಳುವೆವು.

ರೋಗಿಗಳನ್ನು ಇಟ್ಟುಕೊಂಡಿರುವ ವಿಧಗಳಲ್ಲಿ ಪ್ರವೀಣತೆಯನ್ನು ಹೊಂದಬೇಕೆಂಬ ಅಭಿಪ್ರಾಯವಿರುವವರು ಮೊದಲು ತಮ್ಮ ಸಹಜವೂ ಚಿತ್ತವೃತ್ತಿಯೂ ಆ ರೋಗಿಗಳಿಗೆ ಸರಿಬೀಳುವವೋ ಇಲ್ಲವೋ ಎಂಬ ವಿಷ ಯವನ್ನು ಚನ್ನಾಗಿ ಯೋಚಿಸಿ ತಿಳಿಯಬೇಕು. ಅಸಹ್ಯ ಪಡುವವರೂ, ಆತುರ ಪಡುವವರೂ, ಸ್ಥೈರ್ಯವಿಲ್ಲದವರೂ ಈ ಕೆಲಸಕ್ಕೆ ಯೋಗ್ಯರಲ್ಲ. ಸಾಧಾರಣವಾಗಿ ಅನೇಕರು ತಮಗೆ ಅಸಾಧ್ಯವಾಗಿದ್ದರೂ ರೋಗಿಗಳನ್ನು ಇಟ್ಟುಕೊಂಡಿರುವ ಭಾರವನ್ನು ತಮ್ಮ ತಲೆಯ ಮೇಲೆ ಹೊತ್ತುಕೊಳ್ಳು ವರು. ತಮಗೆ ಏನೂ ತಿಳಿಯದೆ ಇದ್ದಾಗ್ಯೂ ಆ ಕೆಲಸಗಳಲ್ಲಿ ಮಾತ್ರ ವಿಶೇಷವಾಗಿ ಪ್ರವೇಶಿಸಿ ಸಕಲವೂ ತಿಳಿದವರಂತೆ ದುರಭಿಮಾನಪಟ್ಟು ಒಂದು ಮಾಡಬೇಕಾಗಿದ್ದರೆ ಮತ್ತೊಂದು ಮಾಡುವರು. ಇವರು ಹೀಗೆ ಅತ್ಯಾ ದರಣೆಯಿಂದ ಮಾಡಿದ್ದೆಲ್ಲಾ ರೋಗಿಗೆ ಪ್ರತಿಕೂಲವಾಗಿ, ಆಮೇಲೆ ಅದನ್ನು ತಿದ್ದಿಕೊಳ್ಳಬೇಕಾದರೆ ವೈದ್ಯರಿಗೆ ಕೂಡ ಅಸಾಧ್ಯವಾಗುವದು.

ಉಂಡವ ಹರಸ ಬೇಡ, ನೋಂದವ ಬೈಯಬೇಡ.

ಕೆಲವರು ರೋಗಿಯ ದೇಹಪ್ರಕೃತಿಯನ್ನೂ, ತತ್ಕಾಲಸ್ಥಿತಿಯನ್ನೂ, ಆಯಾ ರೋಗಿಯು ಅನುಭವಿಸುವ ಅನುಭವವನ್ನೂ ತಿಳಿಯದೆ ಅವನನ್ನು ಆದರಿಸತೊಡಗುವರು. ಆಮೇಲೆ ಪ್ರಾಣಾಂತಬಾಧೆಯು ಸಂಭವಿಸಿದರೆ, ಆಗ ಎಲ್ಲರೂ ಕಣ್ಣುಗಳನ್ನು ಒರಸಿಕೊಳ್ಳುತ್ತಾ ಭಯಪಟ್ಟು ಸುಮ್ಮನಾಗುವರು. ಆದ್ದರಿಂದ ವ್ಯಾಧಿಯನ್ನು ನಿವರ್ತಿಸಬೇಕೆಂಬ ಕೋರಿಕೆಯುಳ್ಳವರು ಧೈರ್ಯ, ಸ್ಥೈರ್ಯ, ಸೈರಣೆ ಮೊದಲಾದ ಗುಣಗಳುಳ್ಳವರಾಗಿ ವ್ಯಾಧಿಗ್ರಸ್ತರನ್ನು ಉಪಚರಿಸುವ ವಿಧಗಳನ್ನು ಸ್ವಲ್ಪಮಟ್ಟಿಗಾದರೂ ತಿಳಿದುಕೊಂಡು ಅವರಿಗೆ ಆಗಾಗ್ಯೆ ದೇಹದಲ್ಲಿ ಉಂಟಾಗುವ ಬಾಧೆಗಳನ್ನು ನಿಧಾನಿಸಿ ತಿಳಿದುಕೊಳ್ಳುವ ಸ್ವಭಾವವುಳ್ಳವರಾಗಿ ಇರಬೇಕು. ಹೀಗೆ ಅನುಭವವಿರುವರು ರೋಗಿಗಳನ್ನು ಇಟ್ಟುಕೊಳ್ಳುವದಕ್ಕೆ ಯೋಗ್ಯರೆಂದು ತಿಳಿಯಬೇಕು.

ಲೋಕದಲ್ಲಿ ಎಲ್ಲರೂ ತಲೆನೋವು ಮುಂತಾದ ಅಲ್ಪವಾದ ಬಾಧೆಗಳು ಪ್ರಾಪ್ತವಾದರೂ, ಅದಕ್ಕೆ ಕೂಡ ಇತರರಲ್ಲಿ ಹೋಗಿ, ಅವರನ್ನು ಪೀಡಿಸುವದಕ್ಕಿಂತ ಪ್ರತಿಯೊಬ್ಬರೂ ರೋಗಗಳು ಹುಟ್ಟುವದಕ್ಕೆ ಕಾರಣಗಳು ಇವುಯೆಂದೂ ಅವಕ್ಕೆ ಚಿಕಿತ್ಸೆಗಳು ಇವುಯೆಂದೂ ತಿಳಿದುಕೊಂಡಿದ್ದರೆ ಎಷ್ಟು ಒಳ್ಳೇದು. ಇದರಿಂದ ಎಲ್ಲರೂ ವೈದ್ಯಶಾಸ್ತ್ರದಲ್ಲಿ ಪಂಡಿತರಾಗಿರಬೇಕೆಂಬುವದು ನಮ್ಮ ಅಭಿಪ್ರಾಯವಲ್ಲ. ತಮ್ಮ ಅನುಭವದಿಂದಲೇ ತಮ್ಮ ದೇಹಪ್ರಕೃತಿಯನ್ನು ತಿಳಿದು ಅದಕ್ಕೆ ಯೋಗ್ಯಾಯೋಗ್ಯವಾದವುಗಳು ಇವು ಎಂದು ತಿಳಿದುಕೊಂಡಿದ್ದರೆ, ವ್ಯಾಧಿಗಳು ಬರುವದಕ್ಕೆ ಕಾರಣವಿಲ್ಲ. ವಿಧಿವಶದಿಂದ ಒಂದು ವೇಳೆ ಬಂದಾಗ್ಯೂ ಅವು ಸುಲಭವಾಗಿ ಬಿಟ್ಟುಹೋಗತಕ್ಕವುಗಳಾಗಿದ್ದರೂ, ಆ ಮಾರ್ಗವು ತಿಳಿಯದೆ ಇರುವದರಿಂದಲೂ ಉಪೇಕ್ಷೆಯಿಂದಲೂ ಕೇಡು ಸಂಭವಿಸುವದಲ್ಲವೆ?

ರೋಗಿಗಳ ಬಳಿಗೆ ಹೋಗಿ ಶುಶ್ರೂಷೆ ಮಾಡುವವರು ಬಹಳ ಡಂಭವಾದ ವೇಷದೊಂದಿಗೆ ಅವರ ಎದುರಿಗೆ ನಿಲ್ಲಬಾರದು. ಅವರಿಗೆ ಮೈಮೇಲೆ ಪ್ರಜ್ಞೆಯಿಲ್ಲದ ಕಾಲದಲ್ಲಿ ಪಟಾಟೋಪವಾಗಿ ಹೋಗಿ ಎದುರಿಗೆ ನಿಂತರೆ

ಉಂಡವರಿಗೆ ಊಟ ಬೇಡ, ಗುಂಡುಕಲ್ಲಿಗೆ ಎಣ್ಣೆ ಬೇಡ.

ಅವರಿಗೆ ಭೀತಿಯುಂಟಾಗಿ ಏನೇನೋ ದುಸ್ಸ್ವಪ್ನಗಳು ಬೀಳುವವು. ಆ ಕಾಲದಲ್ಲಿ ಅವರ ಬುದ್ಧಿಯು ಭ್ರಮಿಸಿಹೋದರೆ, ಪುನಃ ನೆಟ್ಟಗಾಗುವದು ಕಷ್ಟ. ಆ ಕಾಲವಲ್ಲಿ ವ್ಯಾಧಿಗ್ರಸ್ತರ ಕಣ್ಣುಗಳಿಗೆ ಯಾವದೂ ಇದ್ದದ್ದು ಇದ್ದಹಾಗೆ ಕಾಣುವದಿಲ್ಲ. ನಾವು ಗಟ್ಟಿಯಾಗಿ ಅಡಿಯಿಟ್ಟು ನಡೆದರೂ, ಗಟ್ಟಿಯಾಗಿ ಮಾತನಾಡಿದರೂ, ಅವರಿಗೆ ತಲೆ ನೋಯುವದು. ಅವರು ಮಲಗಿರುವ ಸ್ಥಳಕ್ಕೆ ಯಾವಾಗಲೂ, ಅಲ್ಲಿರುವಷ್ಟು ಜನರಲ್ಲದೆ ಸಿಕ್ಕಿದವರೆಲ್ಲಾ ಹೋಗಿ, ಗುಂಪು ಕಟ್ಟಿಕೊಳ್ಳಕೂಡದು. ಅವರನ್ನು ಮುಟ್ಟಿ ಉಪಚರಿಸುವವರು ಕಂಡಹಾಗೆ ಬದ್ದೀ ಕೈಯಿಂದಲೂ ಕೊಳೆಯಾದ ಕೈಯಿಂದಲೂ ಹೋಗಿ ಉಪಚರಿಸಕೂಡದು. ಇವುಗಳೆಲ್ಲಾ ಅಲ್ಪಕಾರ್ಯಗಳೆಂದು ಉಪೇಕ್ಷಿಸಿದರೆ “ ಉಗುರಿನಲ್ಲಿ ಹೋಗುವದಕ್ಕೆ ಗೊಡ್ಡಲಿ ಬೇಕು ” ಎಂಬ ಸಾಮತಿಗೆ ಸರಿಯಾಗುವದು.

ವಾಂತಿಭೇದಿ ಮೊದಲಾದ ಕ್ರೂರ ಜಾಡ್ಯಗಳಲ್ಲಿ ಬದ್ದಾಡುತ್ತಿರುವವರಿಗೆ ಅವರಿರುವ ಸ್ಥಳದಲ್ಲಿ ಏನು ನಡೆದರೂ ಚೆನ್ನಾಗಿ ತಿಳಿಯುವದು. ಯಾರಾದರೂ ತಮ್ಮ ಬಳಿಯಲ್ಲಿ ಮಾತನಾಡಿದರೂ, ಕೆಲಸ ಮಾಡಿದರೂ, ಅವುಗಳನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯು ಅವರಿಗೆ ಅಧಿಕವು. ಆದ್ದರಿಂದ ಅಂಥಾವರ ಬಳಿಯಲ್ಲಿ ಮಾತನಾಡಬೇಕಾಗಿದ್ದರೆ, ಅವರಿಗೂ ಕೇಳಿಸುವ ಹಾಗೆ ಗಟ್ಟಿಯಾಗಿ ಮಾತನಾಡಬೇಕು. ರಹಸ್ಯವಾಗಿ ಮಾತನಾಡಬೇಕಾಗಿದ್ದರೆ ಅವರ ಬಳಿಯಲ್ಲಿ ಕೂಡಲೇ ಕೂಡದು.

ವ್ರಣವೈದ್ಯವನ್ನು ಮಾಡಬೇಕಾಗಿದ್ದರೆ ಧೈರ್ಯವೂ, ತಾಳ್ಮೆಯೂ ಇಲ್ಲದವರು ಅಲ್ಲಿ ಇರಕೂಡದು. ಹಾಗೆ ಅವರು ಅಲ್ಲಿಯೇ ಇದ್ದರೆ, ವೈದ್ಯನಿಗೆ ಚಿಕಿತ್ಸೆಮಾಡುವದಕ್ಕೆ ಶಕ್ತಿಯಿಲ್ಲದೆ ಹೋಗುವದು. ಯಾಕಂದರೆ, ಆ ಚಿಕಿತ್ಸೆಯು ವಿಶೇಷವಾಗಿ ನೋವು ಉಂಟುಮಾಡದಿದ್ದರೂ, ರೋಗಿಯು ಅವರಮೇಲಣ ಚಿಂತೆಯಿಲ್ಲದೆ ಅಲ್ಲಾಡದೆ ಇರಬೇಕು. ಆ ಕಾಲದಲ್ಲಿ ಹೆತ್ತವರು ಪಕ್ಕದಲ್ಲಿ ನಿಂತಿದ್ದರೆ ಆ ವ್ರಣವನ್ನು ಮುಟ್ಟುವದಕ್ಕೆ ಮೊದಲೇ ಅವರು ಕಣ್ಣು ಮೂಗುಗಳನ್ನು ಉಜ್ಜಿಕೊಳ್ಳಲು ಅಳುವದಕ್ಕೆ ಪ್ರಾರಂಭಿಸುವರು.

ಅದನ್ನು ಕೇಳಿ ರೋಗಿಯು ಕದಲುವನು. ಇದರಿಂದ ಬಾಧೆ ಬಲವಾಗುವದು. ಆದ್ದರಿಂದ ಅಂಥಾವರು ರೋಗಿಗಳ ಬಳಿಯಲ್ಲಿ ಸೇರಕೂಡದು.

ಅಸಹ್ಯವೂ, ಸಂಕೋಚವೂ, ಅಧೈರ್ಯವೂ ಇಲ್ಲದೆ ಎಂಥಾ ಕೆಲಸವನ್ನಾದರೂ ಧೈರ್ಯವಾಗಿ ಮಾಡುವವರೇ ರೋಗಿಗಳನ್ನು ಉಪಚರಿಸಬಲ್ಲವರು. ಅಸಹ್ಯವನ್ನು ಹುಟ್ಟಿಸತಕ್ಕ ಯಾವದನ್ನು ನೋಡಿದರೂ, ಅವರ ಮನಸ್ಸು ಚಲಿಸದೆ ದೃಢವಾಗಿ ಇರಬೇಕು ; ವೈದ್ಯರು ಹೇಳಿದ್ದನ್ನು ಅಡ್ಡಿಯಿಲ್ಲದೆ ಮಾಡುವವರಾಗಿ ಇರಬೇಕು ; ವೃಥಾ ಪ್ರಶ್ನೆಗಳನ್ನು ಮಾಡಕೂಡದು ; ವೈದ್ಯರು ಹೇಳುವ ಮಾತಿನಲ್ಲಿ ಸಂಶಯಪಡಕೂಡದು. ಕೆಲವರು ರೋಗಿಗಳಿಗೆ ಹಸಿವಾಗಿದ್ದಾಗ ಆಹಾರ ಕೊಡರು ; ಅನ್ನದಮೇಲೆ ಅಪೇಕ್ಷೆಯಿಲ್ಲದಿದ್ದಾಗ ಬಲವಂತ ಮಾಡುವರು ; ಪಕ್ಕದಲ್ಲಿ ಕೂತು ಅವರು ಕರೆದಾಗ ಮಾತನಾಡುತ್ತಾ ಕಾದುಕೊಂಡಿರದೆ ಮನಸ್ಸು ಬಂದಂತೆ ಹೊರಟು ಹೋಗುವರು ; ಮತ್ತು ಅವರು ಆಯಾಸದಿಂದ ಬಿದ್ದಿರುವ ಕಾಲದಲ್ಲಿ ತಲೆ ನೋಯುವಹಾಗೆ ಗುಸುಗುಟ್ಟುತ್ತಿರುವರು. ಇಂಥಾ ಗುಣಗಳುಳ್ಳವರು ಆ ಕೆಲಸಕ್ಕೆ ಸರಿಬೀಳರು.

---

೬. ಸ್ವತಂತ್ರಾಭ್ಯಾಸ.

ಲೋಕದಲ್ಲಿ ಪ್ರತಿಮನುಷ್ಯನಿಗೂ ವಿದ್ಯೆಯು ಎರಡು ವಿಧವಾಗಿ ಇರುವದು. ಇವುಗಳಲ್ಲಿ ಮೊದಲನೇದು ಪರರಿಂದ ಕಲಿತುಕೊಳ್ಳುವದು; ಎರಡನೇದು ತಾನಾಗಿ ಪ್ರಯತ್ನಪಟ್ಟು ಕಲಿತುಕೊಳ್ಳುವದು. ಈ ಎರಡು ಮಾರ್ಗಗಳಲ್ಲಿ ಮೊದಲನೇದಕ್ಕಿಂತ ಎರಡನೇದು ಅತ್ಯುತ್ತಮವಾದದ್ದು.

ಕಷ್ಟನಿಷ್ಠುರಗಳು ಬಂದಾಗ ಅವುಗಳಿಗೆ ಭಯಪಟ್ಟು ಮನಸ್ಸು ಚಿಕ್ಕದುಮಾಡಿಕೊಂಡು ಇರುವವನು ಕೆಲಸಕ್ಕೆ ಬಾರನು ; ಹಾಗಲ್ಲದೆ

ಉಕ್ಕಿ ಬಂದದ್ದು ತೆಗೆದು ಹಾಕಿದರೆ ಮಿಕ್ಕದ್ದಕ್ಕೆ ಮೋಸವಿಲ್ಲ.

ಕೈಹಚ್ಚಿದ ಕೆಲಸವನ್ನು ಬಿಡದೆ ಪಟ್ಟಾಗಿ ಉತ್ಸಾಹದಿಂದ ಮುಗಿಸಬೇಕೆಂದು ಪ್ರಯತ್ನಿಸುವವನು ಯಾವಾಗಲೂ ಮೇಲನ್ನು ಹೊಂದುವನು.

ಸ್ಥಿರಬುದ್ಧಿಯೂ ಸಾಮರ್ಥ್ಯವೂ ಇರುವವರೇ ಬಂದ ಕಷ್ಟಗಳನ್ನೆಲ್ಲಾ ಸಹಿಸಿಕೊಂಡು ಧೈರ್ಯದಿಂದ ತಕ್ಕ ಪ್ರಯತ್ನಗಳನ್ನು ಮಾಡಿ ಕ್ರಮಪ್ರಕಾರವಾಗಿ ಅಭಿವೃದ್ಧಿಗೆ ಬಂದು ಬಹಳ ಗೌರವವನ್ನು ಹೊಂದುವರು. ಮಂದಬುದ್ಧಿಯುಳ್ಳವರೂ ಸೋಮಾರಿಗಳೂ ಆದವರು ಸ್ವಲ್ಪ ಸ್ವಲ್ಪ ಕಷ್ಟವು ಪ್ರಾಪ್ತವಾಗುತ್ತಲೇ ಮನಸ್ಸು ಕೆಟ್ಟು ಧೈರ್ಯಗುಂದಿ ದುಃಖಕ್ಕೆ ಪಾತ್ರರಾಗುವರು. ಇದಕ್ಕೆ ದೃಷ್ಟಾಂತವಾದ ನೀತಿ ಏನೆಂದರೆ— "ಆರಭ್ಯತೇ ನಖಲು ವಿಘ್ನಭಯೇನ ನೀಚೈಃ । ಆರಭ್ಯ ವಿಘ್ನನಿಹತಾ ವಿರಮಂತಿ ಮಧ್ಯಾಃ ॥ ಮಧ್ಯೇ ಪುನಃ ಪುನರಪಿ ಪ್ರತಿಹನ್ಯಮಾನಾಃ । ಪ್ರಾರಬ್ಧಮುತ್ತಮಗುಣಾ ನ ಪರಿತ್ಯಜಂತಿ." ಅಂದರೆ ಅಧಮರು ವಿಘ್ನಭಯದಿಂದ ಯಾವ ಕೆಲಸವನ್ನೂ ಪ್ರಾರಂಭಿಸುವದೇ ಇಲ್ಲ; ಮಧ್ಯಮರು ಒಂದು ಕೆಲಸವನ್ನು ಪ್ರಾರಂಭಿಸಿ, ಮಧ್ಯೆ ವಿಘ್ನ ಬಂದು ಒದಗಿದರೆ, ಅದನ್ನು ಅಲ್ಲಿಗೆ ಬಿಟ್ಟುಬಿಡುವರು; ಉತ್ತಮರಾದರೋ ಒಂದು ಕೆಲಸವನ್ನು ಪ್ರಾರಂಭಿಸಿ, ಮಧ್ಯೆ ಎಷ್ಟು ವಿಘ್ನಗಳು ಬಂದಾಗ್ಯೂ, ಪುನಃ ಮಾಡುತ್ತಾ ಆ ಕೆಲಸವನ್ನು ಮುಗಿಸುವರು ಎಂದು ತಾತ್ಪರ್ಯವು.

ಪ್ರತಿಮನುಷ್ಯನೂ ಸ್ವತಂತ್ರಾಭ್ಯಾಸದಿಂದ ಅಂದರೆ ಒಬ್ಬರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಕಲಿಯುವ ವಿದ್ಯೆಯು ಬಹಳ ಒಳ್ಳೇದು. ಈ ಮಾರ್ಗವಾಗಿಯೇ ಅನೇಕರು ಪಂಡಿತರಾಗಿ ಪ್ರಸಿದ್ಧಿಯನ್ನು ಹೊಂದಿ ಇರುವಾರೆ. ಲೋಕದಲ್ಲಿ ಸಕಲ ವಿದ್ಯೆಗಳಲ್ಲಿಯೂ, ಸಕಲ ಶಾಸ್ತ್ರಗಳಲ್ಲಿಯೂ, ವಿಶೇಷವಾಗಿ ಪರಿಶ್ರಮ ಪಟ್ಟವರೆಲ್ಲರೂ ಸ್ವತಂತ್ರಾಭ್ಯಾಸದಿಂದಲೇ ಹಾಗೆ ಪ್ರಸಿದ್ಧಿಗೆ ಬಂದಿರುವವರು. ಪಾಠಶಾಲೆಗಳಿಗೂ ಇತರ ವಿದ್ಯಾಶಾಲೆಗಳಿಗೂ ನಾವು ಅಭ್ಯಾಸ ಮಾಡುವದಕ್ಕೆ ಹೋಗುವದೆಲ್ಲಾ ಆದರ ಮಾರ್ಗವನ್ನು ತಿಳಿದುಕೊಳ್ಳುವದಕ್ಕೆ ಮಾತ್ರವಲ್ಲದೆ ಮತ್ತೆ ಬೇರೆ ಇಲ್ಲ. ಅದನ್ನು ಎಷ್ಟುಮಟ್ಟಿಗೆ ಸ್ಥಿರಬುದ್ಧಿಯಿಂದ ಅಭ್ಯಾಸಮಾಡುತ್ತೇವೋ ಅಷ್ಟುಮಟ್ಟಿಗೇ ನಮಗೆ ಒಳ್ಳೇ

ಉಣ್ಣಲಾರದವ ಇಕ್ಕಲಾರನು.

ದಾಗುವದು. ನಾವು ಸ್ವಯಂಕೃಷಿಯಿಂದ ಕಲಿತ ವಿದ್ಯೆಯು ಮುಂದಕ್ಕೆ ನಮಗೇ ಉಪಯೋಗಿಸುವಂಥ ಸ್ಥಿರವಾದ ಆಸ್ತಿಯುಂಟಾದ್ದು. ನಮ್ಮ ಪ್ರಕ್ಕೆ ನಾವೇ ಶ್ರಮಪಟ್ಟು ತಿಳಿದುಕೊಳ್ಳುವ ವಿಷಯಗಳು ಎಷ್ಟು ದೃಢವಾಗಿ ನಮ್ಮ ಮನಸ್ಸಿಗೆ ಹಿಡಿಯುವವೋ, ಅಷ್ಟು ದೃಢವಾಗಿ ಇತರರ ಸಹಾಯದಿಂದ ಕಲಿತುಕೊಳ್ಳುವ ವಿಷಯಗಳು ಹಿಡಿಯಲಾರವು. ಕಠಿನವಾದ ಒಂದು ವಿಷಯವನ್ನು ಒಂದುಸಾರಿ ನಾವು ಮನಸ್ಸಿಟ್ಟು ಚನ್ನಾಗಿ ವಿಚಾರಣೆಮಾಡಿ ತಿಳಿದುಕೊಂಡದ್ದೇ ಆದರೆ, ಆಮೇಲೆ ಅಂಥಾ ಕಷ್ಟವಿಷಯಗಳನ್ನೆಲ್ಲಾ ಸುಲಭವಾಗಿ ತಿಳಿದುಕೊಳ್ಳತಕ್ಕ ಶಕ್ತಿಯು ಕ್ರಮೇಣ ತನ್ನಷ್ಟಕ್ಕೆತಾನೇ ಉಂಟಾಗುವದು. ಆದ್ದರಿಂದ ನಮ್ಮ ಅಭಿವೃದ್ಧಿಗೆ ನಮ್ಮ ಪರಿಶ್ರಮವೂ ಬಿಡದೆ ಮಾಡುವ ಸ್ಥಿರಪ್ರಯತ್ನವೂ ಮುಖ್ಯಕಾರಣಗಳಾಗಿವೆ. ಇವುಗಳಿಲ್ಲದೆ ಎಷ್ಟುಮಂದಿ ಉಪಾಧ್ಯಾಯರು ಇದ್ದರೂ, ಎಷ್ಟು ಪುಸ್ತಕಗಳು ಇದ್ದರೂ, ಮತ್ತಾವ ಸಾಧನಗಳಿಷ್ಟಿದ್ದರೂ ಏನೇನೂ ಪ್ರಯೋಜನವಿಲ್ಲ.

ಸ್ವತಂತ್ರಾಭ್ಯಾಸದಿಂದ ತಮ್ಮ ಬುದ್ಧಿಯನ್ನು ವೃದ್ಧಿಪಡಿಸಿ ಅಧಿಕವಾದ ಜ್ಞಾನವನ್ನು ಸಂಪಾದಿಸಿಕೊಳ್ಳುವಹಾಗೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವದರಿಂದ ತುಂಬಾ ಮೇಲು ಉಂಟಾಗುವದೆಂಬ ವಿಷಯವನ್ನು ಚನ್ನಾಗಿ ಪರಿಶ್ರಮಮಾಡಿ ಬುದ್ಧಿವಂತರಾದ ಉಪಾಧ್ಯಾಯರು ನಿರಾಕ್ಷೇಪಕವಾಗಿ ಅಂಗೀಕರಿಸುತ್ತಲಿದ್ದಾರೆ. ವಿದ್ಯಾರ್ಥಿಗಳನ್ನು ತಾವು ಓದಿಸುವದಕ್ಕಿಂತ ಓದತಕ್ಕ ಮಾರ್ಗವನ್ನು ಅವರಿಗೆ ತಿಳುಹಿಸಿ ಪ್ರಾರಂಭಿಸಿದ ಕೆಲಸವನ್ನು ತಾವೇ ತಮ್ಮ ಪ್ರಯತ್ನದಿಂದ ನೆರವೇರಿಸುವಹಾಗೆ ಮಾಡುವವರೇ ಬುದ್ಧಿಶಾಲಿಗಳೂ ಅನುಭವಶಾಲಿಗಳೂ ಆದ ಬೋಧಕರೆಂದು ತಿಳಿಯಬೇಕು. ಇಂಥಾ ಬೋಧನೆಗೆ ಒಳಪಟ್ಟು ಸ್ವತಂತ್ರಾಭ್ಯಾಸದಿಂದಲೇ ವಿದ್ಯೆಯನ್ನು ಕಲಿಯುವವರು ಕ್ರಮಕ್ರಮವಾಗಿ ಬಹಳ ಅಭಿವೃದ್ಧಿಯನ್ನು ಹೊಂದುವರು.

ಬಹಳ ಹೀನಸ್ಥಿತಿಯಲ್ಲಿದ್ದವರೂ ಕೂಡ ಅನೇಕರು ಮೇಲೆ ಹೇಳಿದ ರೀತಿಯಲ್ಲಿ ವಿದ್ಯಾಭ್ಯಾಸಮಾಡಿ ಅನೇಕಭಾಷೆಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ಸಮರ್ಥರಾಗಿ ಯಶಸ್ಸನ್ನು ಸಂಪಾದಿಸಿ ಇರುವರು. ಹಿತವಾಗಿ ಕೆಲಸ

ಉಣ್ಣೋಕಿಲ್ಲದವ ಬಣ್ಣಾ ಬಯಸಿದ.

ಮಾಡುವದು ಈ ಮನುಷ್ಯದೇಹಕ್ಕೆ ಸೌಖ್ಯವನ್ನು ಉಂಟುಮಾಡತಕ್ಕದ್ದಾಗಿರುವದಲ್ಲದೆ, ಬಹಳ ಯುಕ್ತವಾದದ್ದಾಗಿಯೂ ಇದೆ. ವಿದ್ಯೆಯು ಮನಸ್ಸಿಗೆ ಆಯಾಸವನ್ನು ಉಂಟುಮಾಡುವಂತೆ, ಕೆಲಸ ಮಾಡುವದು ದೇಹಕ್ಕೆ ಆಯಾಸವನ್ನು ಉಂಟುಮಾಡುವದು. ಯಾವ ಕೆಲಸವನ್ನೂ ಮಾಡದೆ ಸುಮ್ಮನೆ ಇರುವವರು ಎಂದಿಗೂ ಸುಖಪಡರು. ಕಷ್ಟಕೆಲಸ ಮಾಡಲು ಆವಶ್ಯಕವಿಲ್ಲದವರಾಗಿ ಇದ್ದಾಗ್ಯೂ ದೇಹಕ್ಕೆ ಉತ್ಸಾಹವೂ ದಾರ್ಢ್ಯವೂ ಉಂಟಾಗುವದಕ್ಕೋಸ್ಕರ ಹೊತ್ತು ಹೋಗುವಂತೆ ಯಾವದಾದರೂ ಒಂದು ಕೆಲಸವನ್ನು ಮಾಡುತ್ತಾ ಇರುವದು ಒಳ್ಳೇದು. ನಾವು ಬದುಕಿ ಇರುವವರಿಗೂ ನಾವು ಹೊಂದುವ ಕಾರ್ಯಸಿದ್ಧಿಗಳಿಗೆಲ್ಲ ದೇಹಪರಿಶ್ರಮವೇ ಮುಖ್ಯ ಕಾರಣವೆಂದು ಅನೇಕರು ನಂಬಿರುತ್ತಾರೆ. “ ಕೈಬಿಡದೆ ಕೆಲಸ ಮಾಡುವವನಿಗೆ ಕಾರ್ಯಗಳೆಲ್ಲ ಕೈಗೂಡುವವು ” ಎಂಬಂತೆ ಸ್ಥಿರಬುದ್ಧಿಯಿಂದ ಕಷ್ಟಪಡುವವನಿಗೆ ಯಾವ ಕೆಲಸವೂ ಅಸಾಧ್ಯವಾಗಿರದು.

ತಾನು ಸಂಪಾದಿಸಿದ ಧನವನ್ನು ತಕ್ಕ ರೀತಿಯಲ್ಲಿ ಉಪಯೋಗಿಸಿಕೊಂಡು ಅನುಭವಿಸದೆ ಅದನ್ನು ಮುಚ್ಚಿ ಇಡುವಂತೆ, ಎಲ್ಲಾ ಪುಸ್ತಕಗಳನ್ನೂ ಸುಮ್ಮನೆ ಓದಿದಮಾತ್ರಕ್ಕೆ ಯಾವನೂ ಸಮರ್ಥನಾಗಲಾರನು. ಯಾವದಾದರೂ ಒಂದು ವಿಷಯದಲ್ಲಿ ಬುದ್ಧಿಯನ್ನು ನಿಲ್ಲಿಸಿ ಚನ್ನಾಗಿ ಅಭ್ಯಾಸ ಮಾಡಿ ಅದು ಕರತಲಾಮಲಕವಾಗಿ ತಿಳಿಯುವ ವರಿಗೂ ಹಲವುಸಾರಿ ಅದನ್ನು ಚಿಂತನೆಮಾಡಿ ಮನಸ್ಸಿನಲ್ಲಿ ನಾಟುವಂತೆ ಮಾಡಿಕೊಳ್ಳುವವರು ತಾವು ಕಲಿತ ಸಕಲ ವಿಷಯಗಳಲ್ಲಿಯೂ ಸ್ವತಂತ್ರರಾಗಿ ಇರುವರು.

ಸ್ವತಂತ್ರಾಭ್ಯಾಸದಿಂದ ಕಲಿಯುವ ವಿದ್ಯೆಗೆ ಅಪೇಕ್ಷೆಯು ಮುಖ್ಯವಾದದ್ದು. ಆದ್ದ[illegible] ಬಾಲಕರನ್ನು ಚಿಕ್ಕತನದಲ್ಲಿ ಸ್ವಲ್ಪಮಟ್ಟಿಗೆ ಸ್ವೇಚ್ಛೆಯಾಗಿ ಬಿಟ್ಟು, ಉಲ್ಲಾಸವನ್ನುಂಟುಮಾಡಿ, ಪರಸಹಾಯಾಪೇಕ್ಷೆಯಿಲ್ಲದೆ ಸ್ವಂತವಾಗಿ ತಿಳಿದುಕೊಳ್ಳುವದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಅವರನ್ನು ಮಿತಿಮೀರಿ ಬಿಟ್ಟಾಗ್ಯೂ, ಬಹಳ ನಿರ್ಬಂಧಪಡಿಸಿದಾಗ್ಯೂ, ಸ್ವಬುದ್ಧಿಯಿಂದ ವಿಷಯಗಳನ್ನು ಗ್ರಹಿಸುವಂಥ ವಾಡಿಕೆಗೆ ಭಂಗ ಬರುವದು.

ಉತ್ತಮನೆತ್ತ ಹೋದರೂ ಭಯವಿಲ್ಲ.

ಜಾಗರೂಕತೆಯೂ ಸ್ಥಿರಬುದ್ಧಿಯೂ ಇರುವವನು ಎಷ್ಟು ಮಂದ ಬುದ್ಧಿಯುಳ್ಳವನಾಗಿದ್ದರೂ, ಅವನು ಅಭಿವೃದ್ಧಿಯನ್ನು ಹೊಂದುವದರಲ್ಲಿ ಸಂಶಯವಿಲ್ಲ. ದಾರಿ ತಪ್ಪದೆ ಹೋಗುವ ಆಮೆಯು ದಾರಿತಪ್ಪಿ ಹೋಗುವ ಮೊಲವನ್ನು ಓಟದಲ್ಲಿ ಸೋಲಿಸಲಾರದೆ ? ಹಾಗೆಯೇ ಜನರು ಎಷ್ಟು ತ್ವರೆಯಾಗಿ ಕಲಿಯುವರೋ ಅಷ್ಟು ತ್ವರೆಯಾಗಿ ಮರೆಯುವರು. ಆದ್ದರಿಂದ ಯಾರಾಗಲಿ ಒಂದು ವಿಷಯವನ್ನು ಎಷ್ಟೆಷ್ಟು ಮೆಲ್ಲಗೆ ಕಲಿಯುವರೋ ಅದನ್ನು ಎಷ್ಟೆಷ್ಟು ಚಿಂತನೆ ಮಾಡುವರೋ ಅದು ಅಷ್ಟು ದೃಢವಾಗಿ ನಿಲ್ಲುವದು.

ನಮಗೆ ಬುದ್ಧಿ ತಿಳಿದ ಮೇಲೆ ನಾವೇ ಸ್ವಂತಬುದ್ಧಿಯಿಂದ ಕಲಿಯುವದರಿಂದುಂಟಾಗುವ ಫಲವು ಚಿಕ್ಕತನದಲ್ಲಿ ಪಾಠಶಾಲೆಯಲ್ಲಿ ಉಪಾಧ್ಯಾಯರಬಳಿ ಕಲಿಯುವದರಿಂದುಂಟಾಗುವದಿಲ್ಲವೆಂದು ಮೊದಲೇ ಹೇಳಿದ್ದೇವಷ್ಟೆ. ಇದರಿಂದ ತಾಯಿತಂದೆಗಳು ತಮ್ಮ ಮಕ್ಕಳನ್ನು ಚಿಕ್ಕತನದಲ್ಲಿಯೇ ಬುದ್ಧಿವಂತರನ್ನಾಗಿ ಮಾಡಬೇಕೆಂಬ ಅಪೇಕ್ಷೆಯನ್ನು ಇಟ್ಟುಕೊಳ್ಳಕೂಡದು. ಅವರ ದೇಹಸೌಖ್ಯಕ್ಕೆ ಲೋಪವಿಲ್ಲದಹಾಗೆ ಚನ್ನಾಗಿ ಬೆಳಸಿ, ಸನ್ಮಾರ್ಗದಲ್ಲಿ ಪ್ರವರ್ತಿಸುವಹಾಗೆ ಏರ್ಪಾಡು ಮಾಡಿ, ಕಷ್ಟ ಮಾಡತಕ್ಕ ರೀತಿಯನ್ನು ಅವರಿಗೆ ಬೋಧಿಸುತ್ತಾ ಬರಬೇಕು. ಹೀಗೆ ನಡೆಸಿದ ಪಕ್ಷದಲ್ಲಿ ಬಾಲಕರು ತಮಗೆತಾವೇ ಅಭಿವೃದ್ಧಿಯನ್ನು ಹೊಂದುವರೆಂಬ ವಿಷಯದಲ್ಲಿ ಸಂಶಯವಿಲ್ಲ.

೩. ಆ ರೋ ಗ್ಯ ವಿ ಚಾ ರ .

ನಮ್ಮ ಶರೀರಗಳು ಯಾವಯಾವ ವಸ್ತುಗಳಿಂದ ಆಗಿ ಇವೆಯೋ ಆ ವಸ್ತುಗಳಾಗಲೀ ಅವುಗಳಲ್ಲಿನ ಗುಣವಿರುವ ಇತರ ವಸ್ತುಗಳಾಗಲೀ ನಮ್ಮ ಆಹಾರದಲ್ಲಿ ಸೇರಿ ಇರಬೇಕೆಂದು ಮೊದಲೇ ಹೇಳಿ ಇರುತ್ತೇವಷ್ಟೆ.

ಉಪ್ಪು ಮದ್ದಿಗೆ ಸಲ್ಲ, ನಿದ್ದೆ ಯೋಗಿಗೆ ಸಲ್ಲ.

ಈ ವಸ್ತುಗಳಿಂದ ದೇಹದಲ್ಲಿ ಚರ್ಮ ಖಂಡ ಮೂಳೆ ಮೊದಲಾದವುಗಳು ಬೆಳೆಯಬೇಕಲ್ಲದೆ ರಕ್ತವೂ ಬಲವೂ ಹೆಚ್ಚಬೇಕು. ಇವು ಜಂತುವರ್ಗವಾಗಿಯಾದರೂ ಇರಬಹುದು, ವೃಕ್ಷವರ್ಗವಾಗಿಯಾದರೂ ಇರಬಹುದು. ಆದ್ದರಿಂದ ಈ ದೇಶದಲ್ಲಿ ರೂಢಿಯಾಗಿ ಆಹಾರಕ್ಕಾಗಿ ಉಪಯೋಗಿಸುವ ಕೆಲವು ಪದಾರ್ಥಗಳ ಗುಣಗಳನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳತಕ್ಕದ್ದು ಅವಶ್ಯಕವಾದದ್ದರಿಂದ ಅವುಗಳನ್ನು ಇಲ್ಲಿ ಹೇಳುವೆವು.

ಮಕ್ಕಳಿಗೆ ಆಹಾರವಾಗಿರುವದು ಮುಖ್ಯವಾಗಿ ಹಾಲಲ್ಲವೇ? ಮುಖ್ಯವಾಗಿ ಚಿಕ್ಕತನದಲ್ಲಿ ದೇಹಪೋಷಣೆಗೆ ಬೇಕಾದ ವಸ್ತುಗಳೆಲ್ಲಾ ಇದರಲ್ಲಿ ಸೇರಿ ಇರುತ್ತವೆ. ಇದರಲ್ಲಿ ಮೊಸರಿನ ರೂಪವಾಗಿರುವ ಆಲ್ಬ್ಯುಮಿನ್ಎಂಬ ಬಿಳೀಧಾತುವೂ, ಉಪ್ಪುಗಳೂ, ಕೆನೇರೂಪವಾಗಿರುವ ಎಣ್ಣೆಮೊದಲಾದವುಗಳೂ, ಸಕ್ಕರೆಯೂ ಸೇರಿ ಇರುತ್ತವೆ. ಜನರು ಹಸು, ಎಮ್ಮೆ, ಆಡು ಇವುಗಳ ಹಾಲನ್ನು ಉಪಯೋಗಿಸುತ್ತಾರೆ. ಆಡಿನ ಹಾಲು ಪುಷ್ಟಿಕರವಾದದ್ದು. ಹಸುವಿನ ಹಾಲನ್ನು ಎಲ್ಲರೂ ಉಪಯೋಗಿಸಬಹುದು. ಎಮ್ಮೆಯ ಹಾಲು ಬೇಗ ಜೀರ್ಣಿಸುವದಿಲ್ಲ. ರೋಗದ ದನಗಳ ಹಾಲನ್ನು ಕುಡಿಯುವದರಿಂದ ಬಾಧಕವುಂಟು. ಆದ್ದರಿಂದ ಹಾಲನ್ನು ಪರೀಕ್ಷಿಸಿ ಉಪಯೋಗಿಸಿಕೊಳ್ಳಬೇಕು.

ಹಾಲನ್ನು ಚೆನ್ನಾಗಿ ಕಾಯಿಸಿ ಕೆನೆಯನ್ನು ತೆಗೆದುಬಿಟ್ಟರೆ ಉಳಿದದ್ದರಲ್ಲಿ ವಿಶೇಷ ಗುಣವಿರುವದಿಲ್ಲ. ಅದಕ್ಕೆ ಹೆಪ್ಪುಹಾಕಿ, ಮೊಸರುಮಾಡಿ ಅದನ್ನು ಮಜ್ಜಿಗೆಮಾಡಿದಮೇಲೆ ಅದರಲ್ಲಿ ಗುಣಗಳು ಮತ್ತೂ ಕಡಿಮೆಯಾಗುವವು. ಇದಲ್ಲದೆ ಮೊಸರನ್ನು ಕಡೆದು ಬೆಣ್ಣೆಯನ್ನು ತೆಗೆದಮೇಲೆ ಅದರಲ್ಲಿ ನೀರೊಂದುವಿನಹಾ ಮತ್ತೇನೂ ವಿಶೇಷವಾಗಿ ಇರುವದಿಲ್ಲ. ನೈಟ್ರೋಜನ್ ಧಾತುವು ಮೊಸರಿನಲ್ಲಿ ನೂರರಲ್ಲಿ ೨೫ಭಾಗವೂ ಹಾಲುಮಜ್ಜಿಗೆಗಳಲ್ಲಿ ನೂರರಲ್ಲಿ ೪ಭಾಗವೂ ಇದೆ.

ಬೆಣ್ಣೆ, ತುಪ್ಪ, ನಾನಾವಿಧವಾದ ಎಣ್ಣೆಗಳು ಮೊದಲಾದ ಅನೇಕ ಜಿಡ್ಡಿನ ಪದಾರ್ಥಗಳೆಲ್ಲಾ ಮನುಷ್ಯದೇಹಕ್ಕೆ ಅವಶ್ಯಕವಾದವುಗಳು. ಇವು

ಉದ್ದು ಉರುಳಿದರೆ ಹೆದ್ದಾರಿ ಹಾಟೀತೆ?

ಚರ್ಮಕ್ಕೆ ಮಾರ್ದವ್ಯವನ್ನೂ ಕಾಂತಿಯನ್ನೂ ಮೈಗೆ ಶಾಖವನ್ನೂ ಕೊಡುವವು. ಶರೀರದ ಕೀಲುಗಳೆಲ್ಲಾ ಇದರಿಂದಲೇ ಸರಾಗವಾಗಿ ಆಡುವವು. ಶೀತಪ್ರದೇಶಗಳಲ್ಲಿ ವಾಸಿಸುವವರಿಗೆ ಶಾಖವು ಹೆಚ್ಚಾಗಿ ಬೇಕಾಗಿ ಇರುವದ್ದರಿಂದ ಈ ಪದಾರ್ಥವೂ ಹೆಚ್ಚಾಗಿ ಬೇಕು. ಇವುಗಳನ್ನು ಮಿತಿಮೀರಿ ತಿನ್ನುವದರಿಂದ ಬೊಜ್ಜು ಬೆಳೆಯುವದಾದ್ದರಿಂದ ಜಾಗರೂಕರಾಗಿ ಇರಬೇಕು.

ಗೋಧುವೆಯಲ್ಲಿ ಬಂಧನೆ, ಸಕ್ಕರೆ, ಎಣ್ಣೆ, ಕೊಬ್ಬು ಮೊದಲಾದ ಪದಾರ್ಥಗಳೆಲ್ಲಾ ಇವೆ. ಇದು ಧಾನ್ಯಗಳಲ್ಲೆಲ್ಲಾ ಬಹಳ ಪುಷ್ಟಿಕರವಾದದ್ದಾದ್ದರಿಂದ ಶ್ರೇಷ್ಠವೆಂದು ಎನ್ನಿಸಿಕೊಂಡಿದೆ. ಇದರಲ್ಲಿ ನೂರರಲ್ಲಿ ಎಂಟು ಪಾಲು ನೈಟ್ರೋಜನ್ ಇರುವದು.

ಅಕ್ಕಿಯಲ್ಲಿಯೂ, ಉರುಳಗಡ್ಡೆ ಮೊದಲಾದ ಗಡ್ಡೆದಿನಸುಗಳಲ್ಲಿಯೂ, ತಕ್ಕಮಟ್ಟಿಗೆ ಬಂಧನವೂ ನೀರೂ ಇರುವವು. ಪೋಷಣೆಗೆ ಬೇಕಾದ ವಸ್ತುಗಳು ಇವುಗಳಲ್ಲಿ ವಿಶೇಷವಾಗಿ ಇಲ್ಲ. ಅಕ್ಕಿಯಲ್ಲಿ ನೂರರಲ್ಲಿ ಆರರಷ್ಟು ನೈಟ್ರೋಜನ್ ಇರುವದು. ಇದು ನಮ್ಮ ದೇಹಪೋಷಣೆಗೆ ಸಾಕಾಗಿ ಇರುವದು. ಆದಾಗ್ಯೂ ಅಧಿಕವಾಗಿ ಉಷ್ಣವನ್ನು ಹುಟ್ಟಿಸಿ, ಹೊಟ್ಟೆಯಲ್ಲಿ ನಾನಾವಿಧವಾದ ಬದಲಾವಣೆಗಳನ್ನು ಉಂಟುಮಾಡುವ ವಸ್ತುವು ಇದರಲ್ಲಿ ತುಂಬಿ ಇರುವದ್ದರಿಂದ, ಅದೊಂದುಮಾತ್ರವೇ ಒಂದು ಒಳ್ಳೇ ಆಹಾರವೆಂದು ತಿಳಿಯಕೂಡದು.

ಕಾಯಿಧಾನ್ಯಗಳಲ್ಲಿ, ನೈಟ್ರೋಜನ್‌ಧಾತುವು ಬಹಳ ಹೆಚ್ಚಾಗಿರುವದರಿಂದ, ಅವು ಬೇಗ ಜೀರ್ಣಕ್ಕೆ ಬರುವದು ಕಷ್ಟ. ಆದ್ದರಿಂದ ಅವುಗಳನ್ನು ಚನ್ನಾಗಿ ಬೇಯಿಸಿಯಾಗಲೀ, ಚಟ್ನಿಯಾಗಿ ಅರೆದಾಗಲೀ, ಉಪ್ಪು ಖಾರ ಮೊದಲಾದ ಸಂಬಾರದ ವಸ್ತುಗಳೊಂದಿಗೆ ಸೇರಿಸಿಯೇ ಭುಜಿಸಬೇಕು. ತೊಗರಿ, ಉದ್ದು, ಹುರಳಿ, ಕಡಲೆ ಮೊದಲಾದವುಗಳಲ್ಲಿ ನೂರರಲ್ಲಿ ೨೦—೨೫ ಪಾಲು ನೈಟ್ರೋಜನ್ ಇರುವದು. ಇವುಗಳನ್ನು ಹಿಟ್ಟುಮಾಡಿ, ಚನ್ನಾಗಿ ಬೇಯಿಸಿ, ಆಹಾರಕ್ಕೆ ಉಪಯೋಗಿಸಿಕೊಳ್ಳಬಹುದು.

ಉದ್ಯೋಗವಿಲ್ಲದ ತೋತ್ತು ಉದ್ದುಹುರಿದು ತಿಂದಳು.

ಜೋಳ ಮುಸುಕಿನಜೋಳಗಳ ಜಾತಿಗೆ ಸೇರಿದ ಧಾನ್ಯಗಳಲ್ಲಿ ನೂರ ಕಲ್ಲಿ ೧೧ಪಾಲು ನೈಟ್ರೋಜನ್ ಇದೆ. ಪುಷ್ಟಿವಿಷಯದಲ್ಲಿ ಇವು ಅಕ್ಕಿಗಿಂತ ಬೂದೂವರೆಯಷ್ಟು ಉತ್ತಮವಾದವುಗಳು ; ಆದಾಗ್ಯೂ ಇವು ಅಕ್ಕಿಯಷ್ಟು ಜಾಗ್ರತೆಯಾಗಿ ಅರಗುವದಿಲ್ಲ. ಇವು ಕಷ್ಟಮಾಡತಕ್ಕವರಿಗೆ ಯೋಗ್ಯವಾದವುಗಳು.

ಕಾಯಿಪಲ್ಯಗಳಲ್ಲಿಲ್ಲಾ ನೈಟ್ರೋಜನ್ ಧಾತುವು ವಿಶೇಷವಾಗಿ ಇಲ್ಲ; ಆದಾಗ್ಯೂ ಅವು ನಮ್ಮ ಆಹಾರಕ್ಕೆ ರುಚಿಯಾಗಿರುತ್ತವೆ ಮತ್ತು ಇತರ ಆಹಾರಗಳನ್ನು ಜೀರ್ಣಿಸುವಹಾಗೆ ಮಾಡುತ್ತವೆ. ಉರುಳುಗಡ್ಡೆಗಳಲ್ಲಿಯೂ, ಕೆಸವಿನ ದಂಟಿನಲ್ಲಿಯೂ, ಅಕ್ಕಿ ಮೊದಲಾದವುಗಳಲ್ಲಿ ಇರುವ ಬಂಧನವೂ, ದೇಹಕ್ಕೆ ಪುಷ್ಟಿ ಕೊಡುವ ಅನೇಕ ವಸ್ತುಗಳೂ, ರಕ್ತ ಪುಷ್ಟಿಗೆ ಅವಶ್ಯಕವಾದ ವಸ್ತುಗಳೂ, ನಾನಾವಿಧವಾದ ಉಪ್ಪುಗಳೂ ಇವೆ. ಗೆಣಸು ಗಡ್ಡೆಯಲ್ಲಿ ಮೇಲ್ಕಂಡ ಪದಾರ್ಥಗಳಲ್ಲದೆ ಸಕ್ಕರೆಯೂ ಇದೆ. ಇದನ್ನು ಮಿತವಾಗಿ ಭುಜಿಸಿದರೆ ಒಳ್ಳೇದು. ಕಂದಮೂಲವು ಉರಳುಗಡ್ಡೆಯಂಥಾದ್ದೇ. ಇವನ್ನು ಚನ್ನಾಗಿ ಬೇಯಿಸಿ ಬಾಯಿಯಲ್ಲಿ ಅಗಿದು ಅಗಿದು ಮಿತವಾಗಿ ತಿನ್ನಬೇಕು ; ಇಲ್ಲದಿದ್ದರೆ ಹೊಟ್ಟೇನೋವು ಮೊದಲಾದ ದುರ್ಗುಣಗಳುಂಟಾಗುವವು.

ಬಾಳೇಕಾಯಿ ಬಂಧನವುಳ್ಳದ್ದಾಗಿಯೂ, ಅಕ್ಕಿಯಷ್ಟು ಪುಷ್ಟಿಕರವಾದದ್ದಾಗಿಯೂ ಇದೆ. ಇದನ್ನೂ ಮಿತವಾಗಿ ಭುಜಿಸಬೇಕು. ಬಾಳೇಹೂವು ಬಾಳೇಗಡ್ಡೆ ಇವುಗಳನ್ನು ತಾಳದ ಮಾಡಿಕೊಂಡು ಭುಜಿಸಿದರೆ, ಇದರಿಂದ ರಕ್ತವೃದ್ಧಿಗೆ ಸ್ವಲ್ಪ ಸಹಾಯವುಂಟು. ಆದರೂ ಇವು ಮೇಲೆ ಹೇಳಿದ ಗಡ್ಡೆಗಳಷ್ಟು ಉಪಯೋಗಕರಗಳಲ್ಲ.

ಕುಂಬಳಕಾಯಿ ಸಾತೇಕಾಯಿ ಮೊದಲಾದವುಗಳು ರಕ್ತವನ್ನು ಒಳ್ಳೇ ಸ್ಥಿತಿಯಲ್ಲಿಡುತ್ತವೆ. ಇವುಗಳನ್ನು ಅಧಿಕವಾಗಿ ತಿಂದರೆ ಜೀರ್ಣಿಸಲಾರವು.

ಕೊಬ್ಬರಿಯನ್ನು ತಾಳದ ಮೊದಲಾದವುಗಳಲ್ಲಿ ಮಿತವಾಗಿ ಸೇರಿಸಿ ಭುಜಿಸಬಹುದು.

ಉನ್ಮತ್ತನು ಸನ್ಮತನಾಗಿ ನಡೆಯಬೇಕು.

ಮಾವಿನಕಾಯಿ ನಿಂಬೇಕಾಯಿ ಮೊದಲಾದವುಗಳನ್ನು ಉಪ್ಪಿನಕಾಯಿ ಹಾಕಿಯಾಗಲೀ ಬೇಯಿಸಿಯಾಗಲೀ ಭುಜಿಸಿದರೆ, ರಕ್ತಕ್ಕೆ ಬೇಕಾದ ಔಷಧಿ ಸವು ಹುಟ್ಟುವದು ಮತ್ತು ಬಾಯಿಯ ಅರುಚಿಕೆಯು ತೀರುವದು ಹುಣಸೇ ಹಣ್ಣೂ ಇಂಥಾದ್ದೇ.

ಸಕ್ಕರೆಯಲ್ಲಿ ಶರೀರಕ್ಕೆ ಶಕ್ತಿಯನ್ನು ಉಂಟುಮಾಡುವ ಸದ್ಗುಣವು ಏನೂ ಇಲ್ಲ. ಎಳೇ ಮಕ್ಕಳಿಗೆ ಮಾತ್ರ ಇದು ಸ್ವಲ್ಪ ಪುಷ್ಟಿಕರವಾದದ್ದು. ಇದರಲ್ಲಿ ಅತ್ಯಂತ ಅಪೇಕ್ಷೆಯಿಟ್ಟರೆ ಹೊಟ್ಟೆ ಬಾತುಕೊಳ್ಳುವದು; ಹೆಚ್ಚಾಗಿ ಶ್ವಾಸಬಿಡುವದು ಮೊದಲಾದ ದುರ್ಗುಣಗಳುಂಟಾಗುವವು.

ಸಾಸಿವೆ, ಮೆಣಸು, ಮೆಣಸಿನಕಾಯಿ, ಜೀರಿಗೆ, ಮೆಂತ್ಯ, ಶುಂಠಿ, ಮೊದಲಾದ ಸಂಬಾರದ ವಸ್ತುಗಳನ್ನೂ, ಲವಂಗ, ಬಾಲಮೆಣಸು, ಯಾಲಕ್ಕಿ ಮೊದಲಾದ ವಾಸನಾದ್ರವ್ಯಗಳನ್ನೂ ಮಿತವಾಗಿ ಉಪಯೋಗಿಸಿಕೊಂಡರೆ ಆಹಾರವು ಜೀರ್ಣಿಸಿ ಹಸಿವು ಹುಟ್ಟುವದು; ಮನಸ್ಸಿಗೆ ಉತ್ಸಾಹ ಉಂಟಾಗುವದು. ಇವುಗಳನ್ನು ಮಿತಿಮೀರಿ ಭುಜಿಸುವದರಿಂದ ಹಸಿವು ಹೆಚ್ಚಾಗಿ ಶರೀರವು ಬಲಹೀನವಾಗುವದು.

---

೪. ಸ್ತ್ರೀಸ್ವಗುಣ.

ಒಂದು ಪಟ್ಟಣದಲ್ಲಿ ಅಹಮುದ್‌ಅಲಿ ಎಂಬ ಒಬ್ಬ ಧನವಂತನು ಇದ್ದನು. ಆತನ ಮನೆಗೆ ಬಹಳವಾಗಿ ದವಸಧಾನ್ಯ ಬರುತ್ತಾ ಇತ್ತು. ಮನೆಯಲ್ಲಿ ಹಾಲುಕರೆಯುವ ಹತ್ತು ಹಸುಗಳೂ ಐವತ್ತು ಎಮ್ಮೆಗಳೂ ಇದ್ದು, ಇವುಗಳ ಹಾಲಿನಿಂದ ಮನೆಯವರೆಲ್ಲರೂ ಸುಖಪಡುತ್ತಿದ್ದರು. ಇದಲ್ಲದೆ ಆತನಿಗೆ ಜವಳೀವ್ಯಾಪಾರದಲ್ಲಿ ಸಂವತ್ಸರಕ್ಕೆ ಸಾವಿರ ಎರಡು ಸಾವಿರ ರೂಪಾಯಿ ಲಾಭವು ಉತ್ಪತ್ತಿಯಾಗುತ್ತಿತ್ತು. ಆತನಿಗೆ ಗುಣವತಿಯೂ, ಪತಿವ್ರತೆಯೂ, ವಿದ್ಯಾಶಾಲಿಯೂ ಆದ ಒಬ್ಬ ಹೆಂಡತಿ ಇದ್ದಳು. ಹೀಗಿರು

ಉಪಕಾರಕ್ಕೆ ಅಪಕಾರ ಮಾಡಬೇಡ.

ವಲ್ಲಿ ದೇವರ ಕಟಾಕ್ಷದಿಂದ ಆಕೆಯು ಗರ್ಭಿಣಿಯಾಗಿ ನವಮಾಸ ತುಂಬಿದ ಮೇಲೆ ಒಂದು ಕನ್ಯಾರತ್ನವನ್ನು ಪಡೆದಳು. ಆಗ ಅಹಮದ್‌ಅಲಿಯು ಹುಟ್ಟಿದ ಮಗುವಿಗೆ ರಹಮತ್ ಬೀಬಿ ಎಂಬ ಹೆಸರನ್ನು ಇಟ್ಟು ಚೆನ್ನಾಗಿ ಪೋಷಿಸುತ್ತಾ ಬಂದನು. ತಾಯಿಯು ಆ ಮಗಳಿಗೆ ೬ನೇ ವರ್ಷದಲ್ಲಿ ಮುಲ್ಲಾ ಶಾಸ್ತ್ರವನ್ನು ಓದಿಸಿ ಪ್ರತಿದಿನವೂ ತನ್ನ ಸಹೋದರರನ್ನು ಆಡಿಸುವಂತೆಯೂ ಆರು ಸೇರು ಗೋಧಿ ಮಾಡಿ ಕೊಡುವಂತೆಯೂ ನೇಮಿಸಿದಳು. ೭ನೇ ವರ್ಷದಲ್ಲಿ ಪಾತ್ರೆಗಳನ್ನು ಬೆಳಗುವವನ್ನೂ, ೮ನೇ ವರ್ಷದಲ್ಲಿ ನೂಲು ಹೆಣೆಯುವದನ್ನೂ ಕಲಿಸಿಕೊಟ್ಟಳು. ಆ ಹುಡುಗಿಯು ಗುಣವತಿಯಾಗಿಯೂ, ತಿಳುವಳಿಕೆಯುಳ್ಳವಳಾಗಿಯೂ, ತಾಯಿಯ ಮಾತನ್ನು ಮೀರದವಳಾಗಿಯೂ ಇದ್ದಳು. ಒಂದು ದಿನ ತಾಯಿಯು ಹೀಗಿರುವ ಮಗಳನ್ನು ನೋಡಿ " ಎಲೆ ಮಗಳೇ, ಈಗ ನಿನಗೆ ನೂಲು ಹೆಣೆಯುವದಕ್ಕೂ ಚಿತ್ರವಿಚಿತ್ರಗಳಾದ ಬಟ್ಟೆಗಳನ್ನು ನೇಯುವದಕ್ಕೂ ಬಂತು. ಆದ್ದರಿಂದ ಇನ್ನುಮೇಲೆ ನಿನ್ನ ಬಟ್ಟೆಗಳನ್ನು ನೀನೇ ನೇದುಕೋ " ಎಂದು ಹೇಳಿದಳು. ಆ ಮೇಲೆ ಆ ಹುಡುಗಿಯು ಹಾಗೆಯೇ ತಾನು ನೇದ ಬಟ್ಟೆಗಳನ್ನು ಧರಿಸಿ ಸಂತೋಷಿಸಿ ತಾಯಿಬಳಿಗೆ ಬಂದು " ಅಮ್ಮಾ, ನನಗೆ ರೇಷ್ಮೆ ವಸ್ತ್ರಗಳನ್ನು ನೇಯುವದಕ್ಕೆ ಕಲಿಸಿದರೆ ನಾನು ಅವುಗಳನ್ನೂ ನೇದು ಧರಿಸುವೆನು " ಎಂದು ಹೇಳಿದಳು. ಅದಕ್ಕೆ ತಾಯಿಯು ನಕ್ಕು, ಸುಮ್ಮನಾಗಿ, ಅವಳಿಗೆ ೯ನೇ ವರ್ಷ ತುಂಬಿದಮೇಲೆ ಅಡಿಗೆ ಮಾಡುವದನ್ನೂ, ಬಟ್ಟೆಹೊಲಿಯುವವನ್ನೂ ಕಲಿಸಿ, ತಾನು ಕಲಿಸಿಕೊಟ್ಟ ಮನೇಕೆಲಸಗಳಲ್ಲೆಲ್ಲಾ ಅವಳು ನಿಪುಣೆಯಾಗಿರುವದನ್ನು ಕಂಡು, ಅವಳನ್ನು ಕುರಿತು "ಎಲೆ ಮಗಳೇ, ಇನ್ನುಮೇಲೆ ದೇಹಕ್ಕೆ ಆರೋಗ್ಯಕರವಾದ ಒಂದು ಕೆಲಸವನ್ನು ನಿನಗೆ ಕಲಿಸುವೆನು. ಏನೆಂದರೆ : ನೀನು ಈಗ ಪ್ರತಿದಿನದಲ್ಲಿಯೂ ಮೂರು ಗಳಿಗೆಹೊತ್ತಿಗೆ ಏಳುತ್ತಾ ಇದ್ದೀಯೆ. ಸದ್ಯಕ್ಕೆ ನಾಲ್ಕು ಗಳಿಗೆಗೆ ಮುಂಚೆ ಎದ್ದು ನನ್ನ ಸಂಗಡ ಎಂಟು ದಿನಗಳವರೆಗೆ ಬೀಸುತ್ತಾ ಇರು. ತಿಂಗಳು ಎರಡು ತಿಂಗಳೊಳಗಾಗಿ ಎರಡು ಸೇರು ಧಾನ್ಯವನ್ನು ನೀನೇ ಬೀಸುವಷ್ಟು ಶಕ್ತಿಯು

ನಿನಗೆ ಬರುವದು "ಎಂದು ಹೇಳಿದಳು. ಆ ಮಾತನ್ನು ಕೇಳಿ ಮಗಳು ತಾಯಿಯನ್ನು ಕುರಿತು "ಎಲೆ ತಾಯಿಯೇ, ಬೀಸುವದರಲ್ಲಿ ಕಷ್ಟವೊಂದು ವಿನಹಾ ಮತ್ತಾವಗುಣವೂ ಇರುವಂತೆ ತೋರುವದಿಲ್ಲ. ಇದರಿಂದ ದೇಹಕ್ಕೆ ಆರೋಗ್ಯ ಎಲ್ಲಿ ಬಂತು?" ಎಂದು ಕೇಳಲು, ತಾಯಿಯು "ಎಲೆ ಮಗಳೇ, ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡಿದರೂ, ಸ್ತ್ರೀಯರಿಗೆ ಬೀಸುವದರಿಂದ ಉಂಟಾಗುವ ಗುಣವು ಬರಲಾರದು. ಯಾಕಂದರೆ, ಬೀಸುವದರಿಂದ ಅಂಗಾಗಕ್ಕೆ ಸಾಧನೆಯೂ ಶಕ್ತಿಯೂ ಬರುವದಲ್ಲದೆ, ಇದರಲ್ಲಿ ಉಲ್ಲಾಸ, ನಿದ್ರೆ, ಹಸಿವು, ಜೀರ್ಣಶಕ್ತಿ, ಚಮತ್ಕಾರ, ಧೈರ್ಯ, ಬುದ್ಧಿ ಕುಶಲತೆ ಮುಂತಾದ ಅನೇಕ ಸುಗುಣಗಳಿರುವವು. ನನ್ನ ಚಿಕ್ಕಮ್ಮನ ಮಗಳಾದ ಪುಷಾಬೀಬಿ ಎಂಬುವಳನ್ನು ನೋಡಲಿಲ್ಲವೆ? ಅವಳು ಯಾವಾಗಲೂ ತನ್ನ ಮನೇಕೆಲಸಗಳನ್ನೆಲ್ಲಾ ಮತ್ತೊಬ್ಬರಿಂದ ಮಾಡಿಸುತ್ತಾ ತಾನು ಮಂಚದಮೇಲೆಯೇ ಕೂತು ಇರುವಳು. ಅವಳಿಗೆ ಒಂದು ದಿನವಾದರೂ ಆರೋಗ್ಯವಿಲ್ಲದೆ ಈ ದಿನ ತಲೇನೋವು, ನಾಳೆ ಹೊಟ್ಟೇನೋವು, ಎಂದು ನಿತ್ಯವೂ ರೋಗಗಳ ಬಾಧೆಯಿಂದ ಸಂಕಟಪಡುತ್ತಾಳೆ. ಯಾವ ಪ್ರಾಣಿಯಾಗಲೀ ಕಷ್ಟಕ್ಕೆ ಅಂಜಿಕೊಂಡರೆ ಸೌಖ್ಯ ಬರಲಾರದು.

ಕಷ್ಟಮಾಡುವ ವ್ಯವಸಾಯಗಾರರ ಸ್ತ್ರೀಯರು ತಮ್ಮತಮ್ಮ ಮನೇಕೆಲಸಗಳನ್ನು ನೆರವೇರಿಸಿಕೊಂಡು, ದುರ್ಬಲ, ಅಜೀರ್ಣ, ಆಯಾಸ ಮೊದಲಾದವುಗಳಿಲ್ಲದೆ, ಕಾಯಪುಷ್ಟಿಯೂ, ಆರೋಗ್ಯವೂ, ಉಳ್ಳವರಾಗಿ ತಮ್ಮ ತಮ್ಮ ಗಂಡಂದಿರ ಸೇವೆ ಮಾಡಿಕೊಂಡು ಸೌಖ್ಯವಾಗಿರುವರು. ಪುರುಷರು ಗರಡೀ ಸಾಧನೇ ಮುಂತಾದ ಅಂಗಸಾಧನೆಗಳಿಂದ ದೇಹವನ್ನು ಪುಷ್ಟಿ ಮಾಡಿಕೊಳ್ಳುತ್ತಾರೆ. ಸ್ತ್ರೀಯರಿಗೆ ಬೀಸುವದು, ಕುಟ್ಟುವದು ಮೊದಲಾದವುಗಳೇ ಅಂಗಸಾಧನೆಗಳು. ನೀನು ಒಬ್ಬ ಬ್ರಾಹ್ಮಣನ ಮಗಳ ಕಥೆಯನ್ನು ಕೇಳಲಿಲ್ಲವೆ?" ಎಂದು ಕೇಳಿದಳು. ಅದಕ್ಕೆ ಆ ಹುಡುಗಿಯು ಯಾವ ಕಥೆ ಎಂದು ಕೇಳಲು ತಾಯಿಯು ಹೇಳುವದಕ್ಕೆ ಪ್ರಾರಂಭಿಸಿದಳು. ಏನಂದರೆ :

ಉಪದೇಶಕೇಳಿದರೂ ಉಪದ್ರ ತಪ್ಪಲಿಲ್ಲ

ಒಂದು ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನಿಗೆ ೧೧ ವರ್ಷ ವಯಸ್ಸಿನ ಒಬ್ಬ ಮಗಳಿದ್ದಳು. ಆ ಮಗಳು ತಮ್ಮ ಮನೆಯಲ್ಲಿದ್ದ ಒಂದು ಕರುವನ್ನು ಯಾವಾಗಲೂ ಬಹಳ ಪ್ರೇಮದಿಂದ ಎತ್ತಿಕೊಂಡು ಮನೇ ಮಾಳಿಗೇಮೇಲಕ್ಕೆ ಹತ್ತಿ ಸ್ವಲ್ಪ ಹೊತ್ತು ಅಲ್ಲಿ ಇದ್ದು ಪುನಃ ಕೆಳಕ್ಕೆ ಇಳಿದು ಬರುವಳು. ಹೀಗೆ ಕೆಲವು ವರ್ಷ ನಡೆದ ಮೇಲೆ ಒಂದು ದಿನ ಅವಳು ಬಲವಾಗಿ ಬೆಳೆದ ಹಸುವನ್ನು ಎತ್ತಿಕೊಂಡು ಮಾಳಿಗೇ ಮೇಲಕ್ಕೆ ಹೋಗುತ್ತಾ ಇರುವದನ್ನು ಅವಳ ತಂದೆಯು ಕಂಡು ಆಶ್ಚರ್ಯಪಟ್ಟು ತನ್ನ ಹೆಂಡತಿಯೊಡನೆ ಹೇಳಲು, ಆಕೆಯು ಅಭ್ಯಾಸದಿಂದ ಎಂಥಾ ಕಷ್ಟಕೆಲಸವಾದರೂ ಸುಲಭವಾಗುವದು ಎಂದು ಹೇಳಿದಳು.

ಈ ಕಥೆಯನ್ನು ರಹಮತ್‌ಬೀಬಿ ಎಂಬ ಹುಡುಗಿಯು ಕೇಳಿ ಸಂತೋಷಪಟ್ಟು "ಅಮ್ಮಾ, ಲೋಕದಲ್ಲಿ ಕೀರ್ತಿ ಬರುವ ಕೆಲಸಗಳನ್ನು ನನಗೆ ಬೋಧಿಸಬೇಕು" ಎಂದು ಕೇಳಿಕೊಂಡಳು. ಆಗ ತಾಯಿಯು ಮಗಳಿಗೆ ೧೩ ವರ್ಷದ ವಯಸ್ಸಿನ ಸ್ತ್ರೀಯರು ಕಲಿಯಬೇಕಾದ ಕಾರ್ಯಗಳು ಅಂದರೆ ವಿದ್ಯೆ, ಸುಸ್ವಭಾವ, ಸುಗುಣ, ಶುಚಿ, ಅಶುಚಿ ಮೊದಲಾದವುಗಳನ್ನು ಮತ್ತು ಕ್ರಮ ಶಾಸ್ತ್ರಗಳನ್ನೂ ಕಲಿಸಿ ೧೫ನೇ ವರ್ಷದಲ್ಲಿ ತಮ್ಮ ಶಾಸ್ತ್ರಪದ್ಧತಿಮೇರೆಗೆ ಯೋಗ್ಯನಾದ ವರನಿಗೆ ಅವಳನ್ನು ಮದುವೇಮಾಡಿಕೊಟ್ಟಳು. ಮಗಳು ತನ್ನ ಗಂಡನ ಮನೆಗೆ ಹೋಗುವಾಗ್ಯೆ ತನ್ನ ತಾಯಿಯ ಉಪಕಾರಗಳನ್ನು ಜ್ಞಾಪಿಸಿಕೊಂಡು ಆಕೆಯನ್ನು ಬಿಟ್ಟು ಇರಲಾರದೆ ಅಳುವದಕ್ಕೆ ಪ್ರಾರಂಭಿಸಿದಳು. ಅವಳು ಅಳುವದನ್ನು ಕಂಡು, ತಾಯಿಯೂ ಕಣ್ಣೀರು ಬಿಡುತ್ತಾ ಅವಳನ್ನು ಕುರಿತು "ಎಲೆ ಮಗಳೇ ಕೇಳು. ನೀನು ಇದುವರಿಗೂ ನನ್ನ ಬಳಿಯಲ್ಲಿಯೇ ಇದ್ದೆ. ನಿನ್ನ ದುರ್ಗುಣಗಳನ್ನು ನನ್ನ ವಿನಹಾ ಯಾರೂ ಕಾಣರು. ಈಗ ನೀನು ಪ್ರತ್ಯೇಕವಾಗಿ ಹೊರಟು ಹೋಗ ಬೇಕಾಗಿ ಇದೆ. ಆದ್ದರಿಂದ ನೀನು ಬದುಕಿ ಇರುವವರಿಗೂ ಉಪಯೋಗಕರವಾಗಿ ಇರುವ ಕೆಲವು ಬುದ್ಧಿಮಾತುಗಳನ್ನು ಹೇಳುತ್ತೇನೆ. ಅವುಗಳನ್ನು ಮನಸ್ಸಿಟ್ಟು ಕೇಳು.

[illegible] ಮಗಳಾದ [illegible] ಗುಣವಾವು ?

೧ನೇದು—ದೇವರು ಘನತೆಯನ್ನು ಪುರುಷರಿಗೆ ಹೆಚ್ಚಾಗಿಯೂ, ಸ್ತ್ರೀಯರಿಗೆ ಕಡಿಮೆಯಾಗಿಯೂ ಕೊಟ್ಟಿರುತ್ತಾನೆ. ಇದುವರೆಗೂ ಸ್ವತಂತ್ರರಾಗಿ ಇರುವವರು ಪುರುಷರು ಹೊರತು ಸ್ತ್ರೀಯರಲ್ಲ. ಆದ್ದರಿಂದ ಸ್ತ್ರೀಯರು ಪುರುಷರ ಇಷ್ಟಾನುಸಾರವಾಗಿ ನಡೆಯುವದು ಯುಕ್ತವಾಗಿ ಇದೆ. ಒಂದುವೇಳೆ ಗಂಡನು ತನ್ನ ಸ್ತ್ರೀಯ ತಂದೆ ತಾಯಿಗಳನ್ನು ದೂಷಿಸಿದಾಗ್ಯೂ ಸ್ತ್ರೀಯು ಆತನ ಮಾತಿಗೆ ಎದುರಾಡದೆ ಆತನ ಇಷ್ಟಾನುಸಾರವಾಗಿ ನಡೆದುಕೊಳ್ಳಬೇಕು. ಹೀಗೆ ನಡೆದುಕೊಂಡವಳಿಗೆ ಮೋಕ್ಷವು ಪ್ರಾಪ್ತವಾಗುವದು. ಗಂಡನ ಮಾತನ್ನು ಅಲಕ್ಷ್ಯ ಮಾಡಿದವಳಿಗೆ ಅಪಕೀರ್ತಿಯೂ ನರಕವೂ ಪ್ರಾಪ್ತವಾಗುವವು.

೨ನೇದು—ಸ್ತ್ರೀಯು ತನ್ನ ಗಂಡನಲ್ಲಿ ದ್ವೇಷಮಾಡಕೂಡದು, ನೆಂಟರಿಷ್ಟರನ್ನು ನೋಯಿಸಕೂಡದು, ತನ್ನ ಅತ್ತೆ ಅತ್ತಿಗೆ ನಾದಿನಿಯರೊಂದಿಗೆ ಸಂತೋಷವಾಗಿ ಇರಬೇಕು, ಗಂಡನ ಶಕ್ತಿ ಮೀರಿ ಹೋಗುವಂಥಾ ವಸ್ತುವನ್ನು ಅಪೇಕ್ಷಿಸಕೂಡದು ಮತ್ತು ತನ್ನ ಮನೇಪದಾರ್ಥಗಳಲ್ಲಿ ಯಾವವನ್ನೂ ತನ್ನ ಗಂಡನ ಅನುಮತಿಯಿಲ್ಲದೆ ಯಾರಿಗೂ ಕೊಡಕೂಡದು.

೩ನೇದು— ಸ್ತ್ರೀಯು ಗಂಡನಮನೆಯಲ್ಲಿ ಇರುವಾಗ ತನ್ನ ತಂದೆಯ ಐಶ್ವರ್ಯವನ್ನು ಹೊಗಳಿಕೊಳ್ಳಕೂಡದು, ತನ್ನ ತಂದೆತಾಯಿಗಳು ತನಗೆ ಇಂಥಾ ಪದಾರ್ಥಗಳನ್ನು ಕೊಟ್ಟಿದ್ದಾರೆ ಎಂದು ಗರ್ವಿಸಿ ಇತರರನ್ನು ಧಿಕ್ಕರಿಸಕೂಡದು. ಸ್ತ್ರೀಯು ಮರ್ಯಾದೆ ಇಲ್ಲದವಳಾದರೆ ಅವಳ ತಾಯಿತಂದೆಗಳಿಗೆ ಅಪಮಾನವು ಬರುವದು.

೪ನೇದು—ಸ್ತ್ರೀಯು ತನ್ನ ಅತ್ತೆ ಮಾವಂದಿರ ಮಾತಿಗೆ ಎದುರಾಡದೆ ಅವರ ಇಷ್ಟಾನುಸಾರವಾಗಿ ನಡೆದು ಕೊಳ್ಳಬೇಕು, ಅವರ ವೃದ್ಧಾಪ್ಯದಲ್ಲಿ ಅವರಿಗೆ ತನ್ನ ಶಕ್ತ್ಯಾನುಸಾರ ಸಹಾಯಮಾಡಬೇಕು. ಹೀಗೆ

[illegible]

ಕೊಡದು, ತನ್ನ [illegible] ಅತಿಥಿಗಳಾಗಲೀ ಮನೆಬಂದವರನ್ನು [illegible], ಅವರವರಿಗೆ ತಕ್ಕ ಉಪಚಾರಗಳನ್ನು ಮಾಡಬೇಕಾದುದು.

೧೨ನೆಯದು — ಸ್ತ್ರೀಯು ಯಾವಾಗಲೂ ಸುಳ್ಳು ಹೇಳಬಾರದು; ಸುಳ್ಳು ಸುಳ್ಳಾಗಿ ರೋಗಿ ಎಂದು ನಟಿಸಕೂಡದು; ಮನೆಯ ಕೆಲಸಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಸುಳ್ಳು ನೆವಗಳನ್ನು ಹೇಳಕೂಡದು.

ಈ ನೀತಿವಾಕ್ಯಗಳನ್ನು ಹೇಳಿ, ತಾಯಿಯು ಮಗಳಾದ [illegible]ಬಾಯಿ ಎಂಬುವಳನ್ನು ಅವಳ ಗಂಡನಮನೆಗೆ ಕಳುಹಿಸಿಕೊಟ್ಟಳು. ಅವಳು ತನ್ನ ಗಂಡನಾದ [illegible]ಯ ಮನೆಯಲ್ಲಿ [illegible] ಮುಂದೆ [illegible] ಸಾಕ್ಷಾತ್ [illegible]ಗಿದ್ದಳು.

[illegible]ಬಾಯಿಯು ತನ್ನ ಅತ್ತೆಯೂ ಅತ್ತಿಗೆಯರೂ [illegible] ವೃದ್ಧರಾಗಿ ಇದ್ದರೂ ತನ್ನ [illegible] ನೀತಿಗಳ ಪ್ರಕಾರ ನಡೆದು, [illegible] ಇರುತ್ತಿದ್ದಳು. ಆ ಕಾಲದಲ್ಲಿ ಅವಳ ಅತ್ತೆಗೆ [illegible] ೧೧—೧೨ ವರುಷಗಳ [illegible]. ಆಗ ಮನೆಯಲ್ಲಿ [illegible] ಬಿಟ್ಟಳು [illegible], ಬಹಳ [illegible] ಅವರನ್ನು [illegible] ತನ್ನ [illegible], [illegible] ಅತ್ತೆಗೆ [illegible] ಅವರನ್ನು [illegible] ಕೆಲಸಗಳನ್ನೆಲ್ಲ [illegible] ಮಾಡುತ್ತಿದ್ದಳು [illegible] ಕಾಲದಲ್ಲಿ [illegible] ತನ್ನ [illegible] ಕಾಲದಲ್ಲಿ [illegible]

[illegible]

ಶಂಕರ ಆರಾಧ್ಯ ಚರಿತ್ರೆ ಸಾರ.

ಆದರೆ ಜನರೂ ಪ್ರತಿಯೊಂದರ ಸಂಪತ್ತಿಗೆ ಹಾರೈಸುತ್ತಿದ್ದರು. ಹೀಗೆ ಕೆಲವು ತಿಂಗಳುಗಳಮೇಲೆ ಧನಿಕನ ಅಳಿಯನು ತನ್ನ ಹೆಂಡತಿಯನ್ನು ನೋಡ ಬೇಕೆಂದು ಇಚ್ಛಿಸಿದ ತನ್ನ ಮನೆಗೆ ಬಂದು ಹೆಂಡತಿ ಮತ್ತು [illegible] ಹಾಗೆ ಹೇಳಿದ್ದನೆಂದರೆ:—"ನಾನು ಈ ನನ್ನ ಮಗಳನ್ನು [illegible] ನಿಮ್ಮ ವಶಕ್ಕೆ ಕೊಟ್ಟು ಇರುತ್ತೇನೆ. ಇವಳು ನಿಮ್ಮ ಇಷ್ಟಾನುಸಾರ ವಾಗಿ ನಡೆಯುವಳೋ ಇಲ್ಲವೋ ತಿಳಿಸುವುದು. ಇವಳ ತಾಯಿಯು ಇವ ಳಿಗೆ ತಿಳಿಸುವ ಬುದ್ಧಿಯು ನನಗೆ ಹೇಳಿ ಇರುವುದೇನೆಂದರೆ; ಇವಳು ನಿಮ್ಮ ಅನುಮತಿಯಂತೆ ನಡೆದುಕೊಂಡರೆ ಎಲ್ಲಾ ಒಳ್ಳೆಯದಾಗುವುದು; ಇಲ್ಲ ದಿದ್ದರೆ ಇವಳಿಗೆ ಶಿಕ್ಷೆಯಾಗುವುದು ಮತ್ತು ನಮಗೂ ಇದರಲ್ಲಿ ಅಭಿಮಾನ ವಿರಲಾರದು" ಹೀಗೆಂದು ಹೇಳಿ ಧನಿಕನ ಅಳಿಯನು ತನ್ನ ಮನೆಗೆ ಹೊರಟು ಹೋದನು.

ಅನಂತರದಲ್ಲಿ ೭—೮ ತಿಂಗಳಾದಮೇಲೆ ಬಂದುಬಿದ್ದ ರಮಣೀ ಬಾಲೆಯು ತನ್ನ ಅತ್ತಿಗೆಯೊಡನೆ "ನನ್ನ ಅತ್ತೆ ನನ್ನನ್ನು ಗಂಡನಿಗೆ ಒಪ್ಪಿಸಿ ಹೋ ಯಿತು. ಇನ್ನು ಮೇಲೆ ಇದರಿಂದ ಯಾವ ಕೆಲಸವನ್ನೂ ಮಾಡಿಸುವುದು ನನಗೆ ಯುಕ್ತವಲ್ಲ. ಮನೆಗೆಲಸವನ್ನು ನೀವು ಮಾಡಿದರೆ ಸರಿ; ನನ್ನ ಸ್ವೀಕರಿಸಿದರೆ ಸರಿ; ತನ್ನ ಅಭಿಪ್ರಾಯವಿದ್ದಂತೆ ನಡೆದು ಕೊಳ್ಳುವೆನು" ಎಂದು ಹೇಳಿದಳು. ಈ ಮಾತುಗಳನ್ನು ಆಕೆಯ ಅತ್ತೆಯು ಕೇಳಿ ಕೋಪಿಷ್ಠಳಾಗಿ [illegible] ಬೈದಳು. ಆದಾಗ್ಯೂ ಧನಿಕನ ಮಗಳು ಯಾವ [illegible] ಆಡದೆ ಯಾವಾಗಲೂ ಅತ್ತೆಯ ಮಾತನ್ನು ಮೀರದೆ ಅವಳ ಸೇವೆಯಲ್ಲಿಯೇ ನಿರತಳಾಗಿ ಇದ್ದಳು.

ಹೀಗೆ ಕೆಲವು ದಿನಗಳಾದ ಮೇಲೆ [illegible] ಅಳಿಯನು ತನ್ನ ಹೆಂಡತಿಯನ್ನು ಕುರಿತು "ಎಲೆ ಪ್ರಿಯಳೇ, ನೀನು ಈ ಮನೆಯಲ್ಲಿ ಇರುವುದು ನಿನಗೆ ಹಿತವೋ ಇಲ್ಲವೋ ಹೇಳು. ನನಗೆ ಇಲ್ಲಿ [illegible] ತಿಳಿಸು" ಎಂದು ಕೇಳಿದನು. ಆಗ ಧನಿಕನ ಮಗಳು ತನ್ನ [illegible] ನೋಡಿ, [illegible]

[illegible]

[illegible]

ನಮ್ಮ[illegible] ಮನೆಯಲ್ಲಿ ತನಗೆ [illegible] ಕಳ್ಳತನ[illegible] ಹಣ್ಣು [illegible], ಗಣಿತ, ಕಾವ್ಯ, [illegible] ಮಾಡಲು [illegible] ಕಲಿತು, [illegible] ಆ ಮನೆಗೆ [illegible] ಪ್ರಾರ್ಥನೆ ಮಾಡುತ್ತಲೂ ಇದ್ದರು. ಅನಂತರದಲ್ಲಿ [illegible] ಮನೆಗೆ ಹೋಗಿದ್ದಾಗ, [illegible] ವಿಷಯವಾಗಿ [illegible] ತನಗೆ [illegible]

[illegible] ಅನಂತರದಲ್ಲಿ [illegible] ಕಾಲದಲ್ಲಿ ತನ್ನ [illegible]

[illegible]

ಉತ್ಪತ್ತಿಯಿಂದಾದ ನೀರು ಪರಿಮಾಣ.

೨೪. ಜ್ಯೋತಿಷ.

ಭೂಮಿಗೆ ಚಕ್ರಭ್ರಮಣೆಯುಂಟು ಎಂಬುದೂ ಭೂಗೋಳವು ಸೂರ್ಯನನ್ನು ಸುತ್ತುತ್ತಿರುವದೆಂಬುದೂ.

“ಭಪಂಜರಸ್ಥಿರೋ ಭೂರೇವಾವೃತ್ಯಾವೃತ್ಯ ಪ್ರಾತಿದೈವಸಿಕೌ ಉದಯಾಸ್ತಮಯೌ ಸಂಪಾದಯತಿ ಗ್ರಹನಕ್ಷತ್ರಾಣಾಂ.” (ಆರ್ಯಭಟ.)

ಗ್ರಹ ನಕ್ಷತ್ರಗಳ ಉದಯಾಸ್ತಮಯಗಳಿಗೆ ಹಿಂದೆ ಹೇಳಿದ ಮೂರು ಕಾರಣಗಳಲ್ಲಿ ಭೂಗೋಳಕ್ಕೆ ಚಕ್ರಭ್ರಮಣೆ ಉಂಟಾಗುವದರಿಂದಲೇ ಉದಯಾಸ್ತಮಯಗಳಾಗುವವೆಂಬ ಕಾರಣವೇ ನಿಜವಾದದ್ದೆಂದು ಕೆಳಗೆ ಬರೆದಿರುವ ಪ್ರಮಾಣಗಳಿಂದ ಸರ್ವರಿಗೂ ಸ್ಪಷ್ಟವಾಗುವದೆಂದು ನಂಬುತ್ತೇವೆ.

ಯಾವಗ್ರಹವು ಮತ್ತೊಂದು ಗ್ರಹದ ಸುತ್ತಲೂ ಸುತ್ತುವದೋ ಅಂಥಾ ಗ್ರಹಕ್ಕೆ ಉಪಗ್ರಹವೆಂದೂ ಉಳಿದ ಗ್ರಹಕ್ಕೆ ಪ್ರಧಾನ ಗ್ರಹವೆಂದೂ ಹೆಸರು. ಚಂದ್ರಗ್ರಹವು ಭೂಗೋಳವನ್ನು ಸುತ್ತುವದು. ಆದ್ದರಿಂದ ಚಂದ್ರನು ಭೂಮಿಗೆ ಉಪಗ್ರಹವಾಯಿತು; ಭೂಮಿಯು ಪ್ರಧಾನಗ್ರಹವಾಯಿತು. ಸರ್ವಗ್ರಹಗಳ ಕೇಂದ್ರಸ್ಥಾನಕ್ಕೂ ಸೂರ್ಯಗ್ರಹವೇ ಕಾರಣಭೂತವಾದದ್ದು. “ಮರೀಚೇರಸ್ತು ಯಃ ಪ್ರೋಕ್ತೋ ರಶ್ಮಿರ್ನಕ್ಷತ್ರಸ್ತೋಯದಃ । ವಿಚೈವ ತಥಾ ರಶ್ಮಿ ರ್ಬ್ರಹ್ಮಂ ಪ್ರಪುಷ್ಣಾತಿ ಸರ್ವದಾ । ವಿದ್ಯುತ್ವೇನಾ ಸೂರ್ಯರಶ್ಮಿ ಸದಾ ಪುಷ್ಣಾತಿ ನಿತ್ಯಶಃ । ಸೂರ್ಯರಶ್ಮಿಸ್ಸುಷುಮ್ನಾಖ್ಯ ಸ್ಸ್ಥಿತ ಸ್ಸೋಮ ಚಂದ್ರಮಸಃ । ಸಂಯದ್ವಸುರಿತಿ ಖ್ಯಾತೋ ಯಃ ಪುಷ್ಣಾತಿ ಲೋಹಿತಂ । ಬೃಹಸ್ಪತಿಂ ಪ್ರಪುಷ್ಣಾತಿ ರಶ್ಮಿ ರರ್ವಾವಸು ಪ್ರಭೋಃ । ಶನೈಶ್ಚರಂ ಪ್ರಪುಷ್ಣಾತಿ ಸಪ್ತಮಸ್ತು ಸ್ವರಾಡ್ವಸುಃ” ಎಂಬ ಕೂರ್ಮಪುರಾಣದ ವಚನಗಳ ರೀತಿಯಾಗಿ ಸೂರ್ಯಗ್ರಹವು ಸರ್ವಪ್ರಧಾನಗ್ರಹವೆಂದೂ, ಸೂರ್ಯನಗ್ರಹದ ಬಳಿ ಬುಧಗ್ರಹ, ಆ ಮೇಲೆ ಶುಕ್ರಗ್ರಹ, ತದನಂತರ ಭೂಗ್ರಹ, ಆ ಮೇಲೆ ಕುಜ ಗುರು ಶನೈಶ್ಚರಗ್ರಹಗಳೂ, ಈ ಗ್ರಹಗಳು ಇರುವಿಕೆ ಸೂರ್ಯನಿಗಿಂತ ದೂರ

[illegible]

[illegible]

[illegible]

[illegible]

[illegible] ಹೀಗೆ [illegible]

[illegible]

[illegible]

[illegible]

[illegible] ನಾವು ಪ್ರತ್ಯಕ್ಷವಾಗಿ ಗ್ರಹಗಳನ್ನು [illegible]

[illegible]. ಹೀಗಿರುವಲ್ಲಿ ಭೂಗೋಳ [illegible]

[illegible]

[illegible] ಈ ಗ್ರಹಗಳಲ್ಲಿ [illegible]

[illegible] ಇಲ್ಲವೆ ? [illegible]

[illegible]

[illegible]

[illegible] ಭೂಮಿಯನ್ನು [illegible]

[illegible]. ನಮ್ಮ ಗ್ರಂಥಗಳಲ್ಲಿ ಭೂಗೋಳಕ್ಕೆ “[illegible]” [illegible]

[illegible] ಭೂಗೋಳಕ್ಕೆ [illegible]

[illegible]. ಯಾತಕೆಂದರೆ, “ಭುಜಂಗಾಕ್ಷಿ” [illegible]

[illegible]

[illegible]

[illegible]

[illegible]

[illegible] ತಿರುಗುತ್ತಿವೆ [illegible] ಹೇಳಿದೆ.

[illegible].—[illegible]

[illegible]

[illegible]

[illegible]

ದಿಂದ ಈ ಗ್ರಹಗಳ ಕಕ್ಷ್ಯೆ ಅಂದರೆ ನಡೆಯುವ ಮಾರ್ಗವು ಸೂರ್ಯನ ಕಕ್ಷ್ಯೆಯ ಒಳಗೂ, ಗುರ್ವಾದಿ ಇತರ ಗ್ರಹಗಳ ಕಕ್ಷ್ಯೆಯು ಸೂರ್ಯಕಕ್ಷ್ಯೆಯ ಹೊರಗೂ ಇರುವದೆಂದು ಸಿದ್ಧವಹುತ್ತದೆ. ಹೀಗೆ ಇರುವಂಥ ಗ್ರಹಗಳಿಗೆ ಚಕ್ರಭ್ರಮಣ ವಿಲ್ಲದ ಪಕ್ಷದಲ್ಲಿ ಜ್ಯೋತಿಷ್ಯರು ಹೇಳುವಂತೆ ಈ ಗ್ರಹಗಳ ಅಹೋರಾತ್ರಿಗಳ ಪ್ರಮಾಣವು ಸೂರ್ಯನ ಗತಿಯಿಂದಲೂ ಈ ಗ್ರಹಗಳ ಸ್ವಂತ ಗತಿಯಿಂದಲೂ ಸಂಘಟಿಸುವದು ಅಸಾಧ್ಯವಾಗಿ ಕಾಣುತ್ತದೆ. ಹೀಗೆ ಆಗುವದನ್ನರಿತು ಕೇವಲ ಪುರಾಣಿಕರು ಉತ್ತರಧ್ರುವದ ಬಳಿ ಅನೇಕ ಯೋಜನ ವಿಸ್ತೀರ್ಣವುಳ್ಳ ಮೇರು ಎಂಬ ಪರ್ವತವಿರುವದರಿಂದ ಆ ಪರ್ವತದ ದೆಸೆಯಿಂದ ಅಹೋರಾತ್ರಿಗಳುಂಟಾಗುವವೆಂದೂ ಹೇಳುತ್ತಾರೆ; ಇದರ ಈ ವಿಷಯವಾಗಿ "ಯದಿ ನಿಶಾಜನಕಃ ಕನಕಾಚಲಃ ಕಿಮು ತದಂತರಗಃ ಸ ನ ದೃಶ್ಯತೇ । ಉದಗಯಂ ನನು ಮೇರುರಥಾಂಶುಮಾನ್ ಕಥಮುದೇತಿ ಚ ದಕ್ಷಿಣಭಾಗತಃ ॥" ಎಂಬ ಭಾಸ್ಕರಾಚಾರ್ಯರ ಗೋಲಾಧ್ಯಾಯದಲ್ಲಿನ ಶ್ಲೋಕದಿಂದ ನಿರಾಕರಿಸಲ್ಪಟ್ಟಿದೆ ಎಂದು ಹೇಳುವದು ಕೇವಲ ಮೌಢ್ಯ ಹೊರತು ಎಂಬುದು ಸ್ಪಷ್ಟವೇ ಸರಿ. ಮತ್ತು ನಮಗೆ ಹಗಲಾಗಿರುವಾಗ ಅಮೆರಿಕಾ ದೇಶದಲ್ಲಿ ರಾತ್ರಿಯಾಗಿರುವದೆಂಬುವದಕ್ಕೆ ಪೂರ್ವದಲ್ಲೇ ಪ್ರಮಾಣಗಳನ್ನು ತೋರಿಸಿ ಇದ್ದೇವಷ್ಟೇ. ಆದ್ದರಿಂದ ನಮಗೂ ಅಮೆರಿಕಾ ದೇಶದವರಿಗೂ ಮಧ್ಯ ಈ ಮೇರುಪರ್ವತ ವಿರಬೇಕಾಗುವದು. ನಮ್ಮ ದೇಶದಿಂದ ಅನೇಕರು ಆ ದೇಶಕ್ಕೆ ಹೋಗ ಬೇಕಾದಲ್ಲಿ ಉತ್ತರ ದಕ್ಷಿಣ ಮಾರ್ಗಗಳ [illegible] ಹೋಗ ಬಹುದು. ಹಾಗೆ ಹೋಗುವವರಿಗೆ ಆ ಪರ್ವತ ಅಡ್ಡ ಬಾರದೆ ಇರುವದರಿಂದ ಅಂಥಾ ಪರ್ವತವಿದೆಯೆಂದು ಹೇಳುವದು [illegible] ಮಾತಾಗಿರುತ್ತದೆ.

ನಮ್ಮ ಜ್ಯೋತಿಷ್ಯಗ್ರಂಥಕಾರರೂ [illegible] ನಕ್ಷತ್ರಗಳಿಗೆ ಎಂದು ಅನೇಕ [illegible] ಗ್ರಹಗಳಲ್ಲಿ ನಕ್ಷತ್ರ [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible] ನಕ್ಷತ್ರ [illegible]

[illegible]

ನಿದೆ. ಇದು [illegible]

ನಕ್ಷತ್ರಕ್ಕೆ [illegible] ಎಷ್ಟು ದೂರದಲ್ಲಿದೆ [illegible]

ಲ್ಲವೆ. ಉದಾಹರಣೆ ನಕ್ಷತ್ರಗಳು [illegible]

[illegible] ಎಂದು ಗೊತ್ತಾಗುತ್ತ [illegible]

ನಾಗಿ ಗ್ರಹಗಳಿಗೆ [illegible]

ಗ್ರಹಗಳ ಸ್ಥಾನವನ್ನೂ ಈ ಗ್ರಹಗಳನ್ನು [illegible]

[illegible]

[illegible]

[illegible]

ಭೂಗೋಳದ [illegible]

[illegible] ಭೂಗೋಳಶಾಸ್ತ್ರ [illegible]

ಶನಿಗ್ರಹ.—[illegible] ಸೂರ್ಯನಿಂದ [illegible]

[illegible] ಭೂಗೋಳಶಾಸ್ತ್ರ [illegible]

ಲಕ್ಷಣವನ್ನು [illegible] ಜ್ಯೋತಿಷ್ಯರು [illegible]

ಗ್ರಹವು ಭೂಮಿಯನ್ನು ಸುತ್ತಿ ಬರಬೇಕಾದಲ್ಲಿ [illegible]

೬೩೦೦೦ [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible] ವ್ಯವಹಾರದಲ್ಲಿ [illegible]

[illegible] ಪ್ರದೇಶದಲ್ಲಿ [illegible] ಗೊತ್ತುಪಡಿಸಿ ನೋಡಿದ್ದಾರೆ. [illegible]

[illegible]

[illegible]

[illegible]

ಊರಿಗೆ ಹಬ್ಬವಾದರೆ ನಾಯಿಗೆ ಲೂಟ್ಸ್.

ಡಿಸೆಂಬರು ತಾರೀಖು ೧೨.—ಮೈಸೂರು ಚೀಫ್ ಕೋರ್ಟಿನ ಅಡ್ವೋಕೇಟರಾಗಿ ದಾಖಲಾಗುವದಕ್ಕೆ ಅರ್ಹರಾಗಿ ಇರುವವರು—(೧) ೧೮೯೭ನೇ ಇಸವಿ ಫೆಬ್ರುವರೀ ೧೮ರ ಅಡ್ವೋಕೇಟ್ ಮತ್ತು ಪ್ಲೀಡರ್ ರೂಲ್ಸ್ ಅನುಸರಿಸಿ ಅಡ್ವೋಕೇಟರಾಗಿ ದಾಖಲ್ಮಾಡಲ್ಪಟ್ಟವರು. (೨) ಇಂಗ್ಲೆಂಡ್ ಅಥವಾ ಐರ್ಲೆಂಡ್ ಕೋರ್ಟುಗಳ ಯಾವದಾದರೂ ಒಂದರ ಬ್ಯಾರಿಸ್ಟರು ; ಸ್ಕಾಟ್‌ಲ್ಯಾಂಡಿನಲ್ಲಿರುವ ಫ್ಯಾಕಲ್ಟಿ ಆಫ್ ಅಡ್ವೋಕೇಟ್ಸ್ ಸಮೂಹದ ಯಾವದಾದರೂ ಒಬ್ಬ ಮೆಂಬರು. (೩) ಬ್ರಿಟಿಷ್ ಇಂಡ್ಯದೊಳಗಣ ಯಾವದಾದರೂ ಹೈ ಕೋರ್ಟ್ ಆಫ್ ಜ್ಯುಡಿಕೇಚರ್ ಎಂಬ ಹೈ ಕೋರ್ಟಿನ ಒಬ್ಬ ಅಡ್ವೋಕೇಟ್, ವಕೀಲ್ ಅಥವಾ ಅಟಾರ್ನಿ ಮತ್ತು ಯಾವದಾದರೂ ಬ್ರಿಟಿಷ್ ಇಂಡಿಯಾ ಯೂನಿವರ್ಸಿಟಿಯಲ್ಲಿ ಎಮ್. ಎಲ್. ಅಥವಾ ಬಿ. ಎಲ್. ಡಿಗ್ರಿಯನ್ನು ಪಡೆದವರು, ಅಥವಾ ಫಸ್ಟ್‌ಗ್ರೇಡ್ ಪ್ಲೀಡರುಗಳಿಗೋಸ್ಕರ ಮದ್ರಾಸ್ ಹೈ ಕೋರ್ಟಿನವರು ವಿಧಿಸಿರುವ ಪರೀಕ್ಷೆಯನ್ನು ಕೊಟ್ಟು ಗೌರವ ಮತ್ತು ಸದ್ಗುಣಗಳ ಬಗ್ಗೆ ಸರ್ಟಿಫಿಕೇಟನ್ನು ಪಡೆದು ಇರುವವರು.

ಫಸ್ಟ್ ಗ್ರೇಡ್ ಪ್ಲೀಡರಾಗಿ ದಾಖಲಾಗುವದಕ್ಕೆ ಅರ್ಹರಾಗಿರುವವರು.—(೧) ೧೮೯೭ನೇ ಇಸವಿ ಫೆಬ್ರುವರೀ ೧೮ರ ಅಡ್ವೋಕೇಟ್ ಮತ್ತು ಪ್ಲೀಡರುಗಳ ರೂಲ್ಸ್ ಅನುಸರಿಸಿ ಫಸ್ಟ್‌ಗ್ರೇಡ್ ಪ್ಲೀಡರಾಗಿ ದಾಖಲ್ಮಾಡಲ್ಪಟ್ಟಿರುವವರು ಅಥವಾ ಆ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟವರು. (೨) ಫಸ್ಟ್ ಗ್ರೇಡ್ ಪ್ಲೀಡರುಗಳಿಗೋಸ್ಕರ ಚೀಫ್ ಕೋರ್ಟಿನವರು ವಿಧಿಸಿರುವ ಪರೀಕ್ಷೆಯಲ್ಲಿ ತೇರ್ಗಡೆಯಾದವರು.

ಸೆಕೆಂಡ್ ಗ್ರೇಡ್ ಪ್ಲೀಡರಾಗಿ ದಾಖಲಾಗುವದಕ್ಕೆ ಅರ್ಹರಾಗಿರುವವರು.—(೧) ೧೮೯೭ನೇ ಇಸವಿ ಫೆಬ್ರುವರೀ ೧೮ರ ಅಡ್ವೋಕೇಟ್ ಮತ್ತು ಪ್ಲೀಡರುಗಳ ರೂಲ್ಸ್ ಅನುಸರಿಸಿ ಸೆಕೆಂಡ್ ಗ್ರೇಡ್ ಪ್ಲೀಡರುಗಳಾಗಿ ದಾಖಲ್ಮಾಡಲ್ಪಟ್ಟವರಲ್ಲರು. (೨) ಸೆಕೆಂಡ್ ಗ್ರೇಡ್ ಪ್ಲೀಡರುಗಳಿಗೋಸ್ಕರ ಚೀಫ್ ಕೋರ್ಟಿನವರು ವಿಧಿಸಿ ಇರುವ ಪರೀಕ್ಷೆಯನ್ನು ಕೊಟ್ಟಿರುವವರು.

ಈ ಮೇಲಿನವುಗಳಲ್ಲಿ (೧) ಗುರ್ತಿನ ನಿಬಂಧನೆಗಳಲ್ಲಿ ಮೊದಲನೇದನ್ನು ಬಿಟ್ಟು ಮಿಕ್ಕ ಎರಡೂ ಯಾವದಾದರೂ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಷರತ್ತುಗಳಿಗೆ ಒಳಪಟ್ಟು ದಾಖಲ್ಮಾಡಲ್ಪಟ್ಟವರಿಗೆ ಲಗಾವಾಗುವದಿಲ್ಲ.

ಫಸ್ಟ್‌ಗ್ರೇಡ್ ಪ್ಲೀಡರ್ ಪರೀಕ್ಷೆಯನ್ನು ಕೊಡುವದಕ್ಕೆ ಯೋಗ್ಯರಾಗಿರುವವರು— (೧) ಯಾವದಾದರೂ ಬ್ರಿಟಿಷ್ ಇಂಡಿಯಾ ಯೂನಿವರ್ಸಿಟಿಗಳ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸರ್ಟಿಫಿಕೇಟ್ ಹಾಜರ್ಮಾಡುವವರು. (೨) ಚೀಫ್ ಕೋರ್ಟಿನಲ್ಲಾಗಲೀ ಡಿಸ್ಟ್ರಿಕ್ಟ್ ಕೋರ್ಟಿನಲ್ಲಾಗಲೀ ತಿಂಗಳಿಗೆ ೧೦೦ ರೂಪಾಯಿಗೆ ಕಡಿಮೆಯಿಲ್ಲದ ಸಂಬಳವುಳ್ಳ ಯಾವದಾದರೂ ಒಂದು ಕೆಲಸವನ್ನು ೩ ವರ್ಷಗಳಿಗೆ ಕಡಿಮೆಯಿಲ್ಲದ

ಲಾಯುಬೀನಿಸಿ ವಹಿಸಿದ್ದರೆಂದು ಆ ಕೋರ್ಟಿನ ಜಡ್ಜಿಯವರಿಂದ ಸರಟಿಫಿಕೇಟನ್ನು ತರುವವರು.

ಸೆಕೆಂಡ್ ಗ್ರೇಡ್ ಪ್ಲೀಡರ್ ಪರೀಕ್ಷೆಯನ್ನು ಕೊಡುವದಕ್ಕೆ ಯೋಗ್ಯರಾಗಿರುವವರು.—(೧) ಮಿಡಲ್ ಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸರ್ಟಿಫಿಕೇಟನ್ನು ಹಾಜರ್ಪಡಿಸುವವರು; (೨) ಈ ಸೀಮೆಯ ಯಾವ ಕೋರ್ಟಿನಲ್ಲಾಗಲೀ ತಿಂಗಳಿಗೆ ೨೫ ರೂಪಾಯಿಗೆ ಕಡಿಮೆಯಿಲ್ಲದ ಸಂಬಳವುಳ್ಳ ಯಾವದಾದರೂ ಒಂದು ಕೆಲಸವನ್ನು ೫ ವರ್ಷಗಳಿಗೆ ಕಡಿಮೆಯಿಲ್ಲದೆ ಲಾಯುಬೀನಿಸಿ ವಹಿಸಿದ್ದರೆಂದು ಅಂಥಾ ಯಾವದಾದರೂ ಕೋರ್ಟಿನ ಜಡ್ಜಿಯವರಿಂದ ಸರಟಿಫಿಕೇಟನ್ನು ತರುವವರು.

೧೮೭೪ನೇ ಇಸವಿ ಡಿಸೆಂಬರು ತಾರೀಖು ೨೦ರವರೆಗಿನ ಕಾಲಸ್ಥಿತಿಯ ರಿಪೋರ್ಟು

ಬೆಂಗಳೂರು ಡಿಸ್ಟ್ರಿಕ್ಟ್.—ಪೈರು ಚೆನ್ನಾಗಿವೆ. ಕೆಲವು ಸ್ಥಳಗಳಲ್ಲಿ ರಾಗಿ ಕೊಯಿಲುವಾಯಿತು. ತೆನೆಸಾಗುವದಕ್ಕೆ ಇನ್ನೂ ಮಳೆ ಬೇಕು. ಜನರು ಸೌಖ್ಯವಾಗಿ ಇದ್ದಾರೆ. ಕುಡಿಯುವದಕ್ಕೆ ನೀರೂ ದನಗಳಿಗೆ ಮೇವೂ ಯಥೇಷ್ಟವಾಗಿವೆ. ರೂಪಾಯಿಗೆ ಅಕ್ಕಿ ೧೦॥ ಸೇರು, ರಾಗಿ ೩೦ ಸೇರು, ಹುರಳಿ ೨೩ ಸೇರು.

ಕೋಲಾರ ಡಿಸ್ಟ್ರಿಕ್ಟ್.—ಮಳೆ ಸಾಲದು. ಪೈರು ಕೆಲವುಕಡೆ ಚೆನ್ನಾಗಿದೆ; ಕೆಲವುಕಡೆ ಒಣಗಿಹೋಗುತ್ತಲೂ ಇದೆ. ಜನರು ಸೌಖ್ಯವಾಗಿದ್ದಾರೆ. ನೀರಿಗೂ ದನಗಳ ಮೇವಿಗೂ ಕಡಿಮೆಯಿಲ್ಲ. ರೂಪಾಯಿಗೆ ಅಕ್ಕಿ ೧೧—೧೪ ಸೇರು. ರಾಗಿ [illegible] ಸೇರು.

ತುಮಕೂರು ಡಿಸ್ಟ್ರಿಕ್ಟ್.—ತಿಪಟೂರು ಮತ್ತು [illegible] ಪೈರು ಚೆನ್ನಾಗಿದೆ; ಇತರ ತಾಲ್ಲೂಕುಗಳಲ್ಲಿ ಎಳೇ ಪೈರು ಬಾಡಿಹೋಗುತ್ತಾ ಇದೆ. ಮಧುಗಿರಿ ಮತ್ತು ಚಿಕ್ಕನಾಯಕನಹಳ್ಳಿಗಳ ಕೆಲವು ಪ್ರದೇಶಗಳಲ್ಲಿ ಕಡಲೇ ಪೈರಿಗೆ ಮಳೆ ಬೇಕು. ಚಳ್ಳಕೆರೆಯಲ್ಲಿ ಮೆಣಸಿನಕಾಯಿಗೆ ಕೊಳೇರೋಗ ತಗಲಿದೆ. ಇನ್ನು ಕೆಲವು ಸ್ಥಳಗಳಲ್ಲಿ ಕಡಲೆ, ಗೋಧಿ, ನವಣೆ ಮುಂತಾದವುಗಳನ್ನು ಬಿತ್ತಿದರು. ಪಾವಗಡ, ಮದ್ದಗಿರಿ, ಚಿತ್ರದುರ್ಗ, ಚಿಕ್ಕನಾಯಕನ ಹಳ್ಳಿ, ಚಳ್ಳಕೆರೆ ತಾಲ್ಲೂಕುಗಳಲ್ಲಿ ಭತ್ತದ ಪೈರಾಗಿದೆ. ಸಿರ್ಯ, ಮದ್ದಗಿರಿ ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿ ನಾಟಿರಾಗಿಯು. [illegible] ಅನೇಕ ಪ್ರದೇಶಗಳಲ್ಲಿ ರಾಗಿ, ಸಾವೆ, ಸಜ್ಜೆ, ಮೆಣಸಿನಕಾಯಿ, ಹರಳು, [illegible] ತೆಂಗಿನಕಾಯಿ, ಅಡಿಕೆ ಇವುಗಳ ಫಸಲೂ, ಪಾವಗಡ, [illegible] ತಾಲ್ಲೂಕುಗಳಲ್ಲಿ ಭತ್ತದ ಫಸಲೂ ಆದವು. ಜನರು ಸೌಖ್ಯವಾಗಿದ್ದಾರೆ [illegible]

[illegible] ಸಾಕಾಗುವುದೇ?

[illegible] ಬರುತ್ತಿರುವುದು. ಉಳಿಯುವ ನೀರೂ ದನಗಳ ಮೇವೂ ಸಿಕ್ಕ [illegible] ರೂಪಾಯಿಗೆ ಅಕ್ಕಿ ೧೦ ಸೇರು, ರಾಗಿ ೩೭ ಸೇರು, ಹುರಳಿ ೨೬ ಸೇರು.

ತುಮಕೂರು ಡಿಸ್ಟ್ರಿಕ್ಟ್—ಪೈರು ಚೆನ್ನಾಗಿದೆ. ಹೈನುರಾಗಿ ಕುಯಿಲಾಗುತ್ತಾ ಇದೆ. ಜನರು ಸೌಖ್ಯವಾಗಿದ್ದಾರೆ. ನೀರೂ ದನಗಳ ಮೇವೂ ಸಾಕು. ರೂಪಾಯಿ ಅಕ್ಕಿ ೧೦ ಸೇರು, ರಾಗಿ ೨೪ ಸೇರು, ಹುರಳಿ ೨೮ ಸೇರು.

ಹಾಸನ ಡಿಸ್ಟ್ರಿಕ್ಟ್—ಮಾವಿನಕೆರೆಯಲ್ಲಿ ಜೋಳ, ರಾಗಿ, ಹರಳು, ತೊಗರಿ ಮಳೆಯಿಲ್ಲದ್ದರಿಂದ ಒಣಗಿ ಹೋದವು. ಇತರ ಸ್ಥಳಗಳಲ್ಲಿ ಪೈರು ಚೆನ್ನಾಗಿದೆ. ಭತ್ತ, ರಾಗಿ, ಜೋಳ, ಹುರಳಿ ನವಣೆ, ಸಾಮೆ, ಮೆಣಸಿನಕಾಯಿ, ಉದ್ದು, ತೊಗರಿ, [illegible] ಇವುಗಳ ಬೆಳೆ ಬಂದಿದೆ. [illegible]ಹಳ್ಳಿಯಲ್ಲಿ ಅಡಿಕೆಯೂ, ಏಲಕ್ಕಿಯೂ, [illegible] ತಾಲ್ಲೂಕುಗಳಲ್ಲಿ ಅಡಿಕೆಯೂ ಆದವು. ಜ್ವರ, ಕೆಮ್ಮಲು ಹೆಚ್ಚಾಗಿ [illegible] ಜನರನ್ನು ಬಾಧಿಸುತ್ತಿವೆ. ದನಗಳು ನಗರದಲ್ಲಿ ಬಾಯಿ ರೋಗ [illegible], [illegible]ದಲ್ಲಿ ಗಂಟಲು ರೋಗದಿಂದಲೂ ಸಾಯುತ್ತವೆ. ರೂಪಾಯಿ ಅಕ್ಕಿ ೮—೧೧ ಸೇರು, ರಾಗಿ ೨೫—೩೦ ಸೇರು, ಜೋಳ ೨೦—೩೮ ಸೇರು.

ಕೋಲಾರ ಡಿಸ್ಟ್ರಿಕ್ಟ್—ಬೆಳೆ ಚೆನ್ನಾಗಿದೆ. ಕಬ್ಬು ಗೋಧಿಗಳನ್ನು ಬಿತ್ತಿದರು. ಭತ್ತ, ರಾಗಿ, ಸಾಮೆ, ಕಬ್ಬು, ಜೋಳ, ಹುರಳಿ ಇವುಗಳ ಫಸಲು ಕಟಾವಾಯಿತು. ಮೆಣಸಿನಕಾಯಿ, ಏಲಕ್ಕಿ, ಅಡಿಕೆ, ಕಾಫಿ ಇವುಗಳ ಕೊಯಿಲಾಗುತ್ತಿದೆ. ಕೊಪ್ಪದ ತಾಲ್ಲೂಕಿನಲ್ಲಿ ಜನರು ಜ್ವರದಿಂದ ಬಾಧೆಪಡುತ್ತಾರೆ. ನೀರಿಗೂ ದನಗಳ ಮೇವಿಗೂ ಕೊರತೆ ಯಿಲ್ಲ. ರೂಪಾಯಿ ಅಕ್ಕಿ ೧೨—೧೭ ಸೇರು, ರಾಗಿ ೨೬—೩೦ ಸೇರು,

೭. ವೃತ್ತಾಂತ ಸಂಗ್ರಹ.

ಲಾರ್ಡ್ ಕರ್ಜನ್ ಸಾಹೇಬರವರ ಸ್ವದೇಶಾಭಿಗಮನ.

ಕಳೆದ ೭ ವರ್ಷಗಳಿಂದ ಲಾರ್ಡ್ ಕರ್ಜನ್ ಸಾಹೇಬರವರು ನಮ್ಮ ಇಂಡಿಯಾ ದೇಶದ ರಾಜ್ಯಭಾರವನ್ನು ಬಹಳ [illegible] ಜನರ ಕ್ಷೇಮಾಭಿವೃದ್ಧಿಯಲ್ಲಿಯೇ ಪೂರ್ಣ [illegible], ಸ್ವಜನಗಳಲ್ಲಿ ವಿರೋಧ ಬಂದರೂ ಲಕ್ಷ್ಯಮಾಡದೆ, ರಾಜ್ಯಭಾರವ [illegible] ಈ ದೇಶದ ಸಂಸ್ಥಾನಾಧಿಪತಿಗಳೂ ಪ್ರಜೆಗಳೂ ಕೂಡ ತಮ್ಮ [illegible] ಕೃತಜ್ಞತೆಯನ್ನೂ [illegible] ಪತ್ರಿಕೆಗಳನ್ನು [illegible]. ಈ ಪತ್ರಿಕೆ

ಯನ್ನು ಒಪ್ಪಿಸುವದಕ್ಕೋಸ್ಕರ ನಮ್ಮ ಸಂಸ್ಥಾನದಿಂದಲೂ ಶ್ರೀಮನ್ಮಹಾರಾಜರವರ ಭಾವಮೈದುನರಾದ ಮ॥ ರಾ॥ ರಾ॥ ಭಕ್ಷೀ ಬಸಪ್ಪಾಜಿ ಅರಸಿನವರೂ, ಮ॥ ರಾ॥ ರಾ॥ ಅಡ್ವೊಕೇಟ ರಾಜಾರಾಯರೂ, ಮ॥ ರಾ॥ ರಾ॥ ಅಡ್ವೊಕೇಟ ರಂಗಾಚಾರ್ಯರೂ, ಮ॥ ರಾ॥ ರಾ॥ ಬಿಲಿಗಿರಿ ಪಾಪಣ್ಣನವರೂ ಹೋಗಿದ್ದರು. ಈ ಪತ್ರಿಕೆಯನ್ನು ಇಲ್ಲಿ ಕೆಳಗೆ ಹಾಕಿದ್ದೇವೆ.

ಬೊಂಬಾಯಿಯಲ್ಲಿ ಪಿಂಡೀಬಜಾರ್, ಮುಂಬಾದೇವಿ, ಕಾಲ್ಬಾದೇವಿ, ಎಸ್ಪ್ಲನೇಡ ಎಂಬ ಬೀದಿಗಳನ್ನೂ, ಮಾರ್ಕೆಟ ಮೊದಲುಗೊಂಡು ಸಮುದ್ರತೀರದವರಿಗೂ ಇರುವ ಎಲ್ಲಾ ಬೀದಿಗಳನ್ನೂ ಧ್ವಜಪತಾಕತೋರಣಾದಿಗಳಿಂದಲೂ, ರೈಪನ್ ಸಾಹೇಬರವರ ಭಾವಚಿತ್ರ ಪಟಗಳಿಂದಲೂ, ಅಲ್ಲಲ್ಲಿ ಅವರ ನಾಮಾಂಕಿತವಾದ ಬರವಣಿಗೆಗಳಿಂದಲೂ ಅಲಂಕಾರ ಮಾಡಿದ್ದರು. ದಾರಿಯಲ್ಲಿ ರೈಪನ್ ದೊರೆಯನ್ನು ನೋಡುವದಕ್ಕೋಸ್ಕರ ಗಂಡಸರಿಗೂ ಹೆಂಗಸರಿಗೂ ಪ್ರತ್ಯೇಕಪ್ರತ್ಯೇಕವಾಗಿ ಗ್ಯಾಲರಿಗಳನ್ನು ಮಾಡಿದ್ದರು. ಆ ಅಪಾರವಾದ ಉತ್ಸವದಿನ ಸರಕಾರದ ಉದ್ಯೋಗಸ್ಥರಿಗೂ ವರ್ತಕಸ್ಥಾನಗಳಲ್ಲಿನ ಎಲ್ಲಾ ಕೆಲಸಗಾರರಿಗೂ ರಜಾಸಿಕ್ಕಿತ್ತು. ಆದಿನ ಅನೇಕಸಾವಿರ ಜನರು ಈ ಉತ್ಸವವನ್ನು ನೋಡುವ ಕುತೂಹಲವುಳ್ಳವರಾಗಿ ಅಲ್ಲಲ್ಲಿ ನಿಂತಿದ್ದರು.

ಲಾರ್ಡ್ ರೈಪನ್ ದೊರೆಯವರು ಡಿಸೆಂಬರು ೧೯ನೇ ತಾರೀಖಿನ ದಿನ ಗವರ್ನ್ಮೆಂಟ್ ಹೌಸ ಎಂಬ ನಿವಾಸವನ್ನು ಬಿಟ್ಟು ಟೌನ್ ಹಾಲಿಗೆ ಹೋಗಿ, ಅಲ್ಲಿ ವಿಜ್ಞಾಪನ ಪತ್ರಿಕೆಗಳನ್ನು ಪರಿಗ್ರಹಿಸಿ, ಅವುಗಳಿಗೆ ಪ್ರತ್ಯುತ್ತರಗಳನ್ನು ಹೇಳಿ, ಅಲ್ಲಿಂದ ಹೊರಟು, ಬೊಂಬಾಯಿ ಪಟ್ಟಣದಲ್ಲಿರುವ ಅನೇಕ ನೇಟಿವ ದೊಡ್ಡ ಮನುಷ್ಯರೊಡನೆಯೂ, ನಾನಾ ವಾದ್ಯವಿಶೇಷಗಳೊಡನೆಯೂ, ಮೊದಲು ಎಲ್ಫಿನ್ಸ್ಟನ್ ಹಾಲಿಗೂ ಆಮೇಲೆ ಗ್ರ್ಯಾಂಟಮೆಡಿಕಲ ಕಾಲೇಜಿಗೂ ಹೋಗಿ, ಅಲ್ಲಲ್ಲಿ ಸನ್ಮಾನಗಳನ್ನು ಪಡೆದು, ಬೊಂಬಾಯಿ ಪಟ್ಟಣದ ಮುಖ್ಯವಾದ ಬೀದಿಗಳಲ್ಲೆಲ್ಲಾ ಉತ್ಸವದೊಡನೆ ಹೋಗಿ, ಅಲ್ಲಿಂದ ಜೇಮ್ಸೆಟಜಿಜೀಜೀಭಾಯಿಯವರ ಫಾರ್ಸೀ ಧರ್ಮ ಪಾಠಶಾಲೆಯ ಮಾರ್ಗವಾಗಿ ಹೊರಟು, ಅಲ್ಲಿ ದಿವ್ಯವಸ್ತ್ರಾಲಂಕೃತರಾಗಿ ನಿಂತಿದ್ದ ಫಾರ್ಸೀ ವಿದ್ಯಾರ್ಥಿನಿಗಳಾದ ಬಾಲಿಕೆಯರನ್ನು ನೋಡುತ್ತಾ ತಮಗೆ ಶುಭವಾಗಲೆಂದು ಅವರು ಹೇಳುವ ಗಾನಗಳನ್ನು ಕೇಳಿ ಆನಂದಿಸುತ್ತಾ ನಿಜನಿವಾಸವನ್ನು ಕುರಿತು ಹೋದರು. ರೈಪನ್ ಸಾಹೇಬರು ಮುಂಬಾದೇವಿ ಮಾರ್ಗವಾಗಿ ಹೋಗುತ್ತಿರುವಾಗ ಮುಂಬಾದೇವಿ ಭೂಲೇಶ್ವರ್ ದೇವಸ್ಥಾನಗಳ ಸಮೀಪದಲ್ಲಿ ಇಬ್ಬರು ಬ್ರಾಹ್ಮಣರು ನಿಂತಿದ್ದರು. ರೈಪನ್ ಸಾಹೇಬರ ಗಾಡಿಯು ಅಲ್ಲಿಗೆ ಬರಲು ಅವರು ಗಾಡಿಯನ್ನು ಅಲ್ಲಿ ನಿಲ್ಲಿಸಬೇಕೆಂದು ಕೇಳಿಕೊಂಡರು. ಆ ವೃದ್ಧಬ್ರಾಹ್ಮಣರು ಹಾಗೆ ಗಾಡಿಯು ನಿಲ್ಲುತ್ತಲೇ ಹೂವಿನ ಹಾರಗಳನ್ನೂ, ಪುಷ್ಪಗಳನ್ನೂ, ಗಂಧ, [illegible], ಅರಿಸಿನ, ಕುಂಕುಮ, ಚಿನ್ನದ [illegible] ತೆಂಗಿನಕಾಯಿಗಳು ಮುಂತಾದ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible] ಪತ್ರಿಕೆ.

[illegible] ಪ್ರತ್ಯುತ್ತರ [illegible] ಈ ವಿಜ್ಞಾಪನೆಯನ್ನು ಮಾಡುವಂತೆ [illegible]

[illegible] ದ ಮಹಾರಾಜರವರಿಂದ ಸರ್ [illegible] ಅವರ [illegible] ಜನರಿಗೂ ಈ ದೇಶದ [illegible] ಯೋಗ್ಯತೆಯಿಂದಲ್ಲೇ ಪ್ರತಿಷ್ಠೆಯಿಟ್ಟು ಈ ದೇಶದವರನ್ನು [illegible] ತಮಗಿರುವ ಯೋಗ್ಯತಾ ಪಕ್ಷಪಾತವನ್ನೂ [illegible] ತೆಯಿಂದ ಕೊಂಡಾಡುವೆವು.

[illegible] ಅಭಿವೃದ್ಧಿಗಾಗಿ ತಾವು ಏರ್ಪಡಿಸಿದ ಎಕ್ಸಿಕ್ಯೂಟಿವ್ ಕಮಿಟಿ [illegible] ಭಾಷಾ ವೃತ್ತಾಂತ ಪತ್ರಿಕೆಗಳ ನಿರ್ಬಂಧಪರಿಹಾರವು [illegible] ಗವರ್ನ್ಮೆಂಟಿನ ಅಧಿಕಾರವಿತರಣಕ್ಕಾಗಿ ಏರ್ಪಡಿಸಿದ [illegible] ಈ ದೇಶದಲ್ಲಿ ಶಿಲವಾದ ಶಿಲ್ಪವಿದ್ಯೆಗಳು ಪುನಃ ಉಜ್ಜೀವಿತ [illegible] ಮಾಡಿದ [illegible] ವಸ್ತುಗಳನ್ನು ಗವರ್ನ್ಮೆಂಟಿನವರು [illegible] ಮಾಡಿದ [illegible] ಮೊದಲಾದ ಅನೇಕ ಕಾರ್ಯಗಳೂ ತಮ್ಮ [illegible] ಲೋಕಹಿತಕರವಾದ ತಮ್ಮ ಘನವಾದ ಮನಸ್ಸನ್ನೂ [illegible] ಯನ್ನು ಹೊಂದಿದ ತಾವು ಸಕಲ ಸೌಭಾಗ್ಯಯುಕ್ತರಾಗಿ [illegible] ಪೂರ್ಣಮನೋರಥರಾಗಿದ್ದರೂ ಪರೋಪಕಾರದಲ್ಲಿಯೇ ದೃಷ್ಟಿ [illegible] ಸ್ವಾರ್ಥವನ್ನು ಬಿಟ್ಟು ಬಂದು ಈ ದೇಶೀಯರಿಗೆ ಹಿತವನ್ನು [illegible] ಕೃತಜ್ಞತೆಯಿಂದ ಕೊಂಡಾಡುವೆವು.

[illegible] ನಾಗಿ ತಮ್ಮ ಸಂಸ್ಥಾನದಲ್ಲಿ ವಿನಯಪೂರ್ವಕ ವಿಜ್ಞಾಪಿಸುವದೇನೆಂದರೆ:— [illegible] ನಮ್ಮ ಮಹಾರಾಜರ ವಂಶಪಾರಂಪರ್ಯವಾಗಿ ಬಹುಕಾಲ [illegible] ಅಧಿಕಾರದಲ್ಲಿ ನಮ್ಮ ಮಹಾರಾಜರಿಗೆ ಪ್ರಸನ್ನ [illegible] ಮಾನಮಾಡಿದ [illegible] ಈ ರಾಜ್ಯದ ಅಭ್ಯುದಯದಲ್ಲಿ [illegible] ಬೇಡುತ್ತೇವೆ.

[illegible] ಸಕಲ ಸದ್ಗುಣೋಜ್ವಲ ಮಹ್ಯಾನ್ [illegible]
[illegible] ಕಾರುಣಿಕತಾಪಿಂ ||

[illegible] ಮೈಸೂರು [illegible] ೧೮

[illegible] ೧೧

[illegible]

ಉದ್ಧೃತ ಭಾಗಗಳು.

ಮಿಸೆಸ್ ಬಿ. ಕೆ. ನೂರ್ ರಘುನಾಥ ರಾಯರವರು ಹಿಂದು ಎಂಬ ಪತ್ರಿಕೆಗೆ [illegible]ವನ್ನು ಕುರಿತು ಬರೆದಿರುವ ಪ್ರಶ್ನೆಗಳೇನೆಂದರೆ :—

ಪ್ರಶ್ನೆ.—೧೪ನೇ ವರ್ಷದ ವಯಸ್ಸಿನ ಒಬ್ಬ ಹುಡುಗಿಯು ತನಗೆ ಲಗ್ನವಾದ ಒಂದೆರಡು ತಿಂಗಳೊಳಗಾಗಿಯೇ ವಿಧವೆಯಾದಳು. ಆಕೆಯ ಗಂಡನು ಮೃತನಾದಾಗ ಆಗ ತನ್ನ ಸೌಭಾಗ್ಯ ಹೊರಟಿಹೋಯಿತೆಂಬುದು [illegible]ವನ್ನು ಕೂಡ ತಿಳಿಯುವ ವಯಸ್ಸು ಆಕೆಗೆ ಇಲ್ಲದೆ ಸುಮ್ಮನಿದ್ದಳು. ಹೀಗೆ ಸ್ಥಿತಿ [illegible]ಗಳನ್ನು ಕೂಡ ತಿಳಿಯದ [illegible] ಬಾಲೆಯರಿಗೆ ಮದುವೆ ಮಾಡಿ ದುರದೃಷ್ಟದಿಂದ ಅವರು ಗಂಡಂದಿರನ್ನು ಕಳೆದು [illegible] ಅವರನ್ನು ಯಾವಜ್ಜೀವವೂ ವಿಧವೆಯರಾಗಿರುವ ಹಾಗೆ ಮಾಡಿರತಕ್ಕ [illegible] ಅರ್ಥವುಳ್ಳದ್ದಾಗಿದೆ ? ಹಾಗಾದ ಪಕ್ಷದಲ್ಲಿ ಧರ್ಮಶಾಸ್ತ್ರ ಪ್ರಮಾಣವನ್ನು ಯಾರು ತೋರಿಸಬಲ್ಲರು ?

“ ಆನಂದೀಬಾಯಿ ಜೋಶಿ ಎಂಬ ಒಬ್ಬ ಬ್ರಾಹ್ಮಣ ಸ್ತ್ರೀಯು ವೈದ್ಯಶಾಸ್ತ್ರವನ್ನು ತಿಳಿದು ಕೊಳ್ಳುವದಕ್ಕೋಸ್ಕರ ಇಲ್ಲಿಗೆ ಬಂದು ಆ ಶಾಸ್ತ್ರದಲ್ಲಿ ಪ್ರವೀಣಳಾಗಿದ್ದಾಳೆ. ಹಾಗೆಯೇ ತನ್ನ ದೇಶದ ಆಚಾರಗಳನ್ನು ಬಿಟ್ಟು ಬಿಡದೆ ತನ್ನ ದೇಶದ ವಸ್ತ್ರಗಳನ್ನೇ ಉಡುತ್ತಾಳೆ. ಹಾಗೆಯೇ ೩ ಭಾಷೆಗಳಲ್ಲಿ ಚೆನ್ನಾಗಿ ಮಾತನಾಡುತ್ತಾಳೆ ” ಎಂದು ಅಮೇರಿಕಾ ಖಂಡದ ಒಂದು ಪತ್ರಿಕೆಯು ತಿಳಿಸುತ್ತದೆ.

ಅಹ್ಮದಾಬಾದಿನ ಒಬ್ಬಾತನು ಹಿಂದು ಎಂಬ ಪತ್ರಿಕೆಗೆ ಬರೆದು ಇರುವದು ಏನೆಂದರೆ :—

ನಾನು ಉತ್ತರ ದೇಶದಲ್ಲಿ ಪ್ರಯಾಣ ಮಾಡುತ್ತಾ ಇದ್ದಾಗ ಒಂದು ದಿನ ದಾರಿಯಲ್ಲಿ ಬ್ರಹ್ಮಚಾರಿ ಬಾವ ಎಂಬ ಒಬ್ಬ ಸನ್ಯಾಸಿಯನ್ನು ಕಂಡೆನು. ನಾವಿಬ್ಬರೂ ಪರಸ್ಪರ ಮಾತನಾಡುತ್ತಾ ಇದ್ದಾಗ ಜನರಿಗೆ ಬರುವ ರೋಗಗಳ ವಿಷಯವಾಗಿಯೂ ಅವುಗಳ ಚಿಕಿತ್ಸೆಗಳ ವಿಷಯವಾಗಿಯೂ ಆತನನ್ನು ಕೆಲವು ಪ್ರಶ್ನೆಗಳನ್ನು ಕೇಳಲು ಆತನು ಅವುಗಳಿಗೆ ಸಮಾಧಾನಗಳನ್ನು ಕೊಟ್ಟನು.

“ ಹಾವು ಕಚ್ಚಿದರೆ ಔಷಧವುಂಟೆ ? ” ಎಂದು ನಾನು ಕೇಳಲು, ಆತನು ಹೇಳಿದ್ದೇನೆಂದರೆ :—“ ಅಹುದು, ಉಂಟು. ಹಾವು ಕಚ್ಚಿದವನ ಮೂತ್ರವು ಬಹು [illegible] ಅತ್ಯಂತ ಮಹಾಗುಣವುಳ್ಳಂಥ ಔಷಧವು. [illegible]

[illegible]

[illegible] ಅವರ [illegible] ರಕ್ಷ [illegible] [illegible] ಮಾತ್ರ [illegible] [illegible] ಎಂದು [illegible] [illegible] ಉದಾಹರಣೆ [illegible] [illegible] ಮಾತ್ರವನ್ನು [illegible].

[illegible] ಎಂದು ನಾವು ಹೇಳಿದೆವು. [illegible] ([illegible] ಎಂದು [illegible].) [illegible]

[illegible] ಆದರೆ [illegible] ಒಂದು [illegible] [illegible] [illegible] [illegible] [illegible].

[illegible]

[illegible]

[illegible]

[illegible]

[illegible]

[illegible]

[illegible]

ಎಷ್ಟು ಮೋದವೂ ಕುತ್ತು ಹುಡುಕುವದೇ ಕೆಲಸ.

ಇವನ್ನು ಬೊಂಬಾಯಿಯಲ್ಲಿ ಒಂದು ನಾಟಕಶಾಲೆಯಲ್ಲಿ ಆಡಿದರು. ಇದನ್ನು ನೋಡಲು ಅನೇಕ ಜನರು ಹೋಗಿ ಇದ್ದು ಬಾಲ ವಿಧವೆಯರ ವಿಷಯದಲ್ಲಿ ನಮ್ಮ ಧರ್ಮಶಾಸ್ತ್ರ ಗಳಲ್ಲಿ ಬಹಳ ಅಧರ್ಮವಾಗಿ ಹೇಳಿದೆ ಎಂದು ಅಂದುಕೊಂಡು ಹೊರಟು ಹೋದರು.

ಐಸ್ಲಂಡ್ ಸಮೀಪದಲ್ಲಿ ಭೂಮಿಯೊಳಗಣ ಅಗ್ನಿಶಕ್ತಿಯಿಂದ ೧೧ ಮೈಲುದ್ದ ಎನುವ ಭೂಮಿಯೊಳಗಿದ್ದ ಒಂದು ಹೊಸ ಪರ್ವತವು ಸಮುದ್ರದ ಮೇಲಕ್ಕೆ ಕಾಣಬರು ವಂತೆ ಆಗಿದೆ.

ಪಾರಿಸ್ ಪಟ್ಟಣದಲ್ಲಿ ಡಾರ್ಮೆಸ್ಟೆಟರ್ ಎಂಬುವರು ಬಹಳ ಪ್ರಸಿದ್ಧರಾಗಿ ಇದ್ದರು. ಇವರು ಪಾರ್ಲಿಮೆಂಟ ಕೆಲಸದಲ್ಲಿ ಇರುವದು ಮಾತ್ರವಲ್ಲದೆ ಇಂಗ್ಲೀಷ್ ಸೀಮೆಗೆಲ್ಲಾ ಪ್ರೋಸ್ಸ ಸಾಹಸ್ಸರ ಜನರಿಗರಾಗಿ ಇದ್ದರು. ಇದಲ್ಲದೆ ಇವರು ನಮ್ಮ ಇಂಡಿಯಾ ದೇಶದಮೇಲೆ ಬಹಳ ಅಭಿಮಾನವುಳ್ಳವರಾಗಿ ಇದ್ದರು. ಇವರಿಗೆ ೨೦ನೇ ವಯಸ್ಸಿನಲ್ಲಿ ತುಪಾಕಿ ಯನ್ನು ಸಹ ಮಾಡಿ ಮುದ್ದು ಹಿಮ್ಮೆಟ್ಟಿ ಎರಡು ಕಣ್ಣುಗಳೂ ಹೋದವು. ಆದಾಗ್ಯೂ ಕರಾರದಲ್ಲಿ ಅತ್ಯುತ್ತಮವಾದ ಅನೇಕ ಗ್ರಂಥಗಳನ್ನು ಬರೆದು ಸಕಲರ ಅನುರಾಗಕ್ಕೆ ಪಾತ್ರರಾಗಿದ್ದು ಅಕಸ್ಮಾತ್ತಾಗಿ ಪ್ರಾಪ್ತವಾದ ಒಂದು ರೋಗದಿಂದ ಮೃತರಾದರು.

ಹೈದರಾಬಾದ್ ನಿಜಾಮರವರಿಗೆ ಇಂಡಿಯಾದೇಶದ ಚಕ್ರವರ್ತಿನಿಯವರು ಜಿ. ಸಿ. ಎಸ್. ಐ. ಎಂಬ ಬಿರುದನ್ನು ಕೊಟ್ಟರು.

ಅಮೇರಿಕಾ ಖಂಡದಲ್ಲಿ ವಿದ್ಯುಚ್ಛಕ್ತಿಯಿಂದ ಎಲೆಕ್ಟ್ರಿಕ್ ಬ್ರೇಕ್ ಎಂಬ ಒಂದು ತರ ವನ್ನು ನಿರ್ಮಾಣಮಾಡಿ ಇದ್ದಾರೆ. ಇದರ ಸಹಾಯದಿಂದ ಘಂಟೆಗೆ ೬೦ ಮೈಲ್ ವೇಗ ವಾಗಿ ಹೋಗುತ್ತಿರುವ ರೈಲ್ವೇಗಾಡಿಯನ್ನು ೬ ಸೆಕೆಂಡುಗಳೊಳಗಾಗಿ ನಿಲ್ಲಿಸುತ್ತಾರೆ. ಇನ್ನು ಮೇಲೆ ಇದರ ಸಹಾಯದಿಂದ ರೈಲ್ವೇಗಾಡಿಗಳು ಎದುರುಬದುರಾಗಿ ಬರುವದರಿಂ ದುಂಟಾಗುವ ಅಪಾಯಗಳು ತಪ್ಪಿಹೋಗುವವು.

ಲಂಡನ್ ಪಟ್ಟಣದಲ್ಲಿ ಮಿ|| ಗ್ಲಾಡ್‌ಸ್ಟನ್ ಎಂಬುವರು ಇಂಗ್ಲೀಷರಲ್ಲೆಲ್ಲಾ ಮುಖ್ಯ [illegible] ೮ ವರುಷ. ಶ್ರೀಮನ್ಮಹಾರಾಣಿಯವರು ಸರ್ವಾಧಿಕಾರವನ್ನು ಹೊಂದಿ [illegible] ಕಾರ್ಯಗಳನ್ನು ಇವರೇ ನಡಿಸುವರು. ಇವರಿಗೆ ಈಗ ಸುಮಾರು [illegible] ವಯಸ್ಸಾಗಿರುವದು. ಒಂದುದಿನ ಇವರು ಕುದುರೆಯಮೇಲೆ ಕೂತು ಸಂಚಾರ [illegible] ನಾನು [illegible]

[illegible]

[illegible]

[illegible]

[illegible]

[illegible]

[illegible]

[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]

[illegible]

[illegible]

[illegible]

[illegible] ವಿಸ್ತೃತ [illegible] [illegible] ಜನನ [illegible] ಆತ್ಮನ [illegible] ಸೃಷ್ಟಿ [illegible] ಧ್ಯಾನ [illegible] ಬಿಟ್ಟು ಕಳುಹಿಸುವರು. [illegible] ನಕ್ಷತ್ರವಾಯಿತೆಂದು ಹುಟ್ಟುವವ ಲಗ್ನದಲ್ಲಿ [illegible]

[illegible]

ಎತ್ತು ಹಾರುವದಕ್ಕೆ ಮುಂಚೆ ಕೌದಿ ಹಾರಿತು.

ತ್ತಿದ್ದನು. ಸರ ಬುರುಡೆಯವನ ಗೂಡಿನಲ್ಲಿ ಜಗಜ್ಜಾಲಿಪತಿರಾಯನ ಮನೆಯಲ್ಲಿ ಅಣ್ಣನ ಮಾನ ಗೆಡಿಸಿದವಳ ಹೆಸರಿನ ಕನ್ಯೆ ಇರುವದಾಗಿ ತಿಳಿಯಬರುತ್ತದೆ. ಆ ಹುಡುಗಿಯು ಪ್ರಥಮಭೂತಾಗತಳಾದ ಕಾಲವುಂತಾದ್ದನ್ನು ತಿಳಿಸುವ ಎಲೆಯನ್ನು ತೆಗೆದು ಕಳುಹಿಸುವದು. ಇತಿ ಚತುರ್ಥೋಽಧ್ಯಾಯಃ.

೩ನೇ ಸಂಚಿಕೆಯಲ್ಲಿನ ಒಗಟೆಗಳಿಗೆ ಉತ್ತರಗಳು.

(೧) ಮೋಟುಮರ ಮತ್ತು ಈಶ್ವರ. ಹ್ಯಾಗೆಂದರೆ: ನೀನು ಸ್ಥಾಣು (ಮೋಟುಮರ, ಶಿವನು.) ; ಮೂಲವಿಹೀನ (ಬೇರಿಲ್ಲದ್ದು, ಆದಿರಹಿತನು.) ಪುತ್ರನು ವಿಶಾಖನು (ನಿನಗೆ ರೆಂಬೆಯಿಲ್ಲ, ನಿನ್ನ ಪುತ್ರನು ಕುಮಾರಸ್ವಾಮಿ) ರಮಣಿಯು ಅಪರ್ಣಾ (ನಿನಗೆ ಎಲೆಯಿಲ್ಲ. ನಿನ್ನ ಹೆಂಡತಿ ಪಾರ್ವತಿ.) ಹೀಗಿದ್ದರೂ ಪರರಿಂದ ಸಮರ್ಪಿಸಲ್ಪಟ್ಟ ಪುಷ್ಪಗಳಿಂದ ಬೇಕಾದ ಫಲವನ್ನು ದಯಪಾಲಿಸುವಿ. ಇದೇನು ಚಿತ್ರ !

(೨) ಪಂಚಭೂತಗಳು (ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ.) ಇದರ ತಾತ್ಪರ್ಯವೇನಂದರೆ : ವಾಯುಪುತ್ರನಾದ ಭೀಮನು ಆಕಾಶಗಾಮಿಯಾಗಿ, ಪೃಥ್ವಿ (ಭೂಮಿ) ಯಲ್ಲಿಹುಟ್ಟಿದವಳಾದ ಸೀತೆಯನ್ನು ನೋಡಿ, ತೇಜಸ್ಸನ್ನು (ಅಗ್ನಿಯನ್ನು) ಅಲ್ಲಿಟ್ಟು, ಪುನಃ ಅಪ್ಪನ್ನು (ಜಲವನ್ನು) ದಾಟಿದನು.

(೩) ಶ್ರೀಮಂತ ಗಣಪತಪ್ಪನಿಗೆ.

ಆನೆಕಲ್ಲು ಬೈರನ ಚಿನ್ನಪ. ಈ ಮಾರ್ಗಶಿರ ಶುದ್ಧ ಪಂಚಮಿ ಶುಕ್ರವಾರದವರಿಗೆ ಇಲ್ಲಿ ತೀರ್ಥರೂಪರು, ಸೌಭಾಗ್ಯವತಿಗಳೊಡನೆ, ನಾನು ಕ್ಷೇಮ. ಅಲ್ಲಿ ಚಿರಂಜೀವಿಗಳು, ಸೌಭಾಗ್ಯವತಿಗಳೊಡನೆ ನಿಮ್ಮ ಕ್ಷೇಮಕ್ಕೆ ಕಾಗದ ಬರೆಯುವದು. ಸಾಂಪ್ರತ. ಇಲ್ಲಿ ಚಿಕ್ಕಭೈರಪ್ಪನಿಗೆ ಖರಸಂವತ್ಸರ ಜ್ಯೇಷ್ಠ ಬಹುಳ ಅಷ್ಟಮಿ ಸೋಮವಾರ ಭರಣೀ ನಕ್ಷತ್ರದಲ್ಲಿ ವಿವಾಹ ನಿರ್ಣಯಿಸಿ ಇದೆ. ಇದಕ್ಕೆ ಬೇಕಾದ ಪದಾರ್ಥಗಳು, ಅಕ್ಕಿ, ಗೋಧಿ, ಅಕ್ಕಿ, ತೊಗರೀಬೇಳೆ, ಅವರೆ, ಎಳ್ಳು, ಉದ್ದು, ಹುರಳಿ, ಉಪ್ಪು, ಇವುಗಳಲ್ಲದೆ ಕುಂಬಳಕಾಯಿ, ಪಡುವಲಕಾಯಿ ದಂಟು, ಸೀಬೇಹಣ್ಣು, ಸೋರೇಕಾಯಿ, ತೆಂಗಿನಕಾಯಿ, ಶೀವು, ಹಾಗಲಕಾಯಿ, ಹಲಸಿನಕಾಯಿ, ಬದನೇಕಾಯಿ, ಅಡಿಕೆ, ವಿಳ್ಯದೆಲೆ, ಜೇನು, ಹಾಲು, ಕಬ್ಬಿನ ಹಾಲು, ಬಾಳೇಹಣ್ಣು, ಮಜ್ಜಿಗೆ ಇವುಗಳನ್ನು ಎತ್ತುಗಳಮೇಲೆ ಹೇರಿಸಿಕೊಂಡು ಮದು ಮಾಡಿಸುವದು. ಇಂತಿ ಚಿನ್ನಪ.

ಹಿತಬೋಧಿನಿ.

ಸಂಪುಟ ೨.] ಫೆಬ್ರುವರಿ. ೧೮೮೫. [ಸಂಚಿಕೆ ೫.

೧. ಆನಂದಬಾಯಿ ಜೋಷಿ.

ಬೊಂಬಾಯಿ ವಾಸಸ್ಥಳಾದ ಆನಂದಬಾಯಿ ಜೋಷಿ ಎಂಬಾಕೆ ವಿದ್ಯಾಭ್ಯಾಸವನ್ನು ಮಾಡಿ, ೭-೮ ಭಾಷೆಗಳಲ್ಲಿ ಒಳ್ಳೇ ಪಾಂಡಿತ್ಯವನ್ನು ಸಂಪಾದಿಸಿಕೊಂಡು, ಇಂಗ್ಲಿಷಿನಲ್ಲಿಯೂ ಸಂಸ್ಕೃತದಲ್ಲಿಯೂ ಪ್ರವೀಣಳಾಗಿ ತನ್ನ ಪತಿಯ ಆಜ್ಞೆಯನ್ನು ತೆಗೆದುಕೊಂಡು, ಜಾತಿ ಭ್ರಷ್ಟತೆಯನ್ನು ಹೊಂದದೆ ಈ ದೇಶಕ್ಕೆ ಪುನಃ ಬರುವದಕ್ಕೋಸ್ಕರ ಬೇಕಾದ ಏರ್ಪಾಡುಗಳನ್ನು ಮಾಡಿಕೊಂಡು, ಅಮೆರಿಕಾಖಂಡಕ್ಕೆ ಹೋಗಿ, ಅಲ್ಲಿ ಪರೀಕ್ಷೆಯನ್ನು ಕೊಟ್ಟಳು. ಇನ್ನು ೫-೬ ತಿಂಗಳೊಳಗಾಗಿ ಪುನಃ ಸ್ವದೇಶವನ್ನು ಕುರಿತು ಬರುವಳಂತೆ. ಈಕೆಯು ಅಮೆರಿಕಾಖಂಡಕ್ಕೆ ಹೊರಡುವದಕ್ಕೆ ಮುಂಚೆ ಹಿಂದೂ ಮತ್ತು ಯೂರೋಪಿಯನ್ ಜಾತಿಯ ಸಾವಿರಾರು ಜನರು ಸೇರಿ ಇದ್ದ ಒಂದು ಸಭೆಯಲ್ಲಿ ತನ್ನ ಪ್ರಯಾಣದ ವಿಷಯದಲ್ಲಿ ಇಂಗ್ಲೀಷಿನಲ್ಲಿ ಆಡಿದ ಮಾತುಗಳನ್ನು ನ್ಯೂಸ್‌ಪೇಪರಿನಲ್ಲಿ ಅಚ್ಚುಹಾಕಿದರು. ಅದರ ಅಭಿಪ್ರಾಯವನ್ನು ನಾವು ಇಲ್ಲಿ ಬರೆಯುತ್ತೇವೆ.

ಎಲೈ ಸಭಿಕರೇ!

ನಾನು ದೊಡ್ಡ ಕೆಲಸದಲ್ಲಿ ಪ್ರವರ್ತಿಸಿ ಇದ್ದೇನೆ. ಕಾರ್ಯವು ಸಫಲವಾಗುವದೋ ಇಲ್ಲವೋ ನನಗೆ ತಿಳಿಯದು. ನನ್ನ ಉದ್ದಿಶ್ಯವಾಗಿ ತಾವೆಲ್ಲರೂ ಈ ಸಭೆಗೆ ದಯಮಾಡಿಸಿರುವದಕ್ಕಾಗಿ ನಾನು ಬಹಳ ಕೃತಜ್ಞಳಾಗಿ ಇದ್ದೇನೆ. ಹಿಂದೂಸ್ತ್ರೀಯರು ಇಂಥಾ ಸಭೆಗಳಲ್ಲಿ ಮಾತನಾಡುವದೇ ಅಪೂರ್ವವೆಂಬದಾಗಿಯೂ, ನಾನು ಬಹಳ ರಮಣೀಯವಾಗಿ ಮಾತನಾಡುವೆನೆಂಬದಾಗಿಯೂ, ತಾವು ತಿಳಿದುಕೊಂಡು ಬಂದು ಇರಬಹುದು. ಆದರೆ

ಎಮ್ಮೇ ಮೇಲೆ ಮಳೆಗರೆದಹಾಗೆ.

ನಾನು ಸ್ವವಿಷಯವಾಗಿ ಮಾತನಾಡುತ್ತೇನಾದ್ದರಿಂದ ಅದು ಬಹುಶಃ ನಿಮಗೆ ರಮಣೀಯವಾಗಿ ಇರಲಾರದು. ನಾನು ಸಭಾ ಮುಖದಲ್ಲಿ ಮಾತನಾಡುವದಕ್ಕೆ ಇದೇ ಮೊದಲು. ನಾನು ಬಹಳ ವ್ಯಾಸಂಗ ಮಾಡಿದವಳಲ್ಲ. ಇದಲ್ಲದೆ ನಾನು ಈಗ ಅನ್ಯಭಾಷೆಯಲ್ಲಿ ಮಾತನಾಡಬೇಕಾಗಿದೆ. ಆದಕಾರಣ ಮಾತನಾಡತಕ್ಕ ಕಾಲದಲ್ಲಿ ಅನೇಕ ತಪ್ಪುಗಳಾಗಬಹುದು. ವಿದ್ಯಾರ್ಥಿಗಳೆಲ್ಲರೂ ನನ್ನ ಮಾತುಗಳನ್ನು ಕೇಳಿ ನಗಬಹುದು ; ಆದರೆ ವಿದ್ವಾಂಸರೆಲ್ಲರೂ ಕನಿಕರ ಪಡಬಹುದು. ಹೀಗಿದ್ದಾಗ್ಯೂ ಸ್ವವಿಷಯವಾಗಿ ಕೆಲವು ಅಂಶಗಳನ್ನು ಹೇಳುವೆನು. ಆದರಿಸಿ ಕೇಳಬೇಕು.

ನಾನು ವಿದ್ಯಾಭ್ಯಾಸಕ್ಕಾಗಿ ಅಮೆರಿಕಾಖಂಡಕ್ಕೆ ಹೋಗುವಂತೆ ನಿಷ್ಕರ್ಷೆಮಾಡಿ ಇದ್ದೇನೆ. ಇದನ್ನು ನೋಡಿ ನನ್ನ ಕ್ಷೇಮಚಿಂತಕರಾದ ಅನೇಕರು ಅನೇಕವಾಗಿ ನನ್ನನ್ನು ಪ್ರಶ್ನೆಮಾಡಿದರು. ಅವರಿಗೆಲ್ಲಾ ಬೇರೆಬೇರೆ ಉತ್ತರಗಳನ್ನು ಕೊಡುವದಕ್ಕಿಂತ ಮುಖ್ಯವಾದ ಪ್ರಶ್ನೆಗಳಿಗೆ ಸಭಾಮುಖದಲ್ಲಿ ಒಂದೇಸಾರಿ ಉತ್ತರಕೊಡುವದಾಗಿ ನಿಷ್ಕರ್ಷೆಮಾಡಿದೆನು.

೧ನೇ ಪ್ರಶ್ನೆ.—ನೀನು ಅಮೆರಿಕಾಖಂಡಕ್ಕೆ ಯಾತಕ್ಕೋಸ್ಕರ ಹೋಗಬೇಕು?

ಉತ್ತರ.— ವೈದ್ಯಶಾಸ್ತ್ರವನ್ನು ಅಭ್ಯಾಸಮಾಡುವದಕ್ಕೆ. ಈಗ ಇಂಡಿಯಾದೇಶದಲ್ಲಿ ವೈದ್ಯಶಾಸ್ತ್ರ ಪ್ರವೀಣರಾದವರು ಎಲ್ಲರೂ ಗಂಡಸರೇ ಹೊರತು ಹೆಂಗಸರು ಯಾರೂ ಇಲ್ಲ. ಘನತೆಯನ್ನು ಹೊಂದಿದ ಅನೇಕ ಸ್ತ್ರೀಯರು ಅನೇಕ ರೋಗಗಳಿಗೆ ಗಂಡಸರಲ್ಲಿ ಔಷಧತೆಗೆದುಕೊಳ್ಳುವದಕ್ಕೆ ಇಷ್ಟವಿಲ್ಲದೆ ನಾನಾವಿಧ ಸಂಕಟಗಳನ್ನು ಪಟ್ಟು ಪ್ರಾಣವನ್ನು ಕೂಡ ಬಿಡುತ್ತಾರೆ. ಸ್ತ್ರೀಯರಿಗೆ ವಿದ್ಯಾಭ್ಯಾಸಮಾಡಿಸುವದಕ್ಕೂ, ವಸ್ತುತತ್ವಗಳನ್ನು ಹೇಳುವ ಅನೇಕ ಶಾಸ್ತ್ರಗಳನ್ನು ಅಭ್ಯಾಸಮಾಡಿಸುವದಕ್ಕೂ, ಸರಕಾರದವರೂ ಅನೇಕರು ದೊಡ್ಡಮನುಷ್ಯರೂ ನಾನಾವಿಧವಾದ ಏರ್ಪಾಡುಗಳನ್ನು ಮಾಡಿ ಇದ್ದಾರೆ. ಇವುಗಳೆಲ್ಲಾ ಇದ್ದಾಗ್ಯೂ ವೈದ್ಯಶಾಸ್ತ್ರವನ್ನು ತಿಳಿದ ಸ್ತ್ರೀಯರು ಇಲ್ಲದೆ ಇರುವದರಿಂದ ಇಂಡಿಯಾದಲ್ಲಿರುವ ದೊಡ್ಡಮನುಷ್ಯರ ಅನೇಕರಿಗೆ

ಸರಿಗೆ ಉಂಟಾಗತಕ್ಕ ಹಿಂಸೆಯನ್ನು ಯೋಚಿಸಿ ಅದಕ್ಕೆ ತಕ್ಕ ಏರ್ಪಾಡನ್ನು ಯಾರೂ ಮಾಡಲಿಲ್ಲ. ಇಂಗ್ಲಂಡಿನಿಂದಲೂ ಅಮೆರಿಕಾದ ವೈದ್ಯಶಾಸ್ತ್ರದಲ್ಲಿ ಗಟ್ಟಿಗರಾದ ಕೆಲವರು ಹೆಂಗಸರು ನಮ್ಮಲ್ಲಿಯೂ ಹೆಂಗಸರಿಗೆ ಔಷಧ ಕೊಡುವದಕ್ಕೋಸ್ಕರ ಬಂದು ಇದ್ದಾರೆ. ಇವರ ಭಾಷೆಗೂ ನಡೆನುಡಿಗಳಿಗೂ ಆಚಾರವ್ಯವಹಾರಗಳಿಗೂ ನಮ್ಮ ಭಾಷಾದಿಗಳಿಗೂ ತುಂಬಾ ತಾರತಮ್ಯ ವಿರುವದರಿಂದ ನಮ್ಮ ಸ್ತ್ರೀಯರು ಅವರಲ್ಲಿಯೂ ಔಷಧತೆಗದುಕೊಳ್ಳುವದಿಲ್ಲ. ನಮ್ಮ ಜನರೇ ವೈದ್ಯಶಾಸ್ತ್ರದಲ್ಲಿ ಪ್ರವೀಣರಾಗಿ ವೈದ್ಯಮಾಡುವದಕ್ಕೆ ಉಪಕ್ರಮಿಸಿದರೆ ಈ ಅಸಂದರ್ಭಗಳೆಲ್ಲಾ ತಪ್ಪಿಹೋಗುವವು. ಆದ್ದರಿಂದ ವೈದ್ಯಶಾಸ್ತ್ರಾಭ್ಯಾಸಕ್ಕಾಗಿ ನಾನು ಅಮೆರಿಕಾಖಂಡಕ್ಕೆ ಹೋಗುವೆನು.

೨ ನೇದು.—ಇದಕ್ಕಾಗಿ ಅಮೆರಿಕಾ ಖಂಡಕ್ಕೇನೇ ಹೋಗಬೇಕೆ? ಇಂಡಿಯಾದಲ್ಲಿಯೇ ವ್ಯಾಸಂಗ ಮಾಡುವದಕ್ಕಾಗುವದಿಲ್ಲವೆ?

ಉತ್ತರ.—ಇಂಡಿಯಾದಲ್ಲಿ ಪಾಠಶಾಲೆಗಳೂ ಇವೆ, ಹೇಳತಕ್ಕವರೂ ಇದ್ದಾರೆ. ಆದರೆ ಹೇಳತಕ್ಕವರು ಗಂಡಸರು. ಹೆಂಗಸರು ಶಾಸ್ತ್ರವನ್ನು ಚನ್ನಾಗಿ ತಿಳಿದುಕೊಳ್ಳಬೇಕಾದರೆ ಶಾಸ್ತ್ರಪಾರಂಗತರಾದ ಹೆಂಗಸರಲ್ಲಿ ತಿಳಿಯಬೇಕು. ಗಂಡಸರಲ್ಲಿ ತಿಳಿದುಕೊಳ್ಳುವದಕ್ಕೆ ಅನೇಕ ಪ್ರತಿಬಂಧಕಗಳಿರುವವು. ಇದಲ್ಲದೆ ನಾನು ಬ್ರಾಹ್ಮಣ ಸ್ತ್ರೀಯು. ಕ್ರಿಸ್ತಮತ ಅಥವಾ ಬ್ರಹ್ಮಸಮಾಜಕ್ಕೆ ಸೇರಿದ ಸ್ತ್ರೀಯರು ಧಾರಾಳವಾಗಿ ಪಾಠಶಾಲೆಗಳಲ್ಲಿ ಓದುತ್ತಾರೆ. ಜನರೂಕೂಡ ಅವರಿಗೆ ಯಾವ ವಿಧವಾದ ಅವಮಾನವನ್ನೂ ಮಾಡುವದಿಲ್ಲ. ಬ್ರಾಹ್ಮಣಳಾಗಿದ್ದುಕೊಂಡು ಹೀಗೆ ಪಾಠಶಾಲೆಗೆ ಹೋಗುವದು ವಾಡಿಕೆಯಿಲ್ಲವಾದ್ದರಿಂದ ನಮ್ಮ ಇಂಡಿಯಾ ದೇಶದ ಹಿಂದೂಗಳಾದ ಸ್ತ್ರೀ ವಿದ್ಯಾರ್ಥಿಗಳಿಗೆ ನಾನಾವಿಧ ಹಿಂಸೆಗಳು ಉಂಟಾಗುವವು. ಯೂರೋಪಿಯನ್ ಮತ್ತು ಈಸ್ಟಿಂಡಿಯನ್ ಜನಗಳು ಪಾಠಶಾಲೆಗೆ ಹೋಗುವದಕ್ಕೋಸ್ಕರ ಬೀದಿಯಲ್ಲಿ ಸಂಚರಿಸಿದರೆ ಅವರನ್ನು

ಜನರು ಕಣ್ಣೆತ್ತಿ ಕೂಡ ನೋಡುವದಿಲ್ಲ. ನಮ್ಮ ಜನಗಳಾದರೋ ಪುಸ್ತಕಗಳನ್ನು ತೆಗೆದುಕೊಂಡು ಹೊಸಲುಬಿಟ್ಟು ಈಚೆಗೆ ಬಂದರೆ ಅವರನ್ನೇ ನೋಡುವರು. ಗಾಡಿಯಮೇಲೆ ಹೋದರೂ ನಡೆದುಕೊಂಡು ಹೋದರೂ ದುರುಗುಟ್ಟಿಕೊಂಡು ನೋಡಿ ಬಾಯಿಗೆ ಬಂದಹಾಗೆಲ್ಲಾ ಮಾತನಾಡುವರು. ಈ ಸಂಕಟಗಳನ್ನೆಲ್ಲಾ ನಾನು ಬಹಳವಾಗಿ ಅನುಭವಿಸಿದೆನು. ಕೆಲವು ವರ್ಷಗಳ ಕೆಳಗೆ ನಾನು ಬೊಂಬಾಯಿಯಲ್ಲಿ ಪಾಠಶಾಲೆಗೆ ಹೋಗುತ್ತಿದ್ದೆನು. ಆಗ ಅನೇಕರು ತಮ್ಮ ಮನೇ ಕಿಟಕಿಗಳಿಂದ ಪುಸ್ತಕಹಸ್ತಳಾದ ನನ್ನನ್ನು ಕಂಡು ನಗುತ್ತಿದ್ದರು. ದಾರಿಯಲ್ಲಿ ಗಾಡಿ ಕುದುರೆಗಳ ಮೇಲೆ ಕುಳಿತು ಹೋಗುವವರು ತಮ್ಮ ಗಾಡಿಗಳನ್ನು ನಿಲ್ಲಿಸಿ ನನ್ನನ್ನು ನೋಡಿ ನಗುತ್ತಿದ್ದರು. ಮತ್ತೆ ಕೆಲವರು ನನಗೆ ಕೇಳಿಸುವಂತೆ "ಇದೇನಾಶ್ಚರ್ಯ! ಮೋಜಾಗಳು ಮುಂತಾದ ದಿರಸನ್ನು ಹಾಕಿಕೊಂಡು ಪಾಠಶಾಲೆಗೆ ಹೋಗತಕ್ಕ ಈಕೆಯು ಯಾರು? ಇದೆಲ್ಲಾ ಕಲಿಯುಗದ ಚಿಹ್ನೆಗಳು; ಮಾಡತಕ್ಕದೇನು!" ಎಂಬದಾಗಿ ವಿಧವಿಧವಾಗಿ ಮಾತನಾಡಿಕೊಳ್ಳುತ್ತಿದ್ದರು. ಒಂದಾನೊಂದುದಿವಸ ನಾನು ಪಾಠಶಾಲೆಯಿಂದ ಬರುವಾಗ ದಾರಿಯಲ್ಲಿ ಹೋಗುತ್ತಾ ಇದ್ದ ಕೆಲವು ಜನರೆಲ್ಲಾ ನನ್ನನ್ನು ಹಾಸ್ಯಮಾಡುತ್ತಲೂ ನಗುತ್ತಲೂ ದಾರಿಯಲ್ಲಿ ನನ್ನನ್ನು ಅಡ್ಡಹಾಕಿ ವಾಚಾಮಗೋಚರವಾದ ಮಾತುಗಳನ್ನೆಲ್ಲಾ ಅಂದು ನನ್ನ ಮುಖದಮೇಲೆ ಉಗುಳಿ ನನ್ನನ್ನು ಕಲ್ಲುಗಳಿಂದಲೂ ಹೊಡೆದರು. ಈ ಗುಂಪಿನಲ್ಲಿ ವೃದ್ಧರುಕೂಡ ಅನೇಕರು ಸೇರಿ ಇದ್ದರು. ಆದಿವಸ ನಾನು ಪ್ರಾಣಸಹಿತ ಮನೆಗೆ ಸೇರುವದೇ ವಿಶೇಷಪ್ರಯತ್ನವಾಯಿತು. ಬೊಂಬಾಯಿಯನ್ನು ಬಿಟ್ಟು ವಿದ್ಯಾರ್ಥಿಯಾಗಿ ಇಲ್ಲಿಗೆ ಬಂದಾಗ್ಯೂ ನನಗೆ ಈ ಸಂಕಟಗಳು ತಪ್ಪಲಿಲ್ಲ. ಈ ಬಂಗಾಳಾದೇಶದವರೂ ಕೂಡ ನನಗೆ ಬೊಂಬಾಯಿಯವರಿಗಿಂತ ಹೆಚ್ಚಾದ ಅವಮಾನವನ್ನು ಮಾಡಿ ಇದ್ದಾರೆ. ಸಾಯಂಕಾಲದ ವೇಳೆಯಲ್ಲಿ ಸಮುದ್ರತೀರಕ್ಕೆ ಸಂಚಾರಾರ್ಥವಾಗಿ ಹೋದರೆ ಯೂರೋಪಿಯನರೂ

ಕೂಡ ಸನ್ನೊಡನೆ ಮಾತನಾಡುವದಿಲ್ಲ. ಈ ಬಂಗಾಳಿ ಬಾಬುಗಳಾದರೋ ಪರಿಚಯವಿಲ್ಲದಿದ್ದಾಗ್ಯೂ ದಾರಿಯಲ್ಲಿ ನನ್ನನ್ನು ನಿಲ್ಲಿಸಿ "ನೀನು ಯಾರು? ನೀನು ಯಾವ ಜಾತಿಯವಳು? ನೀನು ಎಲ್ಲಿಂದ ಬಂದೆ? ಎಲ್ಲಿಗೆ ಹೋಗುತ್ತೀಯೆ? ನೀನು ವಿಧವೆಯೋ? ಅಲ್ಲದೆ ಮುತ್ತೈದೆಯೆ? ನಿನ್ನ ನಡತೆ ಎಂಥಾದ್ದು? ನಿನಗೆ ಬಹಿಷ್ಕಾರ ಹಾಕಿ ಇದ್ದಾರೆಯೆ?" ಎಂದು ಇನ್ನೂ ಅನೇಕ ಅವಿವೇಕವಾದ ಪ್ರಶ್ನೆಗಳನ್ನು ಕೇಳಿ ನನ್ನನ್ನು ಹಿಂಸೆ ಪಡಿಸುತ್ತಾರೆ. ಇದು ಯುಕ್ತವೋ ಅಯುಕ್ತವೋ ನೀವೇ ತಿಳಿದುಕೊಳ್ಳಿರಿ. ಈ ಹಿಂಸೆಗಳನ್ನೆಲ್ಲಾ ತಪ್ಪಿಸಿಕೊಂಡು ವಿದ್ಯಾಭ್ಯಾಸ ಮಾಡುವದಕ್ಕೋಸ್ಕರ ನಾನು ಅಮೆರಿಕಾಖಂಡಕ್ಕೆ ಹೋಗುತ್ತೇನೆ.

೩ನೇ ಪ್ರಶ್ನೆ.—ನಿನ್ನ ಗಂಡನನ್ನೂ ಕರೆದುಕೊಳ್ಳದೆ ನೀನು ಒಬ್ಬಳೇ ಯಾತಕ್ಕೆ ಹೋಗುತ್ತೀಯೆ?

ಉತ್ತರ.—ನಾವಿಬ್ಬರೂ ಹೋಗುವಂತೆ ಮೊದಲು ಉದ್ದೇಶಮಾಡಿ ಕೊಂಡಿದ್ದೆವು. ಆದರೆ ದ್ರವ್ಯಾನುಕೂಲ ಕಡಿಮೆಯಾಗಿರುವದರಿಂದಲೂ, ನನ್ನ ಗಂಡನ ವೃದ್ಧರಾದ ತಂದೆತಾಯಿಗಳಿಗೂ ಸಹೋದರ ಸಹೋದರಿಯರಿಗೂ ಇತರಪೋಷಕರು ಇಲ್ಲದೆ ಇರುವದರಿಂದಲೂ, ಆತನು ಇಲ್ಲಿಯೇ ನಿಲ್ಲಬೇಕಾಯಿತು. ಈ ಕಾರಣಗಳಿಂದಲೇ ನಾನು ಆತನ ಅನುಜ್ಞೆಯನ್ನು ಪಡೆದು ಪ್ರಯಾಣಸಿದ್ಧಳಾಗಿ ಇದ್ದೇನೆ.

೪ನೇ ಪ್ರಶ್ನೆ. ನೀನು ಪುನಃ ಇಂಡಿಯಾಕ್ಕೆ ಬಂದಮೇಲೆ ನಿನಗೆ ಬಹಿಷ್ಕಾರ ಹಾಕುವರಲ್ಲಾ! ಅದಕ್ಕೆ ಏನು ಮಾಡುವಿ?

ಉತ್ತರ.—ನಾನು ಒಬ್ಬ ಪರಿಚಾರಕಳ ಸಂಗಡ ಹೋಗುವೆನು. ನನ್ನ ನಡೆನುಡಿಗಳಲ್ಲಿಯೂ ಆಹಾರವ್ಯವಹಾರಗಳಲ್ಲಿಯೂ ಮತಾಚರಣೆಯಲ್ಲಿಯೂ ನನ್ನ ವರ್ಣಾಶ್ರಮ ಧರ್ಮವನ್ನು ಬಿಡದೆ ವಿದ್ಯಾಕಾಲಕ್ಷೇಪವನ್ನು ಮಾಡಿಕೊಂಡು ಹಿಂತಿರುಗಿ ಬರುವೆನು. ಇದೇ ಒಂದು

ದೊಡ್ಡ ಅಪರಾಧವೆಂದು ತಿಳಿದು ಕೊಂಡು ನನಗೆ ಬಹಿಷ್ಕಾರ ಹಾಕಿದ ಪಕ್ಷದಲ್ಲಿ ನನ್ನ ಯತ್ನವೇನಿದೆ? ಮಠಾಧಿಕಾರಿಗಳು ಧರ್ಮಾಧರ್ಮಗಳನ್ನು ವಿಚಾರಿಸಿ ಬಹಿಷ್ಕಾರವನ್ನು ಹಾಕುವರೇ ಹೊರ್ತು ಮತ್ತೆ ಬೇರೆ ಇಲ್ಲ. ಈ ವಿಷಯದಲ್ಲಿ ನನಗೆ ಅಂಜಿಕೆಯಿಲ್ಲ, ಮತ್ತು ಈ ಭಯವನ್ನು ಇಟ್ಟುಕೊಂಡು ನಾನು ಉದ್ದೇಶಿಸಿರುವ ಕಾರ್ಯವನ್ನು ಬಿಡತಕ್ಕವಳಲ್ಲ.

೩೪ನೇ ಪ್ರಶ್ನೆ.—ದಾರಿಯಲ್ಲೇ ಆಗಲೀ ಅಮರಿಕಾಖಂಡದಲ್ಲಿಯೋ ಆಗಲೀ ರೋಗಾದಿ ಅನಿವಾರ್ಯಗಳು ಪ್ರಾಪ್ತವಾದರೆ ಏನು ಮಾಡುವಿ?

ಉತ್ತರ.— ಸಾಹಸಿಗಳಾದವರು ಉದ್ದೇಶಿಸಿದ ಕಾರ್ಯವನ್ನು ಆರಂಭಿಸಿ ಇದಕ್ಕೆ ಪ್ರತಿಬಂಧಕಗಳೇನು ಬಂದಾವ್ರೋ ಎಂಬದಾಗಿ ಭಯಪಡುವದು ಅಪೂರ್ವ. ಅವರ ದೃಷ್ಟಿಗೆ ಮುಂದೆ ಬರತಕ್ಕ ಫಲಗಳು ಕಾಣುವವೇ ಹೊರ್ತು ಪ್ರತಿಬಂಧಕಗಳು ಕಾಣುವದಿಲ್ಲ. ಪ್ರಾಣಭಯಮುಂತಾದ ವಿಪತ್ತುಗಳು ಪ್ರಾಪ್ತವಾದಾವು ಎಂದು ಅನೇಕರು ಹೇಳುವರು. ಬರತಕ್ಕ ವಿಪತ್ತುಗಳು ಇಲ್ಲಿದ್ದರೂ ತಪ್ಪಲಾರವು. ಇದಲ್ಲದೆ ಸಾಹಸಿಗಳು ಏನು ವಿಪತ್ತು ಬರುವದೋ ಎಂದು ಭಯಪಡುತ್ತಿದ್ದರೆ ಅವರ ಉದ್ದೇಶವು ನೆರವೇರಲಾರದು. ಧೈರ್ಯವೂ ಉತ್ಸಾಹವೂ ಇರುವವರು ಎಂಥಾ ಪ್ರತಿಬಂಧಕಗಳು ಬಂದಾಗ್ಯೂ ಅವುಗಳನ್ನು ನಿವಾರಿಸಿಕೊಂಡು ಫಲವನ್ನೇ ಹೊಂದುವರು. ಪ್ರಾಣಿಗಳಿಗೆ ಉಂಟಾಗತಕ್ಕ ರೋಗ ದುಃಖ ಮರಣಾದಿ ಸಂಕಟಗಳೆಲ್ಲಾ ಸಂಚಾರ ಮಾಡತಕ್ಕವರಿಗೂ ಸ್ವದೇಶದಲ್ಲಿರುವವರಿಗೂ ಸಮನಾಗಿಯೇ ಇರುವವು. ಇವುಗಳ ಭಯದಿಂದ ಉದ್ಯೋಗಿಸಿದ ಕೆಲಸವನ್ನು ಬಿಡಬಾರದು. ಉದ್ಯೋಗಿಸಿದ ಕಾರ್ಯವು ಉತ್ತಮವಾದದ್ದಾದಪಕ್ಷದಲ್ಲಿ ಯಾವದಕ್ಕೂ ಹೆದರದೆ ಕಾರ್ಯವನ್ನು ನೆರವೇರಿಸಬೇಕು. ಮಾಡಿದ ಕಾರ್ಯವು ಸಫಲವಾದರೆ ಲೋಕದಲ್ಲಿ ಎಲ್ಲರೂ ಸ್ತೋತ್ರಮಾಡುವರು; ನಿಷ್ಫಲವಾದರೆ ಹಾಸ್ಯಮಾಡುವರು. ನನ್ನ

ಪ್ರಯತ್ನವು ಸಫಲವಾಗಿ ನಮ್ಮ ದೇಶೀಯರ ಮೆಚ್ಚಿಕೆಗೆ ನಾನು ಪಾತ್ರಳಾದರೆ ಸಂತೋಷಪಡುವೆನು ; ಹಾಗಿಲ್ಲದೆ ವಿಧಿಸಂಕಲ್ಪದಿಂದ ದುಃಖಗಳು ಪ್ರಾಪ್ತವಾದರೆ ಅವುಗಳನ್ನೂ ಅನುಭವಿಸುವೆನು. ಲೋಕದಲ್ಲಿ ಕಷ್ಟವಿಲ್ಲದೆ ಸುಖ ಬರಲಾರದು. ದೇಶಸಂಚಾರದಿಂದ ಬುದ್ಧಿ ಕೌಶಲ್ಯ ಉಂಟಾಗುವದು ; ಅನೇಕವಿಷಯಗಳು ತಿಳಿಯುವವು. ಪರದೇಶಸಂಚಾರಮಾಡಿ ಅಲ್ಲಿನ ಶಾಸ್ತ್ರಾದಿವಿಷಯಗಳನ್ನು ತಿಳಿದುಕೊಂಡು ನಮ್ಮದೇಶದ ಶಾಸ್ತ್ರಗಳನ್ನೂ ತಿಳಿದುಕೊಳ್ಳುವದು ಉತ್ತಮವಾದದ್ದು. ಆದಕಾರಣವೇ ನಾನು ಅಮರಿಕಾಕ್ಕೆ ಹೋಗುವಂತೆ ನಿಷ್ಕರ್ಷೆಮಾಡಿ ಇದ್ದೇನೆ. ಮನುವು ಹೇಳುವದೇನಂದರೆ :— "ಯಥಾಯಥಾಹಿಪುರುಷಃ ಶಾಸ್ತ್ರಂ ಸಮಧಿ ಗಚ್ಛತಿ ॥ ತಥಾತಥಾ ವಿಜಾನಾತಿ ವಿಜ್ಞಾನಂ ಚಾಸ್ಯರೋಚತೇ ॥" ನಮ್ಮ ಆಚಾರ ವ್ಯವಹಾರಗಳನ್ನೂ ನಾವು ಮುಂದೆ ಬದುಕತಕ್ಕ ಮಾರ್ಗಗಳನ್ನೂ ಚನ್ನಾಗಿ ಆಲೋಚಿಸಿದೆನು. ಹ್ಯಾಗೆ ಹ್ಯಾಗೆ ನೋಡಿದಾಗ್ಯೂ ನಮ್ಮ ಸ್ತ್ರೀಯರು ತಾವು ಬದುಕತಕ್ಕ ಮಾರ್ಗವನ್ನು ಅರಿಯರೆಂದು ತೋರುತ್ತದೆ. ಸರ್ವವಿಧದಲ್ಲಿಯೂ ನಮ್ಮ ಬುದ್ಧಿಯನ್ನು ಪ್ರಚಾರಗೊಳಿಸಿ ಸಾಹಸದಿಂದ ಕರ್ತವ್ಯವಾದ ಕಾರ್ಯಗಳನ್ನು ನೆರವೇರಿಸಿ ತಾವೂ ಸುಖಪಡುತ್ತ ಪರರಿಗೂ ಸುಖವನ್ನು ಉಂಟುಮಾಡತಕ್ಕ ಶಕ್ತಿಯನ್ನು ಎಲ್ಲರೂ ಪಡೆಯಬೇಕು. ಆದಕಾರಣ ದೇವರಮೇಲೆ ಭಾರಹಾಕಿ ವೈದ್ಯಶಾಸ್ತ್ರದಲ್ಲಿ ಪ್ರವೀಣಳಾಗಿ ಪರರಿಗೆ ಹಿತವನ್ನುಮಾಡಿ ಜೀವನ ಮಾಡಿಕೊಳ್ಳುವದಕ್ಕೋಸ್ಕರ ಅಮರಿಕಾಖಂಡಕ್ಕೆ ಹೋಗಬೇಕೆಂದು ನಿಷ್ಕರ್ಷೆಮಾಡಿ ಇದ್ದೇನೆ.

೬ನೇ ಪ್ರಶ್ನೆ.— ನಿನ್ನ ದೇಶೀಯರಾದ ಯಾವ ಸ್ತ್ರೀಯರೂ ಮಾಡದೆಇರತಕ್ಕ ಕಾರ್ಯವನ್ನು ಮಾಡುವೆನೆಂದು ನೀನು ಯಾತಕ್ಕೆ ಉದ್ಯೋಗಿಸುತ್ತಿ?

ಉತ್ತರ—. ಲೋಕದಲ್ಲಿ ಸಕಲರೂ ತಮಗೆ ಯುಕ್ತವಾದದ್ದೆಂದು ತೋರಿದ್ದನ್ನು ಮಾಡುತ್ತಲೇ ಇದ್ದಾರೆ. ಹಾಗೆ ಯುಕ್ತವಾದ ಕೆಲಸಗ

ಳನ್ನು ಮಾಡುವದಕ್ಕೆ ಹೆದರುವವರು ಹೇಡಿಗಳೇ ಸರಿ. ಲೋಕಕ್ಕೆ ಹಿತಕರವಾದ ಕಾರ್ಯಗಳು ಎಲ್ಲರಿಗೂ ಹಿತಕರವಾದವುಗಳೇ. ಲೌಕಿಕಪ್ರತಿಬಂಧಕಗಳಿಗೋಸ್ಕರ ಹೆದರಿಕೊಂಡು ಕರ್ತವ್ಯವಾದ ಕಾರ್ಯವನ್ನು ಮಾಡದೆ ಬಿಡತಕ್ಕವರು ಮಹಾಪಾತಕಿಗಳು. ಮನುವು ಹೀಗೆಂದು ಹೇಳಿ ಇದ್ದಾನೆ:— "ಅಕೃತ್ಯಂ ನೈವಕರ್ತವ್ಯಂ ಪ್ರಾಣ ತ್ಯಾಗೇಪಿ ಸಂಸ್ಥಿತೇ | ನಚಕೃತ್ಯಂ ಪರಿತ್ಯಾಜ್ಯಂ ಧರ್ಮ ಏಷ ಸನಾತನಃ ||"

ಇನ್ನ್ಯಾರೂ ಈ ಕೆಲಸವನ್ನು ಮಾಡಲಿಲ್ಲವೆಂಬುವದೇ ನಾನು ಇದನ್ನು ಬಿಡುವದಕ್ಕೆ ಕಾರಣವಲ್ಲ. ನಮ್ಮ ಪೂರ್ವಿಕರೆಲ್ಲರೂ ಯಾರೂ ಮಾಡದ ಕೆಲಸವನ್ನು ನಾವು ಹ್ಯಾಗೆ ಮಾಡುವದು ಎಂದು ಅಂದುಕೊಂಡು ಸುಮ್ಮನೆ ಇದ್ದರೆ ಈಗ ನಾವು ಆಚರಿಸತಕ್ಕ ವೃದ್ಧಾಚಾರಗಳು ಹ್ಯಾಗೆತಾನೆ ಆಗುತ್ತಿದ್ದವು ? ಆರಂಭಿಸಿದ ಕೆಲಸದಲ್ಲಿ ಫಲೋತ್ಪತ್ತಿಯನ್ನು ಪಡೆಯಬೇಕು ; ಇಲ್ಲದಿದ್ದರೆ ಪ್ರಾಣತ್ಯಾಗವನ್ನಾದರೂ ಮಾಡಿಕೊಳ್ಳಬೇಕು. ಮನುವು ಹೀಗೆಂದು ಹೇಳಿದ್ದಾನೆ:—

"ಆರಭ್ಯತೇ ನಖಲು ವಿಘ್ನಭಯೇನ ನೀಚೈಃ ಆರಭ್ಯ ವಿಘ್ನನಿಹತಾ ವಿರಮಂತಿ ಮಧ್ಯಾಃ || ವಿಘ್ನೈಃ ಪುನಃಪುನರಪಿ ಪ್ರತಿಹನ್ಯಮಾನಾಃ ಪ್ರಾರಬ್ಧಮುತ್ತಮಜನಾ ನಪರಿತ್ಯಜಂತಿ ||"

ವಿಘ್ನಭಯದಿಂದ ಬಂದು ಕೆಲಸವನ್ನು ಪ್ರಾರಂಭಿಸದೆ ಇರುವವರು ನೀಚರು ; ಕೆಲಸವನ್ನು ಆರಂಭಿಸಿ ಮಧ್ಯೆ ವಿಘ್ನಗಳು ಬಂದು ಬಡಗಿದರೆ ಅದನ್ನು ಅಲ್ಲಿಗೇ ಬಿಟ್ಟುಬಿಡುವವರು ಮಧ್ಯಮರು ; ಹಾಗಲ್ಲದೆ ಮಧ್ಯದಲ್ಲಿ ಎಷ್ಟು ವಿಘ್ನಗಳು ಬಂದು ಪ್ರಾಪ್ತಿಸಿದರೂ ಹಿಡಿದಕಾರ್ಯವನ್ನು ನೆರವೇರಿಸುವವರು ಉತ್ತಮರು. ಎಷ್ಟು ವಿಘ್ನಗಳು ಬಂದರೂ ಅವುಗಳನ್ನು ಲಕ್ಷ್ಯಮಾಡದೆ ಆರಂಭಿಸಿದ ಕಾರ್ಯವನ್ನು ನೆರವೇರಿಸಬೇಕು. ಆದದರಿಂದ ಪ್ರಾರಂಭಿಸಿದ ಈ ಯುಕ್ತವಾದಕಾರ್ಯವನ್ನು ನಾನು ಬಿಡತಕ್ಕವನಲ್ಲ. ತಾವೆಲ್ಲರೂ ದಯವಿಟ್ಟು ಇಷ್ಟು ಕಾಲನನಗೋಸ್ಕರ ನಿಂತದ್ದಕ್ಕಾಗಿ ತುಂಬಾಕೃತಜ್ಞನಾಗಿ ಇದ್ದೇನೆ.

ಎಲ್ಲಾ ಹೊಕ್ಕಿತು, ಬಾಲಮಾತ್ರ ಉಳಿಯಿತು.

೨. ವೈದ್ಯಶಾಸ್ತ್ರ. (ಜ್ವರ.)

ರೋಗಗಳಲ್ಲೆಲ್ಲಾ ಬಹಳ ವಾಡಿಕೆಯಾಗಿ ಬರತಕ್ಕದ್ದು ಜ್ವರವು. ಜ್ವರ ಬಂದಾಗ ಚರ್ಮವು ಬಿಸಿಯಾಗುವದು ; ನಾಡಿಯು ೨೪ ಘಂಟೆಗಳವರಿಗೂ ಅವಿಚ್ಛಿನ್ನವಾಗಿ ವೇಗವಾಗಿರುವದು ; ತಲೆ ನೋಯುವದು ; ನಿದ್ರೆ ಬರುವದಿಲ್ಲ ; ಬಾಯಿಯಲ್ಲಿ ಕೆಟ್ಟವಾಸನೆ ಹುಟ್ಟುವದು ; ದಾಹ ಹೆಚ್ಚುವದು ; ಹಸಿವು ಮುಚ್ಚಿಹೋಗುವದು. ಜ್ವರ ಬರುವದಕ್ಕೆ ಮುಂಚೆ ಚಳಿ ಬರುವದೂ ಉಂಟು. ಜ್ವರದ ತರುವಾಯ ಶರೀರವು ಬೆವರಿ ಶಾಖ, ತಲೆನೋವು, ದಾಹ, ನಾಡೀಚಲನ, ಇವೆಲ್ಲಾ ಕ್ರಮೇಣ ಕಡಿಮೆಯಾಗುವವು. ಜ್ವರದ ಕಾಲದಲ್ಲಿ ರಕ್ತಚಲನೆಯು ಹೆಚ್ಚಾಗಿ, ಆಹಾರವು ಕಡಿಮೆಯಾಗಿ, ಶರೀರದ ಉಷ್ಣವೂ ಕಡಿಮೆಯಾಗುವದರಿಂದ ದೇಹವು ಕೃಶವಾಗುವದು.

ಜ್ವರವು ರಕ್ತ ಕೆಡುವದರಿಂದಲೂ ಬರುವದುಂಟು. ಇದಲ್ಲದೆ ಶರೀರದಲ್ಲಿ ವ್ರಣ ಮುಂತಾದವುಗಳಿಂದ ರಕ್ತದಲ್ಲಿ ಸೇರಿದ ವಿಷದಿಂದ ಜ್ವರಬಂದ ಕಾಲವಲ್ಲಿ ಅದು ಬಲವಾದದ್ದೆಂದು ತಿಳಿಯಬೇಕು. ವ್ರಣಸಂಬಂಧವಾದ ಜ್ವರಗಳು ಆ ವ್ರಣವನ್ನು ಪರಿಹಾರಮಾಡುವದರಿಂದಲೇ ವಾಸಿಯಾಗುವವು. ಜ್ವರಗಳಲ್ಲಿ ಪ್ರತಿನಿತ್ಯವೂ ಬರತಕ್ಕ ಜ್ವರಕ್ಕೆ ಸಂತತಜ್ವರವೆಂದು ಹೇಳುವರು. ಇದಲ್ಲದೆ ಜ್ವರಗಳು ದಿನ ಬಿಟ್ಟು ದಿನ, ೪ ದಿನಕ್ಕೆ ೧ ಸಾರಿ ಹೀಗೆ ಕಾಲ ತಪ್ಪಿ ಬರುವದುಂಟು. ಹೀಗೆ ಬಿಟ್ಟುಬಿಟ್ಟು ಬರತಕ್ಕ ಜ್ವರಗಳು ಕೆಟ್ಟಗಾಳಿಯಿಂದ ಹುಟ್ಟುವ ವಿಷಜನ್ಯವಾದವುಗಳು.

ರೋಗಿಯು ಜ್ವರಪೀಡಿತನಾಗಿರುವಾಗ ವೈದ್ಯನು ಚಿಕಿತ್ಸೆಯಿಂದ ಮೊದಲು ಶರೀರದ ಕಾವನ್ನು ಕಡಿಮೆಮಾಡಬೇಕು ; ನಾಡೀಚಲನೆಯನ್ನು ಪೂರ್ವಸ್ಥಿತಿಗೆ ತರಬೇಕು ; ಮೈ ಬೆವರುವಹಾಗೂ ಜಲಮಲಗಳು ಕ್ರಮವಾಗಿ ವಿಸರ್ಜನೆಯಾಗುವಹಾಗೂ ತಕ್ಕ ಚಿಕಿತ್ಸೆ ಮಾಡಿ ಆ ಕಾಲಕ್ಕೆ ತಕ್ಕ ಅಂದರೆ ಸುಲಭವಾಗಿ ಜೀರ್ಣಕ್ಕೆ ಬರುವ ಆಹಾರವನ್ನು ಕೊಡಬೇಕು. ಶಾಖವನ್ನು ಕಡಿಮೆಮಾಡುವದಕ್ಕೋಸ್ಕರ ಹುಳೀ ದ್ರಾಕ್ಷೀರಸವನ್ನೂ (ಇದಕ್ಕೆ ತುರುಕರು ಅಂಗೂರಾ ಸಿರ್ಕಾ ಎಂದು ಹೇಳುತ್ತಾರೆ.) ನೀರನ್ನೂ ಬೆರಸಿ

ಚಿಕ್ಕಗೆಮಾಡಿ ಅವರಲ್ಲಿ ಸ್ಪಂಜನ್ನು ಅದ್ದಿ ಮೈಗೆ ಸವರುವದುಂಟು. ತಣ್ಣಗಿರತಕ್ಕ ಎಗರುನೀರನ್ನು ಕುಡಿಯುವವಕ್ಕೆ ಕೊಡುವದುಂಟು. ಇದು ಜ್ವರವು ಸಾಮಾನ್ಯವಾಗಿದ್ದಾಗ ಚಿಕಿತ್ಸೆ. ಇದಲ್ಲದೆ ಸಾಮಾನ್ಯಜ್ವರವು ಬಂದಾಗ ತುಂಗಮುಸ್ತೆ; ಪರ್ಪಾಟಕ, ಕಹಿಪಡವಲ, ನಾರುಂಬೇಳ್, ನಾಯಿ ಬೇಲ, ವಿಷ್ಣುಕ್ರಾಂತಿ, ಲಾಮಂಚ, ಬಜೆ, ಶ್ರೀಗಂಧ ಇವುಗಳಲ್ಲಿ ಯಾವದಾ ದರೂ ಒಂದನ್ನು ಕಷಾಯಮಾಕಿ ಕುಡಿಯುತ್ತಾ ಬಂದರೆ ಬೆವರುಹುಟ್ಟುವದು. ರಸಕರ್ಪೂರವನ್ನು ಜೇನುತುಪ್ಪದಲ್ಲಿ ತೇದು ಕೊಡುವದು ಈ ದೇಶದ ವೈದ್ಯ. ನೀಲಾಂಜನ ಭಸ್ಮವನ್ನೂ ರಸ ಭಸ್ಮವನ್ನೂ ಸೇರಿಸಿಕೊಡುವದು ಇಂಗ್ಲೀಷ್‌ವೈದ್ಯವು. ಜ್ವರವು ಬಹಳ ಹೆಚ್ಚಾಗಿದ್ದಾಗ ಕೆಲವು ಇಂಗ್ಲೀಷ್ ವೈದ್ಯರು ತಲೆಗೆ ಹಿಮದ ಗಡ್ಡೆಯಲ್ಲಿ ಮಾಡಿದ ಟೋಪಿಯನ್ನು ಹಾಕಿ ಶರೀರಕ್ಕೆ ಒದ್ದೇಬಟ್ಟೆಯನ್ನು ಸುತ್ತಿ ಹೊಟ್ಟೆಗೂ ತಂಪು ಮಾಡತಕ್ಕ ಔಷಧ ಗಳನ್ನು ಕೊಡುವರು.

ಜ್ವರ ಪೀಡಿತರಾದವರಿಗೆ ಶರೀರಕ್ಕೂ ಮನಸ್ಸಿಗೂ ಬಾಧಕವಾಗತಕ್ಕ ಯಾವ ಕೆಲಸವನ್ನೂ ಮಾಡಬಾರದು, ಅಂದರೆ ಅವರನ್ನು ಮೆತ್ತಗಿರುವ ಹಾಸಿಗೇಮೇಲೆ ಮಲಗಿಸಿ ಉಪಚಾರ ಮಾಡುವದಕ್ಕೆ ಮಾತ್ರ ಒಬ್ಬರು ಸಮೀಪದಲ್ಲಿ ಇರಬೇಕು; ಅವರ ಶರೀರಕ್ಕೂ ಮನಸ್ಸಿಗೂ ವಿಶ್ರಾಂತಿಯು ಅವಶ್ಯವಾಗಿ ಬೇಕಾಗಿರುವಕಾರಣ ಅವರು ಇರತಕ್ಕ ಮನೆಯಲ್ಲಿ ಗಲಭೆ ಯಿಲ್ಲದೆ ಇರಬೇಕು; ಇವರೊಂದಿಗೆ ಮಾತನಾಡುವದಕ್ಕೋಸ್ಕರ ಬಂಧು ಮಿತ್ರರನ್ನು ಕೂಡ ಬಿಡಕೂಡದು. ಮಾತನಾಡುವದರಿಂದ ಅವರಿಗೆ ಬಾಧಕವಾಗುವದು. ಅವರು ಇರತಕ್ಕ ಮನೆಯು ವಿಸ್ತಾರವಾಗಿಯೂ ನಿರ್ಮಲವಾದ ಗಾಳಿಯ ಸಂಚಾರವುಳ್ಳದ್ದಾಗಿಯೂ ಇರಬೇಕು; ಆ ರೋ ಗಿಯ ಬಳಿಗೆ ಹೋಗತಕ್ಕವರ ಕಾಲಿನ ಶಬ್ದಕೂಡ ಕೇಳಬರಬಾರದು; ಯಾರೂ ಅಲ್ಲಿ ಮಾತನಾಡಕೂಡದು.

ಪ್ರಾಯಶಃ ಅಜೀರ್ಣದಿಂದ ಜ್ವರ ಬರುವದುಂಟು. ಆ ಕಾಲದಲ್ಲಿ ಭೇದಿಯಾಗುವದಕ್ಕೋಸ್ಕರ ಮೆಗ್ನೀಸಿಯಂ ಎಂಬ ಭೇದಿಯ ಉಪ್ಪನ್ನು

ಕೊಟ್ಟು, ಜಲಭಾಧೆಯಾಗುವಹಾಗೂ ಬೆವರು ಬರುವಹಾಗೂ ಚಿಕಿತ್ಸೆ ಮಾಡುವವರಿಂದ ಉಪಯೋಗವುಂಟು. ಬೋಳವನ್ನು (ಗೋಪರಸ) ಕೆಲವು ಬೊಟ್ಟುಗಳನ್ನು ನೀರಿನಲ್ಲಿ ಬಿಟ್ಟು ಅದರಲ್ಲಿ ಬಾಯಿಮುಕ್ಕಳಿಸುವದರಿಂದ ಬಾಯಿನ ನಾತವು ಹೋಗುವದು.

ಅಲ್ಪಜ್ವರಗಳಲ್ಲಿ ಜ್ವರವು ಅಜೀರ್ಣದಿಂದ ಬಂದಿದ್ದರೆ ನಿರಾಹಾರದಿಂದ ಗುಣವಾಗುವದು. ಆದರೆ ದೀರ್ಘಜ್ವರಗಳು ಬಂದಾಗ ರೋಗಿಗಳು ಜೀರ್ಣಿಸತಕ್ಕ ಆಹಾರವನ್ನು ಆಗಾಗ್ಯೆ ತೆಗೆದುಕೊಳ್ಳುತ್ತಲೇ ಇರಬೇಕು. ಒಂದೇಸಾರಿ ಹೆಚ್ಚಾಗಿ ಆಹಾರವನ್ನು ತೆಗದುಕೊಳ್ಳುವದಕ್ಕಿಂತ ಆಗಾಗ್ಯೆ ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಳ್ಳುವದು ಉತ್ತಮ. ಒಂದುಸಾರಿ ಆಹಾರ ತೆಗೆದುಕೊಂಡು ಮತ್ತೊಂದುಸಾರಿ ತೆಗೆದುಕೊಳ್ಳುವದಕ್ಕೆ ೩ ಘಂಟೆ ವಿರಾಮವಿರಬೇಕು. ಜ್ವರಬಂದವರಿಗೆ ಚನ್ನಾಗಿ ಬೆಂದ ಅನ್ನವೂ ರುಚಿಯಾದ ಸಾರೂ ಅಥವಾ ಮೆಣಸಿನನೀರೂ ಒಳ್ಳೇ ಪಥ್ಯವಸ್ತುಗಳು. ಅಭ್ಯಾಸವಿರುವವರು ಇದರ ಜೊತೆಗೆ ಹಾಲನ್ನೂ ತೆಗದುಕೊಳ್ಳಬಹುದು. ಕೆಲವರಿಗೆ ಆಹಾರವೇ ಸೇರದೆ ಇರುವದುಂಟು. ಇಂಥಾವರು ಹಾಲಿನಲ್ಲಿ ಸೀಮೇ ಗಂಜಿಯನ್ನು ಮಾಡಿಕೊಂಡು ಕುಡಿಯುವದು ಉತ್ತಮ. ಅನೇಕರು ಜ್ವರಬಂದಾಗ ರೋಗಿಗಳಿಗೆ ಬಲವಂತದಿಂದ ನಾನಾವಿಧವಾದ ಆಹಾರಗಳನ್ನು ಕೊಡುವರು. ಅವರು ಬಾಯಿಗೆ ರುಚಿಸದ್ದರಿಂದ ತಿನ್ನದೆ ಇದ್ದರೆ ಅನುತಾಪಪಡುವರು. ಇದು ಅಕ್ರಮ. ಬಲವಾದ ಜ್ವರ ಬಂದಾಗ ಅನ್ನಕೋಶವು ಕೆಟ್ಟಿರುವದು. ಬಲವಾದ ಆಹಾರ ಕೊಟ್ಟದ್ದೇ ಆದರೆ ಅನ್ನಕೋಶಕ್ಕೆ ಅದನ್ನು ಜೀರ್ಣಿಸತಕ್ಕ ಕೆಲಸವು ಹೆಚ್ಚಾಗಿ ವಿಶ್ರಾಂತಿ ತಪ್ಪಿ ರೋಗವು ವೃದ್ಧಿಯಾಗುವದು. ರೋಗಿಯು ತಣ್ಣೀರನ್ನು ಕೇಳಿದರೆ ಅದರಿಂದ ಏನೋ ಬಾಧಕವೆಂದು ತಿಳಿದುಕೊಂಡು ಕೊಡುವದಿಲ್ಲ. ಇದು ತಪ್ಪು. ನೀರು ಕುಡಿಯುವದರಿಂದ ವಾಂತಿಯಾಗತಕ್ಕ ಸಂದರ್ಭವಿನಹಾ ಮತ್ತೇನೂ ಬಾಧಕವಿಲ್ಲ. ಗಂಜಿ, ಟೀ, ಕಾಫಿ, ಪಕ್ವವಾದ ಫಲಗಳು, ಇವೆಲ್ಲಾ ಪಥ್ಯವಸ್ತುಗಳೆಂದೆಣಿಸಬೇಕು. ಬಲಿಯುವಾದ ರೋಗಗಳಲ್ಲಿ ಆರಾರೋಟ್ ಗಂಜಿಯನ್ನು ಮಾಡಿಸಿ ಕೊಡಬಹುದು.

೩. ಆರೋಗ್ಯ ವಿಚಾರ. (ಉಡಿಗೆಗಳು.)

ಗಾಳಿಯು ಶೀತವಾಗಿರುವಾಗ ಜನರು ಬೆತ್ತಲೆಯಿದ್ದರೆ ಶರೀರದ ಶಾಖವು ನಷ್ಟವಾಗಿ ಗಾಳಿಯಲ್ಲಿ ಸೇರಿಹೋಗುವದು. ನಾವು ಬಟ್ಟೆಗಳನ್ನು ಹಾಕಿಕೊಂಡಿದ್ದರೆ ಶರೀರದ ಶಾಖವು ಹೀಗೆ ಬೇಗ ನಷ್ಟವಾಗುವದಿಲ್ಲ. ಯಾಕಂದರೆ, ನಮ್ಮ ಶರೀರದ ಶಾಖವು ನಮ್ಮ ಬಟ್ಟೆಗಳಲ್ಲಿ ದೂರಿ ಅನಂತರದಲ್ಲಿ ಗಾಳಿಯಲ್ಲಿ ಸೇರಬೇಕಾಗಿರುತ್ತದೆ. ಬಟ್ಟೆಗಳಲ್ಲಿ ಎರಡು ವಿಧವುಂಟು. ೧ನೇದು–ಸಸ್ಯಸಂಬಂಧವಾದವುಗಳು ಅಂದರೆ ಹತ್ತಿ ನಾರು ಮುಂತಾದವುಗಳಿಂದ ಮಾಡಿದವುಗಳು, ೨ನೇದು–ಪ್ರಾಣಿಸಂಬಂಧವಾದವುಗಳು ಅಂದರೆ ಮೃಗಗಳ ತುಪ್ಪಟ ಮುಂತಾದವುಗಳಿಂದ ಮಾಡಿದವುಗಳು. ನೂಲು ಮತ್ತು ನಾರು ಬಟ್ಟೆಗಳನ್ನು ಹಾಕಿಕೊಂಡಿದ್ದಾಗ್ಯೂ ಶರೀರದ ಶಾಖವು ತೀವ್ರವಾಗಿ ನಷ್ಟವಾಗುವದು. ತುಪ್ಪಟದ ಬಟ್ಟೆಗಳನ್ನು ಹಾಕಿಕೊಂಡಿದ್ದರೆ ಆ ಶಾಖವು ಸಾವಕಾಶವಾಗಿ ನಷ್ಟವಾಗುವದು. ನಮ್ಮ ಶರೀರದ ಸಮಸ್ತ ರೋಮಕೂಪಗಳಿಂದಲೂ ಬೆವರು ಹೊರಗೆ ಹೊರಡುವದು. ಈ ಬೆವರು ಬಟ್ಟೆಗಳನ್ನು ಹಾಕಿಕೊಳ್ಳದಿದ್ದರೆ ಶರೀರದ ಶಾಖವನ್ನು ತೆಗೆದುಕೊಂಡು ವಾಯುರೂಪವಾಗಿ ಗಾಳಿಯಲ್ಲಿ ಸೇರುವದು. ತುಪ್ಪಟದ ಬಟ್ಟೆಗಳನ್ನು ಹಾಕಿಕೊಂಡಿದ್ದರೆ ಹೀಗಾಗುವದಿಲ್ಲ. ಹೀಗೆ ಶಾಖವು ನಷ್ಟವಾಗುವದರಿಂದ ಶೀತಸಂಬಂಧವಾದ ರೋಗಗಳೂ ಕ್ಷಯಜಾಡ್ಯವೂ ಬರುವವು; ದೇಹದಾರ್ಢ್ಯವು ಕಡಿಮೆಯಾಗುವದು; ಬುದ್ಧಿಯು ಮಂದವಾಗುವದು. ತುಪ್ಪಟದ ಬಟ್ಟೆಗಳು ನಾರು ಮತ್ತು ನೂಲು ಬಟ್ಟೆಗಳಿಗಿಂತ ಉತ್ತಮವಾದವುಗಳು. ಅವುಗಳನ್ನು ಹಾಕಿಕೊಳ್ಳತಕ್ಕವರಿಗೆ ಅವು ಬೇಸಿಗೇ ಕಾಲದಲ್ಲಿ ತಣುವನ್ನೂ ಚಳಿಗಾಲದಲ್ಲಿ ಶಾಖವನ್ನೂ ಉಂಟುಮಾಡುವವು. ಶಾಖವಾದ ಬಟ್ಟೆಗಳನ್ನು ಹಾಕಿಕೊಂಡಿದ್ದರೆ ಶರೀರದ ಪೋಷಣೆಗೆ ಆಹಾರವು ಸ್ವಲ್ಪ ಕಡಿಮೆಯಾದರೂ ಸಾಕಾಗಿರುತ್ತದೆ, ಅಂದರೆ ಹೆಚ್ಚಾದ ಆಹಾರವು ಅಪೇಕ್ಷೆಯಿರುವದಿಲ್ಲ. ಹಾಗಿಲ್ಲದಿದ್ದರೆ ಶರೀರದ ಶಾಖವು ಕಡಿಮೆಯಾಗುವದರಿಂದ ಪುನಃ ಆಹಾರವನ್ನು ತೆಗೆದುಕೊಂಡು ಶಾಖವನ್ನು ಹುಟ್ಟಿಸಬೇಕಾಗಿರುತ್ತದೆ. ಈ ಉಪಾಯವನ್ನು ತಿಳಿದು

ಕೊಂಡು ಹುಲ್ಲು ಹುರಳಿಯನ್ನು ಮಿತವಾಗಿ ವೆಚ್ಚಮಾಡಿ ಮಿಕ್ಕದ್ದನ್ನು ಮಿಗಿಸಿಕೊಳ್ಳುವದಕ್ಕೋಸ್ಕರ ಕೆಲವು ದೇಶಗಳಲ್ಲಿ ಎತ್ತು ಕುದುರೆ ಮೊದಲಾದವುಗಳಿಗೆಲ್ಲಾ ಶಾಖವಾದ ಹೊದ್ದಿಕೆಯನ್ನು ಹೊದಿಸುತ್ತಾರೆ. ತುಬಟೆಗಳು, ಕೂದಲು, ರೇಶ್ಮೆ, ಚರ್ಮ, ಇವುಗಳಿಂದ ಮಾಡಿದ ಹೊದಿಕೆಗಳು ಶಾಖವಾಗಿರುವವು. ಹತ್ತಿ, ಶೆಣಬು, ನಾರು ಮುಂತಾದವುಗಳಿಂದ ಮಾಡಿದ ಬಟ್ಟೆಗಳು ಅಷ್ಟು ಶಾಖವಾಗಿರುವದಿಲ್ಲ. ಹತ್ತೀ ಬಟ್ಟೆಗಳು ನಾರು ಬಟ್ಟೆಗಳಿಗಿಂತ ಉತ್ತಮವಾಗಿಯೂ ತುಬಟೆದವುಗಳಿಗಿಂತ ಕಡಿಮೆಯಾಗಿಯೂ ಇವೆ. ಇವು ರೋಮಕೂಪಗಳಿಂದ ಹೊರಗೆ ಬರತಕ್ಕ ಬೆವರು ಮುಂತಾದ ಕಶ್ಮಲಗಳನ್ನು ಹೊರಗೆ ಬಿಡುತ್ತವೆ. ಈ ಗುಣವು ನಾರು ಬಟ್ಟೆಗಳಲ್ಲಿ ಇಲ್ಲ. ಆದ್ದರಿಂದ ಅವುಗಳನ್ನು ಚರ್ಮದ ಮೇಲೆ ಹಾಕಿಕೊಳ್ಳಬಾರದು. ಬೇಸಿಗೆಯಲ್ಲಿಯೂ ಚಳಿಗಾಲದಲ್ಲಿಯೂ ಕೂಡ ಒಳಗಿನ ಬಟ್ಟೆಯು ತುಬಟೆದ್ದಾಗಿ ಇರಬೇಕು. ಇದರಿಂದ ಬೇಸಿಗೇಕಾಲದಲ್ಲಿ ಶಾಖವು ಮತ್ತೂ ಹೆಚ್ಚಾಗುವದೆಂದು ಅನೇಕರು ತಿಳಿದುಕೊಳ್ಳುವರು. ಇದು ಅನುಭವಸಿದ್ಧವಾದ ಮಾತಲ್ಲ. ಯಾಕಂದರೆ, ಬೇಸಿಗೇ ಕಾಲದಲ್ಲಿ ಇದರಿಂದ ತನುವು ಆಗುವದೇ ಹೊರ್ತು ಶಖೆಯಾಗುವದಿಲ್ಲ. ನಿದ್ದೆ ಮಾಡುವಾಗ ಫ್ಲಾನಲ್ ಉಡುಪುಗಳನ್ನು ಹಾಕಿಕೊಂಡಿದ್ದರೆ ಶೀತಸಂಬಂಧವಾದ ರೋಗಗಳ್ಯಾವವೂ ಬರುವದಿಲ್ಲ. ಮಕ್ಕಳಿಗೆ ಶರೀರಶಾಖವು ಬಹಳ ಮುಖ್ಯವಾದದ್ದು. ಮಕ್ಕಳು ಬಹಳ ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಇರಬೇಕಾದರೆ ಶರೀರಕ್ಕೆ ಫ್ಲಾನಲ್ ಬಟ್ಟೆಯನ್ನು ಹೊದಿಸಬೇಕು. ಕಾಗದವು ಫ್ಲಾನಲ್‌ಗೆ ಸಮಾನವಾದದ್ದು. ಫ್ಲಾನಲನ್ನು ಕೊಂಡುಕೊಳ್ಳುವದಕ್ಕೆ ಚೈತನ್ಯವಿಲ್ಲದವರು ಕಾಗದಗಳನ್ನು ಸೇರಿಸಿ ದಟ್ಟಮಾಡಿ ಮೇಲೆ ಬಟ್ಟೆಹಾಕಿ ಹೊಲಿದು ಅವುಗಳನ್ನು ಹಾಕಿಕೊಳ್ಳ ಬಹುದು. ರಾತ್ರಿಯಲ್ಲಿ ತೊಡುವ ಫ್ಲಾನಲನ್ನೂ ಚರ್ಮದ ಮೇಲೆ ತೊಡುವ ಫ್ಲಾನಲನ್ನೂ ಪ್ರತಿದಿನವೂ ತೊಳೆದು ಗಾಳಿಯಲ್ಲಿ ಆರಹಾಕಬೇಕು. ಶೀತಪ್ರಕೃತಿಯವರೂ, ಶ್ಲೇಷ್ಮಪ್ರಕೃತಿಯವರೂ, ಉಬ್ಬಸರೋಗದವರೂ, ಭೇದಿಮಾಡಿಕೊಳ್ಳುತ್ತಾ ಇರುವವರೂ

ಫ್ಲಾನೆಲ್ ಉಡುಪುಗಳನ್ನು ಹಾಕಿಕೊಂಡಿದ್ದರೆ ಆ ರೋಗಗಳು ತೊಲಗಿ ಆರೋಗ್ಯವಾಗಿ ಇರುವರು. ವಾತರೋಗದವರಿಗೆ ಷಾಮ್ವಾಲೆದರ್ ಎಂಬ ಚರ್ಮದ ಉಡುಪುಗಳು ಒಳ್ಳೇವು.

೪. ಮಕ್ಕಳನ್ನು ಪೋಷಿಸುವ ವಿಧ.

ಲೋಕದಲ್ಲಿ ಶಿಶುಗಳು ಜನನವಾಗುವದಕ್ಕೆ ಮುಂಚೆಯೇ ಪ್ರಾಣ ಬಿಡುವವು. ಮುಕ್ಕಾಲುಪಾಲು ಮಕ್ಕಳು ಹುಟ್ಟಿದ ಹತ್ತು ದಿನಗಳಲ್ಲಿಯೇ ಪ್ರಾಣಬಿಡುವವು. ಹತ್ತು ದಿವಸಗಳಮೇಲೆ ಬದುಕತಕ್ಕ ಮಕ್ಕಳಲ್ಲಿ ಅರ್ಧ ಮಕ್ಕಳು ೫ವರ್ಷಗಳೊಳಗಾಗಿ ಸಾಯುವವು. ಮೂಢರಾದ ತಂದೆತಾಯಿಗಳು ಇದೆಲ್ಲಾ ತಮ್ಮ ದುರದೃಷ್ಟವೆಂದು ತಿಳಿಯುವರೇ ಹೊರ್ತು ತಮ್ಮ ಅಜ್ಞಾನ ಜನ್ಯವಾದ ವುಗಳೆಂದು ತಿಳಿಯುವದಿಲ್ಲ. ಲೋಕದಲ್ಲಿ ಜನರು ತಮ್ಮ ಮನೆಗಳಲ್ಲಿರತಕ್ಕ ಹಸು ಕರು ನಾಯಿ ಕುದುರೆ ಮುಂತಾದವುಗಳನ್ನೆಲ್ಲಾ ಯಾವ ರೀತಿಯಲ್ಲಿ ಸಾಕಬೇಕೆಂಬದನ್ನು ತಕ್ಕಮಟ್ಟಿಗೆ ತಿಳಿದುಕೊಂಡೇ ಇರುವರು. ಮೂಢರಾದ ಅನೇಕರು ತಮ್ಮ ಮಕ್ಕಳನ್ನು ಯಾವರೀತಿಯಲ್ಲಿ ಸಾಕಬೇಕೋ ಅವರಿಗೆ ಆಹಾರ ವಸ್ತುಗಳನ್ನು ಯಾವ ಯಾವ ಕಾಲದಲ್ಲಿ ಹ್ಯಾಗೆ ಹ್ಯಾಗೆ ಕೊಡಬೇಕೋ ಸ್ನಾನಪಾನಾದಿಗಳಿಗೆ ಏನು ಏರ್ಪಾಡು ಮಾಡಬೇಕೋ ಅದನ್ನು ಚನ್ನಾಗಿ ತಿಳಿದುಕೊಂಡು ಆಚರಿಸದೆ ತಮ್ಮ ಅವಿವೇಕದಿಂದ ಮಕ್ಕಳು ಸತ್ತರೆ ಇದು ದೇವರ ಸಂಕಲ್ಪವೆಂದು ತಿಳಿದುಕೊಂಡು ಇಂಥಾ ಕೊಲೆಗಳಿಗೆಲ್ಲಾ ದೇವರನ್ನು ಕಾರಣಭೂತನನ್ನಾಗಿ ಎಣಿಸುವರು. ಗರ್ಭದಲ್ಲಿಯೇ ಮೊಗುವು ಸಾಯುವದಕ್ಕೂ ಅಥವಾ ಜನನವಾದಾಗಲಾಗಲೀ ಕೆಲವು ದಿನಗಳಾದಮೇಲಾಗಲೀ ಸಾಯುವದಕ್ಕೂ ಅಥವಾ ಹುಟ್ಟಿದ ಮಕ್ಕಳು ಕೃಶವಾಗಿ ಶಕ್ತಿಯಿಲ್ಲದೆ ಇರುವದಕ್ಕೂ ಆ ಮಕ್ಕಳ ತಾಯಿಯ ಅಜ್ಞಾನವೇ ಮುಖ್ಯವಾದ ಕಾರಣವು. ಮೊಗುವು ತಾಯಿಯ ಗರ್ಭದಲ್ಲಿರುವಾಗ ತಾಯಿಯು ಸ್ನಾನ ಪಾನಗಳಲ್ಲಿಯೂ ಆಹಾರ ವ್ಯವಹಾರಗಳಲ್ಲಿಯೂ ಕ್ರಮವನ್ನು ಬಿಟ್ಟು ನಡಿ

ಯಬಾರದು. ನಿರ್ಮಲವಾದ ಗಾಳಿ ಇರತಕ್ಕ ಸ್ಥಳಗಳಲ್ಲಿ ಶಕ್ಯವಾದ ಮಟ್ಟಿಗೆ ಕೆಲಸಮಾಡುವದರಿಂದ ದೇಹಕ್ಕೆ ಸಾಧನೆಯನ್ನು ಕೊಡಬೇಕು. ಸಮಸ್ತ ವ್ಯಾಕುಲಗಳನ್ನೂ ಬಿಟ್ಟು ಸಾಧ್ಯವಾದಮಟ್ಟಿಗೂ ಸಂತೋಷವನ್ನು ಉಂಟು ಮಾಡತಕ್ಕ ಆಟಪಾಟಗಳಲ್ಲಿ ಕಾಲಹರಣಮಾಡಬೇಕು. ಹಸು ಕೇಸವಿದ್ದರೂ ನಿದ್ದೆ ಕೆಡಬಾರದು. ಈ ಕಟ್ಟಳೆಗಳನ್ನು ಅತಿಕ್ರಮಿಸಿ ನಡೆದರೆ ತನ್ನ ದೇಹಕ್ಕೂ ಕೂಡಲೆ ತನ್ನ ಗರ್ಭದಲ್ಲಿರುವ ಮಗುವಿಗೂ ಬಾಧೆಯುಂಟಾಗುವದು. ಇವುಗಳನ್ನೆಲ್ಲಾ ಉಪೇಕ್ಷೆಮಾಡತಕ್ಕ ಜನಗಳಿಗೆ ಅವರು ತಾವು ನಿರ್ದೋಷಿಗಳೆಂದು ತಿಳಿದುಕೊಂಡಿದ್ದಾಗ್ಯೂ ಅವರಿಗೆ ಶಿಶುಹತ್ಯಾ ದೋಷ ಬರುವದು. ಯಾಕಂದರೆ, ಗರ್ಭವನ್ನು ಧರಿಸಿರುವ ಸ್ತ್ರೀಯು ಈ ಕಟ್ಟಳೆಗಳನ್ನು ಆಚರಿಸದೆ ಇರುವದರಿಂದ ಶಿಶುವಿಗೆ ಬಾಧಕವಾಗಿ ಗರ್ಭದಲ್ಲಾಗಲೀ ಜನನವಾದ ಮೇಲಾಗಲೀ ಸಾಯುವದು; ಅಥವಾ ಬದುಕಿ ಇದ್ದಾಗ್ಯೂ ಅನಂತರದಲ್ಲಿ ಇವರ ಅಜಾಗರೂಕತೆಯಿಂದಲೇ ರೋಗದಿಂದ ನರಳುತ್ತಾ ಇರುವದು. ಆದಕಾರಣ ಸ್ತ್ರೀಯರು ಮಕ್ಕಳನ್ನು ಪಡೆಯುವದಕ್ಕೆ ಮುಂಚೆಯೇ ಯಾವಯಾವ ರೀತಿಯಲ್ಲಿ ಇದ್ದರೆ ದೃಢಕಾಯರಾಗಿಯೂ ದೀರ್ಘಾಯುಗಳಾಗಿಯೂ ಬುದ್ಧಿಶಾಲಿಗಳಾಗಿಯೂ ಇರತಕ್ಕ ಮಕ್ಕಳನ್ನು ಪಡೆಯುವರೋ ಅದನ್ನು ಮೊದಲೇ ತಿಳಿದುಕೊಳ್ಳಬೇಕು. ಈ ವಿಷಯವನ್ನು ಅವರಿಗೆ ತಿಳಿಸುವದಕ್ಕೋಸ್ಕರ ಕೆಲವು ಕಟ್ಟಳೆಗಳನ್ನು ಸಂಕ್ಷೇಪವಾಗಿ ಇಲ್ಲಿ ಬರೆಯುವೆವು.

ಜನನವಾದ ಕೂಡಲೆ ಮಗುವು ಆರು ಪೌಂಡಿನಿಂದ ಎಂಟು ಪೌಂಡಿವರಿಗೂ ತೂಕವಿರುವದುಂಟು. ಮಾಂಸಭೋಜನ ಮಾಡತಕ್ಕ ಜನಗಳಲ್ಲಿ ೧೦—೧೨ ಪೌಂಡು ಇರುವದೂ ಉಂಟು. ಸಾಧಾರಣವಾಗಿ ಗಂಡುಮಕ್ಕಳು ಹೆಣ್ಣು ಮಕ್ಕಳಿಗಿಂತ ಸ್ವಲ್ಪ ಹೆಚ್ಚು ತೂಗುವರು. ಜನನವಾದ ಮಗುವು ೧೭ರಿಂದ ೧೯ ಅಂಗುಲ ಉದ್ದವಾಗಿರುವದು. ಜನನವಾದಕೂಡಲೆ ಸಾವಕಾಶ ಮಾಡದೆ ಮಗುವನ್ನು ತೊಳೆಯಬೇಕು. ತೊಳೆಯುವದಕ್ಕೆ ನೀರು ಬಹಳ ತಣ್ಣಗೂ ಬಹಳ ಬಿಸಿಯಾಗಿಯೂ ಇರಕೂಡದು. ಮಕ್ಕಳು ಚಳಿಯನ್ನು

ತಡೆಯಲಾರವು. ಆದಕಾರಣ ಚಳಿಯು ನಿವಾರಣೆಯಾಗುವಹಾಗೆ ಹೊದಿಸಬೇಕು. ಶಾಖವಾಗಿಯೂ ತೆಳ್ಳಗೂ ಇರತಕ್ಕದ್ದು ಫ್ಲಾನಲ್ ಆದ್ದರಿಂದ ಇದೇ ಉತ್ತಮವಾದ ಹೊದ್ದಿಕೆ. ದೊಡ್ಡವರಿಗಿಂತಲೂ ಮಕ್ಕಳಿಗೆ ನಿರ್ಮಲವಾದ ಗಾಳಿಯು ಹೆಚ್ಚಾಗಿ ಬೇಕಾಗಿರುವದರಿಂದ ಗಾಳಿಯು ಸಂಚಾರವಿರತಕ್ಕ ವಿಸ್ತಾರವಾದ ಮನೆಯಲ್ಲಿ ಬಾಣಂತಿಯನ್ನೂ ಮಗುವನ್ನೂ ಇಡಬೇಕು. ಮಗುವಿಗೆ ಉಚ್ಛ್ವಾಸನಿಶ್ವಾಸಗಳಿಗೆ ಅಟಂಕವಿಲ್ಲದಂತೆ ತುಂಬಾ ಹೊದಿಸಬೇಕು. ಬಾಣಂತಿಯನ್ನೂ ಮಗುವನ್ನೂ ಬೀಸುವ ಗಾಳಿಗೆ ಎದುರಾಗಿ ಇಡಕೂಡದು. ಬಾಣಂತಿಯರಿಗೆ ದಾಹವಾದರೆ ಬಿಸಿ ನೀರನ್ನು ಕೊಡಬಹುದು. ಈ ಸುಲಭವಾದ ಕಟ್ಟಳೆಗಳನ್ನು ಅತಿಕ್ರಮಿಸುವದರಿಂದಲೇ ಅನೇಕ ಮಕ್ಕಳು ಹತ್ತು ದಿನಗಳೊಳಗಾಗಿ ಸತ್ತು ಹೋಗುವವು. ಮಕ್ಕಳು ಹುಟ್ಟಿದ ಕೂಡಲೆ ಗಟ್ಟಿಯಾಗಿ ಅಳುವರು. ಇದರಿಂದ ಏನೂ ಬಾಧಕವಿಲ್ಲ. ಅಂಥಾ ಮಕ್ಕಳಿಗೆ ಪ್ರಾಣಭಯವೇನೂ ಇರುವದಿಲ್ಲ. ಕೆಲವು ಮಕ್ಕಳು ಚೇತರಿಯಿಲ್ಲದೆ ನರಳುತ್ತಾ ಅಳುವರು. ಇವರು ಬದುಕುವದು ಕಷ್ಟ. ಮಗುವನ್ನು ಪ್ರತಿದಿನ ಪ್ರಾತಃಕಾಲದಲ್ಲಿಯೂ ತೊಳೆಯಬೇಕು. ಇದರಿಂದ ಮೈಗೆ ರೋಗಗಳು ಹತ್ತುವದಿಲ್ಲ. ಶರೀರಕ್ಕೆ ಬಲ ಬರುವದು. ಮಕ್ಕಳ ತಲೆಯನ್ನು ಪ್ರತಿದಿನ ಪ್ರಾತಃಕಾಲದಲ್ಲಿಯೂ ತೊಳೆಯುವದು ಒಳ್ಳೇದು. ಹೀಗೆ ತೊಳೆಯದಿದ್ದರೆ ಮೈಮೇಲೂ ತಲೆಯಲ್ಲೂ ಕೊಳೆಯಿಂದ ಕ್ರಿಮಿಗಳು ಹುಟ್ಟಿ ಚರ್ಮರೋಗಗಳಿಗೆ ಆಸ್ಪದವಾಗುವದೆಂದು ಪಂಡಿತರು ಭೂತಕನ್ನಡಿಯಿಂದ ನೋಡಿ ಪರೀಕ್ಷಿಸಿರುತ್ತಾರೆ. ಇಂಥಾ ರೋಗಗಳಿಂದ ಅನೇಕ ಮಕ್ಕಳು ಸಾಯುವದೂ ಉಂಟು. ಆದದರಿಂದ ಆರೋಗ್ಯವಾಗಿರಬೇಕಾದರೆ ಶರೀರವನ್ನು ನಿರ್ಮಲವಾಗಿ ತೊಳೆಯುವದಲ್ಲದೆ ಚನ್ನಾಗಿ ಒಗೆದ ಬಟ್ಟೆಗಳನ್ನು ಹೊದಿಸಬೇಕು. ಮನೆಗಳನ್ನೂ ಅದರ ಸುತ್ತುಮುತ್ತು ಇರುವ ಪ್ರದೇಶಗಳನ್ನೂ ನಿರ್ಮಲವಾಗಿ ಇಡಬೇಕು. ಹೀಗೆ ಮಾಡುವದರಿಂದ ಮಕ್ಕಳಿಗೆ ಕ್ರಮವಾಗಿ ಹಸಿವು ಹುಟ್ಟಿ ಬಲ ಬಂದು ಆರೋಗ್ಯ ಉಂಟಾಗುವದು. ಮಕ್ಕಳನ್ನು ತೊಳೆಯತಕ್ಕ ಸ್ಥಳವು ವಿಶಾಲ

ಒಕ್ಕಳಜೊನ್ನಿನ ವರದ್ದೀ.

ನಾಗಿಯೂ ವಾಯುಸಂಚಾರ ವುಳ್ಳದ್ದಾಗಿಯೂ ಇರಬೇಕು. ಆದರೆ ಬಿಸ್ಲಿಂದು ಗಾಳಿ ಬೀಸುವ ಸ್ಥಳವಾಗದು. ಬಹಳ ಚಳಿಯಾಗಿದ್ದರೆ ಸಮೀಪದಲ್ಲಿ ಉರಿ ಹಾಕಿ ಕಾವ ಮಾಡಿಕೊಂಡು ಇರಬೇಕು. ಮಳೇನೀರನ್ನು ಹಿಡಿದು ಕೂಡಿ ಹಾಕಿದ್ದು ಅದರಿಂದ ಮಗುವನ್ನು ತೊಳೆದರೆ ಒಳ್ಳೇದು. ಶರೀರವನ್ನು ನಿರ್ಮಲವಾಗಿ ತೊಳೆಯಬೇಕಾದರೆ ಸಾಬೂನನ್ನು ಉಪಯೋಗಿಸಬೇಕು. ಶರೀರದಮೇಲೆ ಗುಳ್ಳೆಗಳಿದ್ದರೆ ಗ್ಲಿಸರೈನ್ ಸೋಪನ್ನೂ ಇಲ್ಲದಿದ್ದರೆ ಕ್ಯಾಸ್ಟೈಲ್ ಸೋಪನ್ನೂ ಉಪಯೋಗಿಸಬೇಕು. ಅದೂ ಇಲ್ಲದ ಪಕ್ಷದಲ್ಲಿ ಕಡಲೆ ಹಿಟ್ಟು ಅಥವಾ ಹೆಸರುಹಿಟ್ಟಿನಿಂದ ಉಜ್ಜಬಹುದು. ಮಕ್ಕಳಿಗೆ ನೀರುಹಾಕುವಾಗ ನೀರನ್ನು ಒಂದೇಸಮಕ್ಕೆ ಇಟ್ಟುಕೊಂಡು ಹಾಕಬೇಕೇಹೊರ್ತು ಒಂದು ಸಾರಿ ಬೆಚ್ಚಗೂ ಒಂದುಸಾರಿ ತಣ್ಣಗೂ ಹಾಕಬಾರದು. ಇದಲ್ಲದೆ ಆಕಾಲದಲ್ಲಿ ಮಕ್ಕಳು ಅಳದೆ ಇರುವಹಾಗೆ ಹಾಡು ಹೇಳಿಕೊಂಡಾಗಲೀ ಸಮಾಧಾನ ಮಾಡುತ್ತಲಾಗಲೀ ನೀರು ಹಾಕಬೇಕು. ಇಲ್ಲದಿದ್ದರೆ ಆಮಕ್ಕಳು ಸ್ವಭಾವವಾಗಿ ಚಿಕ್ಕಂದಿನಿಂದಲೂ ಹಟವಾದಿಗಳಾಗುವರು. ಮಕ್ಕಳಿಗೆ ಪ್ರತಿದಿನದಲ್ಲಿಯೂ ಒಗೆದ ಬಟ್ಟೆಗಳನ್ನೇ ಹೊದಿಸಬೇಕು. ಯಾಕಂದರೆ, ಹಳೇ ಬಟ್ಟೆಗಳಲ್ಲಿ ಬೆವರು ಮೊದಲಾದ ಕಶ್ಮಲಗಳೆಲ್ಲಾ ಸೇರಿಕೊಂಡಿದ್ದು ಬಾಧೆಯನ್ನುಂಟುಮಾಡುವವು. ನೀರುಹಾಕುವದರಲ್ಲಿ ತಾಯಿಯಾದವಳು ಮತ್ತ್ಯಾರನ್ನೂ ನೆಚ್ಚದೆ ಸ್ವಂತವಾಗಿ ನೀರನ್ನು ಒಂದೇ ಸಮಕ್ಕೆ ಬೆಚ್ಚಗೆ ಮಾಡಿಕೊಂಡು ಇದ್ದು ಹಾಕಬೇಕು.

೫೪. ಇಂದ್ರ ಚಾಪ.

ಸೂರ್ಯನು ಪೂರ್ವದಿಕ್ಕಿನಲ್ಲಿ ಇರುವಾಗ ಪಶ್ಚಿಮದಿಕ್ಕಿನಲ್ಲಿಯೂ, ಅಥವಾ ಪಶ್ಚಿಮದಿಕ್ಕಿನಲ್ಲಿರುವಾಗ ಪೂರ್ವದಿಕ್ಕಿನಲ್ಲಿಯೂ ಆಕಾಶದಲ್ಲಿ ಜಲ ಕಣಗಳು ಹಿಂಡಾಗಿ ಸೇರಿಯಿದ್ದರೂ, ಅಥವಾ ಮಳೆಹುಯ್ಯುತ್ತಿದ್ದರೂ, ಅವುಗಳಮೇಲೆ ಸೂರ್ಯಕಿರಣಗಳು ಬಿದ್ದು ಅವುಗಳ ಕಾಂತಿಯು ಸ್ವಲ್ಪವಾಗಿ ಬಗ್ಗುವದರಿಂದ ಇಂದ್ರಚಾಪವು ಕಾಣಬರುವದು. ಇದರ ಮೇಲುಗಡೇ

ಬಟ್ಟೆ ಕೆಟ್ಟರೆ ಹಬ್ಬ ಕೆಟ್ಟೀತೆ!

ಬಣ್ಣವು ಕೆಂಪಾಗಿಯೂ ಕೆಳಗಿನ ಬಣ್ಣವು ಕನ್ನೈದಿಲೆಯ ಬಣ್ಣವುಳ್ಳದ್ದಾಗಿಯೂ ಇರುವದು. ಚಂದ್ರನಿಗೆ ಅಭಿಮುಖವಾಗಿ ಮಳೆಹುಯ್ಯುವಾಗಲೂ ಈ ಪ್ರಕಾಶವು ಕಾಣುವದುಂಟು; ಆದರೆ ಇದು ಬಹಳ ಅಪೂರ್ವ.

೬. ವಿದ್ಯುಚ್ಛಕ್ತಿ.

ಒಂದು ಗಾಜಿನ ಕೊಳವೆಯನ್ನು ಒಂದು ಕಂಬಳೀಬಟ್ಟೆಯಿಂದ ಉಜ್ಜಿದರೆ ಸ್ವಲ್ಪಹೊತ್ತಿನಲ್ಲಿ ಆಗಾಜು ಶಾಖವಾಗಿ ಸಮೀಪದಲ್ಲಿರತಕ್ಕ ಕಾಗದದ ಚೂರು ಗರಿ ಮುಂತಾದ ಹಗುರವಾದ ಪದಾರ್ಥಗಳನ್ನು ಮೊದಲು ತನ್ನ ಕಡೆಗೆ ಎಳಕೊಂಡು ಅನಂತರದಲ್ಲಿ ಹಿಂದಕ್ಕೆ ತಳ್ಳುವದು. ಹಾಗೆ ಶಾಖವಾದ ಗಾಜಿನ ಕೊಳವೆಗೆ ನಮ್ಮ ಬೆರಳನ್ನು ಇಟ್ಟರೆ ಒಂದು ಕಿಡಿಯು ಹುಟ್ಟುವದು ಮತ್ತು ನಮ್ಮ ಬೆರಳನ್ನು ದಬ್ಬಳದಿಂದ ಚುಚ್ಚಿದಹಾಗೆ ಆಗುವದು. ಅದೇ ಕೊಳವೆಯಿಂದ ಚೆನ್ನಾಗಿ ಶಾಖವಾಗುವವರೆಗೂ ಉಜ್ಜಿ ಕೂಡಲೆ ಅದನ್ನು ಕೆನ್ನೇಬಳಿ ಹಿಡಿದರೆ ಕೆನ್ನೆಯಲ್ಲಿ ಜೋವು ಹಿಡಿದಹಾಗೆ ಆಗುವದು. ಗಂಧಕವನ್ನಾಗಲೀ, ಗಾಜಿನ ಪಾತ್ರೆಗಳನ್ನಾಗಲೀ, ಅರಗನ್ನಾಗಲೀ ಹೀಗೆಯೇ ಉಜ್ಜುವದರಿಂದ ಆ ವಿದ್ಯುಚ್ಛಕ್ತಿಯು ಕಾಣಬರುವದು. ಹೀಗೆ ದೃಷ್ಟಿಗೆ ಗೋಚರವಾಗದೆ ಸ್ಪರ್ಶೇಂದ್ರಿಯಕ್ಕೆ ಮಾತ್ರ ಗೊತ್ತಾಗುವ ಶಕ್ತಿಗೆ ವಿದ್ಯುಚ್ಛಕ್ತಿಯೆಂದು ಹೇಳುವರು. ಈ ಶಕ್ತಿಯನ್ನು ಸುಲಭವಾಗಿ ಉಂಟುಮಾಡತಕ್ಕ ಯಂತ್ರಕ್ಕೆ ವಿದ್ಯುದುತ್ಪಾದಕಯಂತ್ರವೆಂದು ಹೆಸರು. ಈ ಯಂತ್ರದ ಶಕ್ತಿಯಿಂದ ಕ್ಷಣಮಾತ್ರದಲ್ಲಿ ಎಂಥಾ ಕಠಿನವಾದ ಲೋಹಗಳನ್ನಾದರೂ ಕರಗಿಸಬಹುದು; ಅಸಾಧ್ಯವಾದ ಅನೇಕ ಕೆಲಸಗಳನ್ನು ಮಾಡಬಹುದು. ಮೇಘಗಳಲ್ಲಿ ಈ ಶಕ್ತಿಯು ವಿಶೇಷವಾಗಿ ಇರುವದು. ಮೇಘಗಳು ಒಂದನ್ನೊಂದು ಉಜ್ಜುವದರಿಂದ ಹುಟ್ಟುವ ವಿದ್ಯುತ್ತೇ ಈ ಶಕ್ತಿಯು. ಮಿಂಚಿದ ಕೂಡಲೆ ಆಗತಕ್ಕ ಶಬ್ದವನ್ನೇ ನಾವು ಗುಡುಗೆಂದು ಹೇಳುತ್ತೇವೆ. ಈ ವಿದ್ಯುಜ್ಜ್ವಾಲೆಯನ್ನು ಸಿಡಿಲು ಎಂದು ಹೇಳುವದುಂಟು. ಮರಗಳು

ಒಪ್ಪಿತದ ಮಾತು ತಪ್ಪಿಸಬಾರದು.

ಮನೆಗಳು, ಇವುಗಳಿಗೆ ಈ ಜ್ವಾಲೆಯು ತಗಲಿದ್ದೇ ಆದರೆ ಅವು ಬಿದ್ದುಹೋಗುವವು. ಮಳೆಯು ಗುಡುಗು ಮಿಂಚುಗಳೊಂದಿಗೆ ಸೇರಿದಾಗ ಈ ವಿದ್ಯುಚ್ಛಕ್ತಿಯಿಂದ ವಾಯುಮಂಡಲದಲ್ಲಿ ಇರುವ ವಿಷಕಣಗಳೆಲ್ಲಾ ನಾಶವಾಗುವವು; ಭೂಮಿಯು ಫಲವತ್ತಾಗಿ ಸಸ್ಯಾದಿಗಳು ಚೆನ್ನಾಗಿ ಬೆಳೆಯುವವು. ಈ ಸಿಡಿಲಿನಿಂದ ಸಂಭವಿಸುವ ಬಾಧಕಗಳನ್ನು ತಪ್ಪಿಸಿ ಕೊಳ್ಳುವದಕ್ಕೆ ಒಂದು ಉಪಾಯ ಉಂಟು. ಏನೆಂದರೆ:— ಸಮಸ್ತ ಲೋಹಗಳಿಗೂ ಈ ವಿದ್ಯುಚ್ಛಕ್ತಿಯನ್ನು ಎಳೆದುಕೊಳ್ಳತಕ್ಕ ಶಕ್ತಿಯುಂಟು. ಆದದರಿಂದ ಒಂದು ಉದ್ದವಾದ ಕಬ್ಬಿಣದ ಸಲಾಕಿಯನ್ನು ದವಾಡಿಸಿ ಅದನ್ನು ಕಟ್ಟಣಗಳ ಸಮೀಪದಲ್ಲಿ ಕೆಳಗೆ ನೀರು ತಗಲುವವರೆಗೂ ಹೂಳಿ ಬಿಡುತ್ತಾರೆ. ಆ ಸಮೀಪದಲ್ಲಿ ಎಲ್ಲಾದರೂ ಸಿಡಿಲು ಬಿದ್ದರೂ ಈ ಸಲಾಕಿಯು ಅದನ್ನು ಆಕರ್ಷಿಸಿಕೊಂಡು ಭೂಮಿಯೊಳಕ್ಕೆ ಎಳೆದುಕೊಂಡು ಹೋಗಿ ಬಿಟ್ಟುಬಿಡುತ್ತದೆ. ಇದರಿಂದ ಕಟ್ಟಣಕ್ಕೆ ಏನೂ ಬಾಧೆಯಿಲ್ಲ. ಗಿಡಗಳಿಗೂ ಈ ಶಕ್ತಿಯನ್ನು ಎಳೆದು ಕೊಳ್ಳುವ ಸಾಮರ್ಥ್ಯವುಂಟು. ಮನೆಯ ಸುತ್ತಲೂ ದೊಡ್ಡದೊಡ್ಡ ಮರಗಳಿದ್ದರೆ ಅಂಥಾ ಮನೆಗೆ ಸಿಡಿಲಿನ ಭಯವೇನೂ ಇರುವದಿಲ್ಲ. ಯಾಕಂದರೆ, ಸಿಡಿಲನ್ನು ಮರಗಳು ಆಕರ್ಷಿಸುವದರಿಂದ ಆ ಸಿಡಿಲಿನಿಂದ ಬರುವ ಅಪಾಯವು ಮರಗಳಿಗೆ ತಗಲುವದು. ಗುಡುಗು ಮಿಂಚುಗಳೊಡನೆ ಸೇರಿ ಮಳೆ ಹುಯ್ಯುವಾಗ ಮರಗಳ ಕೆಳಗೆ ನಿಲ್ಲಬಾರದು. ಅಂಥಾ ಮಳೆಗಳು ಹುಯ್ಯುವಾಗ ಮನೆಯಲ್ಲಿದ್ದರೆ ಮನೆಯ ಮಧ್ಯಭಾಗದಲ್ಲಿ ಅಪಾಯವು ಕಡಿಮೆ.

---

೭. ಜ್ಯೋತಿಷ.

ಭೂಗೋಳಕ್ಕೆ ಚಕ್ರಭ್ರಮಣೆ ಯುಂಟೆಂಬುವದಕ್ಕೆ ಪ್ರಮಾಣಗಳು.

೧ನೇದು.—ಸೂರ್ಯನನ್ನು ನೋಡುವ ಯಂತ್ರದ ಮೂಲಕ ಸೂರ್ಯನನ್ನು ನೋಡಿದರೆ, ಮೋಡದಂತೆ ಸ್ವಲ್ಪ ಕಪ್ಪಾಗಿರುವ ಕೆಲವು ಪ್ರದೇಶಗಳು

ಕಾಣಬರುವವು. ಈ ಕಪ್ಪಾದ ಪ್ರದೇಶಗಳು ಸೂರ್ಯಬಿಂಬದ ಪೂರ್ವಭಾಗದಿಂದ ಪಶ್ಚಿಮವಾಗಿ ಸಂಚರಿಸುವದನ್ನು ನೋಡುವೆವು. ಹೀಗೆ ಇವು ಪ್ರಯಾಣಮಾಡುತ್ತಾ ಕೆಲವು ದಿನಗಳನಂತರ ಕಣ್ಣಿಗೆ ಕಾಣಿಸದೆ ಮರೆಯಾಗುವವು. ಮತ್ತು ಸ್ವಲ್ಪ ಹೆಚ್ಚು ಕಡಿಮೆ ಒಂದು ಪಕ್ಷಕಾಲದಲ್ಲಿ ಇವು ಪುನಃ ಕಾಣಿಸಿಕೊಳ್ಳುವವು. ಹೀಗೆಯೇ ಇವು ಪ್ರತಿತಿಂಗಳಲ್ಲಿಯೂ ಮರೆಯಾಗುತ್ತಲೂ ಕಾಣುತ್ತಲೂ ಬರುವವು. ಇದರಿಂದ ಸೂರ್ಯನಿಗೆ ೨೫ ದಿನಗಳಿಗೆ ಒಂದುಸಾರಿ ಚಕ್ರಭ್ರಮಣೆ ಅಂದರೆ ಆತ್ಮಪ್ರದಕ್ಷಿಣೆಯುಂಟೆಂದು ನಮಗೆ ಸ್ಪಷ್ಟವಾಗಿ ಗೊತ್ತಾಗುವದು. ಹೀಗೆಯೇ ಇತರ ಗ್ರಹಗಳನ್ನು ಪರೀಕ್ಷಿಸಿ ನೋಡುವಲ್ಲಿ ನಮ್ಮ ಭೂಗೋಳದಷ್ಟೇ ಗಾತ್ರವುಳ್ಳ ಶುಕ್ರಗ್ರಹವು ೨೩ ಘಂಟೆಗಳಿಗೆ ಒಂದುಸಾರಿಯೂ, ಬೃಹಸ್ಪತಿಗ್ರಹವು ೧೦ ಘಂಟೆಗಳಿಗೆ ಒಂದು ಸಾರಿಯೂ ಆತ್ಮಪ್ರದಕ್ಷಿಣೆಮಾಡುವದನ್ನು ನೋಡುವೆವು. ಈ ಪ್ರಕಾರ ಸರ್ವಗ್ರಹಗಳಿಗೂ ಚಕ್ರಭ್ರಮಣೆಯುಂಟಾಗಿರುವದರಿಂದ ನಮ್ಮ ಭೂಗೋಳಕ್ಕೂ ಚಕ್ರಭ್ರಮಣೆಯುಂಟೆಂದೇ ಊಹಿಸತಕ್ಕದ್ದು ಸರಿಯಲ್ಲವೆ!

ಮುಂದೆ ಬರೆಯುವ ನಾಲ್ಕು ಪ್ರಮಾಣಗಳೂ ಭೂಭ್ರಮಣೆಯನ್ನು ಪ್ರತ್ಯಕ್ಷವಾಗಿ ತೋರಿಸುವವುಗಳಾದ್ದರಿಂದ ಅವುಗಳನ್ನು ನಿಧಾನಿಸಿ ಪರೀಕ್ಷಿಸಬೇಕೆಂದು ಪ್ರಾರ್ಥಿಸುತ್ತೇವೆ. ಆ ಪ್ರಮಾಣಗಳನ್ನು ಚನ್ನಾಗಿ ತಿಳಿದುಕೊಳ್ಳುವದಕ್ಕೋಸ್ಕರ ಅವುಗಳನ್ನು ಹೇಳುವದಕ್ಕೆ ಮೊದಲು ತಿಳಿಯಬೇಕಾದ ಕೆಲವು ಅಂಶಗಳನ್ನು ಇಲ್ಲಿ ಹೇಳುತ್ತೇವೆ.

'ಮ ಗ ಕ' ಎಂಬುವದು ಒಂದು ದಂಡ. ಈದಂಡದಲ್ಲಿ ಕ, ಗ, ಮ ಎಂಬುವು ದಂಡದ ಮೂರು ಪ್ರದೇಶಗಳು ಅಥವಾ ಬಿಂದುಗಳು. 'ಮ' ಎಂಬ ಪ್ರದೇಶದಲ್ಲಿ ಗಟ್ಟಿಯಾಗಿ ಹಿಡಿದು ದಂಡವನ್ನು ತಿರುಗಿಸಲು ಒಂದು ಸುತ್ತು ಬರುವಾಗ್ಗೆ 'ಮ' ಎಂಬ ಮಧ್ಯಪ್ರದೇಶಕ್ಕೆ ದೂರದಲ್ಲಿರುವ 'ಕ' ಎಂಬ ಬಿಂದುವು ಹೆಚ್ಚಾಗಿಯೂ, ಇನ್ನು ಸ್ವಲ್ಪ ಹತ್ತರವಿರುವ 'ಗ' ಬಿಂದುವು ಅದಕ್ಕಿಂತ ಕಡಿಮೆಯಾಗಿಯೂ, ಇದೇರೀತಿಯಲ್ಲಿ ಇನ್ನೂ ಹತ್ತರವಿರುವ



ಉತ್ತರದಲ್ಲಿ ದತ್ತ ಸಾಗಬಾರದು.

ಬಿಂದುಗಳು ಕಡಿಮೆ ಕಡಿಮೆಯಾಗಿಯೂ, ಒಂದೇಕಾಲದಲ್ಲಿ ಸಂಚರಿಸುವವಾದ್ದರಿಂದ ಮಧ್ಯಪ್ರದೇಶಕ್ಕೆ ದೂರವಿರುವ ಬಿಂದುವು ಅತ್ಯಂತ ವೇಗವುಳ್ಳದ್ದಾಗಿಯೂ, ಹತ್ತರಹತ್ತರವಿರುವವುಗಳು ಕಡಿಮೆಕಡಿಮೆಯಾದ ವೇಗವುಳ್ಳವುಗಳಾಗಿಯೂ, ಮಧ್ಯಪ್ರದೇಶವು ಚಲಿಸದೆಯೂ ಇರುವವು. ಈ ವಿಷಯವು ಸ್ಪಷ್ಟವಾಗಿದೆ. ಹೀಗೆ ಮಧ್ಯಪ್ರದೇಶಕ್ಕೆ ಹತ್ತರವಿರುವ ಪ್ರದೇಶಕ್ಕಿಂತ ದೂರದಲ್ಲಿರುವ ಪ್ರದೇಶಗಳಿಗೆ ಪದಾರ್ಥದ ಚಕ್ರಭ್ರಮಣೆಯಿಂದ ವೇಗವು ಹೆಚ್ಚಾಗಿರುವದು.

'ಅಕಗಕ್ಷ' ಎಂಬ ಈ ಅಂಡಾಕಾರವಾದ ಪದಾರ್ಥದ ಸಮಸ್ತ ಪ್ರದೇಶಗಳೂ ಈ ಅಂಡದ ಮಧ್ಯಗತರೇಖೆಗೆ ಸಮಪ್ರಮಾಣವಾಗಿ ಇರುವವಾದ್ದರಿಂದ ಆ ಬಿಂದುಗಳಿಗೆ ಚಕ್ರಭ್ರಮಣೆಯಿಂದ ಉಂಟಾಗುವ ಸಮಸ್ತ ವೃತ್ತಗಳಿಗೆ ಮಧ್ಯಬಿಂದುಗಳೆಲ್ಲಾ ಈ ರೇಖೆಯಲ್ಲಿಯೇ ಇರುವವು. ಮೇಲೆ ವೃತ್ತಮಧ್ಯಪ್ರದೇಶಗಳಿಗೆ ಚಲನೆಯಿಲ್ಲವೆಂದು ತೋರಿಸಿ ಇದ್ದೇವಷ್ಟೆ.



ಆದ್ದರಿಂದ ಇಂಥಾ ಮಧ್ಯಪ್ರದೇಶಗಳ ಸೇರಿಕೆಯಿಂದ ಉಂಟಾಗಿರುವ ಈ ಅಂಡಮಧ್ಯರೇಖೆಗೆ ಚಲನೆಯಿಲ್ಲ ಎಂಬುವದು ಸಿದ್ಧ. ಸಮಸ್ತವಸ್ತುಗಳಲ್ಲಿಯೂ ಇರುವ ಇಂಥಾರೇಖೆಗೆ ಪದಾರ್ಥದ ಧ್ರುವರೇಖೆಯೆಂದು ಜ್ಯೋತಿಷ್ಕರು ಹೇಳುವರು. ಮತ್ತು ಈ ಅಂಡದಲ್ಲಿ 'ಕ' ಎಂಬ ಪ್ರದೇಶವು ಈ ಧ್ರುವರೇಖೆಗೆ ಸಮೀಪವಾಗಿಯೂ, 'ಗ' ಎಂಬುವದು ದೂರವಾಗಿಯೂ ಇರೋಣದರಿಂದ ಅಂಡಕ್ಕೆ ಚಕ್ರಭ್ರಮಣೆಯನ್ನುಂಟುಮಾಡಿದರೆ 'ಗ' ಎಂಬ ಬಿಂದುವು 'ಕ' ಎಂಬುವದಕ್ಕಿಂತ ವೇಗವಾಗಿ ಚಲಿಸುವದರಲ್ಲಿ ಏನೂ ಸಂಶಯವಿಲ್ಲವಷ್ಟೆ.

೭ನೇದು.—ಭೂಗೋಳಕ್ಕೆ ಚಕ್ರಭ್ರಮಣೆಯುಂಟಾಗಿರುವದೇ ಸತ್ಯವಾಗಿದ್ದಲ್ಲಿ ಭೂಮಿಯ ಮೇಲಿರುವ ಯಾವದಾದರೂ ಒಂದು ಅತ್ಯುನ್ನತವಾದ ಗೋಪುರದ ತುದಿಯು ಆ ಗೋಪುರದ ಬುಡಕ್ಕಿಂತಲೂ ವೇಗವಾಗಿ

ಒಡಕು ದೋಣಿಗೆ ಗಿಡ್ಡ ಜಲ್ಲೆ.

ಚಲಿಸುವದು. ಆದ್ದರಿಂದಲೇ ನಾವು ಒಂದು ಕಲ್ಲುಗುಂಡನ್ನು ಗೋಪುರದ ತುದಿಯಿಂದ ಬಿಟ್ಟರೆ ಅಂಥಾ ಕಲ್ಲಿಗೆ ಗೋಪುರದ ಬುಡಕ್ಕಿಂತ ಹೆಚ್ಚಾದ ವೇಗವಿರೋಣದರಿಂದ ಅದು ಬುಡದಲ್ಲಿಯೇ ಬೀಳದೆ ಮುಂದಕ್ಕೆ ಬೀಳುವದು. ಇದನ್ನು ಎಲ್ಲರೂ ಪರೀಕ್ಷಿಸಿ ನೋಡಬಹುದು. ಮತ್ತು ಈ ಕಲ್ಲು ಪೂರ್ವದ ಕಡೆಗೇ ಬೀಳುವದರಿಂದ ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ತಿರುಗುತ್ತಾ ಇದೆ ಯೆಂದು ಗೊತ್ತಾಗುವದು.

೫ನೇದು.— ವಿಷುವದ್ವೃತ್ತದ ಬಳಿ ಇರುವ ಪ್ರದೇಶಗಳಲ್ಲಿ ಇತರ ಪ್ರದೇಶಗಳಿಗಿಂತ ಬಿಸಿಲಿನ ಝಳವು ಹೆಚ್ಚಾಗಿರುವದರಿಂದ ಆ ಪ್ರದೇಶಗಳಲ್ಲಿನ ವಾಯುವು ಕಾಖದಿಂದ ಹಗುರವಾಗಿ ಮೇಲಕ್ಕೆ ಎದ್ದು ಹೋಗುವದು. ಹೀಗೆ ಉಷ್ಣವಾದ ವಾಯುವು ಹೋಗಿ ಬರಿದಾಗಿರುವ ಸ್ಥಳವನ್ನು ಆಕ್ರಮಿಸಿಕೊಳ್ಳುವದಕ್ಕೋಸ್ಕರ ಶೀತಪ್ರದೇಶಗಳ ಬಳಿ ಇರುವ ಪ್ರದೇಶಗಳಿಂದ ಶೀತವಾದ ವಾಯುವು ಇಲ್ಲಿಗೆ ನುಗ್ಗಿ ಬರುವದು. ಹೀಗೆ ಭೂಮಿಯು ಸ್ಥಿರವಾಗಿ ಇದ್ದ ಪಕ್ಷದಲ್ಲಿ ಉತ್ತರ ದಕ್ಷಿಣ ಧ್ರುವಗಳಿಂದ ಸರಿಯಾಗಿ ಬೀಸುವ ಗಾಳಿಯು ಉತ್ತರಾರ್ಧಗೋಳದಲ್ಲಿರುವವರಿಗೆ ದಕ್ಷಿಣವಾಯುವಾಗಿಯೂ ಪಶ್ಚಿಮಾರ್ಧಗೋಳದಲ್ಲಿರುವವರಿಗೆ ಉತ್ತರವಾಯುವಾಗಿಯೂ ಇದೆ. ಆದರೆ ಈ ಭೂಗೋಳಕ್ಕೆ ಪಶ್ಚಿಮದಿಂದ ಪೂರ್ವಾಭಿಮುಖವಾದ ಚಕ್ರ ಭ್ರಮಣೆಯುಂಟಾಗಿರುವದು ಸತ್ಯವಾದಲ್ಲಿ ವಿಷುವದ್ವೃತ್ತದ ಬಳಿ ಇರುವ ಬಿಂದುವು ಧ್ರುವದ ಬಳಿ ಇರುವ ಬಿಂದುವಿಗಿಂತ ವೇಗವಾಗಿ ಚಲಿಸುವದು. ಆದ್ದರಿಂದ ಉತ್ತರದಿಂದ ಬರುವ ವಾಯುಪರಮಾಣುಗಳು ವಿಷುವದ್ವೃತ್ತದ ಬಳಿ ಇರುವ ಬಿಂದುಗಳಿಗಿಂತ ಕಮ್ಮಿ ವೇಗದಿಂದಬರುವವು. ಆದ್ದರಿಂದ ಈ ಗಾಳಿಗೆ ವೇಗ ಕಡಿಮೆಯಾಗಿ ಇರುವದರಿಂದಲೂ, ಭೂಮಿಯು ಪಶ್ಚಿಮಪೂರ್ವವಾಗಿ ತಿರುಗುವದರಿಂದಲೂ, ಈ ಗಾಳಿಯು ಪೂರ್ವದಿಂದ ಪಶ್ಚಿಮಕ್ಕೆ ಬೀಸುವಂತೆ ಕಾಣುವದು. ಈ ಎರಡು ವಿಧವಾದ ಚಲನೆಗಳಿಂದ ನಮಗೆ ಈಶಾನ್ಯವಾಗಿ ಬೀಸುವಂತೆ ಕಾಣುವದು. ದಕ್ಷಿಣಗೋಳದವರಿಗೆ ಅದೇ ಗಾಳಿಯು ಆಗ್ನೇಯದಿಂದ ಬೀಸುವಂತೆ ಕಾಣುವದು. ವಿಷುವದ್ವೃತ್ತದ ಬಳಿ ಸಮು

ದ್ರಗಳಲ್ಲಿ ಸಂಚಾರ ಮಾಡತಕ್ಕ ವರ್ತಕರೆಲ್ಲಾ ಇದನ್ನು ತಿಳಿದು ತಮ್ಮ ಹಡಗುಗಳನ್ನು ನಡಿಸುವದರಲ್ಲಿ ಈ ಗಾಳಿಯನ್ನು ಉಪಯೋಗಿಸಿಕೊಳ್ಳು ತ್ತಾರೆ. ಆದ್ದರಿಂದ ಈ ಭೂಗೋಳವು ಪಶ್ಚಿಮದಿಂದ ಪೂರ್ವಕ್ಕೆ ತಿರುಗು ವದೆಂದು ಗೊತ್ತಾಗಿದೆ.

೮ನೇದು.— 'ಗ' ಎಂಬ ಒಂದು ಕಬ್ಬಿಣದ ಗುಂಡನ್ನು 'ದ' ಎಂಬ ದಾರಕ್ಕೆ ತಗಲಿಸಿ 'ದ' ಬಳಿಯಿಂದ ನೇತುಬಿಟ್ಟರೆ ಆ ಗುಂಡು 'ಕಗ' ಎಂಬ ಪರಿಧ್ಯಂಶದಲ್ಲಿ ಲೋಲಾಡುವದು. ಹೀಗೆ ಲೋಲಾಡುತ್ತಿರುವಾಗ ಗುಂಡಿಗೆ ಕಟ್ಟಿರುವ ದಾರವನ್ನು ಸುಲಿಚಿದರೆ ಒಂದುವೇಳೆ ಗುಂಡು ತಿರುಗಿದಾಗ್ಯೂ ಪೂರ್ವಪರಿಧಿಯಲ್ಲಿಯೇ ಲೋಲಾಡುವದೇ ಹೊರ್ತು ಆ ಪರಿಧಿಯ ದಿಕ್ಕು ವ್ಯತ್ಯಾಸವಾಗುವದಿಲ್ಲ. 'ಕದಲ' ಎಂಬ ತೊಲೆಗೆ 'ಗ' ಎಂಬ



ಭಾರವಾದ ಒಂದು ಕಬ್ಬಿಣದ ಗುಂಡಿಗೆ 'ದಗ' ಎಂಬ ತಂತಿಯನ್ನು ಕಟ್ಟಿ ನೇತುಹಾಕಿ ಗುಂಡು ಲೋಲಾಡುವಂತೆ ಮಾಡಿದರೆ ಭೂಮಿಯು ತಿರು ಗದೆ ಇದ್ದ ಪಕ್ಷದಲ್ಲಿ ಮೇಲೆ ಹೇಳಿರುವಂತೆ 'ಪರಿ' ಎಂಬ ಲೋಲಕದ ದಿಕ್ಕು ಏನೇನೂ ವ್ಯತ್ಯಾಸವಾಗಲಾರದು. ಭೂಮಿಗೆ ಚಕ್ರಭ್ರಮಣೆಯು ಸತ್ಯವಾಗಿ ಇದ್ದಪಕ್ಷದಲ್ಲಿ ಲೋಲಕದ ದಿಕ್ಕು ವ್ಯತ್ಯಾಸವಾಗಬೇಕಲ್ಲವೆ? ಹೀಗೆ ವ್ಯತ್ಯಾಸವಾಗತಕ್ಕದ್ದನ್ನು ಎಲ್ಲರೂ ನೋಡಬಹುದು. ಗುಂಡನ್ನು ಉತ್ತರ ಧ್ರುವದ ಬಳಿ ನೇತಹಾಕಿ ಯಾವನಾದರೂ ತನಗೆ ಅಭಿಮುಖವಾಗಿ ಲೋಲಾಡುವಂತೆ ಗುಂಡನ್ನು ಲೋಲಾಡಿಸಿದರೆ ಅದು ಲೋಲಾಡುತ್ತಾ ಕೆಲವು ಘಂಟೆಗಳಾದಮೇಲೆ ಪಾರ್ಶ್ವವಾಗಿ 'ಚಗಜ' ಪರಿಧಿಯಲ್ಲಿ ಲೋಲಾಡುವಂತೆ ಕಾಣಬರುವದು. ದಕ್ಷಿಣಧ್ರುವದಬಳಿ ನೇತಹಾಕಿದರೂ ಹೀಗೆಯೇ ಲೋಲ ಕದ ದಿಕ್ಕು ವ್ಯತ್ಯಾಸವಾಗುವದು. ಎರಡು ಧ್ರುವಗಳಿಗೂ ಸಮದೂರದಲ್ಲಿರುವ

ವಿಷುವದ್ವೃತ್ತದಬಳಿ ಲೋಲಕದದಿಕ್ಕು ಬೇರೆಯಾದಂತೆ ಸಹಜವಾಗಿ ಕಾಣ ಬರುವದಿಲ್ಲ. ನಾವು ವಿಷುವದ್ರೇಖೆಗೆ ಬಹಳ ಸಮೀಪದಲ್ಲಿ ಇರುವದರಿಂದ ನಮಗೆ ಲೋಲಾಡುವ ದಿಕ್ಕು ವ್ಯತ್ಯಾಸವಾದಂತೆ ಕಾಣುವದು ಬಹಳ ಸ್ಪಷ್ಟವಾಗಿಲ್ಲ. ಆದರೂ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಗುಂಡು ಲೋಲಾಡುವಂತೆ ಮಾಡಿದರೆ ಲೋಲಕದ ದಿಕ್ಕು ವ್ಯತ್ಯಾಸವಾಗುವದು ಸ್ಪಷ್ಟವಾಗಿ ತೋರುವದು. ಮತ್ತು ಗಣಿತ ಶಾಸ್ತ್ರದ ಸಹಾಯದಿಂದ ಇಂಥಾ ಪ್ರದೇಶದಲ್ಲಿ ಇಷ್ಟೇ ವ್ಯತ್ಯಾಸವಾಗುವದೆಂದು ಗೊತ್ತಾಗಿ ನಿರ್ಣಯಿಸಬಹುದು. ವಿಷುವದ್ರೇಖೆಗೆ ೧೨|| ಭಾಗ ದೂರದಲ್ಲಿರುವ ಮೈಸೂರಲ್ಲಿ ೧೦ ಘಂಟೆಗಳಿಗೆ ೪೦ ಭಾಗಗಳ ವ್ಯತ್ಯಾಸವು ಲೋಲಕದ ದಿಕ್ಕಿನಲ್ಲಿ ಕಾಣ ಬರುವದು. ಇದೇ ವಿಷುವದ್ರೇಖೆಗೆ ಸುಮಾರು ೨೩≡ ಲಂಬಾಂಶದಲ್ಲಿರುವ ಉಜ್ಜಯಿನೀ ಪಟ್ಟಣದಲ್ಲಿ ೬೦ ಭಾಗಗಳು ವ್ಯತ್ಯಾಸ ಕಾಣ ಬರುವದು. ಹೀಗೆ ಆಗುವದನ್ನು ಇಂಗ್ಲಿಷರು ಅನೇಕ ದೇಶಗಳಲ್ಲಿ ಪರೀಕ್ಷೆ ಮಾಡಿ ನೋಡಿದ್ದಾರೆ, ಮತ್ತು ಹಾಗೆ ನೋಡಬೇಕೆಂಬ ಕುತೂಹಲವುಳ್ಳವರೆಲ್ಲರೂ ನೋಡುವದರಲ್ಲಿ ಏನೂ ಕಷ್ಟವಿಲ್ಲ. ಹೀಗೆ ಲೋಲಕದ ಭ್ರಮಣದಿಕ್ಕು ವ್ಯತ್ಯಾಸವಾದಂತೆ ಕಾಣಬರುವದರಿಂದ ಭೂಗೋಳಕ್ಕೆ ಚಕ್ರಭ್ರಮಣೆಯುಂಟೆಂಬುವದಕ್ಕೆ ಏನೇನೂ ಸಂಶಯವಿಲ್ಲ.

೯ನೇದು.—ಒಂದು ಬುಗರಿಯನ್ನು ಸ್ವಲ್ಪ ವಾರೆಯಾಗಿ ಗರ್ರನೆ ತಿರುಗುವಂತೆ ಆಡಿಸಲು ನಾವು ಇನ್ನೇನೂ ಮಾಡದೆ ಇದ್ದರೆ ಆ ಬುಗುರಿಯು ವಾರೆಯಾಗಿಯೇ ಆಡುತ್ತಾ ಇರುವದಲ್ಲದೆ ನೆಟ್ಟಗೆ ನಿಲ್ಲುವದೂ ಇಲ್ಲ, ಕೆಳಗೆಬಿದ್ದು ಹೋಗುವದೂ ಇಲ್ಲ. ಅಂದರೆ ಅದರ ಮಧ್ಯರೇಖೆಯಾದ ಧ್ರುವರೇಖೆಯು ಬಿಡುವಾಗ ಯಾವ ದಿಕ್ಕನ್ನು ತೋರಿಸುವದೋ ಆಮೇಲೆಯೂ ಅದೇ ದಿಕ್ಕನ್ನು ತೋರಿಸುತ್ತಾ ಗರ್ರನೆ ತಿರುಗುತ್ತಾ ಇರುವದು ಎಂದು ಅರ್ಥ. ಹುಡುಗರು ಪೀಪಾಯಿಗಳಿಗೆ ಹಾಕಿರುವ ಕಬ್ಬಿಣದ ಪಟ್ಟಿಗಳನ್ನು ಬಂಗರ ತಿರುಗಿಸುವಾಗ್ಯೇ ಅವು ವಾರೆಯಾಗಿಯೇ ತಿರುಗುತ್ತಾ ಹೋಗುವವು. ಇದಲ್ಲದೆ ಭಂಡೀಚಕ್ರವನ್ನು ಬೀದಿಯಲ್ಲಿ ಉರುಳಿಸಿಕೊಂಡು ಹೋಗುವಾಗ್ಯೇ ಆ ಚಕ್ರವು ನಿಂತರೆ

ಬಲೆ ಸೊಟ್ಟಾದರೆ ಬದನೇಕಾಯಿ ಬೇಯದೆ ?

ಬಿದ್ದುಬಿಡುವದು; ಹಾಗಲ್ಲದೆ ಉರುಳಿಕೊಂಡು ಹೋಗುತ್ತಾಲೇ ಇದ್ದರೆ ಬೀಳದೆ ಹೋಗುತ್ತಲೇ ಇರುವದು. ಹೀಗೆಯೇ ಇನ್ನಾವ್ಯವದೊಂದು ತೊಂದರೆಯಿಲ್ಲದೆ ಚಕ್ರಭ್ರಮಣೆಯಲ್ಲಿರುವ ಪದಾರ್ಥಗಳ ಧ್ರುವರೇಖೆಯ ದಿಕ್ಕು ವ್ಯತ್ಯಾಸವಾಗದೇಲೇ ಇರುತ್ತದೆ. ಇಂಥಾದ್ದೊಂದು ಯಂತ್ರವನ್ನು ಮಾಡಿ ಅದರ ಧ್ರುವರೇಖೆಯನ್ನು ಯಾವದಾದರೂ ಒಂದು ನಕ್ಷತ್ರಕ್ಕೆ ಸರಿಯಾಗಿ ಇಟ್ಟರೆ ನಕ್ಷತ್ರಕ್ಕೆ ಚಲನೆಯಿಲ್ಲದ ಪಕ್ಷದಲ್ಲಿ ಈ ರೇಖೆಯು ಯಾವಾಗಲೂ ಆ ನಕ್ಷತ್ರವನ್ನೇ ತೋರಿಸುತ್ತಿರುವದು. ನಕ್ಷತ್ರಕ್ಕೆ ಚಲನೆಯುಂಟಾದ ಪಕ್ಷದಲ್ಲಿ ನಕ್ಷತ್ರವು ತೋರಿಸಲಾರದಷ್ಟೆ ? ನಕ್ಷತ್ರ ಚಲಿಸದೆ ಭೂಮಿ ಚಲಿಸಿದರೆ ಈ ರೇಖೆಯು ಕಕ್ಷವನ್ನೇ ತೋರಿಸುತ್ತಾ ಭೂಮಿಯೊಡನೆ ತಿರುಗಬೇಕಲ್ಲವೆ? ಇಂಥಾ ಯಂತ್ರವನ್ನು ಯೂರೋಪಿನವರು ಮಾಡಿರುತ್ತಾರೆ. ಅದನ್ನು ಈ ಕೆಳಗೆ ವಿವರಿಸುವೆವು.



ಇಲ್ಲಿ 'ಡ ಥ' ಎಂಬುವದು ಭಾರವಾದ ಲೋಹದ ಚಕ್ರ. 'ಬ' ಎಂಬ ವೃತ್ತಕೇಂದ್ರದಮೂಲಕ ಹಾಯ್ದುಹೋಗುವ ರೇಖೆಯೇ ಈ ಲೋಹ ಚಕ್ರದ ಮಧ್ಯರೇಖೆ ಅಂದರೆ ಅಕ್ಷರೇಖೆ. ಈ ರೇಖೆಯು ಚಕ್ರಕ್ಕೆ ಸಮಕೋಣವಾಗಿದೆ. ಈ ಅಕ್ಷರೇಖೆಯ ಕೊನೆಗಳು 'ಶ ಷ' ಎಂಬ ವಿವರ್ತಕಕೀಲಗಳಲ್ಲಿ ಇರಿಸಲ್ಪಟ್ಟವೆ. ಈ ವಿವರ್ತಕಕೀಲಗಳು 'ಬ ಶ ಭ ಷ' ಎಂಬ ವೃತ್ತದ ವ್ಯಾಸದ ಕೊನೆಗಳಲ್ಲಿವೆ. ಈ 'ಬ ಶ ಭ ಷ' ಎಂಬ ವೃತ್ತದಲ್ಲಿ ತೂಗುವ ತ್ರಾಸುಗಳಲ್ಲಿ ಚೂರೀತುಂಡುಗಳಂತಿರುವ ಎರಡು ಧಾರಗಳು 'ಬ ಭ' ಎಂಬ ಕಡೆಗಳಲ್ಲಿವೆ. 'ಬ ಭ' ಎಂಬ ರೇಖೆಯನ್ನೇ 'ಶ ಷ'

ಎಂಬ ರೇಖೆಗೆ ಸಮಕೋಣವಾಗಿ ಇರಿಸಿದೆ. ಮೇಲೆ ಹೇಳಿದ ಧಾರಗಳು 'ಅ ಬ ಆ ಭ' ಎಂಬ ಊರ್ಧ್ವಾಧರವೃತ್ತದ ಪೂರ್ವಪಶ್ಚಿಮರೇಖೆಯ ತುದಿಗಳಲ್ಲಿರುವ ರಂಧ್ರಗಳಲ್ಲಿ ಇರಿಸಲ್ಪಟ್ಟವೆ. 'ಅ ಬ ಆ ಭ' ಎಂಬ ವೃತ್ತವನ್ನು ಬಹಳ ನಯವಾಗಿಯೂ, ತೆಳುವಾಗಿಯೂ ಇರುವ 'ಅ ಸ' ಎಂಬ ತಂತಿಯ ಮೂಲಕ 'ಸ' ಎಂಬ ಪ್ರದೇಶಕ್ಕೆ ನೇತಹಾಕಿ ಇದೆ. 'ಅ ಆ' ಎಂಬ ಊರ್ಧ್ವಾಧರ ಅಕ್ಷರೇಖೆಯ ಕೊನೆಯಾದ 'ಆ' ಎಂಬ ಪ್ರದೇಶದಲ್ಲಿ ಸಣ್ಣ ರಂಧ್ರದಲ್ಲಿ ನಿಂತಿರುವ ಚಿಕ್ಕದೊಂದು ಗೋಟವು ಇದೆ. ವಿವರ್ತನಕಕೀಲಗಳನ್ನೂ ಚಕ್ರಗಳನ್ನೂ ಚನ್ನಾಗಿ ಬರಸಬೇಕು. ಹೀಗೆ ಚನ್ನಾಗಿ ಬರಸಿ ಇಡುವದರಿಂದ ಯಂತ್ರದಲ್ಲಿನ ಭಾಗಗಳ ಪರಸ್ಪರಘರ್ಷಣವು ಬಹಳ ಕಡಿಮೆಯಾಗುತ್ತದೆ; ಮತ್ತು ಲೋಹಚಕ್ರವೇ ಮೊದಲಾದವುಗಳು ಸೇರುವ ಬಟ್ಟೆಯಂತ್ರಕ್ಕೆ 'ಬ' ಎಂಬ ಪ್ರದೇಶವೇ ಮಧ್ಯವಾಗಿದೆ. ಈ ಯಂತ್ರದ ಎಲ್ಲಾ ಪ್ರದೇಶಗಳೂ 'ಶ ಷ' ಎಂಬ ರೇಖೆಗೆ ಸಮಸಪ್ರಮಾಣದೂರದಲ್ಲಿ ಇರುವವಾದ್ದರಿಂದ ಈ ಯಂತ್ರಕ್ಕೆ 'ಶ ಷ' ಎಂಬ ರೇಖೆಯು ಧ್ರುವರೇಖೆಯಾಗುವದು. ಈ ಯಂತ್ರದ ಭಾರವೆಲ್ಲಾ 'ಬ' ಎಂಬ ಮಧ್ಯಪ್ರದೇಶದ ಮೂಲಕ ಅಮುಕುತ್ತದೆ. 'ಸ ಅ' ಎಂಬ ತಂತಿಯು ಮೇಲಕ್ಕೆ ಸೆಳೆಯುವದರಿಂದಲೂ, ಕೆಳಗಡೆ 'ಆ' ಎಂಬ ಪ್ರದೇಶದಲ್ಲಿರುವ ಬತ್ತಿನ ಬಲದಿಂದಲೂ, ಈ ಭೂಮಿಯ ಆಕರ್ಷಣೆ ಅಂದರೆ ಯಂತ್ರದ ಭಾರವು ಲೋಹಚಕ್ರಭ್ರಮಣೆಗೆ ಏನೂ ತೊಂದರೆ ಮಾಡಲಾರದು.

ಈ ಯಂತ್ರವನ್ನು ನಮ್ಮಲ್ಲಿರುವ ದ್ರವ್ಯವಂತರು ತರಿಸಿ, ನಮ್ಮ ಜನಗಳಿಗಿರುವ ಭಚಕ್ರಭ್ರಮಣೆ ಎಂಬ ಭ್ರಮೆಯನ್ನು ನಿಮಿಷಮಾತ್ರದಲ್ಲಿ ಬಿಡಿಸಿ ಭೂಭ್ರಮಣೆಯೇ ಸತ್ಯವಾದದ್ದೆಂದು ತೋರಿಸುವದರಲ್ಲಿ ಪ್ರಯತ್ನಪಡುವರೆಂದು ಸಂಪೂರ್ಣವಾಗಿ ನಂಬಿಇದ್ದೇವೆ.

ಕೋ|| ಕಂ|| ವೆಂ||

೮. ಮೈಸೂರು ಗೆಜೆಟ್ ಸಂಗ್ರಹ.

ಜನವರೀ ತಾರೀಖು ೬.—ಮೆ॥ ಏ. ಜೆಚ್. ಕಾರ್ನರವರು ಎಗ್ಸೆಕ್ಯೂಟಿವ್ ಎಂಜಿನಿಯರ್ ಮೆ॥ ಜೇಲೀ ಸಾಹೇಬರಿಂದ ಮೈಸೂರು ಡಿವಿಜನ್ ಚಾರ್ಜು ತೆಗೆದುಕೊಂಡರು.

ಜನವರೀ ತಾರೀಖು ೨೦.—ಬೆಂಗಳೂರು ಡಿಸ್ಟ್ರಿಕ್ಟ್ ಡಿ॥ ಕ॥ ಮೆ॥ ಕೆಪ್ಟನ್ ಎ. ಜೆಚ್. ವೆಸ್ಟ್‌ಕಾಟ್ಟರ ಸಾಹೇಬರವರಿಗೆ ಮೂರುತಿಂಗಳ ರಜಾ ಕೊಟ್ಟಿದೆ.

ಜನವರೀ ತಾ॥ ೨೩.—ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರವುಳ್ಳ ಸರಕಾರದ ಉದ್ಯೋಗಸ್ಥರೆಲ್ಲರೂ ತಮ್ಮ ಅಧಿಕಾರಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಇರತಕ್ಕ ಅಥವಾ ತಮ್ಮ ಕೋರ್ಟಿಗೆ ಏನಾದರೂ ಕೆಲಸವಾಗಿ ಬಂದ ಜನಗಳಲ್ಲಿ ಆದಾಯಕರವಾದ ಯಾವ ಲೇವಾದೇವಿಯನ್ನೂ ಇಟ್ಟುಕೊಳ್ಳಕೂಡದು ಪ್ರಸ್ತುತದಲ್ಲಿ ಅಂಥಾ ಲೇವಾದೇವಿಗಳನ್ನು ಮಾಡಿರತಕ್ಕ ಡಿಸ್ಟ್ರಿಕ್ಟ್ ಜಡ್ಜಿಗಳು, ಡಿಪ್ಟೀ ಕಮ್ಮಿಷನರುಗಳು, ಅಸಿಸ್ಟೆಂಟ್ ಕಮ್ಮಿಷನರುಗಳು, ಮುನಸೀಫರು, ಅಮಲ್ದಾರರು, ಡಿಪ್ಟೀ ಅಮಲ್ದಾರರು ಎಲ್ಲರೂ ತಮ್ಮ ಲೇವಾದೇವೀ ವಿಷಯವನ್ನೂ ಯಾರಿಂದಲಾದರೂ ಹಣ ತೆಗೆದುಕೊಂಡಿದ್ದರೆ ಅವರ ಹೆಸರುಗಳನ್ನೂ ತೆಗೆದುಕೊಂಡು ಇರತಕ್ಕ ಮೊಬಲಗನ್ನೂ ಬರೆದು ತಮ್ಮ ಮೇಲ್ಪಟ್ಟ ಆಫೀಸರುಗಳ ಮೂಲಕವಾಗಿ ಸರಕಾರಕ್ಕೆ ಸರಕಾರದ ತಿಳುವಳಿಕೇ ಬಗ್ಗೆ ಕಳುಹಿಸಿ ಕೊಡಬೇಕು.

ಫಸ್ಟ್ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಇ. ಸಿ. ಷಣ್ಮುಗವೇಲು ಪಿಳ್ಳೆಯವರು ಮೆ॥ ರಿಕ್ಕೆಟ್ಸ್ ಸಾಹೇಬರವರು ವಿಲಾಯಿತಿಯಿಂದ ಬರುವವರಿಗೆ ಅಥವಾ ಇನ್ನೊಂದು ಹುಕುಂ ಕೊಡುವವರಿಗೆ ಬೆಂಗಳೂರು ಡಿಸ್ಟ್ರಿಕ್ಟಿಗೆ ಡಿಪ್ಟೀ ಕಮಿಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಇರತಕ್ಕದ್ದು.

ಬೆಂಗಳೂರು ಓ. ಆ. ಮ್ಯಾಜಿಸ್ಟ್ರೇಟ್ ಮೆ॥ ಪಿ. ಎನ್. ಪೂರ್ಣಯ್ಯನವರು ಇನ್ನೊಂದು ಹುಕುಂ ಕೊಡುವವರಿಗೂ ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀ ಆಫೀಸರಾಗಿ ಇರತಕ್ಕದ್ದು.

ಜನವರೀ ತಾ॥ ೨೮.—ಹಾಸನದ ಸಬ್ ಡಿವಿಜನ್ ಅ॥ ಕ॥ ಮೆ॥ ಟಿ. ಆನಂದರಾಯರವರು ರೆವಿನ್ಯೂ ಇಲಾಖೆ ಅಂಡರ್ ಸೆಕ್ರೆಟರಿಗಳಾಗಿ ಇರತಕ್ಕದ್ದು. ಮೈಸೂರು ಅ॥ ಕ॥ರವರ ಮೆ॥ ಬಿ. ತಿರುಮಲಾಚಾರ್ಯರವರು ಹಾಸನದ ಸಬ್ ಡಿವಿಜನ್ ಅ॥ ಕ॥ ರಾಗಿ ಇರತಕ್ಕದ್ದು. ದಿವಾನರ ಪ್ರೈವೇಟ್ ಸೆಕ್ರೆಟರಿಯವರು ಮೆ॥ ಸಿ. ವಿ. ರಾಘವಾಚಾರ್ಯರವರು ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿ ಇರತಕ್ಕದ್ದು. ಅ॥ ಕ॥ ಮೆ॥ ಎಂ. ಕೃಷ್ಣಸ್ವಾಮಯ್ಯಂಗಾರ್ಯರಿಗೆ ಈ ತಾರೀಖು ಲಾಗಾಯಿತು ೨ ತಿಂಗಳ ರಜಾ ಕೊಟ್ಟಿದೆ.

ಓಡುವವನ ಕಂಡರೆ ಅಟ್ಟುವವಗೆ ಘನ.

ಜನವರೀ ತಾ|| ೨೧.—ಈ ಕೆಳಗೆ ಹೇಳಿರತಕ್ಕ ರೇವಿನ್ಯೂ ಅಸಿಸ್ಟೆಂಟ್ ಕಮ್ಮಿಷನರುಗಳನ್ನೆಲ್ಲಾ ಪೋಲೀಸ್ ಅ|| ಕ|| ರುಗಳನ್ನಾಗಿ ನೇಮಿಸಿ ಇದೆ.—

ಮ|| ಕೃಷ್ಣಯ್ಯಂಗಾರ್ಯರು. .. ... ಬೆಂಗಳೂರು ಡಿಸ್ಟ್ರಿಕ್ಟಿಗೆ
ಮ|| ಜಿ. ರಘುನಾಥರಾಯರು. .. .. ಕೋಲಾರಕ್ಕೆ.
ಮ|| ಎನ್. ಕೃಷ್ಣರಾಯರು. .. .. ತುಮಕೂರಿಗೆ.
ಮ|| ಸಿ. ಮಾದಯ್ಯನವರು. .. .. ಮೈಸೂರಿಗೆ.
ಮ|| ಸಯ್ಯದನಸೀರುದ್ದೀನ್ ಸಾಹೇಬರು. .. ಶಿವಮೊಗ್ಗೆಗೆ.
ಮ|| ಬಿ. ಕೆ. ವೆಂಕಟವರದಯ್ಯಂಗಾರ್ಯರು. .. ಕಡೂರಿಗೆ.

೧೮೮೫ನೇ ಇಸವಿ ಜನವರೀ ತಾ|| ೨೪ರವರಿಗಿನ ಕಾಲಸ್ಥಿತಿಯ ರಿಪ್ರೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.—ಪೈರು ಚನ್ನಾಗಿದೆ. ಖುಷ್ಕೀ ಬೆಳೆಯು ಮುಗಿಯುತ್ತಾ ಬಂತು. ಕಾರ್ತೀಕದ ಪೂಜೆ ಬತ್ತ ಬೆಳೆಯಾಗುವದರಲ್ಲಿದೆ. ಈಚಿಗೆ ಬಿತ್ತಿದ ವೈಶಾಖದ ಬೆಳೆಯು ನೀರಿಲ್ಲದೆ ಒಣಗಿ ಹೋಗುತ್ತಾ ಇದೆ. ಕುಡಿಯುವ ನೀರೂ ದನಗಳ ಮೇವೂ ನಿತ್ಯವೂ ಕಡಮೆಯಾಗುತ್ತಾ ಇವೆ. ರೂಪಾಯಿ ೧ಕ್ಕೆ ಮಯ್ಯಂ ಅಕ್ಕಿ ೯|| ಸೇರು, ರಾಗಿ ಮತ್ತು ಹುರಳಿ ೨೦|| ಸೇರು.

ಕೋಲಾರ ಡಿಸ್ಟ್ರಿಕ್ಟು.—ಪೈರು ಚನ್ನಾಗಿದೆ. ಕಾಲಸ್ಥಿತಿಯು ಅಭ್ಯೆಯರ್ಣಕರವಾಗಿದೆ. ನೀರೂ ಹುಲ್ಲೂ ಸಿಕ್ಕುತ್ತವೆ. ದಾರಣೆವಾಸಿಯು ಹೆಚ್ಚುತ್ತಾ ಇದೆ. ರೂಪಾಯಿ ೧ಕ್ಕೆ ಅಕ್ಕಿ ೯—೧೧ ಸೇರು, ರಾಗಿ ೨೦—೨೮ ಸೇರು.

ತುಮಕೂರು ಡಿಸ್ಟ್ರಿಕ್ಟು.—ತುಮಕೂರು ತಾಲ್ಲೂಕು ಕೆಲವು ಪ್ರದೇಶಗಳಲ್ಲಿ ರಾಗಿ ಪೈರು ಒಣಗಿ ಹೋಯಿತು. ಸೀರಾ ತಾಲ್ಲೂಕಿನಲ್ಲಿಯೂ ಕಪಿಲೆಗಳಿರುವ ಸ್ಥಳಗಳನ್ನು ಬಿಟ್ಟು ಮಿಕ್ಕ ಕಡೆಯಲ್ಲಿಯೂ ಹೀಗೆಯೇ ಆಯಿತು. ಸೀರಾ ತಾಲ್ಲೂಕಿನಲ್ಲಿ ಸೋಸಿ ರಾಗಿಯನ್ನೂ, ತಿಪಟೂರು ಪಾವಗಡ ಚಳ್ಳಕೆರೆ ತಾಲ್ಲೂಕುಗಳಲ್ಲಿ ಬತ್ತವನ್ನೂ ಬಿತ್ತಿದರು. ಕಾಲಸ್ಥಿತಿಯು ಕೆಲವು ಕಡೆ ಮಾತ್ರ ಚನ್ನಾಗಿದೆ. ಜನರು ಸೌಖ್ಯವಾಗಿದ್ದಾರೆ. ದನಗಳಿಗೆ ತೆವಲು ರೋಗ ತಗಲಿದೆ. ಕೆಲವು ಕಡೆ ಕುಡಿಯುವ ನೀರೂ ದನಗಳ ಮೇವೂ ಸಾಲವು. ರೂಪಾಯಿ ೧ಕ್ಕೆ ಮಯ್ಯಂ ಅಕ್ಕಿ ೯||—೧೪ ಸೇರು, ರಾಗಿ ೨೨—೩೦ ಸೇರು, ಹುರಳಿ ೧೫||—೨೪ ಸೇರು.

ಮೈಸೂರು ಡಿಸ್ಟ್ರಿಕ್ಟು.—ಪೈರು ಚನ್ನಾಗಿದೆ. ಕೆಲವು ಕಡೆ ಬತ್ತ, ಹುರಳಿ, ಹೆಸರು ಇವುಗಳ ಫಸಲು ಆಗುತ್ತಾ ಇದೆ. ಕಾಲಸ್ಥಿತಿ ಚನ್ನಾಗಿದೆ. ಸದ್ಯಕ್ಕೆ ಕುಡಿಯುವ

ನೀರಿಗೂ ದನಗಳ ಮೇವಿಗೂ ಕಡಿಮೆಯಿಲ್ಲ. ರೂಪಾಯಿ ೧ಕ್ಕೆ ದೊಡ್ಡಂ ಅಕ್ಕಿ ೧೦ ಸೇರು, ರಾಗಿ ೨೪ ಸೇರು, ಹುರಳಿ ೨೦ ಸೇರು.

ಶಿವಮೊಗ್ಗಾ ಡಿಸ್ಟ್ರಿಕ್ಟ್.—ದಾವಣಗೆರೆ ತಾಲ್ಲೂಕು ವಿನಹ ಮಿಕ್ಕಾದಕಡೆ ಪೈರು ಬಹಳ ಚನ್ನಾಗಿದೆ. ಅವರೆ ಕಡಲೆ ತೋಗರಿಗಳ ಜಳ್ಳೆ ಆಯಿತು. ಶಿವಮೊಗ್ಗೆಯಲ್ಲಿ ಕಬ್ಬಿನ ಬೆಲ್ಲವಾಗುತ್ತಾ ಇದೆ. ಜ್ವರವೂ ಹೊಟ್ಟೆನೋವೂ ತಲೆದೂತ್ತಿಕೊಂಡಿವೆ. ಸಿಕಾರಿಪುರದಲ್ಲಿಯೂ ಸಾಗರದಲ್ಲಿಯೂ ದನಗಳು ತೆವಲು ರೋಗದಿಂದ ಸರಳುತ್ತಿವೆ. ರೂಪಾಯಿ ೧ಕ್ಕೆ ೧೪—೧೬ ಸೇರು, ರಾಗಿ ೨೦—೪೦ ಸೇರು, ಜೋಳ ೨೦—೨೮ ಸೇರು.

ಕಡೂರು ಡಿಸ್ಟ್ರಿಕ್ಟ್.—ಪೈರು ಸಾಧಾರಣವಾಗಿ ಚನ್ನಾಗಿದೆ. ಮಲ್ನಾಡಿನಲ್ಲಿ ವೈಶಾಖದ ಪೈರು ಬಿತ್ತಿದರು. ರಾಗಿ, ಕಬ್ಬು, ಹುರಳಿ, ಕಡಲೆ, ಹರಳು ಇವುಗಳ ಬೆಳೆಯಾಯಿತು. ಕಾಪಿ ಮತ್ತು ಅಡಿಕೇ ಫಸಲು ಆಯಿತು. ಕಡೂರು ಮತ್ತು ಹೊಸ್ಸದ ತಾಲ್ಲೂಕುಗಳಲ್ಲಿ ವಾಂತಿ ಭೇದಿಯು ಪ್ರಾರಂಭವಾಗಿದೆ.

೯. ವೃತ್ತಾಂತ ಸಂಗ್ರಹ.

ಹೊಸ ಗವರ್ನರ ಜನರಲರಾದ ಅರಲ್ ಆಫ್ ಡಫರಿನ್ ಸಾಹೇಬರವರು.

ಇಂಡಿಯಾಚಕ್ರವರ್ತಿನಿಯವರಿಗೆ ಪ್ರತಿನಿಧಿಗಳಾಗಿಯೂ ನಮ್ಮ ಸಂಸ್ಥಾನಕ್ಕೆ ಗವರ್ನರ್‌ಜನರಲ್‌ರಾಗಿಯೂ ಬಂದು ಇರತಕ್ಕ ಅರಲ್ ಆಫ್ ಡಫರಿನ್ ಸಾಹೇಬರವರು ೧೮೨೬ನೇ ಇಸವಿಯಲ್ಲಿ ಹುಟ್ಟಿದರು. ಇವರ ತಂದೆಯವರು ಹಡಗಿನ ಮುಖ್ಯಸ್ಥರಾಗಿ ಇದ್ದರು. ಇವರು ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಓದಿಕೊಂಡು ೧೮೪೬ನೇ ಇಸವಿಯಲ್ಲಿ ಐರ್ಲೆಂಡ್ ದ್ವೀಪಕ್ಕೆ ಹೋದರು. ಅಲ್ಲಿ ಆ ವರುಷ ಕ್ಷಾಮವು ಹೆಚ್ಚಿ ಇತ್ತು. ಇವರು ಆ ಕ್ಷಾಮದ ಪೂರ್ವಾಪರಗಳನ್ನೆಲ್ಲಾ ವಿಚಾರಿಸಿ ಅದರ ವಿಷಯದಲ್ಲಿ ಒಂದು ರಿಪೋರ್ಟನ್ನು ಬರೆದರು. ೧೮೫೫ನೇ ಇಸವಿಯಲ್ಲಿ ಇಂಗ್ಲೀಷ್ ರಾಯಭಾರಿಗಳಾಗಿ ವೀನಾಪಟ್ಟಣಕೆ ಹೋಗಿದ್ದರು. ೧೮೬೦ನೇ ಇಸವಿಯಲ್ಲಿ ಸಿರಿಯಾದೇಶದವರು ಕ್ರಿಸ್ತಮತಸ್ಥರನ್ನು ಅನೇಕವಾಗಿ ಕೊಂದು ಹಾಕಿಇದ್ದರು. ಈ ವಿಷಯವನ್ನು ವಿಚಾ

ಕಂಡುಳ್ಳಿ ದೊಡ್ಡ್ವ್ಯೈಲಿ ಚರಣಾರ್ತಿ.

ಬೆಸೆವ ನಡುವಣಕ್ಕೆ ಇವರು ಕಮಿಶ್ನರರಾಗಿ ವಿಸರ್ಜಾಟು ಮಾಡಲ್ಪಟ್ಟರು. ಈ ಕೆಲಸದಲ್ಲಿ ಇವರು ಮಾಡಿದ ಮೆಹನತ್ತಿಗೋಸ್ಕರ ಕೆ. ಸಿ. ಬಿ. ಎಂಬ ಬಿರುದನ್ನು ಹೊಂದಿದರು. ಅನಂತರದಲ್ಲಿ ಎರಡು ವರ್ಷಗಳವರಿಗೂ ನಮ್ಮ ಇಂಡಿಯಾದೇಶಕ್ಕೆ ಸೆಕ್ರೆಟರಿಗಳಾಗಿ ಇದ್ದರು. ೧೮೭೨ನೇ ಇಸವಿಯಲ್ಲಿ ಕೆನಡಾದೇಶಕ್ಕೆ ಗವರ್ನರ ಜನರಲ್‌ರಾಗಿ ನೇಮಿಸಲ್ಪಟ್ಟರು. ೧೮೭೮ನೇ ಇಸವಿಯಲ್ಲಿ ಡಬ್ಲಿನ್ ಯೂನಿವರ್ಸಿಟಿಯವರು ಇವರಿಗೆ ಎಲ್‌ಎಲ್. ಡಿ. ಎಂಬ ಬಿರುದನ್ನು ಕೊಟ್ಟರು. ೧೮೭೯ನೇ ಇಸವಿಯಲ್ಲಿ ಅಕ್ಸ್‌ಫರ್ಡ್ ಯೂನಿವರ್ಸಿಟಿಯವರು ಡಿ. ಸಿ. ಎಲ್. ಎಂಬ ಬಿರುದನ್ನು ಕೊಟ್ಟರು. ಇದೇ ವರ್ಷದಲ್ಲಿ ಇವರು ರಷ್ಯಾದೇಶದ ಚಕ್ರವರ್ತಿಯ ರಾಜಧಾನಿಯಲ್ಲಿ ಇಂಗ್ಲಿಷ್ ಸಂಸ್ಥಾನದ ರಾಯಭಾರಿಗಳಾಗಿ ನೇಮಿಸಲ್ಪಟ್ಟರು. ೧೮೮೧ನೇ ಇಸವಿಯಲ್ಲಿ ತುರುಕೀದೇಶದ ರಾಯಭಾರಿಗಳಾದರು. ಈ ಕೆಲಸದಲ್ಲಿ ಇವರು ಅತ್ಯಂತ ಅದ್ಭುತವಾದ ರಾಜತಂತ್ರಗಳಲ್ಲಿ ಪ್ರವೀಣತೆಯನ್ನು ತೋರಿಸಿ ತಾವು ತೊಡಗಿದ ರಾಜಕಾರ್ಯವನ್ನು ನೆರವೇರಿಸಿದರು. ಈ ಕೆಲಸದಿಂದ ಈಜಿಪ್ಟ ದೇಶದ ಕೈರೋ ಪಟ್ಟಣಕ್ಕೆ ಇಂಗ್ಲೀಷ್‌ಕಾರ್ಯಗಳ ನಿರ್ವಹಣಾರ್ಥವಾಗಿ ಕಳುಹಿಸಲ್ಪಟ್ಟರು. ಇವರು ರಾಜತಂತ್ರಗಳ ವಿಷಯದಲ್ಲಿ ಅನೇಕ ಗ್ರಂಥಗಳನ್ನು ಬರೆದು ಇದ್ದಾರೆ. ಇವುಗಳನ್ನೆಲ್ಲಾ ನೋಡಿದರೆ ಇವರಿಗೆ ರಾಜ್ಯಭಾರ ಮಾಡುವದರ ಅನುಭವವು ವಿಶೇಷವಾಗಿರುವಂತೆ ತೋರುತ್ತದೆ. ಆದರೆ ಲಾರ್ಡ್ ರೈಪನ್ ಸಾಹೇಬರವರು ನಿಷ್ಪಕ್ಷಪಾತವಾಗಿ ರಾಜ್ಯಪರಿಪಾಲನೆಯನ್ನು ಮಾಡಿ ಲೋಕೋತ್ತರವಾದ ಕೀರ್ತಿಯನ್ನು ಸಂಪಾದಿಸಿದರು. ಇವರ ರಾಜ್ಯಭಾರ ಕ್ರಮವು ಇನ್ನು ಮೇಲೆ ಗೊತ್ತಾಗಬೇಕು.

ಟ್ರಾವನ್ಕೂರ ಮಹಾರಾಜರವರು ಬ್ರಿಟಿಷ ರಾಜ್ಯಗಳಲ್ಲಿ ಹೋದರೆ ೨೧ ಗುಂಡಾಗುವಂತೆ ಮೊದಲು ನಿಬಂಧನೆಯಿತ್ತು. ಈಗ ೧೯ ಗುಂಡೇ ಆಗತಕ್ಕದ್ದೆಂದು ಬ್ರಿಟಿಷ ಸರಕಾರದವರು ಕಟ್ಟುಮಾಡಿ ಇರುವದರಿಂದ ಆ ಮಹಾರಾಜರು ಇದಕ್ಕಾಗಿ ಇಂಡಿಯಾ ಗವರ್ನಮೆಂಟಿಗೆ ಬರೆದುಕೊಂಡು ಇದ್ದಾರೆ.

ಕಂಡದ್ದು ಬಿಡದು ಮುಂದೇ ದ್ಯೆವ.

ಕೇಪ್ ಆಫ್ ಗುಡ್ ಹೋಪ್ ಬಳಿಯಿರುವ ವಜ್ರದ ಗಣಿಗಳಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿ ೩೪,೩೦,೧೩೩ ರೂಪಾಯಿ ಬಾಳುವಷ್ಟು ವಜ್ರಗಳು ಸಿಕ್ಕಿದವು.

ಇಂಡಿಯಾದೇಶವನ್ನು ನೋಡಿಕೊಂಡು ಸ್ವದೇಶಕ್ಕೆ ಹೋದ ಒಬ್ಬ ಇಂಗ್ಲೀಷ್ ಮನುಷ್ಯನು ಹೀಗೆ ಹೇಳುತ್ತಾನೆ :—"ಇಂಡಿಯಾ ದೇಶವು ಉದ್ಧಾರವಾಗಬೇಕಾದರೆ ಹಿಂದೂಸ್ತ್ರೀಯರ ಧರ್ಮಾಚರಣೆಯಿಂದಲೇ ಸರಿ ಈ ಸ್ತ್ರೀಯರಹಾಗೆ ಘನತೆಯುಳ್ಳವರೂ ಪ್ರಾಮಾಣಿಕರೂ ಧರ್ಮದೃಷ್ಟಿಯುಳ್ಳವರೂ ಇನ್ನಾವ ಖಂಡದ ನಾಗರೀಕರಾದ ಜನರಲ್ಲಿಯೂ ಸಿಕ್ಕುವದು ಅಪೂರ್ವ. ಯೂರೋಪಿಯನರು ಕೀಳು ಜಾತಿಯಲ್ಲಿ ಹುಟ್ಟಿದ ಕೆಟ್ಟ ಹಿಂದೂ ಹೆಂಗಸರನ್ನು ನೋಡಿ ಎಲ್ಲಾ ಹಿಂದೂ ಸ್ತ್ರೀಯರೂ ಹೀಗೆಯೇ ಇರುವರೆಂದು ತಿಳಿದುಕೊಳ್ಳುವರು. ಇದು ತಪ್ಪು. ನೀಚರು ವಿನಹಾ ಸಾಮಾನ್ಯವಾದ ಜನಗಳಲ್ಲೆಲ್ಲಾ ಪ್ರಾಯಶಃ ಸ್ತ್ರೀಪಾತಿವ್ರತ್ಯ ಧರ್ಮವು ಬಹಳ ಚೆನ್ನಾಗಿದೆ. ಹೀಗೆ ಈ ಧರ್ಮವನ್ನು ಆಚರಿಸತಕ್ಕ ಸ್ತ್ರೀಯರು ವಿದ್ಯಾವಂತರೂ ಆದರೆ ಇಂಡಿಯಾದೇಶವು ಉದ್ಧಾರವಾಗುವದು."

ಹೈದರಾಬಾದಿನಲ್ಲಿ ರೆವಿನ್ಯೂಬೋರ್ಡನ್ನು ತೆಗೆಯಬೇಕೆಂಬದಾಗಿಯೂ ರೆವಿನ್ಯೂ ವಿಷಯಗಳನ್ನು ನಡಿಸುವದಕ್ಕೋಸ್ಕರ ಒಬ್ಬ ಸೆಕ್ರೆಟರಿಯೂ ಇಬ್ಬರು ಅಸಿಸ್ಟೆಂಟುಗಳೂ ಇರಬೇಕೆಂಬದಾಗಿಯೂ ಏರ್ಪಾಡುಮಾಡಿ ಇದ್ದಾರೆ. ರೇಲ್ವೆ, ಪೋಲೀಸ, ಅಬಕಾರಿ ಇಲಾಖೆಗಳ ವಿಚಾರಣೆಗೋಸ್ಕರ ಇಬ್ಬರು ಸೆಕ್ರೆಟರಿಗಳು ನೇಮಕವಾಗಿ ಇದ್ದಾರೆ. ಕಾನಲ್ ಕೆಲಸಗಳನ್ನು ಇವರಿಗೇ ಸೇರಿಸಿ ಇರುತ್ತಾರೆ. ಪಬ್ಲಿಕ್ ವರ್ಕ್ಸ ಡಿಪಾರ್ಟಮೆಂಟಿಗಾಗಿ ಒಬ್ಬ ಕನ್ಸಲ್ಟಿಂಗ್ ಎಂಜಿನಿಯರರನ್ನು ನೇಮಕಮಾಡಿ ಇದ್ದಾರೆ.

ನವನಗರಿನ ಮಹಾರಾಜರವರು ಅಹಮ್ಮದಾಬಾದ ಪಾಠಶಾಲೆಗೆ ೩೪,೦೦೦ ರೂಪಾಯಿಕೊಟ್ಟರೆಂದು ಕೇಳಿ ಸಂತೋಷಿಸುತ್ತೇವೆ.

ಯಾವಾಗಲಾದರೂ ಒಬ್ಬ ಮನುಷ್ಯನ ಮೇಲೆ ಅವನು ಖೂನೀಮಾಡಿದನೆಂಬ ತಪ್ಪು ಸಾಬೀತಾಗಿ ಅವನನ್ನು ಕೈದಿನಲ್ಲಿಟ್ಟರೆ ಅವನು ಬಂದುವೇಳೆ ನಿರಪರಾಧಿಯಾಗಿ ಇದ್ದಾಗ್ಯೂ ತನ್ನ ಮೊಕದ್ದಮೆಯನ್ನು ತನ್ನಪಕ್ಷವಾಗಿ ವಾದಿಸುವದಕ್ಕೆ ವಕೀಲರನ್ನು ಏರ್ಪಾಡು ಮಾಡುವದಕ್ಕೆ ಶಕ್ತಿಯಿಲ್ಲದೆ ಇರುವದೂ ಉಂಟು. ಅಂಥಾ ಸಂದರ್ಭಗಳಲ್ಲಿ ಸರಕಾರದವರೇ ಫಿರ್ಯಾದಿಗಳಿಗೆ ಸರಕಾರದ ಅಡ್ವೋಕೇಟರನ್ನು ಇಡುವಹಾಗೆಯೇ ಅಪರಾಧಿಗಳ ಪಕ್ಷವನ್ನೂ ಡಿಫೆನ್ಸ ಬಗ್ಗೆ ಅಡ್ವೋಕೇಟುಗಳನ್ನು ನೇಮಕಮಾಡಬೇಕೆಂಬದಾಗಿ ಮದರಾಸು ಸರಕಾರದವರು ಏರ್ಪಾಡುಮಾಡಿ ಇದ್ದಾರೆ.

ಕಂಡರೆ ಕೋಪ, ಕಾಣದಿದ್ದರೆ ತಾಪ.

ಬಳ್ಳಾರಿಯಲ್ಲಿ ೮ ವರ್ಷದ ಒಬ್ಬ ಮಾಧ್ವಹುಡುಗನಿಗೆ ಒಂದೂವರೆ ವರ್ಷದ ಮಗುವನ್ನು ಕೊಟ್ಟು ಮದುವೆಮಾಡಿದರು. ತಂದೆತಾಯಿಗಳಿಗೆ ಮಕ್ಕಳು ಇಷ್ಟು ಚಿಕ್ಕವರಾಗಿರುವಾಗಲೇ ಮದುವೆಮಾಡಬೇಕೆಂಬ ರೋಗವು ಎಂದಿಗೆ ಪರಿಹರಿಸುವದೋ ತಿಳಿಯದು.

ಡಿಸೆಂಬರು ೯ನೇ ತಾರೀಖಿನಲ್ಲಿ ಜಪಾನ್‌ದೇಶದಲ್ಲಿ ಒಂದು ಭೂಕಂಪವಾಯಿತು. ಹೀಗೆಯೇ ಸುಮಾರು ೨೫ ವರ್ಷಗಳಿಗೆ ಮುಂಚೆ ಒಂದು ಭೂಕಂಪವಾಗಿ ಎಷ್ಟೋ ಪಟ್ಟಣವು ನಾಶವಾಯಿತು. ಆ ಪಟ್ಟಣವಿದ್ದ ಸ್ಥಳದಲ್ಲಿ ಗುಡ್ಡಗಳೂ ಬೆಟ್ಟಗಳೂ ತುಂಬಿಕೊಂಡವು. ಪೂರ್ವದಹಾಗೆಯೇ ಈಗಲೂ ಎಲ್ಲಿ ಆದೀತೋ ಎಂದು ಜನರು ಭಯಪಟ್ಟು ಇದ್ದಾರೆ.

ತಂಜಾವೂರಿನಲ್ಲಿ ಕಳೆದ ಕ್ರಿಮಿನಲ್ ಸೆಷನ್‌ನಲ್ಲಿ ಆರು ಡಕಾಯಿಟೀ ಮೊಕದ್ದಮೆಗಳು ದರ್ಯಾಪ್ತಿ ಆದವು: ಕಳ್ಳರು ಗುಂಪುಗುಂಪಾಗಿ ಸೇರಿಕೊಂಡು ಗ್ರಾಮಗಳನ್ನೆಲ್ಲಾ ಲೂಟಿ ಮಾಡುತ್ತಾ ಪೋಲೀಸ್‌ನವರು ಬಂದರೆ ಅವರನ್ನೂ ಹೊಡೆದು ಓಡಿಸುತ್ತಾ ಇದ್ದಾರಂತೆ. ೧೮೭೬—೭೮ನೇ ವರ್ಷಗಳಲ್ಲಿ ಉಂಟಾದ ಕ್ಷಾಮಗಳಿಂದ ಅನೇಕರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಜೀವನಕ್ಕೆ ಉಪಾಯಾಂತರಗಳನ್ನು ತಿಳಿಯದೆ ಹೀಗೆ ದುರ್ಮಾರ್ಗಪ್ರವರ್ತಕರಾಗಿ ಇದ್ದಾರೆ. ಸರಕಾರದವರು ಇದರ ಕಾರಣಗಳನ್ನು ವಿಚಾರಿಸಿ ಅವರ ದಾರಿದ್ರ್ಯವು ಪರಿಹಾರವಾಗುವ ಹಾಗೂ ಸರಕಾರಕ್ಕೆ ಉಪಯೋಗವಾಗುವಹಾಗೂ ತಕ್ಕ ಏರ್ಪಾಡುಗಳನ್ನು ಮಾಡದೆ ಇರುವದರಿಂದಲೇ ಇವರು ಈ ಕೆಟ್ಟ ಜೀವನದಲ್ಲಿ ಪ್ರವರ್ತಿಸಿದರು. ಸರಕಾರದವರು ಬೇರೆ ಬೇರೆ ಕಸುಬುಗಳನ್ನು ಕಲ್ಪಿಸಿ ಸೋಮಾರಿಗಳಾದ ಜನರಿಗೆಲ್ಲಾ ಜೀವನೋಪಾಯಗಳನ್ನು ತೋರಿಸಿದರೇನೇ ಹೊರತು ಇಲ್ಲದಿದ್ದರೆ ಇವರು ಈ ದುರ್ಮಾರ್ಗಗಳನ್ನು ಬಿಡುವದಿಲ್ಲ.

ಕಳೆದ ಜನವರೀ ತಾರೀಖು ೧೨ ರಲ್ಲಿ ಚೆನ್ನಪಟ್ಟಣದಲ್ಲಿ ಸುಮಾರು ೩೦ ಜನ ಕಳ್ಳರು ಹನುಮಂತಯ್ಯನೆಂಬ ಒಬ್ಬ ಗೌಡನ ಮನೆಗೆ ಬಿದ್ದು ಹಣಕಾಸುಗಳನ್ನೂ ಒಡವೇವಸ್ತುಗಳನ್ನೂ ಇಟ್ಟಿದ್ದಾರೆಂದು ತಿಳಿದುಕೊಂಡಿದ್ದ ಒಂದು ಪೆಟ್ಟಿಗೆಯನ್ನು ಹೊತ್ತುಕೊಂಡು ಹೊರಗೆ ಬರುವಕಾಲಕ್ಕೆ ಮನೆಯುವರಿಗೆ ಎಚ್ಚರಿಕೆಯಾಗಿ ಅವರಿಗೂ ಕಳ್ಳರಿಗೂ ಜಗಳಹತ್ತಿ ಆ ಗದ್ದಲವು ಪೋಲೀಸಿಗೆ ತಿಳಿದು ಪೋಲೀಸಿನವರು ಆ ಕಳ್ಳರನ್ನು ಹಿಡಿದು ಬೆಂಗಳೂರಿಗೆ ಕಳುಹಿಸಿಕೊಟ್ಟರು.

ಲಂಡನ್‌ನಲ್ಲಿ ನಾನಾವಿಧವಾದ ಕಸುಬುಗಳುಂಟು. ಕೆಲಸಮಾಡತಕ್ಕವರಿಗೆ ವಿಶೇಷವಾಗಿ ಕೆಲಸ ಸಿಕ್ಕುತ್ತದೆ. ಹಾಗೆ ದೇಹಶ್ರಮಪಟ್ಟು ಜೀವಿಸತಕ್ಕವರಿಗೆ ಸುಲಭವಾಗಿ

ಕಂಡವರ ಮಕ್ಕಳನ್ನು ಬಾವೀಲಿ ದೂಡಿ ಆಳ ನೋಡಿದ ಹಾಗೆ.

ಜೀವನ ಸಿಕ್ಕುವದಲ್ಲದೆ ಧನಿಕರಾಗುವದಕ್ಕೂ ಅಸ್ಪದವಿರುತ್ತದೆ. ಕೆಲವು ಇತರ ದೇಶಗಳಲ್ಲಿ ಹಣಗಾರರಾದ ಅನೇಕ ಜನರು ಆ ಹಣವನ್ನು ಲೋಕಕ್ಕೂ ತಮಗೂ ಪ್ರಯೋಜನವಿಲ್ಲದೆ ಸುಮ್ಮನೆ ಇಟ್ಟುಕೊಂಡಿರುತ್ತಾರೆ. ಇದರಿಂದ ಲೋಕಕ್ಕೆ ಉಪಕಾರ ತಪ್ಪುವದಲ್ಲದೆ ಇವರೂ ತಮ್ಮ ದ್ರವ್ಯವನ್ನು ವೃದ್ಧಿ ಮಾಡಿಕೊಳ್ಳುವದಕ್ಕಾಗುವದಿಲ್ಲ. ಜನರಿಗೆ ದೇಹಶ್ರಮಪಟ್ಟಾಗ್ಯೂ ಜೀವನ ಸಿಕ್ಕದಿದ್ದರೆ ಕಳ್ಳತನ ಮೊದಲಾದವುಗಳಿಂದ ಜೀವಿಸುವದಕ್ಕೆ ಉಪಕ್ರಮಿಸುವರು. ಇವರು ಹೀಗೆ ದುರ್ಮಾರ್ಗದಲ್ಲಿ ಪ್ರವರ್ತಿಸುವದರಿಂದ ಲುಬ್ಧರಾದ ದ್ರವ್ಯವಂತರಲ್ಲಿ ಅನೇಕರ ದ್ರವ್ಯವು ಇವರ ಪಾಲಾಗುವದು. ಹೀಗೆ ಅತ್ಯಾಶೆಯಿಂದ ತಮ್ಮ ದ್ರವ್ಯವನ್ನೆಲ್ಲಾ ಭದ್ರಮಾಡಬೇಕೆಂದಿದ್ದು ಚೋರರ ಪಾಲು ಮಾಡುವದಕ್ಕಿಂತ ದ್ರವ್ಯವಂತರೆಲ್ಲರೂ ಸೇರಿ ಒಂದು ಸಮಾಜಮಾಡಿಕೊಂಡು ತಮ್ಮ ದ್ರವ್ಯಗಳನ್ನೆಲ್ಲಾ ಕಾರಖಾನೆಗಳಲ್ಲಿ ಕೆಲಸಮಾಡುವದಕ್ಕೆ ವಿನಿಯೋಗಿಸಿ ಜಾಗರೂಕರಾಗಿ ಅನೇಕ ಕಸಬುಗಳನ್ನು ಮಾಡಿಸಿದರೆ ತಮ್ಮ ದ್ರವ್ಯವೂ ವೃದ್ಧಿಯಾಗುವದು ; ಜನರಿಗೆ ಜೀವನವುಂಟಾಗುವದು ; ಕಳವು ಮುಂತಾದ ಅಕೃತ್ಯಗಳೆಲ್ಲಾ ತಪ್ಪಿಹೋಗುವವು.

ಮದರಾಸಿನಲ್ಲಿ ಗೋಪಾಲರಾಯರು ಭಾಷ್ಯಮಯ್ಯಂಗಾರ್ಯರು ರಘುನಾಥರಾಯರು ಮೊದಲಾದ ಅನೇಕ ವಿದ್ವಾಂಸರು ಸೇರಿ ಒಂದು ಸಭೆಯನ್ನು ಮಾಡಿ ಇದ್ದರು. ನಮ್ಮ ಜನರು ವಿದ್ಯಾವಂತರಾಗಿಯೂ ಐಶ್ವರ್ಯವಂತರಾಗಿಯೂ ಸುಖಿಗಳಾಗಿಯೂ ಇರಬೇಕಾದರೆ ಏನು ಪ್ರಯತ್ನ ಮಾಡಬೇಕೆಂಬುವದೇ ಈ ಸಭೆಯ ಉದ್ದೇಶವು. ಅದಕ್ಕೆ ಗೋಪಾಲರಾಯರು ಹೇಳಿದ್ದೇನಂದರೆ:—ನಮ್ಮ ಉದ್ದೇಶಗಳೆಲ್ಲಾ ನೆರವೇರಬೇಕಾದರೆ ಪ್ರಥಮತಃ ನಮ್ಮ ಹೆಂಗಸರಿಗೆ ವಿದ್ಯಾಭ್ಯಾಸಮಾಡಿಸಬೇಕು. ಹೆಂಗಸರು ವಿದ್ಯಾವಂತರಾದರೆ ಯುಕ್ತಾಯುಕ್ತಗಳನ್ನು ತಿಳಿದುಕೊಂಡು ಪತಿಸೇವೆಯನ್ನು ಮಾಡಿಕೊಂಡು ಮಕ್ಕಳನ್ನು ಚನ್ನಾಗಿ ಪೋಷಿಸುತ್ತಾ ಅವರಿಗೆ ಒಳ್ಳೇ ವಿವೇಕವನ್ನೂ ವಿದ್ಯೆಯನ್ನೂ ಬುದ್ಧಿಯನ್ನೂ ಹೇಳುತ್ತಾ ಕಾಲವನ್ನು ಕಳೆಯುವರು. ಸಂಸಾರವನ್ನು ಚನ್ನಾಗಿ ನೋಡಿಕೊಳ್ಳುವರು. ಇವರು ಮೂರ್ಖರಾಗಿ ಇದ್ದರೆ ಇವರ ಸಹವಾಸದಲ್ಲಿಯೇ ಯಾವಾಗಲೂ ಇರುವ ಮಕ್ಕಳೂ ಕೂಡ ಇವರ ಹಾಗೆಯೇ ಮೂಢರಾಗುವರು. ಆಮೇಲೆ ಈ ಮಕ್ಕಳಿಗೆ ಪಾಠಶಾಲೆಗಳಲ್ಲಿ ಎಷ್ಟು ವಿವೇಕವನ್ನು ಬೋಧಿಸಿದರೂ ಚಿಕ್ಕಂದಿನಿಂದಲೂ ಅವರಲ್ಲಿ ನೆಲೆಗೊಂಡಿರುವ ಮೌಢ್ಯವು ಹೋಗುವದು ದುರ್ಲಭ. ಆದಕಾರಣ ಸರ್ವಪ್ರಯತ್ನದಿಂದಲೂ ಹೆಣ್ಣುಮಕ್ಕಳಿಗೆ ವಿದ್ಯೆಯನ್ನು ಕಲಿಸುವದರಿಂದ ಲೋಕದಲ್ಲಿ ಎಲ್ಲರೂ ವಿವೇಕಿಗಳೂ ಬುದ್ಧಿವಂತರೂ ಆಗುವರು.

ಕಟ್ಟಿದ ಮನೆ ಮೆಟ್ಟಲಿಲ್ಲ, ಅಟ್ಟಿಕೊಂಡು ಬಂದನಾ ಜವರಾಯ ?

ನಮ್ಮ ದೇಶದಲ್ಲಿ ಉತ್ತಮವರ್ಣದವರು ಬಾಲ್ಯದಲ್ಲಿಯೇ ಸ್ತ್ರೀಯರಿಗೆ ಮದುವೆ ಮಾಡುವರು. ದಂಪತಿಗಳು ಇನ್ನೂ ಹುಡುಗರಾಗಿ ಇರತಕ್ಕ ಕಾಲದಲ್ಲಿಯೇ ಸಂಸಾರಿಗಳಾಗುವದರಿಂದ ಇವರ ಮಕ್ಕಳು ಹುಟ್ಟುತ್ತಲೇ ಸಾಯುವರು, ಅಥವಾ ಸಾಯದೆ ಬದುಕಿ ಇದ್ದಾಗ್ಯೂ ಬಲಹೀನರೂ ರೋಗಿಗಳೂ ಆಗಿ ಇರುವರು. ಒಂದು ವೇಳೆ ಪತಿಯು ಮೃತನಾದರೆ ಆಕೆಯು ಯಾವಜ್ಜೀವವೂ ಸಂನ್ಯಾಸಿಯಾಗಿರಬೇಕೆಂದು ವಿಧಿಸುವರು. ಇದರಿಂದ ಶಿಶುಹತ್ಯಗಳೇ ಮುಂತಾದ ಅನೇಕ ಪಾಪಕೃತ್ಯಗಳಿಗೆ ಆಕರವಾಗುವದು ”

ಹೀಗೆಯೇ ಮಿಕ್ಕಾದವರೆಲ್ಲರೂ ತಮ್ಮತಮ್ಮ ತಾತ್ಪರ್ಯಗಳನ್ನು ಹೇಳಿದ ಕೂಡಲೆ ಸಭೆಯವರೆಲ್ಲರೂ ಸಮ್ಮತಿಸಿ ಈ ಕೆಳಗೆ ಹೇಳಿರುವ ಧರ್ಮಶಾಸ್ತ್ರವಚನಗಳು ಅನುಸರಣೆಗೆ ಯೋಗ್ಯವಾದವುಗಳೆಂದು ಒಪ್ಪಿಕೊಂಡರು.

ಸ್ತ್ರೀಯರೂ ಪುರುಷರೂ ತಮ್ಮ ಮನಸ್ಸು ಬಂದರೆ ಮದುವೆಮಾಡಿಕೊಳ್ಳಬಹುದು ಇಲ್ಲದಿದ್ದರೆ ಅವಶ್ಯಕವಿಲ್ಲವೆಂದು ಮನು ವಿಷ್ಣು ಮೊದಲಾದ ಹತ್ತು ಜನ ಋಷಿಗಳು ಹೇಳುತ್ತಾರೆ. ವಿಷ್ಣುಪುರಾಣ ಶ್ರೀಭಗವದ್ಗೀತೆ ಮುಂತಾದ ಅನೇಕ ಗ್ರಂಥಗಳಲ್ಲಿಯೂ ಹೀಗೆಯೇ ಹೇಳಿ ಇದೆ. ಮದುವೆಯಾದ ಸ್ತ್ರೀ ಪುರುಷರಿಗಿಂತಲೂ ಇಲ್ಲದವರಿಗೆ ಉತ್ತಮವಾದ ಸ್ವರ್ಗಪದವಿಯು ಉಂಟಾಗುವದೆಂದು ಶ್ರೀಭಾಗವತದಲ್ಲಿ ಹೇಳಿ ಇದೆ. ಸ್ತ್ರೀಯು ಬೇಕಾದರೆ ಮದುವೆಮಾಡಿಕೊಳ್ಳದೇಲೆ ಇರಬಹುದು ಎಂಬದಾಗಿ ಶ್ರೀಭಾಗವತದಲ್ಲಿಯೂ ಮಾಧವಾಚಾರ್ಯರಿಂದಲೂ ಹೇಳಲ್ಪಟ್ಟಿದೆ. ಅವಳ ಸಮ್ಮತಿಯಿಲ್ಲದೆ ಅವಳಿಗೆ ಮದುವೆ ಮಾಡಕೂಡದೆಂದು ಕಾತ್ಯಾಯನವಚನವಿದೆ. ದಕ್ಷಮತ್ತು ಅಶ್ವಲಾಯನ ಸೂತ್ರಗಳಲ್ಲಿ ಗಂಡಸರಿಗೆ ೨೪ ವರ್ಷದೊಳಗಾಗಿ ಮದುವೆಯಾಗಕೂಡದೆಂದು ಹೇಳಿದೆ. ಪರಾಶರಸ್ಮೃತಿಯಲ್ಲಿ ಸ್ತ್ರೀಯು ೧೦ ವರ್ಷಕ್ಕೆ ಮುಂಚೆ ಮದುವೆಯಾಗಕೂಡದೆಂದು ಹೇಳಿ ಇದೆ. ಮನು ಮತ್ತು ವಿಷ್ಣುವಚನಗಳಲ್ಲಿ ಸ್ತ್ರೀಯು ಋತುಮತಿಯಾದ ೩ ವರ್ಷಗಳೊಳಗಾಗಿ ಮದುವೆ ಮಾಡಿಕೊಳ್ಳಬಹುದೆಂದು ಹೇಳಿ ಇದೆ. ಮದುವೆಯಾಗಿ ನಿಷೇಕಪ್ರಸ್ತವಾಗುವದಕ್ಕೆ ಮುಂಚೆ ಪತಿಯು ಮೃತನಾದರೆ ಸ್ತ್ರೀಯು ಪುನಃ ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಳ್ಳಬಹುದೆಂದು ಮನು ಪರಾಶರ ನಾರದ ಸ್ಮೃತಿಗಳಲ್ಲಿಯೂ ಋಗ್ವೇದ ಸಂಹಿತೆ ಅರಣ್ಯಕ ಮುಂತಾದವುಗಳಲ್ಲಿಯೂ ಹೇಳಲ್ಪಟ್ಟಿದೆ. ಮೇಲೆ ಹೇಳಿದ ರೀತಿಯಲ್ಲಿ ಪತಿ ನಷ್ಟನಾದ ಮೇಲೆ ಮದುವೆಯಾದ ಸ್ತ್ರೀಯು ಮಕ್ಕಳನ್ನು ಪಡೆದರೆ ಅವರು ಔರಸ ಪುತ್ರರೆನಿಸಿ ಎಂಬದಾಗಿ ಮನು ಪರಾಶರ ವಿಷ್ಣು ಬೋಧಾಯನ ನಾರದ ವಸಿಷ್ಠ ಮುಂತಾದವರು ಹೇಳುತ್ತಾರೆ. ನಿಷೇಕಪ್ರಸ್ತವಾದ ಮೇಲೆ ಪತಿಯನ್ನು ಕಳೆದುಕೊಂಡವರು ಕೂಡ ಮದುವೆ ಮಾಡಿಕೊಳ್ಳಬಹುದು. ಅವರ ಮಕ್ಕಳೂ ಔರಸಪುತ್ರರೆಂದೇ ಭಾವಿಸತಕ್ಕದ್ದು. ನಿಷೇಕವಾಗುವದಕ್ಕೆ ಮುಂಚೆಯೇ ಪತಿಯನ್ನು ಕಳೆದುಕೊಂಡ ಹೆಂಗಸು ಬೇರೆ

ಕಟುಕರ ಮನೇ ಕುರಿಯಹಾಗೆ.

ಪುರುಷನನ್ನು ಮದುವೆಯಾದರೆ ನಿಷೇಕವಾದ ಕೂಡಲೆ ಆವಳು ತನ್ನ ಪತಿಯ ಗೋತ್ರ ಸೂತ್ರ ಪಿಂಡಾದಿಗಳಿಗೆ ಸೇರುವಳು

ಈ ರೀತಿಯಲ್ಲಿ ಧರ್ಮಶಾಸ್ತ್ರ ವಚನಗಳಿರುವದರಿಂದ ಅನೇಕ ಪಂಡಿತರು ಸೇರಿ ಹಿಂದೂ ಸ್ತ್ರೀಯರ ಪುನರ್ವಿವಾಹಸಭೆ ಎಂಬ ಒಂದು ಸಂಘವನ್ನು ಮಾಡಿ ಇದ್ದಾರೆ. ನಿಷೇಕಪ್ರಸ್ತವಾಗುವದಕ್ಕೆ ಮುಂಚೆ ಪತಿಯನ್ನು ಕಳೆದುಕೊಂಡ ಸ್ತ್ರೀಯರಿಗೆ ಪುನರ್ವಿವಾಹವನ್ನು ಮಾಡಿಸಿ ಅಂಥಾದಂಪತಿಗಳನ್ನು ತಮ್ಮ ಸಮೂಹಕ್ಕೆ ಸೇರಿಸಿಕೊಳ್ಳುವದಕ್ಕೆ ಈ ಸಮಾಜದವರು ಬದ್ಧಕಂಕಣರಾಗಿ ಇರುತ್ತಾರೆ.

ಈ ಸಮಾಜದವರು ಕಳೆದ ಡಿಸೆಂಬರು ೨೯—೩೦ ರಲ್ಲಿ ಹಿಂದೋಲಾನಲ್ಲಿ ಸೇರಿಸುವದಕ್ಕೋಸ್ಕರ ಕೆಲವು ಏರ್ಪಾಡುಗಳನ್ನು ಮಾಡಿ ಅವುಗಳನ್ನು ಸರಕಾರದವರ ಅಭಿಪ್ರಾಯಕ್ಕೋಸ್ಕರ ಕಳುಹಿಸಿ ಇರುತ್ತಾರೆ. ಅವುಗಳು ಯಾವವೆಂದರೆ :—(೧) ಮದುವೇಮಾಡಿಕೊಳ್ಳುವದೂ ಬಿಡುವದೂ ಹೆಂಗಸರ ಇಷ್ಟಾನುಸಾರವಾಗಿ ಇರತಕ್ಕದ್ದು. (೨) ಗಂಡಸರು ೧೬ ವರ್ಷಕ್ಕೆ ಮುಂಚೆಯೂ, ಹೆಂಗಸರು ೧೧ ವರ್ಷಕ್ಕೆ ಮುಂಚೆಯೂ ಮದುವೆ ಮಾಡಿಕೊಳ್ಳಕೂಡದು. (೩) ನಿಷೇಕಕ್ಕೆ ಮುಂಚೆಯೇ ವಿಧವೆಯಾದ ಸ್ತ್ರೀಯು ವೇದೋಕ್ತವಾಗಿ ಮದುವೆ ಮಾಡಿಕೊಳ್ಳಬಹುದು ; ನಿಷೇಕವಾದ ಮೇಲೆ ವಿಧವೆಯಾದ ಸ್ತ್ರೀಯ ವಿವಾಹಕ್ಕೆ ವೇದೋಕ್ತವಾದ ಆಚಾರವು ಅವಶ್ಯಕವಿಲ್ಲ. (೪) ಹೀಗೆ ಮದುವೆಯಾದವರ ಮಕ್ಕಳು ಔರಸರೆಂದು ಗಣಿಸತಕ್ಕದ್ದು. (೫) ನಿಷೇಕಕ್ಕೆ ಮುಂಚೆಯೇ ಗಂಡನನ್ನು ಕಳೆದುಕೊಂಡು ಪುನಃ ಮದುವೆಮಾಡಿಕೊಳ್ಳುವ ಸ್ತ್ರೀಗೆ ಮೊದಲನೇ ಗಂಡನ ಆಸ್ತಿಗೆ ಬಾಧ್ಯತೆಯಿಲ್ಲ. (೬) ನಿಷೇಕವಾದ ಮೇಲೆ ಗಂಡನನ್ನು ಕಳೆದುಕೊಂಡು ಪುನಃ ವಿವಾಹ ಮಾಡಿಕೊಳ್ಳುವವರಿಗೆ ಮೊದಲಿನ ಗಂಡನ ಆಸ್ತಿಗೂ ಬಾಧ್ಯತೆಯುಂಟು. (೭) ಗಂಡನ ಆಸ್ತಿಯನ್ನು ಪಡೆದ ವಿಧವೆಯರು ಪುನಃ ಮದುವೆಯಾಗಿ ವಿಧವಾವಸ್ಥೆಯನ್ನು ಕಳೆದುಕೊಳ್ಳುವದಕ್ಕೆ ಮುಂಚೆಯೇ ಸಂಸಾರಧರ್ಮದಲ್ಲಿ ಇದ್ದಂತೆ ಗೊತ್ತಾದರೆ ಆಕೆಯು ಆ ಆಸ್ತಿಯನ್ನು ಕಳೆದುಕೊಳ್ಳುವಳು.

ಮದರಾಸ್ ಸಂಸ್ಥಾನದ ಮ್ಯಾಜಿಸ್ಟ್ರೇಟರುಗಳಿಗೆ ರೇವಿನ್ಯೂ ಅಧಿಕಾರವೂ ಮ್ಯಾಜಿಸ್ಟ್ರೇಟ ಅಧಿಕಾರವೂ ಸಹ ಇರುತ್ತವೆ ಎಂಬದಾಗಿಯೂ, ಇದರಿಂದ ರೈತರಿಗೆ ಬಹಳ ನಷ್ಟವಾಗುವದೆಂಬದಾಗಿಯೂ, ೩೦ ರೂಪಾಯಿನ ಸಬ್ ಮ್ಯಾಜಿಸ್ಟ್ರೇಟಿಗೆ ಲಕ್ಷಾಧಿಕಾರಿಗಳಾದ ರೈತರೂ ಕೂಡ ನಿಷ್ಕಾರಣವಾಗಿ ಕಾರಾಗೃಹಪ್ರಾಪ್ತಿ ಯಾದೀತು ಎಂದು ಭಯಪಡುತ್ತಾರೆಂಬದಾಗಿಯೂ, ಈ ಕಾರಣದಿಂದ ಮ್ಯಾಜಿಸ್ಟ್ರೇಟ್, ರವಿನ್ಯೂ, ಸಿವಿಲ್ ಅಧಿಕಾರಿಗಳು ಪ್ರತ್ಯೇಕಪ್ರತ್ಯೇಕವಾಗಿರಬೇಕೆಂಬದಾಗಿಯೂ, ಅನೇಕ ದೊಡ್ಡ ಮನುಷ್ಯರನ್ನು ಒಂದು

ಕಂಡು ದಣಿದೆಯೊ, ಉಂಡು ದಣಿದೆಯೊ ?

ಸಭೆಯನ್ನು ಸೇರಿಸಿ ಅವರ ಮುಖಾಂತರ ಮ್ಯಾಜಿಸ್ಟ್ರೇಟ್ ಕೆಲಸ ನಡಿಸತಕ್ಕದ್ದು ಉತ್ತಮವಾದದ್ದೆಂಬದಾಗಿಯೂ ಒಂದು ಮದರಾಸು ಪತ್ರಿಕೆಯು ಹೇಳುತ್ತದೆ.

ಅಯೋಧ್ಯಾದೇಶದ ರಾಮಪುರ್ ತಾಲ್ಲೂಕುದಾರರಾದ ರಾಜಾರಾಂಪಾಲಸಿಂಗರವರು ಇಲಾಯಿತಿಗೆ ಹೋಗಿದ್ದು ಅಲ್ಲಿಂದ ಮದರಾಸಿಗೆ ಬಂದರು. ಇಂಡಿಯಾ ದೇಶದ ವಿಷಯಗಳನ್ನೆಲ್ಲಾ ತಿಳಿಸುವದಕ್ಕೋಸ್ಕರ ಇವರು ಇಲಾಯಿತಿಯಲ್ಲಿಯೇ ಹಿಂದುಸ್ಥಾನ್ ಎಂಬ ಒಂದು ಪತ್ರಿಕೆಯನ್ನು ನಡಿಸುತ್ತಾ ಇದ್ದಾರೆ. ಅದಕ್ಕೆ ಇವರು ಮ್ಯಾನೇಜರು. ಜನವರಿ ೩ನೇ ತಾರೀಖಿನಲ್ಲಿ ಇವರು ಲಾರ್ಡ್ ರೈಪನ್ ಮತ್ತು ಲಾರ್ಡ್ ಡಫರಿನ್ ಸಾಹೇಬರ ಇಂಡಿಯಾದೇಶದ ರಾಜ್ಯಭಾರವನ್ನು ಕುರಿತು ಉಪನ್ಯಾಸ ಮಾಡಿದರಂತೆ. ಅದು ಬಹಳ ಶ್ಲಾಘನೀಯವಾಗಿ ಇತ್ತೆಂದು ಎಲ್ಲರೂ ಕೊಂಡಾಡುತ್ತಾರೆ.

ಈ ಏಪ್ರಿಲ್ ತಿಂಗಳಲ್ಲಿ ಬೊಂಬಾಯಿ ಗವರ್ನರ್ ಜೇಮ್ಸ್ ಫರ್ಗೂಸನ್ ಸಾಹೇಬರು ಸ್ವದೇಶಕ್ಕೆ ಹೋಗುವರು. ಇವರ ಜೊತೆಯಲ್ಲಿಯೇ ಕೊಲ್ಲಾಪುರದ ರಾಜನಿಗೆ ಪ್ರತಿನಿಧಿಯಾಗಿ ಆಳತಕ್ಕ ಕಾರಬಾರಿಯವರು ಹೊರಡುವರು.

ಲೋಕದಲ್ಲಿ ಸ್ವಲ್ಪ ತಪ್ಪು ಮಾಡಿದವರಿಗೆ ದೊಡ್ಡ ಶಿಕ್ಷೆಯೂ, ದೊಡ್ಡ ತಪ್ಪು ಮಾಡಿದ್ದಕ್ಕೆ ವಿಚಾರಣೆಯಿಂದ ಪರ್ಯಾವಸಾನವೂ ಸಾಧಾರಣವಾದದ್ದು. ತ್ರಿಸ್ನಪಲ್ಲಿ ಕಲೆಕ್ಟರ್ ಅಟ್ಕಿನ್ಸ್ ಸಾಹೇಬರು ಹಣ ಸಾಲಾ ತೆಗದುಕೊಂಡು ಇದ್ದದ್ದಕ್ಕಾಗಿ ಇವರಿಗೆ ಡಿಸಮಿಸ್ ಆಯಿತು. ಸೇಲಂನಲ್ಲಿ ಡಾಕ್ಟರ್ ಮೆಕ್ಕಿನ್ ಸಾಹೇಬರವರು ಇದಕ್ಕಿಂತಲೂ ಅತಿಶಯವಾದ ಅಧರ್ಮಗಳನ್ನು ಮಾಡಿ ಇದ್ದಾಗ್ಯೂ ಅವರ ಮೊಕದ್ದಮೆಯು ಪರಿವಿಚಾರಣೆಯಲ್ಲಿಯೂ ಅವರು ಕೊಟ್ಟ ಸಮಾಧಾನದಲ್ಲಿಯೂ ಪರ್ಯವಸಾನವಾಯಿತು.

ಉದಯಪುರದ ಮಹಾರಾಜರವರು ಸ್ವರ್ಗಸ್ಥರಾದರು. ಇವರು ರಾಜಪುತ್ರಸ್ಥಾನದಲ್ಲಿ ಎಲ್ಲಾ ದೊರೆಗಳಿಗಿಂತಲೂ ಹೆಚ್ಚಾದ ಕೀರ್ತಿಯನ್ನು ಪಡೆದು ಇದ್ದರು. ಇಂಡಿಯಾ ಚಕ್ರವರ್ತಿನಿಯವರು ಈಗ ಸುಮಾರು ನಾಲ್ಕು ವರ್ಷಗಳಿಗೆ ಮುಂಚೆ ಇವರಿಗೆ ಜಿ. ಸಿ. ಎಸ್. ಐ. ಎಂಬ ಬಿರುದನ್ನು ಕೊಟ್ಟರು. ಈ ಬಿರುದನ್ನು ಕೊಡತಕ್ಕ ಉತ್ಸವವನ್ನು ನಡಿಸುವದಕ್ಕೆ ಲಾರ್ಡ್ ರೈಪನ್ ಸಾಹೇಬರೇ ಹೋಗಿದ್ದರು. ಇವರು ಸಾಯುವಾಗ ಇವರಿಗೆ ೨೫ ವರುಷ ವಯಸ್ಸು. ಇವರು ಹೀಗೆ ಅಕಾಲಮರಣವನ್ನು ಹೊಂದಿದ್ದಕ್ಕೋಸ್ಕರ ವ್ಯಸನಪಡಬೇಕಾಗಿ ಇದೆ.

ಕಂಡರೆ ಸುಂಕ ಕಾಣದಿದ್ದರೆ ಬಿಂಕ.

ಕರೆಸ್ಪಾಂಡೆನ್ಸ್.

ಅಯ್ಯಾ, ಎಡಿಟರವರೆ,

ಈಗ ಒಂದು ತಿಂಗಳಿಗೆ ಮುಂಚೆ ಈ ಪ್ರಾಂತ್ಯದಲ್ಲಿ ಒಂದು ವಿಚಿತ್ರವಾದ ಸಂಗತಿ ನಡೆಯಿತು. ಮೈಸೂರು ಸೀಮೆಯು ಈಚೆಯಿಂದ ತಮಗೆ ಸಮಾಚಾರ, ಮುಂತಾದವು ಬರೆದು ಕಳುಹಿಸುವದು ಅಪೂರ್ವವಾಗಿದೆ. ಇದಕ್ಕೆ ಕಾರಣವೇನೆಂದೂ ಇಷ್ಟರ ಮಟ್ಟಿಗೆ ಜನಗಳು ನಾಗರೀಕರಾಗಿಲ್ಲವೇ ಎಂದೂ ಬಹಳ ಮನಸ್ಸಿಗೆ ಯೋಚನೆಯೂ ಸಂದೇಹವೂ ಆಗಿತ್ತು. ಆದರೆ ಈಚೆಗೆ ನಡೆದ ಇಲ್ಲಿನ ಸಂಗತಿಗಳಲ್ಲಿ ಈ ಪ್ರಾಂತ್ಯದಿಂದ ತಮ್ಮಂಥ ಉತ್ಸಾಹಕರಿಗೆ ಯಾವ ಸಹಾಯವೂ ಇಲ್ಲದೆ ಇರುವದು ಒಂದಾಶ್ಚರ್ಯವಲ್ಲ!

ಸಾಧಾರಣವಾಗಿ ಎಲ್ಲಾ ಭಾಗದ ಮುಸಲ್ಮಾನ ಜನಗಳು, ನಮ್ಮ ಶಿವಭಕ್ತರು, ಇವರೇ ಮುಂತಾದವರು ಬಹಳವಿದ್ಯಾವಂತರಷ್ಟೆ! ಈ ಎರಡನೇ ವಂಗಡದವರಲ್ಲಿ ಒಬ್ಬ ಶಿವಭಕ್ತರು ಚಿತ್ರದುರ್ಗಕ್ಕೆ ದಯಮಾಡಿದ್ದರು. ಇವರಿಗೆ ವಯಸ್ಸು ಬಹಳ ಚಿಕ್ಕದು. ಕಣ್ಣಿಗೆ ಸುಮಾರು ೧೦–೧೨ ವರ್ಷದೊಳಗಿರಬಹುದೆಂದು ತೋರಿತು, ಮತ್ತು ಇವರು ನೋಡುವದಕ್ಕೆ ಚನ್ನಾಗಿಯೇ ಇರುವರು. ಇವರು ಹುಬ್ಬಳ್ಳೀ ತಾಲ್ಲೂಕಿನ ಒಂದು ಮಠದ ಜಗಳ ಮಕ್ಕಳು. ಇವರು ತಮ್ಮ ತಾಯಿತಂದೆಗಳು ಕ್ಷಾಮಕಾಲದಲ್ಲಿ ಕಾಲವಾಗಲು, ದಿಕ್ಕಿಲ್ಲದೆ ಒಬ್ಬ ಪಟೇಲನ ಮನೆಯಲ್ಲಿದ್ದರು. ಇವರು ಒಂದುದಿನ ಕಾಡಿಗೆ ಹೋಗಿ ೧೦–೧೫ ದಿವಸದ ವರಿಗೂ ಹಿಂದಕ್ಕೆ ಬರದೆ ಕೊನೆಗೆ ಆ ತಾಲ್ಲೂಕಿನ ಒಂದು ಊರಿನಲ್ಲಿ ಜಾತ್ರೆಗೆ ಬಂದಿದ್ದರು. ಆ ಜಾತ್ರೆಗೆ ಬಂದಿದ್ದ ಜನಗಳಿಗೆ ಇವರು ಉಪಚಾರಾದಿಗಳನ್ನು ಮಾಡಿ ತೃಪ್ತಿಗೊಳಿಸಿದರು. ಇವರು ಮಾತನಾಡುವದೂ ಸ್ವಲ್ಪವೂ ಗಾಂಭೀರ್ಯವಿಲ್ಲದೆ ಹುಡುಗಾಟವಾಡುವದೂ, ನಮ್ಮಂಥಾ ಮೂಢರಿಗೆ ಹುಚ್ಚುತನ (ಐಲೆಂದು) ವೆಂದು ತೋರುತ್ತೆ. ಹೀಗಿರಲಿಕ್ಕಾಗಿ ಒಬ್ಬ ಸ್ಕೂಲಮಾಸ್ತರು (ದಾವಣಗೆರೆ ಪ್ರಾಂತ್ಯದ ಒಬ್ಬ ಬ್ರಾಹ್ಮಣನೆಂದು ಹೇಳಿಕೊಳ್ಳುತ್ತಿದ್ದರು) ಇಲ್ಲಿನ ಜನಗಳನ್ನು ಮೋಸಿಸಬೇಕೆಂದು ಒಂದು ಆಟವನ್ನು ಕಟ್ಟಿದನು. ಈ ಹುಡುಗನ ವಿಷಯದಲ್ಲಿ ಆ ಬ್ರಾಹ್ಮಣನು ಹೇಳಿಕೊಳ್ಳುತ್ತಾ ಇರುವದೇನಂದರೆ :—"ಇವರು ಜಗಳು; ಇವರು ಕಾಡಿನಲ್ಲಿ ತಪಸ್ಸುಮಾಡಲು, ಬಸವೇಶ್ವರನು ಪ್ರತ್ಯಕ್ಷವಾಗಿ ಬೇಡಿದವರಿಗೆ ಬೇಕಾದ ವರಗಳನ್ನು ಕೊಡುವಹಾಗೆ ಇವರಿಗೆ ಅನುಗ್ರಹಿಸಿದನು. ಇವರು ಸಿದ್ಧರು, ಮಹಾಪುರುಷರು. ಈ ಸಿದ್ಧಾಪುರದ ಜಾತ್ರೆಯಲ್ಲಿ ಪರಶಿಗಳಿಗೆಲ್ಲಾ ಸಮಾರಾಧನೆ ಮಾಡಿಸಿದರು. ಪದಾರ್ಥಗಳು ಸ್ವಲ್ಪವೇ ಇದ್ದರೂ ತಮ್ಮ ತಪಸ್ಸಿನಿಂದ ಎಲ್ಲರಿಗೂ ಬೇಕಾದಷ್ಟು ಬಡಿಸುವಂತೆ ಅಪ್ಪಣೆ ಮಾಡಿದರು. ಅವರು ಆಜ್ಞೆ ಮಾಡಿದ ಕೂಡಲೆ ಎಲ್ಲಾ ಪದಾರ್ಥಗಳು ವಿಪರೀತವಾದವು. ಇವರು ಲೋಕೋಪಕಾರಕ್ಕೋಸ್ಕರ ಮೈಸೂರು ಸೀಮೆಯಲ್ಲಿ ಸುತ್ತುವರು. ಬೇಕಾದವರು ಬೇಕಾದದ್ದನ್ನು ಬೇಡಬಹುದು"

ಕಂಡವರ ಸೇರದವನಿಗೆ ಉಂಡದ ನೆಲೆ ?

ಈ ಸಮಾಚಾರವನ್ನು ಕೇಳಿದ ಅತ್ಯಂತ ನಾಗರಿಕರಾದ ಊರಿನ ಜನರು ನಿಜವೆಂದು ನಂಬಿ ಪ್ರಳಯೋದು ಹ್ಯಾಗೋ ಈ ಸ್ಪೃಶ್ಯಾಂತವನ್ನು ತಿಳಿಸುವವರಾದರು. ಈ ವದಂತಿಯು ನಾಡು ಸಿದ್ಧಾಂತ ಪೇಟೆಗಳಲ್ಲೆಲ್ಲಿಯೂ ಹಬ್ಬಿತು. ಎಲ್ಲರೂ ತೆಂಗಿನಕಾಯಿ ಹಣ್ಣುಹಂಪಲಗಳನ್ನು ಸಮರ್ಪಿಸಿ ಈ ಮಹಾಪುರುಷರಿಂದ ಅಭಯವನ್ನು ತೆಗೆದುಕೊಂಡು ಹೋಗಲು ತೊಡಗಿದರು. ಕೊನೆಗೆ ಇವರು ಚಿತ್ರದುರ್ಗಕ್ಕೆ ದಯಮಾಡುವ ಕಾಲದಲ್ಲಿ, ಊರೊಳಕ್ಕೆ ಮೆರವಣಿಗೆಯಿಂದ ಪ್ರವೇಶಮಾಡಬೇಕೆಂದು ಹೇಳಲು, ಬ್ರಾಹ್ಮಣರಲ್ಲಿ ಜಗದ್ಗುರುಗಳೇ ಮೊದಲಾದ ಸಂನ್ಯಾಸಿಗಳಿಗೆ ನಡೆಯುತ್ತ ಛತ್ರಚಾಮರಾದಿ ಮರ್ಯಾದೆಗಳು ಈ ಮಹಾಪುರುಷರಿಗೂ ಆಗಬೇಕೆಂದು ಇಲ್ಲಿನ ನಮ್ಮ ಶಿವಭಕ್ತರು ನಿಶ್ಚಯಮಾಡಿಕೊಂಡರು. ಈ ಸಮಯಕ್ಕೆ ಸರಿಯಾಗಿ ತಾಲ್ಲೂಕಿನ ಅಮಲ್ದಾರರೂ ಸಬ್ ಡಿವಿಜನ್ ಆಫೀಸರೂ ಊರಲ್ಲಿ ಇರಲಿಲ್ಲವಾಗಿ, ಅಧಿಕಾರಿಗಳಲ್ಲಿ ದೂರುಹೇಳಿಕೊಂಡು ಮಹಾಪುರುಷರ ನಗರಪ್ರವೇಶವನ್ನು ಅಡ್ಡಿಮಾಡುವದಕ್ಕೆ ಯಾರಿಗೂ ಆಗಲಿಲ್ಲ. ದುರ್ಗದ ರಂಗಪ್ಪನಾಯಕನ ಬಾಗಿಲಿನ ಹತ್ತಿರ ಇರುವ ನಮ್ಮ ಮಠದಲ್ಲಿ ಇವರು ಬಿಜಮಾಡಿಸಿದರು. ಇವರು ಇಲ್ಲಿದ್ದ ೫–೬ ದಿವಸದವರೆಗೂ ಬಹಳ ಉತ್ಸವಕಾಲವಾಗಿತ್ತು. ಸುತ್ತಲೂ ಇರುವ ಗ್ರಾಮಗಳಿಂದಲೂ ದೂರದಲ್ಲಿರುವ ಚಳ್ಳಕೆರೆ ಹೊಳಲ್ಕೆರೆ ಮುಂತಾದ ಪ್ರಾಂತ್ಯಗಳಿಂದಲೂ ಜನಗಳು ಹಿಂಡು ಹಿಂಡಾಗಿ ಬಂದರು. ಅವರು ಇಳಿದಿದ್ದ ಮಠ ಸ್ವಲ್ಪ ಕಿಷ್ಕಿಂಧವಾಗಿದ್ದದ್ದರಿಂದ, ಪರಿಷೆಗೆ ಕೂತುಕೊಳ್ಳುವದಕ್ಕೆ ಜಾಗವಿಲ್ಲದೆ ಮಾರ್ಗಲಕ್ಷ್ಯತಕ್ಕ ಅಂಗಡಿ ಮನೆ ಬಾಗಿಲುಗಳೆಲ್ಲಾ ತುಂಬಿಹೋದವು. ಈ ಸಮೂಹದಲ್ಲಿಯೂ ಈ ಮಹಾಪುರುಷರ ಸುತ್ತಮುತ್ತಲೂ ಜನಗಳು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದದ್ದು ಏನೆಂದರೆ:—ನಮ್ಮ ಸ್ವಾಮಿಯು ಸಾಕ್ಷಾತ್ ಬಸವೇಶ್ವರನ ಅವತಾರ ; ಇವರ ಪಾದದಲ್ಲಿ ವಿಷ್ಣುಚಕ್ರ ಇರವದು. ಇದರಿಂದಲೇ ವೈಷ್ಣವಾದಿಮತವು ಖಂಡಿಸಲ್ಪಟ್ಟು ಶಿವಾಗಮ ನಿಷ್ಠರಾದ ನಮ್ಮ ಸ್ವಾಮಿಯು ಪಾದಾಕ್ರಾಂತವಾಯಿತೆಂಬುವದು ಗೊತ್ತಾಯಿತು. ಈಗ ಇವರು ಸಂಚಾರಕ್ಕೆ ಹೊರಟಿರುವದು ಲೋಕಹಿತಾರ್ಥವಾಗಿಯೆ ಹೊರತು ಮತ್ತೇನೂ ಇಲ್ಲ. ಸದ್ಯದಲ್ಲಿ ಮೈಸೂರು ಸೀಮೆಯ ದೊರೆಗಳಿಗೆ ತಮ್ಮ ಭೇಟಿಯನ್ನು ಕೊಡುವದಕ್ಕೆ ಹೋಗುವರು. ಇವರ ದರ್ಶನವನ್ನು ತೆಗೆದುಕೊಳ್ಳುವದಕ್ಕೆ ಬಂದವರು ಇನ್ನು ಮುಂದಕ್ಕೆ ಮಹಾಪುರುಷರು ಬಿಜಮಾಡಿಸುವದೆಲ್ಲಿಗೆಂದು ಕೇಳಲಾಗಿ, ಮಹಾಪುರುಷರು -ನಾವು ಮೈಸೂರಿಗೆ ಹೋಗಿ ನಮ್ಮ ದೊರೆಗಳಕ್ಷೇಮದ ಸಲುವಾಗಿ ಪಡುವ ಯೋಚನೆಯನ್ನು ಹೋಗಲಾಡಿಸಿ ಬರುವೆವು ! ಎಂದು ಅಪ್ಪಣೆಕೊಟ್ಟರು. ಇನ್ನೊಂದುವೇಳೆ ಬಂದಾಗ್ಯೂ [illegible] ಒಂದಿಗೆ ಹತ್ತಿರದಲ್ಲಿದ್ದ ಸೇವಕರು ಪ್ರಶ್ನಿಸಲು, [illegible] ಕೇಳಿದ್ದಕ್ಕೆ ಮಹಾಪುರುಷರು—ಎಲಾ ನೀನೂ ಹೇಡಿ ; ನೀರು ತೆಗೆದು[illegible], ಆದಿವಿಗೆ ಚಿಂತೆ, ನಮ್ಮ ಮಹಿಮೆಯಿಂದ ಉಳಿಯುವದು ಎಂದರು.

ಕರೀಕಂಬಳೀಮೇಲೆ ಕಣಿಕಾಸಾದಿದ್ದು.

ಇದೇ ಮುಂತಾದ ಅತಿಶಯಗಳು ಜನಗಳನ್ನು ಭ್ರಾಂತಿಪಡಿಸಿತು. ಬೆಂಗಳೂರ ಎಲ್ಲಾ ಕಡೆಯಿಂದಲೂ ಬಂದು ತಮಗೆ ಬೇಕಾದ ವರಗಳನ್ನು ಕೇಳುತ್ತಾ ಬಂದರು. ಬ್ರಾಹ್ಮಣರ ಹೆಂಗಸರೂ ರಾತ್ರಿಕಾಲದಲ್ಲಿ ಏಕಾಂತವಾಗಿ ಬಂದು ತಮ ತಮಗಳಿಗೆ ಮಕ್ಕಳಾಗುವವೆಯೋ ಇಲ್ಲವೋ ಎಂದು ಕೇಳಿ ಮಹಾಪ್ರಸಾದವನ್ನು ತೆಗೆದುಕೊಂಡು ಹೋಗುವವರಾದರು. ಕಣ್ಣು ಇಲ್ಲದವರು, ಕಿವಿಕೇಳಿಸದಿರುವವರು, ಪ್ರಬಲವಾದ ರೋಗಗಳಿಂದ ನರಳುವವರು, ಮುಂತಾದವರು ತಮ ತಮಗೆ ಬೇಕಾದದ್ದನ್ನು ಕೇಳಿದರು. ಇಂಥಾವರಿಗೆಲ್ಲಾ ತೆಂಗಿನ ಕಾಯನ್ನು ತಾವು ಕೈಯಿಂದ ಮುಟ್ಟಿ—ಈ ತೆಂಗಿನಕಾಯನ್ನು ಪೂಜೆಮಾಡುತ್ತಿರು, ನಿನಗೆ ಎಲ್ಲಾ ಒಳ್ಳೇದಾಗುತ್ತೆ, ಎಂದು ಹೇಳುತ್ತಿದ್ದರು. ಇವರು ಹೊರಕ್ಕೆ ಹೋದಾಗ ಒಬ್ಬ ಆಳಿನ ತೋಳಿನಮೇಲೆ ದಯಮಾಡಿಸುವರು. ಆಗ ಹಿಂದೆ ಮುಂದೆ ದೊಡ್ಡ ಪರಿಷೆಯ ಹಾಗೆ ಜನಗಳು ಮುತ್ತಿಕೊಂಡಿರುವರು. ಇಷ್ಟು ದಿವಸಕ್ಕೆ ಅವರು ಅಪ್ಪಣೆಕೊಡಿಸಿದ ಪ್ರಕಾರ ಮೈಸೂರಿಗೆ ದಯಮಾಡಿ ಮೈಸೂರು ರಾಜ್ಯಭಾರ ನಡಿಸುವವರಿಗೆ ಸಾಲದ ಪರಿಹಾರವಾಗಿರುವ ಯೋಚನೆಯನ್ನು ಚಿಂತಿಸಿರಬಹುದೆಂದು ನಂಬುತ್ತೇನೆ ! ಮೌಢ್ಯವು ಈಗಲೇ ಇಷ್ಟರಮಟ್ಟಿಗೆ ಜನರನ್ನು ಆವರಿಸಿ ಎಂಥಾ ಅಮಾನುಷ ಕೃತ್ಯವನ್ನೂ ನಂಬುವಂತೆ ಮಾಡಿದರೆ, ಪೂರ್ವಕಾಲದಲ್ಲಿ ಜನರು ಇನ್ನು ಯಾವದನ್ನು ತಾನೇ ನಂಬುವದು ಅಸಾಧ್ಯ!

ಚಂಪೇನಾಯಕನಕೋಟೆ, ತಮ್ಮ ವಿಧೇಯ,

೧೯-೨-೫. ತತ್ವವಿಚಾರಿ.

೧೧. ಒಗಟಿಗಳು.

(೧) ಮಾಂಧಾತ್ರಿವ್ಯಪದಂಗನಾಸುತವಿಭೋ ಭೃತ್ಯಸ್ಯ ಪಕ್ಷಾಹೃತಃ । ಪುತ್ರಸ್ತ್ರೀ ಸಪತ್ನ ಭ್ರಾತಸ್ಯ ಭಗಿನೀನಾಥ ಪುತ್ರಜ್ಯೇಷ್ಠಸೇತುಃ ॥ ಸೂನೋರ್ವಕ್ಷಾತುಲ ವೈರಿತಾತ ತನಯ ನ್ಯಾಮಿವಾಹ್ವಯಸ್ಯಾಂಗನಾ । ಮಾತಾ ತದ್ಧರರಾಜಸೂನುಸುಹೃದಃ ಪುತ್ರೀ ಕಟಾಕ್ಷೋಸ್ತು ವಃ ॥

(೨) ಕಃ ಖೇಚರಃ ತ್ರಿಕಾರವಷ್ಟ್ಯಾ । ಕಿಂ ಜನ್ಯಾಂ ಕಿಂ ವಿಭೂಷಣಂ ॥ ಕೋ ವಂದ್ಯಃ ಕೀದೃಶೀ ಲಂಕಾ । ವೀರಮರ್ಕಟಕಂಪಿತಾ ॥

(೩) ಕಂ॥ ಪಸೊಂದು ವರ್ಷದಂತರ । ಮುನ್ನೆತ್ತಿಯನೇರಿ ಬಹನ ಅಣ್ಣನ ಸಬಿನೊಳು।
ಉನ್ನತವಿ ಜನಿಸಿದಾತನ ಪುಣ್ಯಾಂಗನೆ ಇರಲಿ ನಮ್ಮ ಜಿಹ್ವಾಗ್ರದೊಳು ॥

ಕಂತೆಗೆ ತಕ್ಕ ಬೊಂತೆ.

ಕಂಬವಿಲ್ಲದ ಕಾಲುವದು ಗೋಪುರವಲ್ಲ! ಒಳಗೆ ರತ್ನಗಳುಂಟು ಅಂಬುಧಿಯು ಅಲ್ಲ! ಬಿಳಿ ಹೊದಿಕೆ ಹೊರ ಹೊದಿಕೆ ಮನುಜ ತಾನಲ್ಲ! ಇದ ಹೇಳಬಲ್ಲ ಜಾಣಗೆ ಬಹುದಲ್ಲ ||

೪ನೇ ಸಂಚಿಕೆಯಲ್ಲಿನ ಒಗಟುಗಳಿಗೆ ಉತ್ತರ.

(೧) ಅಂಗಿ. (೨) ದಂಡೆ.

(೩) ಲಕ್ಷ್ಮೀಕಟಾಕ್ಷಯುಕ್ತರಾದ ಶೇಷಗಿರಿರಾಯರಿಗೆ.

ಸಿ|| ವ್ಯಾಸರಾಯನು ಮಾಡುವ ನಮಸ್ಕಾರ, ತಾರಣಸಂವತ್ಸರದ ಮಾಘ ಬ|| ೧೩ ಮಂಗಳವಾರದವರೆಗೆ, ಮೈಸೂರಿನಲ್ಲಿ ಚಿರಂಜೀವಿ ಸೌಭಾಗ್ಯವತಿಗಳುಸಹ ನಾನು ಸುಖದಲ್ಲಿದ್ದೇನೆ.—ಅಲ್ಲಿಇರುವಂಥಾ ಚಿರಂಜೀವಿ ಸೌಭಾಗ್ಯವತಿಗಳು ಮುಂತಾಗಿ ಸರ್ವರ ಸಂತೋಷಕ್ಕೆ ಬರೆದು ಕಳುಹಿಸಬೇಕು. ಸಾಂಪ್ರತ :—ಪಾರ್ಥಿವಸಂವತ್ಸರದ ವೈಶಾಖ ಶುದ್ಧ ೫ ಶುಕ್ರವಾರ ಪುಷ್ಯನಕ್ಷತ್ರ ಕಟಕಲಗ್ನದಲ್ಲಿ ಗೋಪಾಲರಾಯನಿಗೆ ಉಪನಯನ ಮಾಡಬೇಕೆಂದು ನಿಷ್ಕರ್ಷೆ ಮಾಡಿದ್ದೇನೆ ದಯವಿಟ್ಟು ನಿಮ್ಮ ಗಂಡು ಹೆಣ್ಣು ಮಕ್ಕಳು, ಕುಟುಂಬ, ಭಾವನವರನ್ನು ಸಹ ಕರೆದುಕೊಂಡು ದಯಮಾಡಿಸಬೇಕು. ನೀವು ಬರುವಾಗ ಶಿವರಾಯನ ತೋಟದಿಂದ ತೆಂಗಿನಕಾಯಿ, ಪಲ್ಲ, ಮಲ್ಲಿಗೆ ಸಂಪಿಗೆ ಹುವ್ವುಗಳನ್ನೂ ಒಳ್ಳೆ ಸಾದೆಯನ್ನೂ ಸಹ ಎತ್ತಿನ ಗಾಡೀಮೇಲೆ ಹಾಕಿಕೊಂಡು ಬರುವಂತೆ ಮಾಡಿಸಬೇಕು.

ಹನುಮಂತರಾಯನು ತನ್ನ ಮಗ ನರಸಿಂಗರಾಯನಿಗೆ ವಿವಾಹಮಾಡಬೇಕೆಂದು ಯೋಚಿಸಿ ಇರುತ್ತಾನೆ. ರಕ್ತಾಕ್ಷಿ ಸಂವತ್ಸರದ ಭಾದ್ರಪದ ಶು|| ೪ ಚಿತ್ತಾನಕ್ಷತ್ರ ಸಿಂಹಲಗ್ನದಲ್ಲಿ ಆ ಹುಡುಗನು ಜನಿಸಿದನು ಆಕಾಲದಲ್ಲಿ ಸಿಂಹದಲ್ಲಿ ಸೂರ್ಯ-ಶುಕ್ರರೂ ತುಲಾದಲ್ಲಿ ಚಂದ್ರ-ಶನಿಗಳೂ ಧನುಸ್ಸಿನಲ್ಲಿ ಗುರು-ಕುಜರೂ ಮೀನದಲ್ಲಿ ಕೇತುವೂ ಕನ್ಯದಲ್ಲಿ ಬುಧ-ರಾಹುಗಳೂ ಇದ್ದರು. ನಂಜನಗೂಡಿನಲ್ಲಿ ಶ್ರೀಪತಿರಾಯನ ಮನೆಯಲ್ಲಿ ರುಕ್ಮಿಣಿಯೆಂಬ ಕನ್ನೆಇರುವದಾಗಿ ತಿಳಿಯಬರುತ್ತದೆ. ಆ ಹುಡುಗಿಯ ಜಾತಕವನ್ನು ತೆಗೆದು ಕಳುಹಿಸುವದು.

ಇತಿ ನಮಸ್ಕಾರ.

ಹಿತಬೋಧಿನಿ.

ಸಂಪುಟ ೨.| ಮಾರ್ಚಿ ೧೮೮೪. [ಸಂಚಿಕೆ ೬.

೧. ವಿಜಯನಗರದ ಬಾಲಿಕಾಪಾಠಶಾಲೆಯ ಸಭೆ.

ವಿಜಯನಗರದ ಮಹಾರಾಜರವರ ಸ್ತ್ರೀವಿದ್ಯಾಪಾಠಶಾಲೆಯಲ್ಲಿ ಫೆಬ್ರುವರಿ ತಿಂಗಳು ೮ನೇ ತಾರೀಖಿನಲ್ಲಿ ಬಾಲಕಿಯರಿಗೆ ಇನಾಮುಗಳನ್ನು ಕೊಡುವದಕ್ಕೋಸ್ಕರ ಒಂದು ಸಭೆಯು ಸೇರಿಯಿತ್ತು. ಆ ಸಭೆಗೆ ಮದರಾಸು ಗವರ್ನರ್ ಗ್ರ್ಯಾಂಡ್ ಡಫ್ ಸಾಹೇಬರವರೂ, ವಿಜಯನಗರದ ಮಹಾರಾಜರವರೂ, ಇನ್ನೂ ಮದರಾಸಿನ ಅಧಿಕಾರಸ್ಥರೂ, ವಿದ್ವಾಂಸರೂ ಸೇರಿ ಇದ್ದರು. ಮ॥ ರಾ॥ ರಾ॥ ವಿಜಯರಂಗಂ ಮೊದಲ್ಯಾರ್‌ರವರು ಪಾಠಶಾಲೆಯ ಅಭಿವೃದ್ಧಿಯ ರಿಪೋರ್ಟನ್ನು ಓದಿದ ತರುವಾಯ ಮ॥ ರಾ॥ ರಾ॥ ಚಂಚಲ ರಾಯರವರು ಸ್ತ್ರೀವಿದ್ಯಾಭ್ಯಾಸ ವಿಷಯದಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಅದರ ತಾತ್ಪರ್ಯವೇನಂದರೆ:—

ಎಷ್ಟು ಪ್ರತಿಬಂಧಕಗಳಿದ್ದರೂ ಸ್ತ್ರೀವಿದ್ಯಾಭ್ಯಾಸವು ನಿಧಾನವಾಗಿ ವೃದ್ಧಿಯಾಗುತ್ತಲೇ ಇದೆ. ಜನರೂಕೂಡ ಇದು ಉತ್ತಮವಾದದ್ದೆಂದು ಕ್ರಮೇಣ ತಿಳಿದುಕೊಳ್ಳುತ್ತಾ ಇದ್ದಾರೆ. ಕೆಲವು ದಿವಸಗಳ ಕೆಳಗೆ ಬಾಲಕಿಯರನ್ನು ಪಾಠಶಾಲೆಗೆ ಬರಮಾಡಿಕೊಳ್ಳುವದಕ್ಕೋಸ್ಕರ ನಾನಾವಿಧವಾದ ಪ್ರಯತ್ನಗಳನ್ನು ಮಾಡಬೇಕಾಗಿತ್ತು. ಈಗ ಅಂಥಾ ಪ್ರಯತ್ನಗಳು ಅವಶ್ಯಕವಿಲ್ಲ. ಸ್ತ್ರೀಯರು ವಿದ್ಯೆಯನ್ನು ಕಲಿಯುವದರಿಂದ ಆಗತಕ್ಕ ಪ್ರಯೋಜನವನ್ನು ತಿಳಿದುಕೊಂಡು, ಅನೇಕ ದೊಡ್ಡಮನುಷ್ಯರು ತಮ್ಮ ಸ್ತ್ರೀಯರಿಗೆ ಪಾಠ ಹೇಳುವದಕ್ಕೋಸ್ಕರ ಯೂರೋಪಿಯನ್ ಹೆಂಗಸರನ್ನು ಸಂಬಳಕ್ಕೊಟ್ಟು ಇಟ್ಟು ಇದ್ದಾರೆ. ೧೮೮೧ನೇ ಇಸವಿಯಲ್ಲಿನ ಖಾನೆಷುಮಾರೀ ಲೆಖ್ಖದ ಪ್ರಕಾರ ಮದರಾಸು ಸಂಸ್ಥಾನದಲ್ಲಿ ೪೦೩ಕ್ಕೆ ಒಬ್ಬಳು ಓದತಕ್ಕವಳಾಗಿಯೂ, ಬಂಗಾಳದಲ್ಲಿ ೯೭೬ಕ್ಕೆ ಒಬ್ಬಳಾಗಿಯೂ, ಬೊಂಬಾಯಿಯಲ್ಲಿ ೪೩೧ಕ್ಕೆ ಒಬ್ಬ

ಕಡ ಸಿಕ್ಕೋದಾದರೆ ಹಡಗ ನನಗೆ ಇರಲಿ ಅಂದ.

ಳಾಗಿಯೂ ಇತ್ತು. ಬರೆಯುವದಕ್ಕೂ ಓದುವದಕ್ಕೂ ಬಂದಿರತಕ್ಕ ಸ್ತ್ರೀಯರ ಸಂಖ್ಯೆಯು ಮದರಾಸಿನಲ್ಲಿ ೧೬೬ರಲ್ಲಿ ಒಂದೂ, ಬಂಗಾಳದಲ್ಲಿ ೫೬೦ರಲ್ಲಿ ಒಂದೂ, ಬೊಂಬಾಯಿಯಲ್ಲಿ ೨೪೫ರಲ್ಲಿ ಒಂದೂ ಆಗಿಯಿದೆ. ಯಾವರೀತಿಯಲ್ಲಿ ನೋಡಿದರೂ ಇತರ ಸಂಸ್ಥಾನಗಳಿಗಿಂತ ನಮ್ಮ ಸಂಸ್ಥಾನದಲ್ಲಿ ವಿದ್ಯಾವಂತರಾದ ಸ್ತ್ರೀಯರ ಸಂಖ್ಯೆಯು ಹೆಚ್ಚಾಗಿಯಿದೆ. ಈ ಕೀರ್ತಿಯು ಮದರಾಸು ಗವರ್ನಮೆಂಟಿನವರಿಗೂ, ಎಜುಕೇಷನಲ್ ಡಿಪಾರ್ಟ್‌ಮೆಂಟಿನವರಿಗೂ ನಮ್ಮ ವಿಜಯನಗರದ ಮಹಾರಾಜರವರಿಗೂ ಸೇರತಕ್ಕದ್ದಾಗಿದೆ. ಈ ವಿದ್ಯಾಭ್ಯಾಸವು ಹೀಗೆಯೇ ನಡೆಯುತ್ತಾ ಇದ್ದರೆ, ನಮ್ಮ ಸ್ತ್ರೀಯರೆಲ್ಲರೂ ನಮ್ಮ ದೇಶದ ಯುಗಾಂತರದ ಸ್ತ್ರೀಯರು ಎಷ್ಟು ವಿದ್ಯಾವಂತರಾಗಿದ್ದರೋ ಅಷ್ಟು ವಿದ್ಯಾವಂತರಾಗಬಹುದು ಎಂದು ತೋರುತ್ತದೆ. ವೇದವೇದಾಂತ ಪುರಾಣಗಳಿಂದ ಬಂದಾನೊಂದು ಕಾಲದಲ್ಲಿ ಸ್ತ್ರೀಯರು ವಿದ್ಯಾವಂತರಾಗಿ ವೇದಗಳನ್ನು ಓದುತ್ತಲೂ, ಕವಿತ್ವಗಳನ್ನು ಮಾಡುತ್ತಲೂ, ಧರ್ಮನೀತಿ ಮುಂತಾದ ಶಾಸ್ತ್ರಗಳಲ್ಲಿ ಅಖಂಡಪಾಂಡಿತ್ಯವನ್ನು ಸಂಪಾದಿಸಿ ಸಭಾಮಂಟಪದಲ್ಲಿ ಪ್ರವೇಶಮಾಡುತ್ತಲೂ, ಇಷ್ಟಬಂದರೆ ಮದುವೇಮಾಡಿಕೊಳ್ಳುತ್ತಲೂ, ಇಲ್ಲವಿದ್ದರೆ ಬ್ರಹ್ಮಚಾರಿಣಿಯರಾಗಿಯೇ ಇರುತ್ತಲೂ, ಪತಿಗಳೊಡನೆ ಯುದ್ಧರಂಗವನ್ನು ಪ್ರವೇಶಿಸಿ ಸೇನಾಧಿಪತ್ಯವನ್ನು ಮಾಡುತ್ತಲೂ ಇದ್ದರೆಂಬದಾಗಿ ಗೊತ್ತಾಗುತ್ತದೆ ಮತ್ತು ಆಕಾಲದಲ್ಲಿ ಬಾಲಿಕಾ ವಿವಾಹವೂ, ದ್ವಿತೀಯ ವಿವಾಹನಿಷೇಧವೂ ಇರಲಿಲ್ಲವೆಂಬದಾಗಿಯೂ ತಿಳಿಯಬರುತ್ತದೆ. ವಿದ್ಯೆಗೆ ಅಧಿದೇವತೆಯು ಹೆಂಗಸಾದ ಸರಸ್ವತಿಯಲ್ಲವೆ? ಗಾರ್ಗಿ, ಸಾವಿತ್ರಿ ಎಂಬುವರು ತಮ್ಮ ಪಾಂಡಿತ್ಯದಿಂದ ಪ್ರಸಿದ್ಧರಾಗಿ ಇರಲಿಲ್ಲವೆ? ಅವ್ವೈಯರ್, ಕಲ್ಯಾಣದೇವಿ, ಮತ್ತು ಮಾಲಿ ಎಂಬ ಸ್ತ್ರೀಯರ ಗ್ರಂಥಗಳನ್ನು ಲೋಕವೆಲ್ಲಾ ಕೊಂಡಾಡುವದಿಲ್ಲವೆ? ಕುಂತಿ ದ್ರೌಪದಿ ಗಾಂಧಾರಿಯರು ಧರ್ಮಶಾಸ್ತ್ರದ ವಿಷಯದಲ್ಲಿಯೂ ರಾಜನೀತಿ ವಿಷಯದಲ್ಲಿಯೂ ಹೇಳಿರತಕ್ಕ ಮಾತುಗಳು ಜಗತ್ಪ್ರಸಿದ್ಧಗಳಾಗಿ ಇಲ್ಲವೆ? ವಾಲಿಯು ತನ್ನ ಅವಸಾನಕಾಲದಲ್ಲಿ ರಾಜತಂತ್ರಗಳು ಏನಾದರೂ ತಿಳಿಯದಿದ್ದರೆ ತಾರೆಯನ್ನು ಕೇಳಿದರೆ ಅವಳು ರಾಜ

ತಂತ್ರವಲ್ಲಿ ನಿಪುಣೆಯಾದ್ದರಿಂದ ರಾಜ್ಯಭಾರಮಾಡುವದರಲ್ಲಿ ಸಂಭವಿಸತಕ್ಕ ತೊಂದರೆಗಳನ್ನೆಲ್ಲಾ ನಿವಾರಣೆಮಾಡಿಕೊಳ್ಳತಕ್ಕ ಆಲೋಚನೆಯನ್ನು ನಿನಗೆ ಹೇಳುವಳು ಎಂದು ಸುಗ್ರೀವನಿಗೆ ಹೇಳಲಿಲ್ಲವೆ? ಭೋಜರಾಯನ ಆಸ್ಥಾನದಲ್ಲಿ ಸೀತೆ ಎಂಬುವಳು ಮಹಾಕವಿ ಎಂಬದಾಗಿ ಹೆಸರುಗೊಂಡಿರಲಿಲ್ಲವೆ? ಸುಲಭೆ ಎಂಬುವಳು ಜನಕಮಹಾರಾಜನೊಡನೆ ಮತವಿಷಯವಾಗಿ ವಾಗ್ವಾದಮಾಡಿ, ಕಡೆಗೆ ಆತನನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊಂಡು, ಆತನಿಗೆ ಅನೇಕ ತತ್ವಗಳನ್ನು ಬೋಧಿಸಲಿಲ್ಲವೆ? ಚಿತ್ರಲೇಖೆ ಎಂಬುವಳು ಚಿತ್ರಬರೆಯುವದರಲ್ಲಿ ಬಹುಸಮರ್ಥಳೆಂದು ಅನ್ನಿಸಿಕೊಂಡು ಇರಲಿಲ್ಲವೆ? ಮಾಸಳು ಎಂಬುವಳು ವೈದ್ಯಶಾಸ್ತ್ರದಲ್ಲಿಯೂ ಶಿಲ್ಪಶಾಸ್ತ್ರದಲ್ಲಿಯೂ ಪಂಡಿತಳಾಗಿ ಇರಲಿಲ್ಲವೆ? ಕೈಕೇಯಿಯು ದಶರಥನ ಸಂಗಡ ಯುದ್ಧರಂಗವನ್ನು ಪ್ರವೇಶಿಸಿ ಆತನಿಗೆ ಸಹಾಯಮಾಡಲಿಲ್ಲವೆ? ಸತ್ಯಭಾಮೆಯು ನರಕಾಸುರನ ಯುದ್ಧದಲ್ಲಿ ಅತ್ಯಂತ ಪರಾಕ್ರಮವನ್ನು ತೋರಿಸಿ ಕೃಷ್ಣನಿಗೆ ಜಯವಾಗುವ ಹಾಗೆ ಮಾಡಲಿಲ್ಲವೆ? ದ್ರೌಪದಿಯೂ ದಮಯಂತಿಯೂ ಕೂಡ ಸಭಾಮಂಟಪದಲ್ಲಿ ತಮ್ಮ ಪತಿಗಳನ್ನು ವರಿಸಲಿಲ್ಲವೆ? ಕೌರವರ ಮಕ್ಕಳು ಸಾಧನೆಮಾಡತಕ್ಕ ಕಾಲದಲ್ಲಿ ರಾಜಸ್ತ್ರೀಯರೆಲ್ಲಾ ಸೇರಿ ಇರಲಿಲ್ಲವೆ?

ಪೂರ್ವಕಾಲದಲ್ಲಿ ಅನೇಕ ಸ್ತ್ರೀಯರು ವಿವಾಹಮಾಡಿಕೊಳ್ಳುವದಿಲ್ಲವೆಂದು ನಿಷ್ಕರ್ಷೆಮಾಡಿ ಯೋಗಿನಿಯರಾಗಿಯೇ ಕಾಲಹರಣಮಾಡಿದರು. ಆಕಾಲದಲ್ಲಿ ಸ್ತ್ರೀಯರು ಮದುವೆ ಮಾಡಿಕೊಳ್ಳಲೇ ಬೇಕೆಂಬ ನಿರ್ಬಂಧವು ಇರಲಿಲ್ಲ. ಬೇಕಾದವರು ಮದುವೆಮಾಡಿಕೊಳ್ಳುತ್ತಲೂ ಬೇಡದವರು ಬ್ರಹ್ಮಚಾರಿಣಿಯರಾಗಿಯೇ ಇರುತ್ತಲೂ ಇದ್ದರು; ಆದರೆ ಅವರು ಮದುವೆ ಮಾಡಿಕೊಂಡರೂ ಒಲ್ಲದಿದ್ದರೂ ಕೂಡ ಧರ್ಮಾಚರಣೆಯಲ್ಲಿ ನಿರತರಾಗಿ ಇರುತ್ತಿದ್ದರು. ಪತಿವ್ರತಾಶಿರೋಮಣಿಗಳಾದ ಸೀತೆ, ಚಂದ್ರಮತಿ, ದಮಯಂತಿ ಮುಂತಾದ ಅನೇಕ ಸ್ತ್ರೀಯರ ಪಾತಿವ್ರತ್ಯಧರ್ಮವನ್ನು ಯಾರು ತಾನೆ ಕೇಳಿಲ್ಲ? ಪೂರ್ವಕಾಲದಲ್ಲಿ ಹೀಗೆಲ್ಲಾ ಇದ್ದಾಗ್ಯೂ ಕೂಡ ಈಗ ನಮ್ಮ ಸ್ತ್ರೀಯರು ನಿರಕ್ಷರಕುಕ್ಷಿಗಳಾಗುವದಕ್ಕೆ ಅನೇಕ ಕಾರಣಗಳುಂಟು.

ಬಳದೇಶದ ಕಲಹಗಳೂ ತುರುಕರ ಜಯವೂ ಇದಕ್ಕೆ ಮುಖ್ಯಕಾರಣಗಳೆಂದು ಹೇಳಬಹುದು. ಈಗಿನ ನಮ್ಮ ಸ್ತ್ರೀಯರಿಗೆ ಸ್ವಲ್ಪಮಾತ್ರವೂ ಸ್ವಾತಂತ್ರ್ಯವಿಲ್ಲ. ತಮಗೆ ಇಷ್ಟವಿದ್ದರೂ ಇಲ್ಲದಿದ್ದರೂ ಯಾರನ್ನಾದರೂ ಮದುವೆ ಮಾಡಿಕೊಳ್ಳಲೇಬೇಕು. ತಮಗೆ ಅನುರೂಪರಾದ ಪತಿಗಳನ್ನು ವರಿಸತಕ್ಕ ಶಕ್ತಿಯು ಇವರಿಗೆ ಇಲ್ಲ. ಇದಲ್ಲದೆ ಮದುವೆಯಾಗತಕ್ಕ ಕಾಲದಲ್ಲಿ ವಧೂವರರಿಬ್ಬರಿಗೂ ತಾರತಮ್ಯಜ್ಞಾನವಿರುವದೇ ಇಲ್ಲ. ಯಾವಳಿಗಾದರೂ ಒಂದುವೇಳೆ ಬಾಲ್ಯದಲ್ಲಿಯೇ ಪತಿಯು ಮೃತನಾದಪಕ್ಷದಲ್ಲಿ, ಅವಳು ಐಹಿಕವ್ಯಾಪಾರಗಳನ್ನೆಲ್ಲಾ ತ್ಯಜಿಸಿ ದೇಹವನ್ನು ದಂಡಿಸುತ್ತಾ ಒಂದೇ ಹೊತ್ತು ಊಟಮಾಡುತ್ತಾ ಯಾವಜ್ಜೀವವೂ ವಿಧವೆಯಾಗಿ ಇರಬೇಕು. ಈಕೆಗೆ ದಾಯಭಾಗವು ತಪ್ಪಿಹೋಗಿ ಜೀವನಾಂಶಕ್ಕೂ ಮಾರ್ಗವಿಲ್ಲದಪಕ್ಷದಲ್ಲಿ ಸೇವಕಾವೃತ್ತಿಯಲ್ಲಿ ಕಾಲಕ್ಷೇಪ ಮಾಡಬೇಕಾಗುತ್ತದೆ. ಹಾಗೆ ಸೇವಕಾವೃತ್ತಿಯಲ್ಲಿ ಇರುವದಕ್ಕೆ ಪ್ರಯತ್ನಮಾಡಿದರೂ, ಮುಂಡೆ ಎದುರಿಗೆ ಬಂದಳು ಎಂದು ಎಲ್ಲರೂ ದೂಷಿಸುವರು.

ಇದಲ್ಲದೆ ಸ್ತ್ರೀಯರು ಮೊದಲು ತಂದೆಯ ಪೋಷಣೆಯಲ್ಲಿಯೂ, ಅನಂತರದಲ್ಲಿ ಗಂಡನ ಪೋಷಣೆಯಲ್ಲಿಯೂ, ತರುವಾಯ ಮಕ್ಕಳ ಪೋಷಣೆಯಲ್ಲಿಯೂ ಇರಬೇಕೆಂದು ಶಾಸ್ತ್ರವಿದೆ. ಈಕೆಯು ಮನೆಯಲ್ಲಿರತಕ್ಕ ಗಂಡಸರೆಲ್ಲರಿಗೂ ಭೋಜನವಾದಮೇಲೆ ತಾನು ಭುಜಿಸಬೇಕು. ಪತಿಯುತರಾದ ಹೆಂಗಸರು ಈಕೆಯೊಂದಿಗೆ ಮಾತನಾಡುವದಿಲ್ಲ. ಈಕೆಯು ತನ್ನ ಹೆಣ್ಣುಮಕ್ಕಳು ಓದುವ ಪಾಠಶಾಲೆಗಳಲ್ಲಿ ಬಹುಮಾನಕೊಡುವ ಇಂಥಾ ಸಭೆಗಳಿಗೆಕೂಡ ಬರುವದಕ್ಕಿಲ್ಲ. ಸ್ತ್ರೀ ವಿದ್ಯಾಭ್ಯಾಸ ಮಾಡತಕ್ಕಂಥಾ ಲೋಕೋಪಕಾರಿಗಳಾದ ಅನೇಕಜನರಿಗೆ ಇನ್ನುಮೇಲೆ ನಮ್ಮ ಹೆಂಗಸರಿಗೆ ವಿದ್ಯಾಭ್ಯಾಸ ಮಾಡಿಸುವವರಿಗೆ ನಮ್ಮ ಪೂರ್ವದ ಸ್ತ್ರೀಯರಿಗೆ ಇದ್ದ ಸ್ವಾತಂತ್ರ್ಯವನ್ನು ವಿದ್ಯೆಯನ್ನು ಧರ್ಮಾಚಾರಗಳನ್ನು ಉದ್ಧಾರಮಾಡುವದೇ ಮುಖ್ಯತಾತ್ಪರ್ಯವು. ನಾವು ಮತಸಂಬಂಧವಾದ ವಿಷಯವನ್ನು ಹೇಳಬಾರದು. ಯಾಕೆಂದರೆ, ಲೋಕದಲ್ಲಿ ಸಾವಿರಾರು ಮತಗಳಿವೆ; ಎಲ್ಲಾ

ಕಣ್ಣು ಕಾಣದ ಹೊಟ್ಟೆಗೆ ಮಣ್ಣೇನು ಮಸಿಯೇನು?

ಮತಗಳಿಗೂ ಸಮ್ಮತವಾದ ಮತಧರ್ಮಗಳನ್ನು ಹೇಳುವದಕ್ಕಾಗುವದಿಲ್ಲ; ಇದಲ್ಲದೆ ಮತಸಂಬಂಧವಾದ ವಿಷಯಗಳನ್ನು ಹೇಳುವದರಿಂದ ಸ್ವಮತಾಭಿಮಾನವೂ ಅನ್ಯಮತದ್ವೇಷವೂ ಉಂಟಾಗುವವು. ಯಾವರೀತಿಯಲ್ಲಿ ನೋಡಿದರೂ ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ಮಾಡಿಸತಕ್ಕದ್ದು ಬಹಳ ಅವಶ್ಯಕವಾದದ್ದೆಂದು ತೋರುವದು. ಸ್ತ್ರೀಯರಿಗೂ ಪುರುಷರಿಗಿರುವಂತೆಯೇ ಬುದ್ಧಿಯೂ, ಸುಖದುಃಖಗಳೂ, ತಕ್ಕ ಉದ್ಯೋಗಗಳೂ ಇರುತ್ತವೆ. ಸ್ತ್ರೀಯರು ವಿದ್ಯಾವಂತರೂ ತಾರತಮ್ಯಜ್ಞರೂ ಆದರೆ ಅವರ ಮಕ್ಕಳೂ ಕೂಡ ಯಾವಾಗಲೂ ವಿವೇಕಪೂರ್ವಕವಾದ ಕೆಲಸಗಳನ್ನೇ ನೋಡುತ್ತಾ ಇರುವದರಿಂದ ತಾವೂ ವಿವೇಕಶಾಲಿಗಳಾಗುವರು. ಈಗ ನಮ್ಮ ಸ್ತ್ರೀಯರೆಲ್ಲಾ ವಿದ್ಯಾವಿಹೀನರಾಗಿಯೂ ಲೋಕವ್ಯವಹಾರಗಳನ್ನು ತಿಳಿಯದವರಾಗಿಯೂ ಇರುವದರಿಂದ, ಲೋಕೋಪಕಾರವಾದ ಯಾವಯಾವ ಕೆಲಸಗಳನ್ನು ಮಾಡುವದಕ್ಕೆ ಹೋದರೂ ಅವರು ಅವುಗಳಿಗೆಲ್ಲಾ ಪ್ರತಿಕೂಲರಾಗುವರು. ಇವರೆಲ್ಲರೂ ವಿದ್ಯಾವಂತರಾಗಿದ್ದ ಪಕ್ಷದಲ್ಲಿ ನಮಗೂ ಲೋಕಕ್ಕೂ ಎಷ್ಟೋ ಪ್ರಯೋಜನಕರವಾಗಿ ಇರುತ್ತಿತ್ತು. ಇದಲ್ಲದೆ ಈಗ ನಾವು ಸ್ತ್ರೀವಿದ್ಯಾಭ್ಯಾಸವನ್ನು ಪ್ರಾರಂಭಮಾಡಿ ಇದ್ದಾಗ್ಯೂ ಸ್ತ್ರೀಯರನ್ನು ನಿಶ್ಚಯವಾಗಿ ವಿವೇಕಶಾಲಿಗಳಾಗಿ ಮಾಡುವದಕ್ಕೆ ತಕ್ಕ ಏರ್ಪಾಡುಗಳನ್ನು ಇನ್ನೂ ಮಾಡಿಯಿಲ್ಲ. ನಾವು ಈಗ ದೇಶಭಾಷೆಯನ್ನು ಬರೆಯುವದು ಓದುವದು ಮಾತ್ರ ಕಲಿಸುತ್ತಾ ಇದ್ದೇವೆ. ಇವುಗಳಿಂದ ಎಷ್ಟೋ ಪ್ರಯೋಜನವುಂಟು. ಆದಾಗ್ಯೂ ಇಂಥಾ ವಿದ್ಯಾಭ್ಯಾಸದಿಂದ ಇವರ ದುರಭಿಮಾನಗಳೆಲ್ಲಾ ತೊಲಗಿ ನಮ್ಮ ಪೂರ್ವದ ಸ್ತ್ರೀಯರಂತೆಯೂ, ಈಗ ಪ್ರಸಿದ್ಧರಾದ ಯುರೋಪ್ ಮತ್ತು ಅಮೇರಿಕಾಖಂಡಗಳಲ್ಲಿನ ಸ್ತ್ರೀಯರಂತೆಯೂ, ವಿದ್ಯಾಪಾಂಡಿತ್ಯವನ್ನು ಪಡೆದು ಅವರಿಂದ ಲೋಕಕ್ಕೆ ಉಪಕಾರವಮಾಡುವದಕ್ಕೆ ಇವರಿಗೆ ತಕ್ಕಷ್ಟು ಯೋಗ್ಯತೆ ಬರುವದಿಲ್ಲ.

ಈಗಿನ ಲೌಕಿಕಭಾಷೆಯು ಇಂಗ್ಲಿಷ್ ಆದ್ದರಿಂದ ಸುಲಭವಾಗಿ ಜೀವನೋಪಾಯವನ್ನು ಹೊಂದಬೇಕೆಂಬ ಗಂಡಸರೆಲ್ಲರೂ ಈ ಭಾಷೆಯನ್ನು

ಕತ್ತೆ ಕಸ್ತೂರಿ ಹೊತ್ತ ಹಾಗೆ.

ವಿಶೇಷವಾಗಿ ವ್ಯಾಸಂಗವಮಾಡುತ್ತಾರೆ. ಇಂಗ್ಲಿಷ್ ಭಾಷೆಯು ಸ್ವಲ್ಪಹೆಚ್ಚು ಕಡಿಮೆಯಾಗಿ ನಮ್ಮ ಜನಗಳಲ್ಲೆಲ್ಲಾ ಸ್ವಭಾಷೆಗಿಂತಲೂ ಸ್ವಲ್ಪಹೆಚ್ಚಾಗಿಯೇ ಪ್ರಬಲವಾಗಿ ಇದೆ. ಇದಲ್ಲದೆ ಲೋಕದಲ್ಲಿ ಜನರು ಯಾವಯಾವ ವಿಷಯಗಳನ್ನು ತಿಳಿದುಕೊಂಡು, ಯಾವ ಯಾವಶಾಸ್ತ್ರಗಳನ್ನು ಅಭ್ಯಾಸ ಮಾಡಿದರೆ, ನಿಜವಾದ ಪಾಂಡಿತ್ಯವನ್ನು ಹೊಂದಿ, ದುರಭಿಮಾನಗಳನ್ನು ಹೋಗಲಾಡಿಸಿಕೊಂಡು, ಸ್ವತಂತ್ರರೂ ಐಶ್ವರ್ಯವಂತರೂ ಆಗುವರೋ, ಅಂಥಾ ಶಾಸ್ತ್ರವುಂಟಾದವುಗಳನ್ನೆಲ್ಲಾ ಇಂಗ್ಲಿಷ್ ಭಾಷೆಯಲ್ಲಿ ಸಮಗ್ರವಾಗಿ ಎಲ್ಲರಿಗೂ ತಿಳಿಯುವದಕ್ಕೆ ಸುಲಭವಾಗಿ ಬರೆದು ಇದೆ. ಈ ಭಾಷೆಯನ್ನು ಚನ್ನಾಗಿ ವ್ಯಾಸಂಗಮಾಡಿ ಲೋಕವ್ಯವಹಾರಗಳ ವಿಷಯದಲ್ಲಿಯೂ, ಸಕಲ ಶಾಸ್ತ್ರಗಳ ವಿಷಯದಲ್ಲಿಯೂ, ಅಸಾಧಾರಣವಾದ ಪ್ರಜ್ಞೆಯನ್ನು ಪಡೆದು, ಸಕಲ ದುರಭಿಮಾನಗಳನ್ನೂ ಬಿಟ್ಟು, ಧರ್ಮೈಕತತ್ಪರರಾಗಿ ಇರತಕ್ಕ ಗಂಡಸರಿಗೆ ಇವುಗಳಲ್ಲಿ ಪಾಂಡಿತ್ಯವಿಲ್ಲದೆಯೂ ಸ್ವಭಾಷೆಯನ್ನು ಅಲ್ಪಸ್ವಲ್ಪ ಓದುವದಕ್ಕೆ ಬಂದಾಗ್ಯೂ ಯುಕ್ತಾಯುಕ್ತಗಳನ್ನೂ ಧರ್ಮಾಧರ್ಮಗಳನ್ನೂ ಲೋಕವ್ಯವಹಾರಗಳನ್ನೂ ತಿಳಿಯದೆಯೂ ಮತ್ತು ಅನಾದಿಯಿಂದ ಬಂದ ಅನೇಕ ದುರಭಿಮಾನಗಳಿಂದ ಬದ್ಧರಾಗಿಯೂ ಇರತಕ್ಕಂಥಾ, ಸಕಲ ವಿಷಯಗಳಲ್ಲಿಯೂ ಅಜ್ಞಾನದಿಂದ ಪ್ರತಿಕೂಲವಾಗಿಯೇ ಆಲೋಚನೆ ಮಾಡತಕ್ಕಂಥಾ ಅಕ್ಕತಂಗಿಯರ ಸಂಭಾಷಣೆಯು ಎಂದಿಗೆತಾನೆ ರುಚಿಸೀತು ? ವಿದ್ಯಾವಂತರಾದ ಗಂಡಸರಲ್ಲಿಯೂ ಕೂಡ ಕೆಲವರು ತಮ್ಮ ಮನೆಯ ಹೆಂಗಸರನ್ನು ಹೊರತರಕ್ಕೆ ಯಾವರೀತಿಯಲ್ಲಿ ಆದರಣೆ ಮಾಡಿದಾಗ್ಯೂ, ವಸ್ತುತಃ ಅವರನ್ನು ಮನೆಯಲ್ಲಿ ನಿರಂತರವೂ ಇರುವ ಸೇವಕರ ಹಾಗೆಯೂ ಅನೇಕ ವೇಳೆಗಳಲ್ಲಿ ಮನೆಯಲ್ಲಿ ಕಟ್ಟಿರತಕ್ಕ ಎತ್ತು ಕುದುರೆಗಳ ಹಾಗೆಯೂ ಗಣನೆಮಾಡುವರು. ಸ್ತ್ರೀಯರು ಸಕಲವಿಷಯಗಳಲ್ಲಿಯೂ ಪುರುಷರಿಗೆ ಸಮಾನಸ್ಕಂಧರಾಗಬೇಕಾದರೆ ಗಂಡಸರ ಹಾಗೆಯೇ ಶ್ರಮಪಟ್ಟು ಅವರು ಯಾವಯಾವ ವಿಷಯಗಳಲ್ಲಿ ಎಂಥಾ ಪಾಂಡಿತ್ಯವನ್ನು ಸಂಪಾದಿಸುತ್ತಾರೋ ಯಾವರೀತಿಯಲ್ಲಿ ಅವಿವೇಕ ಮಾರ್ಗಗಳನ್ನು ಬಿಟ್ಟು ವಿವೇಕವನ್ನೇ ಅವಲಂ

ಕತ್ತೆಗೆ ಕುದುರೆ ಸೋಬರವಾವನೆ ?

ಬಿಸುತ್ತಾರೋ ಹಾಗೆಯೇ ಇವರೂ ಮಾಡಬೇಕು. ಈಗ ನಮ್ಮ ದೇಶದ ಜನರಲ್ಲಿ ಅನೇಕರು ಗಂಡಸರು ಸಕಲ ದುರಭಿಮಾನಗಳನ್ನೂ ಹೋಗಲಾಡಿಸತಕ್ಕ ಇಂಗ್ಲಿಷ್ ಭಾಷೆಯನ್ನು ಚನ್ನಾಗಿ ಕಲಿತು ಇರುವದರಿಂದ, ನಮ್ಮಲ್ಲಿ ಸ್ತ್ರೀಯರು ವಿದ್ಯಾಭ್ಯಾಸವನ್ನು ಮಾಡಕೂಡದು ಎಂಬ ಆಚಾರವು ಅಕ್ರಮವಾದದ್ದೆಂದು ತಿಳಿದು ಅವರನ್ನೂ ತಮಗೆ ಸಮಾನಸ್ಕಂಧರನ್ನಾಗಿ ಮಾಡಿಕೊಳ್ಳುವದರಿಂದ ಆಗುವ ಪ್ರಯೋಜನಗಳನ್ನೆಲ್ಲಾ ಚನ್ನಾಗಿ ವಿಮರ್ಶೆಮಾಡಿ, ತತ್ಸಹಾಯವಾಗಿ ಪಾಠಶಾಲೆಯೇ ಮೊದಲಾದ ಏರ್ಪಾಡುಗಳನ್ನೆಲ್ಲಾ ಮಾಡಿ ಇದ್ದಾರೆ. ಸ್ತ್ರೀಯರು ನಿಶ್ಚಯವಾಗಿ ವಿದ್ವಾಂಸರಾಗಬೇಕಾದರೆ ಅವರು ಅನೇಕ ವಿಷಯಗಳನ್ನು ತಿಳಿದು ಕೊಳ್ಳಬೇಕು ; ಇಂಥಾ ವಿಷಯಗಳು ನಮ್ಮ ದೇಶ ಭಾಷೆಯಲ್ಲಿ ಅಲ್ಪ ಸ್ವಲ್ಪ ಸಿಕುತ್ತವೆಯೇ ಹೊರತು ಸಮಗ್ರವಾಗಿ ಸಿಕ್ಕುವದಿಲ್ಲ. ಇಂಗ್ಲಿಷ್ ಭಾಷೆಯಲ್ಲಾದರೋ ಆ ಇಂಗ್ಲಿಷ್ ಜನಗಳು ಲೋಕದಲ್ಲಿ ಇರತಕ್ಕ ಸಕಲ ಭಾಷೆಗಳನ್ನೂ ಪರಿಶೀಲನೆಮಾಡಿ ಅವುಗಳಲ್ಲಿ ಇರತಕ್ಕ ಗ್ರಂಥಗಳನ್ನೆಲ್ಲಾ ಶೋಧಿಸಿ ಮುಖ್ಯವಾದ ಸಾರಾಂಶಗಳನ್ನೆಲ್ಲಾ ಬೇರೆ ಬೇರೆ ಶಾಸ್ತ್ರಗಳನ್ನಾಗಿ ನಿರ್ಮಿಸಿ ಇರುತ್ತಾರೆ. ಈ ವಿಷಯಗಳನ್ನೆಲ್ಲಾ ನಮ್ಮ ಸ್ತ್ರೀಯರು ತಿಳಿದುಕೊಳ್ಳಬೇಕಾದರೆ ಆ ಇಂಗ್ಲಿಷ್ ಭಾಷೆಯನ್ನೇ ಓದಿಕೊಳ್ಳಬೇಕು, ಅಥವಾ ಅವುಗಳ ಭಾಷಾಂತರಗಳಿದ್ದರೆ ಅವುಗಳಿಂದ ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಳ್ಳತಕ್ಕ ಗ್ರಂಥಗಳೆಲ್ಲಾ ನಮ್ಮ ಸ್ವಭಾಷೆಗೆ ಭಾಷಾಂತರವಾಗಿ ಇಲ್ಲ. ಹಾಗೆ ಅವುಗಳನ್ನು ಭಾಷಾಂತರ ಮಾಡಿಸುವದಕ್ಕೂ ಅದ್ವಿತೀಯ ಪಾಂಡಿತ್ಯವುಳ್ಳ ವಿದ್ವಾಂಸರ ಸಹಾಯವೂ ದ್ರವ್ಯಸಹಾಯವೂ ಕಾಲವಿಳಂಬವೂ ಬೇಕು. ಈ ತೊಂದರೆಗಳನ್ನೆಲ್ಲಾ ನೋಡಿದರೆ ಇವರಿಗೆ ಇಂಗ್ಲಿಷ್ ವ್ಯಾಸಂಗವನ್ನು ಮಾಡಿಸುವದೇ ಸುಲಭವೆಂದು ತೋರುತ್ತದೆ. ಅದಕಾರಣ ಈ ಸ್ತ್ರೀ ಪಾಠಶಾಲೆಗಳಲ್ಲೆಲ್ಲಾ ವಿಶೇಷ ಪಾಂಡಿತ್ಯವನ್ನು ಅಪೇಕ್ಷಿಸುವಂಥಾವರಿಗೂ, ವಿದ್ಯಾವಂತರಾದ ಪತಿಗಳನ್ನು ಪಡೆದು ಇರತಕ್ಕವರಿಗೂ, ಇಂಗ್ಲಿಷ್‌ನಲ್ಲಿ ಸರಿಯಾದ ವಿದ್ಯಾಭ್ಯಾಸವನ್ನು ಮಾಡಿಸತಕ್ಕ ಏರ್ಪಾಡು ಮಾಡಬೇಕು. ವಿದ್ಯಾವಂತರಾದ ಗಂಡಸರು

ಕತ್ತೆಗೆ ಯಾಕೆ ಕಾಲುಕಡಗ ?

ತಮ್ಮ ಸ್ತ್ರೀವರ್ಗವನ್ನು ನಿರಕ್ಷರಕುಕ್ಷಿಗಳಾಗಿ ಇಟ್ಟುಕೊಂಡಿದ್ದರೆ ಅವರಿಗೆ ಸ್ವಭಾವ ಸಿದ್ಧವಾಗಿಯೇ ಶಿಕ್ಷೆಯಾಗುವದು. ಹ್ಯಾಗೆಂದರೆ— ಗಂಡಸರು ಅನೇಕ ಶಾಸ್ತ್ರಗಳನ್ನೂ ಇತರ ವಿಷಯಗಳನ್ನೂ ತಿಳಿದುಕೊಂಡು ಒಂದು ಕಡೆಗೆ ಎಳೆದರೆ, ಸ್ತ್ರೀಯು ತನ್ನ ಅಜ್ಞಾನ ಜನ್ಯವಾದ ಮೌಢ್ಯದಿಂದಲೂ ದುರಭಿಮಾನದಿಂದಲೂ ಮತ್ತೊಂದು ಕಡೆಗೆ ಎಳೆಯುವಳು. ಕ್ರಮೇಣ ಪುನಃ ಕಷಾಯಗಳು ಹುಟ್ಟಿ ಸಂಸಾರ ಸುಖಕ್ಕೆ ಭಂಗ ಪ್ರಾಪ್ತವಾಗುವದು. ಸ್ತ್ರೀಯರು ಗಂಡಸರಂತೆಯೇ ಚನ್ನಾಗಿ ವಿದ್ಯಾವಂತರಾಗುವವರಿಗೂ ನಮ್ಮ ಹಿಂದೂಜನರಿಗೆ ಸಂಸಾರ ಸುಖವು ಬರುವದಿಲ್ಲ.

ಈ ರೀತಿಯಲ್ಲಿ ಚಂಚಲರಾಯರು ತಮ್ಮ ಉಪನ್ಯಾಸವನ್ನು ಮುಗಿಸಿದ ಕೂಡಲೆ ಗ್ರ್ಯಾಂಡ್ ಡಫ್ ಸಾಹೇಬರು ಸಮರ್ಥರಾದ ಬಾಲಕರಿಗೆ ಇನಾಮುಗಳನ್ನು ಕೊಟ್ಟರು. ಅನಂತರದಲ್ಲಿ ಇವರ ಹೆಂಡತಿಯು ಅಲ್ಲಿದ್ದ ದೊಡ್ಡ ಮನುಷ್ಯರನ್ನೂ ಬಾಲಕಿಯರನ್ನೂ ಕುರಿತು ಹೇಳಿದ್ದೇನಂದರೆ:—

ಚಂಚಲರಾಯರು ಹೇಳಿದ ಮಾತುಗಳನ್ನು ಕೇಳಿ ನನಗೆ ಬಹಳ ಆನಂದವಾಯಿತು. ಇಂಥಾ ದೊಡ್ಡಮನುಷ್ಯರೆಲ್ಲರೂ ಸ್ತ್ರೀವಿದ್ಯಾಭಿವೃದ್ಧಿಯಲ್ಲಿ ಕುತೂಹಲರಾಗಿ ಇರುವದನ್ನು ನೋಡಿದರೆ ಹಿಂದೂ ಸ್ತ್ರೀಯರ ಪುಣ್ಯವು ಪರಿಪಕ್ವವಾಗುವಂತೆ ತೋರುತ್ತದೆ. ನಾನು ಈ ದೇಶಕ್ಕೆ ಬಂದು ಮೂರುವರ್ಷವಾಯಿತು. ನಾನು ಬಂದಕಾಲದಲ್ಲಿ ಈಗ ನಾನು ನೋಡುತ್ತಾ ಇರುವದನ್ನೆಲ್ಲಾ ಎಂದಿಗಾಗಲೀ ನೋಡುತ್ತೇನೆಂದು ತಿಳಿದುಕೊಂಡೇ ಇರಲಿಲ್ಲ. ಈ ವಿಸ್ತಾರವಾದ ದೇಶದಲ್ಲಿ ಧರ್ಮದ ವಿಷಯದಲ್ಲಿಯೂ, ರಾಜತಂತ್ರದ ವಿಷಯದಲ್ಲಿಯೂ, ಲೋಕವ್ಯವಹಾರದ ವಿಷಯದಲ್ಲಿಯೂ, ಚಿತ್ರವಿಚಿತ್ರವಾದ ಉಪನ್ಯಾಸಗಳು ನಡೆಯುವಂತೆ ಪರೋಕ್ಷವಾಗಿ ಇದ್ದುಕೊಂಡು ವರ್ತಮಾನ ಪತ್ರಿಕೆಗಳಲ್ಲಿ ಮಾತ್ರ ಓದುತ್ತಿದ್ದೆನು. ಈಗ ಪ್ರತ್ಯಕ್ಷವಾಗಿ ನಿಮ್ಮ ಸಾಹಸ ಕೃತ್ಯಗಳನ್ನೆಲ್ಲಾ ನೋಡಿ ಬಹಳ ಸಂತುಷ್ಟಳಾದೆನು. ಲೋಕದಲ್ಲಿ ಸಕಲರಿಗೂ ಪ್ರಾಣಕ್ಕೂ ಧನಕ್ಕೂ ಅಪಾಯವಿಲ್ಲದಂತೆ ಮಾಡಿ

ಕತ್ತೆ ಬಲ್ಲದೇ ಹೊತ್ತ ಕಸ್ತೂರೀ ವಾಸನೆಯ ?

ಇರತಕ್ಕ ಧರ್ಮಶಾಸ್ತ್ರಗಳಿಗಿಂತಲೂ ಅತಿಶಯವಾದದ್ದು ಯಾವದೂ ಅಲ್ಲ. ಯಾಕಂದರೆ, ಅಂಥಾ ಧರ್ಮಶಾಸ್ತ್ರಗಳು ಇಲ್ಲದಿದ್ದರೆ ಲೋಕವೂ ಇರುವದಿಲ್ಲ. ಪ್ರಾಮುಖ್ಯತೆಯಲ್ಲಿ ಇವುಗಳಿಗಿಂತ ಸ್ವಲ್ಪ ಕಡಿಮೆಯಾದಾಗ್ಯೂ ಲೋಕದ ಅಭಿವೃದ್ಧಿಗೆ ಎಲ್ಲಾದಕ್ಕಿಂತ ಹೆಚ್ಚಾಗಿ ಸಹಕಾರಿಯಾಗಿರುವದು ವಿದ್ಯಾಭ್ಯಾಸ. ಅದರಲ್ಲಿ ಪುರುಷರಿಗೆ ಮಾಡಿಸುವ ವಿದ್ಯಾಭ್ಯಾಸಕ್ಕಿಂತ ಉತ್ತಮವಾಗಿರುವದು ಸ್ತ್ರೀಯರಿಗೆ ಮಾಡಿಸುವ ವಿದ್ಯಾಭ್ಯಾಸ. ಯಾಕಂದರೆ, ತಾಯಿತಂದೆಗಳಿಬ್ಬರಲ್ಲಿ ತಂದೆಯ ಕಾಲವೆಲ್ಲಾ ಲೌಕಿಕವ್ಯಾಪಾರದಲ್ಲಿಯೇ ಕಳೆದುಹೋಗುವದು. ತಾಯಿಯಾದರೋ ಗೃಹಕೃತ್ಯದಲ್ಲಿಯೇ ನಿರತಳಾಗಿರುವಳು. ಯಾವಾಗಲೂ ಮಕ್ಕಳ ಯೋಗಕ್ಷೇಮಚಿಂತಕಳಾಗಿ ಇರತಕ್ಕ ತಾಯಿಯು ವಿದ್ಯಾವಂತಳಾಗಿದ್ದರೆ ಆಕೆಯ ಸಹವಾಸದಲ್ಲಿರುವ ಮಕ್ಕಳೂ ಕೂಡ ಸ್ವಭಾವಸಿದ್ಧವಾಗಿ ಪಂಡಿತರಾಗುವರು. ಈ ಸ್ತ್ರೀವಿದ್ಯಾಭ್ಯಾಸವಿಷಯದಲ್ಲಿ ನಮ್ಮ ದೇಶದವರಿಗೂ ಈ ದೇಶದವರಿಗೂ ಇದ್ದ ತಾತ್ಪರ್ಯಗಳು ಒಂದಕ್ಕೊಂದು ವಿರೋಧವಾಗಿಯೇ ಇರುತ್ತಾ ಇದ್ದವು. ಈಗ ನಿಮ್ಮಲ್ಲಿ ವಿದ್ವಾಂಸರಾದವರು ಅನೇಕರು ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸುವದೇ ಉತ್ತಮವಾದದ್ದು ಎಂಬದಾಗಿ ತಿಳಿದುಕೊಂಡು ಇದಕ್ಕೆ ತಕ್ಕ ಸನ್ನಾಹಗಳನ್ನೆಲ್ಲಾ ಮಾಡುತ್ತಾ ಇದ್ದಾರೆ. ಈ ವಿಷಯದಲ್ಲಿ ನೀವು ಮಾಡಿರತಕ್ಕ ಸಾಹಸಗಳು ನನಗೆ ಬಹಳ ಸಂತೋಷವನ್ನು ಉಂಟುಮಾಡಿದವು. ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗಲೆಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ.

ಎಲ್ಲಾದೇಶಗಳಲ್ಲಿಯೂ ಸ್ತ್ರೀಯರು ಬಹಳ ವಿದ್ಯಾವಂತರಾದರೆ ಗೃಹಕೃತ್ಯವನ್ನು ಸರಿಯಾಗಿ ನೋಡಿಕೊಳ್ಳುವದಿಲ್ಲವೆಂದು ತಿಳಿದುಕೊಂಡು ಇದ್ದರೆ. ನಮ್ಮ ದೇಶದಲ್ಲಿಯೂ ಮೊದಲು ಜನರು ಹೀಗೆಯೇ ತಿಳಿದುಕೊಂಡಿದ್ದರು. ಈ ವಿಷಯವನ್ನು ಪರೀಕ್ಷಿಸುವದಕ್ಕೋಸ್ಕರ ಇಟಲಾಯಿತಿಯಲ್ಲಿ ಕೆಲವು ವರ್ಷಗಳ ಕೆಳಗೆ ಕೆಲವು ಏರ್ಪಾಡುಗಳನ್ನು ಮಾಡಿದರು. ಈ ಏರ್ಪಾಡುಗಳ ಪ್ರಕಾರ ಸ್ತ್ರೀಯರು ಪ್ರೌಢವಿದ್ಯೆಯಲ್ಲಿ ಪ್ರವೀಣರಾದರು.

ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ.

ಅವರು ಗೃಹಕೃತ್ಯವಿಷಯದಲ್ಲಿ ಹ್ಯಾಗೆ ಇದ್ದಾರೋ ಅದನ್ನು ತಿಳಕೊಳ್ಳೋಣ. ಕೆಲವು ವರ್ಷಗಳಿಗೆ ಮುಂಚೆ ವಿಲಾಯತಿಯಲ್ಲಿ ಸ್ತ್ರೀಪ್ರೌಢ ವಿದ್ಯಾಭ್ಯಾಸವು ಬಹಳ ಕಡಿಮೆಯಾಗಿ ಇತ್ತು. ಆ ಕಾಲದಲ್ಲಿ ವಿದ್ಯಾವಿಹೀನರಾದ ಸ್ತ್ರೀಯರ ಅಜ್ಞಾನದ ದೆಸೆಯಿಂದ ಉಂಟಾಗುತ್ತಿದ್ದ ಪ್ರಮಾದಗಳು ಅನೇಕವಾಗಿದ್ದವು. ಅವುಗಳಲ್ಲಿ ಒಂದನ್ನು ಇಲ್ಲಿ ದೃಷ್ಟಾಂತವಾಗಿ ಹೇಳುತ್ತೇನೆ.

ಸೇರಿಗ್ಯಾಂಪ್ ಎಂಬ ಒಬ್ಬ ಸ್ತ್ರೀಯು ಒಬ್ಬ ಅಸ್ವಸ್ಥನಾದ ಮನುಷ್ಯನಿಗೆ ಉಪಚಾರಮಾಡುವದಕ್ಕೋಸ್ಕರ ನೇಮಿಸಲ್ಪಟ್ಟಳು. ಈಕೆಯು ರೋಗಿಗೋಸ್ಕರವಾಗಿ ತಂದ ಪದಾರ್ಥಗಳನ್ನೆಲ್ಲಾ ಸ್ವಲ್ಪಸ್ವಲ್ಪವಾಗಿ ಹಾಳುಮಾಡುತ್ತಾ, ಪಥ್ಯಕ್ಕಾಗಿ ಮಾಡಿದ ಪದಾರ್ಥಗಳನ್ನೆಲ್ಲಾ ಕಡಿಸುತ್ತಾ, ನಸ್ಯ ಮುಂತಾದವುಗಳನ್ನೆಲ್ಲಾ ಕೈಯಲ್ಲಿಟ್ಟುಕೊಂಡು ಔಷಧಿಗಳಲ್ಲೆಲ್ಲಾ ಬೆರಸುತ್ತಾ, ರೋಗಿಗೋಸ್ಕರ ತಂದ ಸಕಲ ಮಧುರಪದಾರ್ಥಗಳನ್ನೂ ತಾನೇ ಭಕ್ಷಿಸುತ್ತಾ, ರಾತ್ರಿವೇಳೆಗಳಲ್ಲಿ ರೋಗಿಯ ತಲೆದಿಂಬನ್ನು ತೆಗೆದು ತಾನೇ ಹಾಕಿಕೊಳ್ಳುತ್ತಾ, ಔಷಧಿ ಕಷಾಯ ಮುಂತಾದವುಗಳನ್ನು ಮಾಡಬೇಕಾದರೆ ಯಾವಯಾವ ಪದಾರ್ಥಗಳನ್ನು ಎಷ್ಟೆಷ್ಟು ಸೇರಿಸಬೇಕೆಂದು ವೈದ್ಯನು ಹೇಳಿ ಇರುತ್ತಾನೋ, ಅವನ್ನು ಉಲ್ಲಂಘಿಸಿ ತನ್ನ ಮನಸ್ಸು ಬಂದಷ್ಟು ಸೇರಿಸುತ್ತಾ, ಹೀಗೆ ಪ್ರಮಾಣಮೀರಿ ಸೇರಿಸುವದರಿಂದ ರೋಗಿಯ ರೋಗವೃದ್ಧಿಗೂ ವೈದ್ಯನ ಅಪಯಶಸ್ಸಿಗೂ ಕಾರಣಭೂತಳಾಗಿ ಇದ್ದುಕೊಂಡಿದ್ದಳು. ಇವಳಿಗೆ ಬಾಲ್ಯದಾರಭ್ಯ ಪ್ರೌಢವಿದ್ಯಾಭ್ಯಾಸಮಾಡಿಸಿ ಪರೋಪಕಾರನಿರತರೂ ಪ್ರಾಮಾಣಿಕರೂ ಆದ ಸ್ತ್ರೀಯರ ಸಹವಾಸದಲ್ಲಿ ಇಟ್ಟಿದ್ದರೆ ಇವಳು ಭೂತದಯ ಪಶ್ಚಾತ್ತಾಪಗಳುಳ್ಳವಳಾಗಿಯೂ, ಆರ್ತಜನರಿಗೆ ಉಪಕಾರಿಯಾಗಿಯೂ, ಔಷಧ ಪ್ರಮಾಣಗಳು ಹೆಚ್ಚು ಕಡಿಮೆಯಾದರೆ ಪ್ರಾಣಗಳು ಹೋಗುವವು ಎಂದು ತಿಳಕೊಂಡಿರುವಳಾದ್ದರಿಂದ ತನ್ನ ಮನಸ್ಸುಬಂದಂತೆ ಮಾಡದೆಯೂ ಇರುತ್ತಿದ್ದಳು. ಅಜ್ಞಾನದಿಂದ ಉಂಟಾಗುವ ಕೇಡುಗಳು ಇಷ್ಟುಮಾತ್ರವೇ ಅಲ್ಲದೆ ಅಪರಿಮಿತವಾಗಿರುವವು.

ಕಥೆಗೊಂದು ಕಾಲುಂಟೆ ?

ವಿದ್ಯಾವಂತರಾದ ಸ್ತ್ರೀಯರು ಉಪಕಾರಿಗಳಾಗಿರುವರೆಂಬುವದಕ್ಕೆ ಅನೇಕ ದೃಷ್ಟಾಂತಗಳುಂಟು:— ೧೮೫೪ ನೇ ಇಸವಿಯಲ್ಲಿ ಯುರೋಪ ಖಂಡದಲ್ಲಿ ರಷ್ಯಾ, ತುರ್ಕಿ, ಫ್ರಾನ್ಸ ಮತ್ತು ಇಂಗ್ಲಂಡ ದೇಶಗಳಿಗೆ ಯುದ್ಧನಡಿಯಿತು. ಅದರಲ್ಲಿ ಅನೇಕರು ಸತ್ತರು ಮತ್ತು ಲಕ್ಷಾಂತರ ಜನಗಳು ಗಾಯತಗಲಿ ಬಿದ್ದರು. ಆ ಕಾಲದಲ್ಲಿ ಬಹಳ ವಿದ್ಯಾವತಿಯಾದ ಫ್ಲಾರೆನ್ಸ್ ನೈಟಿಂಗೇಲ್ ಎಂಬುವಳು ಸಕಲ ಶಾಸ್ತ್ರಗಳಲ್ಲಿಯೂ ನಿಪುಣೆಯಾಗಿದ್ದದ್ದು ಮಾತ್ರವಲ್ಲದೆ ವೈದ್ಯ ಶಾಸ್ತ್ರದಲ್ಲಿ ಅಖಂಡಪಾಂಡಿತ್ಯವನ್ನು ಸಂಪಾದಿಸಿ ಇದ್ದಳು. ಈಕೆಯು ಲಕ್ಷಾಂತರ ಜನಗಳು ಗಾಯದಿಂದ ಪೀಡಿತರಾಗಿ ಬಹಳ ಸಂಕಟಪಡುತ್ತಿದ್ದಾರೆಂಬ ವರ್ತಮಾನ ಕೇಳಿ, ತನ್ನ ಆಸ್ತಿಯನ್ನೆಲ್ಲಾ ಮಾರಿ, ಆ ದ್ರವ್ಯದಿಂದ ಔಷಧ ಸಾಮಗ್ರಿಗಳನ್ನು ಖರೀದಿಕೊಂಡು, ಯುದ್ಧವಾಗುತ್ತಿದ್ದ ದೇಶವನ್ನು ಪ್ರವೇಶಿಸಿ, ನಿದ್ರಾಹಾರಗಳನ್ನು ಬಿಟ್ಟು, ಗಾಯದಿಂದ ತಪಿಸುತ್ತಿದ್ದ ಸ್ವಪಕ್ಷದವರಿಗೂ ಶತ್ರುಪಕ್ಷದವರಿಗೂ ಕೂಡ ಗಾಯಗಳಿಗೆ ತಕ್ಕ ಔಷಧಿಗಳನ್ನು ಹಾಕಿ ಗುಣಮಾಡಿದಳು. ಎಲ್ಲರೂ ಈಕೆಯನ್ನು ಈಕೆ ಮಾಡಿದ ಧರ್ಮಕಾರ್ಯಕ್ಕೋಸ್ಕರ ಸ್ತೋತ್ರ ಮಾಡಿದರು. ಆದರೆ ಈಕೆಯ ಶತ್ರುಗಳೆಲ್ಲಾ ಇವಳು ಗಂಡುಬೀರಿ ಎಂದು ಮನಸ್ಸುಬಂದಂತೆ ದೂಷಿಸಿದರು. ಆದರೂ ಅವರಲ್ಲಿ ಅನೇಕರು ಇಷ್ಟು ಮಟ್ಟಿಗೆ ಲೋಕಹಿತ ಚಿಂತನೆಯು ಇರುವದು ಅಪೂರ್ವವೆಂಬದಾಗಿ ಒಪ್ಪಿಕೊಂಡರು. ವಿದ್ಯಾವಂತರು ಬಡವರಾಗಿದ್ದರೆ ಪ್ರತ್ಯುಪಕಾರದೃಷ್ಟಿಯಿಂದ ಹೀಗೆಮಾಡುವರೆಂತಲೂ ಐಶ್ವರ್ಯವಂತರು ಹೀಗೆಮಾಡುವದಿಲ್ಲವೆಂತಲೂ ಕೆಲವರು ಹೇಳುತ್ತಾರೆ. ಸದ್ಗುಣವುಳ್ಳವರು ಬಡವರಾದರೂ ಭಾಗ್ಯವಂತರಾದರೂ ಒಂದೇವಿಧವಾಗಿರುವರು. ೧೮೭೦ನೇ ಇಸವಿಯಲ್ಲಿ ಫ್ರಾನ್ಸನವರಿಗೂ ಇಂಗ್ಲಿಷನವರಿಗೂ ಯುದ್ಧವಾಯಿತು. ಆಗ ಯುದ್ಧದಲ್ಲಿ ೫೪ನೇ ಇಸವಿಗಿಂತಲೂ ಹೆಚ್ಚಾಗಿ ಅನೇಕರು ಗಾಯತಗಲಿ ಬಿದ್ದರು. ಆಗ ವಿದ್ಯಾವಂತರಾದ ಸ್ತ್ರೀಯರು ಈ ಜನಗಳ ಪೋಷಣೆಗಾಗಿ ಯುದ್ಧರಂಗವನ್ನು ಪ್ರವೇಶಿಸಿದರು. ಈ ಜನಗಳ ಜೊತೆಯಲ್ಲಿ ಪರಹಿತವೇ ಮುಖ್ಯವಾಗಿ

ಯುಳ್ಳ ನಮ್ಮ ಇಂಡಿಯಾ ಚಕ್ರವರ್ತಿನಿಯವರ ಮಗಳಾದ ಪ್ರಿನ್ಸೆಸ್ ಆಲಿಸ್ ಎಂಬಾಕೆಯು ತಾನುಮಾಡಿದ ಚಿಕಿತ್ಸೆಗಳಿಂದ ಮೇಲೆ ಹೇಳಿದ ನೈಟಿಂಗೇಲ್ ಎಂಬಾಕೆಗಿಂತಲೂ ಹೆಚ್ಚಾದ ಕೀರ್ತಿಯನ್ನು ಸಂಪಾದಿಸಿದಳು. ಲೋಕದಲ್ಲಿ ಸಕಲಧರ್ಮಗಳಿಗೂ ಕಾರಣಭೂತವಾದದ್ದು ಜ್ಞಾನ. ಅದಕ್ಕೆ ಕಾರಣಭೂತವಾದದ್ದು ವಿದ್ಯೆ. ಆ ವಿದ್ಯೆಯನ್ನು ಉಪೇಕ್ಷೆಮಾಡತಕ್ಕವರು ಪಶುಗಳಿಗಿಂತಲೂ ಕಡೆ. ಯಾಕೆಂದರೆ, ಪಶುಗಳು ಅನೇಕ ವಿಧಗಳಲ್ಲಿ ಲೋಕಕ್ಕೆ ಹಿತವನ್ನು ಮಾಡುತ್ತವೆ. ಸದ್ವಿದ್ಯಾಭ್ಯಾಸವನ್ನು ಮಾಡಿ ಒಳ್ಳೇ ಜ್ಞಾನವನ್ನು ಪಡೆದು ಲೋಕಕ್ಕೆ ಹಿತವನ್ನುಮಾಡದೆ ಇರತಕ್ಕವರು ಈ ಪಶುಗಳಷ್ಟು ಉಪಕಾರವನ್ನು ಕೂಡ ಮಾಡಲಾರರು. ಇವರು ಒಂದು ವೇಳೆ ದುರ್ವ್ಯಾಪಾರದಲ್ಲಿ ಪ್ರವರ್ತಕರಾದರೆ ಲೋಕಕಂಟಕರಾಗುವರು. ಆದದರಿಂದ ಸ್ತ್ರೀಯರಿಗೆ ಶಾಸ್ತ್ರವಿದ್ಯಾಭ್ಯಾಸ ಮಾಡಿಸುವದರಿಂದ ಬಹಳ ಪ್ರಯೋಜನವುಂಟು.

ಸ್ತ್ರೀಯರು ತಿಳಿದುಬೇಕಾದ ಶಾಸ್ತ್ರಗಳು ಯಾವವೆಂದರೆ :– ಮೊದಲನೇದು ಆರೋಗ್ಯ ಶಾಸ್ತ್ರ.– ಮನೆಯವರೆಲ್ಲಾ ಆರೋಗ್ಯವಾಗಿ ಇರಬೇಕಾದರೆ ಅದರ ಮಾರ್ಗಗಳನ್ನೆಲ್ಲಾ ಸ್ತ್ರೀಯರು ತಿಳಿದು ಇರಬೇಕಾದದ್ದು ಆವಶ್ಯಕವಾದದರಿಂದ ಈ ಶಾಸ್ತ್ರವು ಬಹಳ ಮುಖ್ಯವಾದದ್ದು. ಎರಡನೇದು ವೈದ್ಯ ಶಾಸ್ತ್ರ.– ಆರೋಗ್ಯ ಶಾಸ್ತ್ರವನ್ನು ಚನ್ನಾಗಿ ತಿಳಿದು ಅದನ್ನು ಆಚರಣೆಗೆ ತರುವದರಿಂದ ಪ್ರಾಯಶಃ ರೋಗಬರದಹಾಗೆ ಮಾಡಿಕೊಳ್ಳಬಹುದು; ಆದಾಗ್ಯೂ ಕಾರಣಾಂತರಗಳಿಂದ ರೋಗವು ಪ್ರಾಪ್ತವಾಗುವದಾದ್ದರಿಂದ ಅದಕ್ಕೆ ತಕ್ಕ ಚಿಕಿತ್ಸೆಗಳನ್ನು ಮಾಡಿಕೊಳ್ಳುವದಕ್ಕೆ ವೈದ್ಯಶಾಸ್ತ್ರ ಓದಬೇಕು. ಮೂರನೇದು ಮಕ್ಕಳ ಪೋಷಣೆ.– ಲೋಕದಲ್ಲಿ ಜನರು ಪಶುಪಕ್ಷಿಮೃಗಾದಿಗಳನ್ನು ಸಾಕುವದರಲ್ಲಿ ಬಹಳ ಜಾಗರೂಕರಾಗಿರುವರು; ಗಿಣಿ ಮುಂತಾದವುಗಳಿಗೆ ಮಾತು ಕಲಿಸಬೇಕೆಂಬ ಉದ್ದೇಶದಿಂದ ಅತ್ಯಂತ ಆದರವನ್ನು ತೋರಿಸುವರು. ಆದರೆ ಇವರು ಮಕ್ಕಳನ್ನು ಪೋಷಿಸಿ ಅವರಿಗೆ ಸರಿಯಾದ ವಿದ್ಯಾಭ್ಯಾಸ ಮಾಡಿಸತಕ್ಕ ವಿಷಯದಲ್ಲಿ ಅಜಾಗರೂಕರಾಗಿರುವರು. ಈ

ಕದ್ದು ಮದುವೇ ಮಾಡುತ್ತೇನೆ, ಮತ್ತೆ ಬೇಕಾದರೆ ಕೊಲ್ಲು.

ವಿಷಯವನ್ನು ಚನ್ನಾಗಿ ಆಲೋಚಿಸಿ ಅವರಲ್ಲಿರತಕ್ಕ ಜ್ಞಾನವನ್ನು ಪಡೆಯುವದು ಬಹಳ ಮುಖ್ಯವಾದದ್ದು.

ವಿದ್ಯಾವ್ಯಾಸಂಗ ಮಾಡುವದರಿಂದ ಸ್ತ್ರೀಯರಿಗೆ ಆರೋಗ್ಯ ತಪ್ಪುವದೆಂದು ಕೆಲವರು ಹೇಳುವರು. ಸೋಮಾರಿತನಕ್ಕಿಂತಲೂ ಹೆಚ್ಚಾಗಿ ಯಾವದೂ ಆರೋಗ್ಯವನ್ನು ಕೆಡಿಸಲಾರದು. ಬೀಗದ ಕೈಗಳನ್ನು ಉಪಯೋಗಿಸುತ್ತಲೇ ಇದ್ದರೆ ಅವು ಪ್ರಕಾಶವಾಗಿ ಇರುವವು; ಸುಮ್ಮನೆ ಒಂದು ಕಡೆ ಹಾಕಿ ಇದ್ದರೆ ತುಕ್ಕು ಹಿಡಿಯುವವು. ಹಾಗೆಯೇ ಶರೀರಕ್ಕೆ ಕೆಲಸಮಾಡುವದರಿಂದಲೂ ಬುದ್ಧಿಗೆ ವ್ಯಾಸಂಗದಿಂದಲೂ ಶಕ್ತಿಯುಂಟಾಗುವದು. ಕೆಲಸವೂ ವ್ಯಾಸಂಗವೂ ಎರಡೂ ಇಲ್ಲದೆ ಇರತಕ್ಕವರು ಶಕ್ತಿಹೀನರೂ ಬುದ್ಧಿಹೀನರೂ ಆಗುವರು. ಆದದರಿಂದ ಶರೀರಕ್ಕೆ ಬಲ ಬರುವದಕ್ಕೋಸ್ಕರ ಆಹಾರವೂ ಕೆಲಸವೂ ಹ್ಯಾಗೆ ಅವಶ್ಯಕವಾದವುಗಳೋ, ಬುದ್ಧಿಗೆ ಶಕ್ತಿ ಬರುವದಕ್ಕೋಸ್ಕರ ವ್ಯಾಸಂಗವು ಅಷ್ಟು ಮುಖ್ಯವಾದದ್ದು. ಬಹುಕಾಲಕ್ಕೆ ಮುಂಚೆ ನಿಮ್ಮ ಸ್ತ್ರೀಯರೆಲ್ಲರೂ ಬಹಳ ವಿದ್ಯಾವಂತರಾಗಿ ಇದ್ದರು. ಈಚೆಗೆ ಅನೇಕ ಕಾರಣಗಳಿಂದ ಆ ವಿದ್ಯಾಪ್ರಾಚುರ್ಯವು ಕಡಿಮೆಯಾಯಿತು. ಈಗ ನಿಮ್ಮಲ್ಲಿ ಪುರುಷರೆಲ್ಲರೂ ವಿದ್ಯಾವಂತರೂ ಬುದ್ಧಿಶಾಲಿಗಳೂ ಆಗುತ್ತಾ ಬಂದಿರಿ, ಸ್ತ್ರೀಯರನ್ನೂ ವಿದ್ಯಾವಂತರನ್ನಾಗಿ ಮಾಡಬೇಕೆಂದು ಪ್ರಯತ್ನಪಡುತ್ತಲಿದ್ದೀರಿ. ಈ ನಿಮ್ಮ ಪ್ರಯತ್ನಗಳಿಂದ ನಾನು ಸಂತುಷ್ಟಳಾದೆನು. ನಮ್ಮ ಆಚಾರ ವ್ಯವಹಾರ ನಾಗರೀಕಗಳಿಗೂ ನಿಮ್ಮ ಆಚಾರಾದಿಗಳಿಗೂ ಬಹಳ ತಾರತಮ್ಯವುಂಟು. ನಾವು ಒಬ್ಬರ ಸಂಪ್ರದಾಯಗಳನ್ನು ಒಬ್ಬರು ಅನುಸರಿಸುವದರಿಂದ ಅಣಕಿಸಿದ ಹಾಗೆ ಆಗುವದೇ ಹೊರ್ತು ಮತ್ತೆ ಬೇರೆ ಇಲ್ಲ. ಲೋಕದಲ್ಲಿ ಸಕಲರೂ ವೃದ್ಧಿಯಾಗಬೇಕಾದರೆ ಜೇನುನೊಣಗಳು ಸಕಲ ಪುಷ್ಪಗಳಿಂದಲೂ ಮಕರಂದವನ್ನು ಮಾತ್ರವೇ ತೆಗದುಕೊಂಡು ಹೋಗುವ ಹಾಗೆ ಸಕಲ ಜನಾಂಗಗಳೂ ಇತರ ಜನಾಂಗಗಳಲ್ಲಿರುವ ವಿವೇಕವನ್ನು ಅನುಸರಿಸುತ್ತಾ ಅವಿವೇಕಗಳನ್ನು ಬಿಟ್ಟುಬಿಡುತ್ತಾ ಇರಬೇಕು. ಲೋಕದಲ್ಲಿ ಅನೇಕ ಜನಾಂಗಗಳು ಒಂದೇ ವಿಧವಾಗಿ ಇದ್ದು

ಕಪ್ಪೆ ಕೂಗಿ ಮಳೆ ಬರಿಸಿದ ಹಾಗೆ.

ಕೊಂಚ ಪಾಂಡಿತ್ಯದಲ್ಲಿಯೂ ನಾಗರಿಕತೆಯಲ್ಲಿಯೂ ಸ್ವಲ್ಪ ಸ್ವಲ್ಪವಾಗಿ ವೃದ್ಧಿಯಾಗುತ್ತಾರೆ. ಇನ್ನು ಕೆಲವು ಜನಾಂಗಗಳು ಅತ್ಯಂತ ವೇಗದಿಂದ ವೃದ್ಧಿಯಾಗುತ್ತಾರೆ. ಹಿಂದೂ ಸ್ತ್ರೀ ಪುರುಷರ ವಿದ್ಯಾಭಿವೃದ್ಧಿಯ ವೇಗವನ್ನು ನೋಡಿದರೆ ಇವರು ಸ್ವಲ್ಪದಲ್ಲಿಯೇ ಲೋಕವನ್ನೆಲ್ಲಾ ಆಶ್ಚರ್ಯಪಡಿಸುವಂತೆ ತೋರುತ್ತದೆ. ಈಗಿನ ಹಿಂದೂ ಸ್ತ್ರೀಯರು ವಿಶೇಷ ವಿದ್ಯಾವಂತರಾಗಿ ಇಲ್ಲದಿದ್ದಾಗ್ಯೂ ಪ್ರಾಯಶಃ ಬಹಳ ಗುಣಶಾಲಿಗಳಾಗಿ ಇದ್ದಾರೆ. ಇವರು ಸಕಲಶಾಸ್ತ್ರಜ್ಞರಾಗಿ ಅದರಿಂದ ಹುಟ್ಟುವ ಸಕಲ ಸದ್ಗುಣಗಳನ್ನು ಪಡೆವರೆ ಇವರಿಗೆ ಸಮಾನರಾದ ಸ್ತ್ರೀಯರು ಯಾವ ದೇಶದಲ್ಲಿ ತಾನೇ ಸಿಕ್ಕಾರು? ಲೋಕದಲ್ಲಿ ಎಲ್ಲರೂ ಆಚಂದ್ರಾರ್ಕವಾಗಿ ಯಶಸ್ಸು ಇರಬೇಕೆಂದು ಕೆಲಸಗಳನ್ನು ಮಾಡುವರು. ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸಿ ಲೋಕೋಪಕಾರ ಮಾಡುವದಕ್ಕಿಂತ ಹೆಚ್ಚಾದದ್ದು ಯಾವದೂ ಅಲ್ಲ. ಈ ವಿಷಯದಲ್ಲಿ ಇಷ್ಟು ಜಾಗ್ರತೆಯಾಗಿ ಪಲೋನ್ಮುಖವಾಗುವಹಾಗೆ ನೀವು ಮಾಡಿರತಕ್ಕ ಪ್ರಯತ್ನಗಳಿಂದ ನಾನು ಅತ್ಯಂತ ಸಂತುಷ್ಟಳಾದೆನು.

ಹೀಗೆ ಮಿಸೆಸ್ ಗ್ರ್ಯಾಂಡಫ್ ಎಂಬಾಕೆಯು ಹೇಳಿದ ಮೇಲೆ ವಿಜಯನಗರದ ಮಹಾರಾಜರವರು ಇನ್ನುಮೇಲೆ ಮಿಡಲ್‌ಸ್ಕೂಲ್ ಪರೀಕ್ಷೆಯನ್ನು ಕೊಡುವದಕ್ಕೂ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಕೊಡುವದಕ್ಕೂ ಪ್ರೋತ್ಸಾಹಪಡಿಸಬೇಕೆಂಬದಾಗಿಯೂ, ಅಂಥಾ ಪರೀಕ್ಷೆಯನ್ನು ಕೊಡುವದಕ್ಕೆ ಒಪ್ಪಿಕೊಂಡ ಬಾಲಕಿಗೆ ಮೂರುವರ್ಷಗಳ ವರೆಗೂ ೧೦ರಿಂದ ೨೦ ರೂಪಾಯಿವರೆಗೆ ಸ್ಕಾಲರ್‌ಷಿಪ್ ಕೊಡುತ್ತೇವೆಂಬದಾಗಿಯೂ, ಪರೀಕ್ಷೆ ಕೊಟ್ಟ ಕೂಡಲೆ ಹಾಗೆ ಪರೀಕ್ಷೆ ಕೊಟ್ಟ ಬಾಲಕಿಗೆ ಒಂದು ಚಿನ್ನದ ಮೆಡಲನ್ನೂ ೩೦೦ ರೂಪಾಯಿಯನ್ನೂ ಕೊಡುತ್ತೇವೆಂಬದಾಗಿಯೂ ಹೇಳಿದರು.

ಮೂ. ವಿ.—ನಮ್ಮ ಮೈಸೂರು ನಿವಾಸಿಗಳಾದ ಒಬ್ಬ ವಿದ್ವಾಂಸರು ಮೇಲೆ ಹೇಳಿದ ಮಾ॥ ರಾ॥ ಚಂಚಲರಾಯರ ಉಪನ್ಯಾಸದ ಮೇಲೆ ಕೆಲವು ಆಕ್ಷೇಪಣೆಗಳನ್ನು ಬರೆದು ಇರುತ್ತಾರೆ. ಸ್ಥಲ ಸಂಕೋಚವಾದ್ದರಿಂದ ಅದನ್ನು ಮುಂದಲ ಸಂಚಿಕೆಯಲ್ಲಿ ತಿಳಿಸುವೆವು.

೨. ವೈದ್ಯಶಾಸ್ತ್ರ

ವಿಷಮಜ್ವರ ಅಥವಾ ಸನ್ನಿಪಾತಜ್ವರವು ಬಂದಾಗ ಸಾಧಾರಣವಾಗಿ ಶರೀರವು ಯಾವಾಗಲೂ ಬಿಸಿಯಾಗಿಯೇ ಇರುವದು. ಸಾಯಂಕಾಲದಲ್ಲಿ ಈ ಶಾಖವು ಹೆಚ್ಚುವದು. ಈ ಜ್ವರವು ಬಂದ ೫| ದಿನಗಳ ಮೇಲೆ ೮ ದಿನಗಳೊಳಗಾಗಿ ಮೈಮೇಲೆಲ್ಲಾ ಸೊಳ್ಳೆ ಕಡಿದಹಾಗೆ ದದ್ದುಗಳು ಕಾಣಬರುವವು; ಶರೀರವು ಕೃಶವಾಗಿ ವಿಕಾರವಾಗಿ ಕಾಣುವದು. ಈ ಜ್ವರ ಬಂದವರಿಗೆ ತಲೆ ತಿರುಗುವದು ತೂಗಡಿಸುವದು ಮೊದಲಾದ ಅವಗುಣಗಳು ಪ್ರಾಪ್ತವಾದರೆ ಬದುಕುವದು ಕಷ್ಟ. ಈ ಜ್ವರವು ೧೪—೨೧ ದಿನಗಳ ತನಕ ಇರುವವು; ಆದರೆ ನಿಂತಮೇಲೆ ಪುನಃ ಬರುವದಿಲ್ಲ.

ಅತಿಸಾರ ವಿಷಮಜ್ವರವು ಇದಕ್ಕಿಂತಲೂ ಕೆಟ್ಟದ್ದು. ಇದು ಬಂದಾಗ ಮೇಲೆಹೇಳಿದ ದದ್ದುಗಳು ಕಾಣುವದಕ್ಕೆ ೮—೧೨ ದಿನಗಳಾಗುವವು. ಈ ಜ್ವರಬಂದ ೧೫| ದಿನಗಳಮೇಲೆ ರೋಗಿಯ ಕತ್ತು, ಎದೆ, ಹೊಟ್ಟೆ, ಈ ಸ್ಥಳಗಳಲ್ಲಿ ಎಲ್ಲಾದರೂ ಒಂದು ಕಡೆ ಗುಳ್ಳೆಗಳು ಏಳುವವು. ಈ ಜ್ವರಬಂದವರಿಗೆ ರೋಗಿಯ ಸಣ್ಣಕರುಳು ಹುಣ್ಣಾಗಿ, ಭೇದಿಕಂಡು, ಮಲದೊಂದಿಗೆ ರಕ್ತ ಬೀಳುವದು. ಇದು ೩೦ ದಿನಗಳವರಿಗೂ ಇರುವದು.

ಜ್ವರಗಳಿಗೆ ಮಾಡುವ ಸಾಧಾರಣ ಚಿಕಿತ್ಸೆಯು ವಿಷಮಜ್ವರಕ್ಕೆ ಉಪಯೋಗಿಸಬಾರದು. ಒಳ್ಳೆ ಗಾಳಿ ಬೀಸುವ ಸ್ಥಳದಲ್ಲಿ ಸುಣ್ಣದ ನೀರನ್ನು ಚಿಮಿಕಿಸಿ ರೋಗಿಯನ್ನು ಅಲ್ಲಿ ಇಡಬೇಕು; ಜನರ ಸಂದಣಿ ಇರಬಾರದು; ಹೆಚ್ಚಾಗಿ ಔಷಧ ಕೊಡಬಾರದು. ೩ ದಿವಸ ಅಥವಾ ಜ್ವರವು ಶಮನವಾಗುವವರೆಗೂ ೨ ತಾಸಿಗೆ ೧ ಸಾರಿ ಕ್ವಿನಾದಲ್ಲಿ ೧೦ ಗೋಧಿಯತೂಕ ಕೊಡಬಹುದು. ಭೇದಿ, ರಕ್ತಭೇದಿಗಳು ಆಗುತ್ತಾ ಇದ್ದರೂ ಕ್ವಿನಾ ಕೊಡಬಹುದು. ಕ್ವಿನಾಕ್ಕೆ ಬದಲಾಗಿ ಬೇವಿನ ಚಕ್ಕೆಯ ಚೂರ್ಣವನ್ನು ಕೊಡಬಹುದು. ಪೂರ್ವದಲ್ಲಿ ಹೇಳಿದಂತೆ ಸ್ಪಂಜನ್ನು ಬಿಸಿನೀರಿನಲ್ಲಿ ಅದ್ದಿ ಮೈಮೇಲೆ ಸವರುತ್ತಾ ಇರಬೇಕು; ಸುಲಭವಾಗಿ ಜೀರ್ಣಿಸತಕ್ಕ ಆಹಾರ

ವನ್ನೂ ದಾಹಕ್ಕೆ ಗಂಜೀನೀರನ್ನೂ ಕೊಡುವದು. ನಿದ್ರೆಬಾರದೆ ಇದ್ದರೆ ಅಫೀಂಕೊಡುವದು. ಕೆಮ್ಮಿಗೆ ಸಾಸಿವೆಯನ್ನು ಅರೆದು ಎದೆಗೆ ಹಾಕಬಹುದು. ರಸಗಂಧಕಪಾಷಾಣಗಳನ್ನು ಪ್ರಯೋಗಿಸಬಾರದು.

ಅತಿಸಾರ ವಿಷಮಜ್ವರಕ್ಕೂ ಮೇಲೆ ಹೇಳಿದ ಚಿಕಿತ್ಸೆಯನ್ನೇಮಾಡಿ ಭೇದಿಕಟ್ಟುವದಕ್ಕೆ ಕಾಚು, ಮಾಯಿಫಳ ಇವುಗಳಲ್ಲಿ ಒಂದಕ್ಕೆ ಅಫೀಂ ಸೇರಿಸಿ ಕೊಡಬಹುದು. ಜ್ವರಬಿಟ್ಟು ದುರ್ಬಲವಾಗಿರುವಾಗ ಸೊಜೇವಿನ ಕಷಾಯವನ್ನು ಕೊಟ್ಟರೆ ದೇಹಕ್ಕೆ ದಾರ್ಢ್ಯಬರುವದು.

ಜ್ವರಬರುವದಕ್ಕೆ ಕಾರಣಗಳು.—ಚಿಕ್ಕವಯಸ್ಸಿನಲ್ಲಿ ದೊಡ್ಡಸಿಡುಬು ಸೀತಾಳಸಿಡುಬು ಮುಂತಾದವುಗಳು ಬರುವಕಾಲದಲ್ಲಿ ಜ್ವರಬರುವದುಂಟು. ಶ್ಲೇಷ್ಮದೋಷ ಜ್ವರಗಳು ೩೦ ವರ್ಷದಮೇಲೆ ವಯಸ್ಸುಳ್ಳವರಿಗೇ ಹೊರ್ತು ಅದಕ್ಕೆ ಚಿಕ್ಕವರಿಗೆ ಬರುವದು ಅಪೂರ್ವ. ಜ್ವರಬಂದು ಸ್ವಲ್ಪ ವಾಸಿಯಾಗಿ ಪುನಃ ಮರ್ಕಳಿಸುವದುಂಟು. ಆಹಾರ ವ್ಯವಹಾರಗಳಲ್ಲಿ ಕಟ್ಟುನಿಟ್ಟಾಗಿ ಇದ್ದರೆ ಇದರಿಂದ ಏನೂ ಬಾಧಕವಿರುವದಿಲ್ಲ. ಸಿಡುಬು ಹಾಕಿಸದೆ ಇದ್ದವರಿಗೆ ಪೂರ್ವವಯಸ್ಸಿನಲ್ಲಿಯಾಗಲೀ ಅಪರ ವಯಸ್ಸಿನಲ್ಲಾಗಲೀ ಸಿಡುಬು ಏಳುವದುಂಟು. ಹಾಗೆ ಸಿಡುಬು ಎದ್ದವರಿಗೂ ಕೂಡ ಜ್ವರಬರುವದು. ಅನೇಕರು ತಮ್ಮತಮ್ಮ ಉದ್ಯೋಗಗಳನ್ನು ಮಾಡುವದರಿಂದ ಜ್ವರಪೀಡಿತರಾಗುವರು. ಹ್ಯಾಗಂದರೆ,—ಮಗ್ಗನೇಯುವವರೂ ಚಿತ್ರಗಾರರೂ ಬಟ್ಟೆಗಳಿಗೆ ಬಣ್ಣ ಹಾಕುವವರೂ ನಾನಾವಿಧವಾದ ಬಣ್ಣಗಳನ್ನು ಮುಟ್ಟಿ ಕೆಲಸಮಾಡುವದರಿಂದ ಆ ಬಣ್ಣದಲ್ಲಿ ಸೇರಿದ ಕೆಲವು ವಿಷಪದಾರ್ಥಗಳು ಅವರ ಉಚ್ಛ್ವಾಸವಾಯುವಿನೊಡನೆ ಅವರ ಶರೀರಗಳನ್ನು ಸೇರಿ ಆರೋಗ್ಯವನ್ನು ಕೆಡಿಸಿ ಜ್ವರಬರುವಹಾಗೆ ಮಾಡುವವು. ಗಿಡಗಳಿಂದ ತುಂಬಿದ ಪ್ರದೇಶಗಳಲ್ಲಿ ವಾಸಮಾಡುವವರಿಗೆ ಅಲ್ಲಿನ ಸೊಪ್ಪುಸೆದೆಗಳೆಲ್ಲಾ ಕೊಳೆತು ವಿಷಗಾಳಿಯಾಗಿ ಜಂಗಲ್ ಫೀವರ್ ಎಂಬ ಒಂದು ವಿಧವಾದ ಜ್ವರವನ್ನುಂಟು ಮಾಡುವವು. ಇದಲ್ಲದೆ ಮನೇಹತ್ತರಲೇ ತಿಪ್ಪೆ, ಬಚ್ಚಲು, ಪಾಯಖಾನಿಗುಂಡಿ ಮುಂತಾದವುಗಳಿದ್ದು ಅವು ಶುದ್ಧವಾಗಿಲ್ಲದಿರುವದರಿಂದ ಅವುಗಳಲ್ಲಿ

ಕಮ್ಮಾರಸಾಲೆಗೆ ಸೂಜಿ ಕೊಂಡು ಹೋದ ಹಾಗೆ.

ಹೆಚ್ಚಾಗಿ ಜನಭರಿತವಾದ ಊರುಗಳಲ್ಲಿ ಹುಟ್ಟುವ ವಿಷಪರಮಾಣುಗಳು ಗಾಳಿಯಲ್ಲಿ ಸೇರುವದರಿಂದಲೂ, ಮನೆಗಳಲ್ಲಿ ಸಾಕಷ್ಟು ವಾಯುಸಂಚಾರವಿರುವಹಾಗೆ ಕಿಟಕಿಗಳು ಇಲ್ಲದೆ ಇರುವದರಿಂದಲೂ ಜನರು ಜ್ವರಪೀಡಿತರಾಗುವರು. ಹೀಗೆ ನಾನಾಕಾರಣಗಳಿಂದ ಜ್ವರಪೀಡಿತರಾದವರಿಗೆ ನಿರ್ಮಲವಾದ ಗಾಳಿಯೂ ನೀರೂ ಒಳ್ಳೇ ಆಹಾರವೂ ಲಭಿಸುವಹಾಗೆ ತಕ್ಕ ಏರ್ಪಾಡುಗಳನ್ನು ಮಾಡಿ ಚಿಕಿತ್ಸೆಯನ್ನು ಮಾಡಿದರೆ ರೋಗವು ಸುಲಭವಾಗಿ ನಿವರ್ತಿಯಾಗುವದು. ದಾರಿದ್ರ್ಯದಿಂದಲೇ ಆಗಲೀ ಅಜ್ಞಾನದಿಂದಲೇ ಆಗಲೀ ಈ ವಿಷಯದಲ್ಲಿ ಏರ್ಪಾಡುಗಳನ್ನು ಮಾಡದೆ ಹೋದರೆ ಜ್ವರವು ಪ್ರಬಲವಾಗಿ ಪ್ರಮಾದಸಂಭವಿಸುವದು. ಹೀಗೆ ಜ್ವರದಿಂದ ಪೀಡಿತರಾದವರ ಜಲಮಲಗಳಿಂದ ಪರಮಾಣುಗಳು ವಾಯುವಿನಲ್ಲಿ ಸೇರಿ ಇತರ ಜನಗಳಿಗೂ ಬಾಧಕವನ್ನು ಉಂಟುಮಾಡುವವು. ಈ ರೀತಿಯಲ್ಲಿ ಅನೇಕ ರೋಗಗಳು ಬಡವರಲ್ಲಿ ಮೊದಲು ಹುಟ್ಟಿ ಆ ಮೇಲೆ ಐಶ್ವರ್ಯವಂತರನ್ನು ಕೂಡ ಪೀಡಿಸುವವು. ಆದ್ದರಿಂದ ಯಾರಿಗಾಗಲೀ ರೋಗ ಬರದಹಾಗೆ ತಕ್ಕ ಏರ್ಪಾಡುಗಳನ್ನು ಮಾಡತಕ್ಕದ್ದು ಎಲ್ಲರಿಗೂ ಸೇರಿ ಇರುತ್ತದೆ.

---

೩. ಆರೋಗ್ಯವಿಚಾರ. (ಬಟ್ಟೆಗಳ ಶಾಖ ಮತ್ತು ಬಣ್ಣ.)

ಉಡುಪುಗಳಲ್ಲೆಲ್ಲಾ ಬಿಳೀ ಬಣ್ಣದವುಗಳೇ ಉತ್ತಮವಾದವುಗಳು. ಬೂದು, ಹಳದಿ, ಗುಲಾಬಿ, ನೀಲಿ, ಕಪ್ಪು ಬಣ್ಣಗಳು ಬಂದಕ್ಕಿಂತ ಮತ್ತೊಂದು ಕನಿಷ್ಟವಾದವುಗಳು. ಬಿಳೀಬಟ್ಟೆಗಳನ್ನು ಬಿಸಿಲಿನ ಶಾಖವು ಸುಲಭವಾಗಿ ಪ್ರವೇಶಿಸಬಾರದು ; ಕರೀ ಬಟ್ಟೆಗಳನ್ನು ಸುಲಭವಾಗಿ ಪ್ರವೇಶಿಸುವದು. ಬೆಂಜಮಿನ್ ಫ್ರಾಂಕ್ಲಿನ್ ಎಂಬ ಒಬ್ಬ ವಿದ್ವಾಂಸನು ಇದನ್ನು ಒಂದು ಉಪಾಯದಿಂದ ಕಂಡು ಹಿಡಿದನು. ಏನಂದರೆ :—ತೂಕದಲ್ಲಿಯೂ ಗಾತ್ರದಲ್ಲಿಯೂ ಸಮನಾದ ಎರಡು ಹಿಮದ ಗಡ್ಡೆಗಳನ್ನು ತೆಗದುಕೊಂಡು ಕರೀಬಟ್ಟೆಯಲ್ಲಿ ಒಂದನ್ನೂ ಬಿಳೀಬಟ್ಟೆಯಲ್ಲಿ ಒಂದನ್ನೂ ಕಟ್ಟಿ ಬಿಸಿಲಿನಲ್ಲಿ ಇಟ್ಟನು.

ಕರೀಬಟ್ಟೆಯಲ್ಲಿ ಇದ್ದದ್ದು ಬೇಗ ಕರಗಿ ಹೋಯಿತು. ಆದಪರಿಂದಲೇ ಬಿಳೀಬಟ್ಟೆಯನ್ನು ಉಟ್ಟರೆ ತಣ್ಣಗಿರುವದು ; ಕರೀದನ್ನು ಉಟ್ಟರೆ ಬಿಸಿಲಿನ ಝಳವು ಕಾಣಿಸುವದು. ಈ ಕರೀಬಟ್ಟೆಗಳು ಬಿಳಿಯವುಗಳಿಗಿಂತ ಶಾಖವನ್ನು ಜಾಗ್ರತೆಯಾಗಿ ಎಳೆದು ಕೊಳ್ಳುವದು ಮಾತ್ರವಲ್ಲದೆ ಅದನ್ನು ಜಾಗ್ರತೆಯಾಗಿ ಬಿಟ್ಟುಬಿಡುವವು. ಅನೇಕರು ಬೇಸಿಗೆಯಲ್ಲಿ ಬಿಳೀಬಟ್ಟೆಗಳನ್ನೂ ಛಳಿಗಾಲದಲ್ಲಿ ಕರಿಯವುಗಳನ್ನೂ ತೊಡುವದುಂಟು. ಬೇಸಿಗೆಯಲ್ಲಿ ಬಿಳೀಬಟ್ಟೆಗಳನ್ನು ಹಾಕಿಕೊಳ್ಳುವದರಿಂದ ಶಾಖವು ಕಡಿಮೆಯಾಗುವದು ಸರಿಯೆ. ಆದರೆ ಛಳಿಗಾಲದಲ್ಲಿ ಕರೀಬಟ್ಟೆಗಳನ್ನು ಹಾಕಿಕೊಂಡರೆ ಶರೀರಶಾಖವು ಕಡಿಮೆಯಾಗಿ ಅನೇಕ ರೋಗಗಳಿಗೆ ಆಸ್ಪದ ವಾಗುವದು. ಅನೇಕ ಶೀತ ದೇಶಗಳಲ್ಲಿ ಛಳಿಗಾಲವು ಬಂದ ಕೂಡಲೆ ಮೃಗಗಳಿಗೆ ಕೂಡ ಬಿಳೀತುಪಟಗಳು ಹುಟ್ಟುವವು. ಹೀಗೆ ಶರೀರದ ಶಾಖವನ್ನು ಆಚೆಗೆ ಬಿಡದೆಯೂ ಹೊರಗಿನ ಶಾಖವನ್ನು ಶರೀರಕ್ಕೆ ಸೇರಿಸದೆಯೂ ಇರುವವುಗಳು ಬಿಳೀ ಬಟ್ಟೆಗಳಾಗಿರುವದನ್ನು ನೋಡಿದರೆ ಇದು ದೇವರ ನಿಯಾಮಕವೆಂದೇ ತಿಳಿಯಬರುತ್ತದೆ. ಛಳಿಗಾಲಕ್ಕೆ ಚರ್ಮವುತ್ತು ಇಂಡಿಯಾರಬ್ಬರಿನ ಉಡುಪುಗಳು ಅತ್ಯಂತ ಉತ್ತಮವಾದವುಗಳು. ತುಪಟದ ಬಟ್ಟೆಗಳು ಇವುಗಳಿಗಿಂತ ಸ್ವಲ್ಪ ಕನಿಷ್ಟವಾದವುಗಳು. ಹತ್ತಿ ಮತ್ತು ನಾರಿನ ಬಟ್ಟೆಗಳು ಬಹಳ ಕನಿಷ್ಟವಾದವುಗಳು. ತುಪಟದ ಬಟ್ಟೆಗಳು ಮೈಬೆವರನ್ನು ಹೀರಿಕೊಂಡು ಶರೀರದ ಶಾಖಕ್ಕೆ ಲೋಪಮಾಡುವದಿಲ್ಲ. ಬಟ್ಟೆಗಳು ಅಂಗಾಂಗಗಳನ್ನು ಸುಲಭವಾಗಿ ಅಲ್ಲಾಡಿಸುವಷ್ಟು ಸಡಿಲವಾಗಿ ಇರಬೇಕು. ಉಡುಪಿನ ಭಾರವೆಲ್ಲಾ ಭುಜಗಳಮೇಲೆ ಇರಬೇಕೇ ಹೊರ್ತು ಮತ್ಯಾವದಕ್ಕೂ ಇರಕೂಡದು. ನಮ್ಮ ದೇಶದಲ್ಲಿ ಸ್ತ್ರೀ ಪುರುಷರಿಗೆ ಸಾಮಾನ್ಯವಾಗಿ ಅರ್ಧ ಉಡುಪಿನ ಭಾರವೆಲ್ಲಾ ನಡುವಿನ ಮೇಲೆ ಬೀಳುವದು. ಈ ಬಟ್ಟೆಗಳನ್ನು ಬಲವಾಗಿ ಬಿಗಿ ಯೋಣದರಿಂದ ಮೊದಲೇ ಕೆಟ್ಟನಡುವನ್ನು ಡಾಬು ಮುಂತಾದವುಗಳನ್ನು ಹಾಕಿಕೊಂಡು ಇನ್ನೂ ಕೆಡಿಸಿಕೊಳ್ಳುವರು. ಹೀಗೆ ಬಿಗಿದ ಪ್ರದೇಶಗಳಿಗೆ ರಕ್ತಸಂಚಾರವಿಲ್ಲದೆ ಹೋಗುವದರಿಂದ ಆಪ್ರದೇಶಗಳೆಲ್ಲಾ

ಕರಕರೇ ದೇವರಿಗೆ ಕಾಯಿಕಾಯಿ ಹಣ್ಣು.

ವಿಕಾರವಾಗುವವು. ಕವಿಗಳೆಲ್ಲಾ ನಡುವು ಕೃಶವಾಗಿ ಇರಬೇಕೆಂದು ವರ್ಣಿಸಿದ್ದೇ ಈ ವಿರೂಪಕ್ಕೆ ಕಾರಣವಾಯಿತು.

೪. ಮಕ್ಕಳ ಪೋಷಣೆ.

ಅನೇಕರು ಜನನವಾದಕೂಡಲೆ ಮಕ್ಕಳನ್ನು ತಣ್ಣೀರಿನಿಂದ ತೊಳೆಯುವರು. ಇದರಿಂದ ಅವರು ಮಗುವಿಗೆ ಬಲಬರುವದೆಂದು ತಿಳಿದುಕೊಳ್ಳುವರು. ಇದರಿಂದ ಬಾಧಕವೇ ಹೊರ್ತು ಸಾಧಕವೇನೂ ಇಲ್ಲ. ತಣ್ಣೀರಿನಿಂದ ತೊಳೆದರೆ ಕಣ್ಣು ಕೆರಳುವದು, ನೆಗಡಿ ಬರುವದು, ಕೆಮ್ಮು ಬರುವದು, ಮತ್ತು ಭೇದಿಯಾಗುವದು. ಬಹಳ ಬಿಸಿಯಾದ ನೀರಿನಿಂದ ತೊಳೆದರೂ ಹೀಗೆಯೇ ಮಗುವು ದುರ್ಬಲವುಳ್ಳದ್ದಾಗಿ ರೋಗವು ಬರುವದು. ಇಂಥಾ ಮಕ್ಕಳನ್ನು ತೊಳೆಯಬೇಕಾದರೆ ಮಳೇನೀರನ್ನು ಹಿಡಿದು ಅದನ್ನು ಉಗುರು ಬೆಚ್ಚಗೆಮಾಡಿ ತೊಳೆಯಬೇಕು. ಬೇಸಿಗೆಯಲ್ಲಿ ಜನನವಾದ ಮಕ್ಕಳನ್ನು ಕಾದು ಆರಿದ ನೀರಿನಿಂದ ತೊಳೆಯಬೇಕು. ಚಳಿಗಾಲದಲ್ಲಿ ಹುಟ್ಟಿದ ಮಗುವನ್ನು ಸುಮಾರು ಬಿಸಿ ಯಾಗಿರತಕ್ಕ ನೀರಿನಲ್ಲಿ ತೊಳೆಯಬೇಕು. ತೊಳೆಯುವವರಲ್ಲಿ ಸೋಪಾಗಲೀ ಸೀಗೇಕಾಯನ್ನಾಗಲೀ ಹಾಕಿ ಉಜ್ಜಬೇಕು. ಉಜ್ಜುವಾಗ ಅದು ಕಣ್ಣಿಗೆ ಬೀಳದಂತೆ ನೋಡಿಕೊಳ್ಳಬೇಕು. ಮಕ್ಕಳಿಗೆ ಸ್ನಾನವು ಮುಖ್ಯವಾದದ್ದು. ಅದು ತಪ್ಪಿದರೆ ಮಕ್ಕಳು ಕೃಶವಾಗುವವು. ಉಜ್ಜುವಾಗ ಫ್ಲಾನಲ್‌ನಿಂದಲಾಗಲೀ ಸ್ಪಂಜ್‌ನಿಂದಲಾಗಲೀ ಉಜ್ಜಬೇಕು. ಇದರಲ್ಲಿ ಸ್ಪಂಜೇ ಉತ್ತಮವಾದದ್ದು.

ಮಕ್ಕಳು ಹುಟ್ಟಿದ ಕೂಡಲೆ ಮೈಮೇಲೆ ಹಿಟ್ಟಿನಹಾಗೆ ಕಲ್ಮಷವು ಹತ್ತಿಕೊಂಡಿರುವದು. ಆ ಕಲ್ಮಷವನ್ನು ತೆಗೆದು ಹಾಕಬೇಕಾದರೆ ಮೊದಲು ಒಳ್ಳೆ ಎಣ್ಣೆಯನ್ನು ಮೈಗೆ ಸವರಿ ಮೊದಲು ಸೀನೀರನ್ನು ಹಾಕಿ ಫ್ಲಾನಲ್‌ನಿಂದ ಉಜ್ಜಿ ಅನಂತರ ಸಬ್ಬು ಹಾಕಿದ ನೀರಿನಲ್ಲಿ ಸ್ಪಂಜನ್ನು ಅದ್ದಿಕೊಂಡು

ಆ ಕಲ್ಮಷವನ್ನು ತೆಗೆದುಹಾಕಬೇಕು. ಹಾಗೆ ಮಾಡದೆ ಅದನ್ನು ಬಿಟ್ಟು ಬಿಟ್ಟರೆ ಆ ಮೇಲೆ ವಿಷಬು ಮೊದಲಾದ ಚರ್ಮರೋಗಗಳೆಲ್ಲಾ ಬರುವವು.

ಪ್ರತಿದಿನವು ಪ್ರಾತಃಕಾಲದಲ್ಲಿ ಮಗುವಿಗೆ ತಲೆಗೂ ಮೈಗೂ ನೀರನ್ನು ಹಾಕಿ ಕಂಕುಳ ಸಂದಿ ಮುಂತಾದ ಯಾವ ಭಾಗದಲ್ಲಿಯೂ ಕೊಳೆಯಿಲ್ಲದಂತೆ ತೊಳೆದು, ಮೃದುವಾಗಿಯೂ ಶುದ್ಧವಾಗಿಯೂ ಇರತಕ್ಕ ಬಟ್ಟೆಗಳಲ್ಲಿ ಮಗುವಿಗೆ ಏನೂ ಹಿಂಸೆಯಾಗದಹಾಗೆ ಚನ್ನಾಗಿ ಒರಸಬೇಕು. ಸ್ನಾನವಾದಕೂಡಲೆ ಕಿವೀರಂಧ್ರಗಳನ್ನು ಸ್ವಲ್ಪವೂ ತ್ಯಾವವಿಲ್ಲದಹಾಗೆ ಒರಸಿ ಒಣಗಿಸಬೇಕು. ಹಾಗಿಲ್ಲದಿದ್ದರೆ ಕರ್ಣೇಂದ್ರಿಯಕ್ಕೆ ಬಾಧಕವಾಗುವದು.

ಸಾಯಂಕಾಲದ ಹೊತ್ತು ಮಕ್ಕಳಿಗೆ ಮೇಲೆ ಹೇಳಿದ ವಿಧಾನದಿಂದ ಕಂಠಸ್ನಾನವನ್ನು ಮಾಡಿಸಬೇಕು. ಮಕ್ಕಳು ಪಾಯಿಖಾನೆಗೆ ಹೋದಾಗೆಲ್ಲಾ ಬಿಸಿನೀರಿನಿಂದಲೂ ಸಾಬೂನಿನಿಂದಲೂ ತೊಳೆಯಬೇಕು. ಎರಡು ತಿಂಗಳಾದಮೇಲೆ ಮಗುವು ದುರ್ಬಲವಾಗಿದ್ದ ಪಕ್ಷದಲ್ಲಿ ಸ್ನಾನದ ನೀರಿಗೆ ಎರಡು ಹಿಡಿ ಉಪ್ಪನ್ನು ಹಾಕಿ ಅದರಲ್ಲಿ ಸ್ನಾನವಮಾಡಿಸಬೇಕು. ಮಕ್ಕಳಿಗೆ ಸ್ನಾನ ಮಾಡಿಸದೆ ಇರುವದರಿಂದ ಅನೇಕ ಚರ್ಮರೋಗಗಳು ಬರುತ್ತವೆ. ಮೇಲೆ ಹೇಳಿದ ರೀತಿಯಲ್ಲಿ ಮಕ್ಕಳ ಶರೀರವನ್ನು ತೊಳೆಯುತ್ತಿದ್ದರೆ ಮಕ್ಕಳು ಆಯುರಾರೋಗ್ಯ ವುಳ್ಳವುಗಳಾಗುವವು; ರೋಗಗಳು ತಲೆದೋರವು; ನರಗಳು ಬಲವಾಗುವವು; ಶರೀರವು ದೃಢವಾಗುವದು. ಎಲ್ಲಾ ಔಷಧಗಳಿಗಿಂತಲೂ ಸ್ನಾನವೇ ಬಹಳ ಬಲಕಾರಿಯಾದ ಔಷಧವು. ಇದರಿಂದ ಅಕಾಲಮರಣವೂ ಅನಾರೋಗ್ಯವೂ ತಪ್ಪುವವು.

ಹೊಕ್ಕಳು ಕುಯ್ಯುವಾಗ್ಯೆ ಮೆತ್ತಗಿರತಕ್ಕ ಶುಭ್ರವಾದ ಬಟ್ಟೆಯನ್ನು ಒಂದುಧಾರಕ್ಕೆ ಸುತ್ತಿ ಅವನ್ನು ಹೊಕ್ಕಳಿಗೆ ಕಟ್ಟಬೇಕು. ಕೆಲವರು ಬಟ್ಟೆಯನ್ನು ಸ್ವಲ್ಪ ಸುಟ್ಟು ಅವನ್ನು ಧಾರಕ್ಕೆ ಸುತ್ತಿ ಅದನ್ನು ಹೊಕ್ಕಳಿಗೆ ಕಟ್ಟುವರು. ಹೀಗೆ ಮಾಡುವದರಿಂದ ಚರ್ಮಕ್ಕೆ ಬಾಧಕವುಂಟು. ಈ ಧಾರವನ್ನು

ಕಟ್ಟಿಇದ್ದರೂ ರಕ್ತ ಬರುವದಕ್ಕೆ ಉಪಕ್ರಮಿಸಿದರೆ ಆ ಧಾರದ ಮೇಲೆಯೇ ಪ್ರತ್ಯೇಕ ಧಾರಗಳನ್ನು ಸುತ್ತಿ ರಕ್ತ ಬರುವದನ್ನು ನಿಲ್ಲಿಸಬೇಕು. ಹಾಗಿಲ್ಲದಿದ್ದರೆ ಆರೋಗ್ಯ ತಪ್ಪುವದು ಮಾತ್ರವಲ್ಲದೆ ಕೆಲವುವೇಳೆ ಪ್ರಾಣವೇ ಹೋಗುವದು. ಹೀಗೆ ಕಟ್ಟಿದ ಧಾರವು ೬–೭ ದಿನಗಳಲ್ಲಿ ತಾನಾಗಿಯೇ ಬಿದ್ದು ಹೋಗುವದೂ ಉಂಟು, ಕೆಲವುವೇಳೆ ಮೂರುವಾರಗಳವರೆಗೂ ಇರುವದೂ ಉಂಟು. ಆ ಧಾರವು ತಾನೇ ಬೀಳುವವರೆಗೂ ಸುಮ್ಮನಿರಬೇಕು. ಹಾಗಲ್ಲದಿದ್ದರೆ ಮಕ್ಕಳಿಗೆ ಬಹಳ ಹಿಂಸೆಯಾಗುವದು. ಕೆಲವು ಮಕ್ಕಳು ಇದರಿಂದ ಸತ್ತು ಹೋಗುವದೂ ಉಂಟು. ಆ ಹೊಕ್ಕಳ ಧಾರವು ಬಿದ್ದಕೂಡಲೆ ಸ್ವಲ್ಪ ಗಾಯವುನಿಂತರೆ ಅದಕ್ಕೆ ಮೇಣದಿಂದ ಮಾಡಿದ ಪ್ಲಾಸ್ತ್ರಿಯನ್ನು ಸೀಮೇ ಮಾದಿಯ ಮೇಲೆ ಹಾಕಿ ಪ್ರತಿದಿನದಲ್ಲಿಯೂ ಅದನ್ನು ಆ ಗಾಯದಮೇಲೆ ಹಾಕಬೇಕು. ಪ್ರತಿರಾತ್ರಿಯೂ ಹಿಟ್ಟಿನಲ್ಲಿ ಪೋಲ್ಟೀಷ್ ಮಾಡಿ ಕಟ್ಟಬೇಕು.

೫. ಜ್ಯೋತಿಷ.

ಕಂ॥ ಬರೆದಿಹರೆಮ್ಮಯ ಬುಧರೀ । ಧರಣಿಯ ನಾರವಿಯು ಬಿಡದೆ ಸುತ್ತು
ವನೆನುತಂ ॥ ಪರಿಕಿಸಿ ನೋಡಲು ಧರೆಯೇ । ತರಣಿಯ ಬಲವರ್ಪು
ದೆಂದು ಪೇಳ್ವರು ಹೂಣರ್ ॥

ಧರೆ ಸೂರ್ಯನ ಸುತ್ತುವುದೋ । ಖರಕರನೀಧರೆಯ ಸುತ್ತುತಿರ್ಪ
ನೊ ನೋಡಲ್ ॥ ಗುರುಸಂದೇಹಾಸ್ಪದ ಮಿದು ಪರಿಹಾರಕ ಮಾವು
ದಿದಕೆ ಪೇಳ್ವುದು ವಿಬುಧರ್ ॥

ಇದುವರೆಗೆ ಬರೆಯಲ್ಪಟ್ಟ ಪ್ರಕರಣಗಳಲ್ಲಿ ನಾವು ವಾಸಮಾಡುತ್ತಲಿರುವ ಈ ಭೂಗೋಳವು ಸರ್ವತೋವೃತ್ತಮಾಗಿರುವದೆಂದೂ, ಇದರ ಪರಿಧಿಪ್ರಮಾಣವು ಸ್ವಲ್ಪ ಹೆಚ್ಚು ಕಡಿಮೆ ೨೫೦೦೦ ಮೈಲಿಗಳಾಗಿರುವದೆಂದೂ, ಇದು ಬುಗುರಿಯಂತೆ ಘೆರ್ರನೆ ಸುತ್ತುತ್ತಾ ದಿನಕ್ಕೊಂದೊಮ್ಮೆ ಆತ್ಮಪ್ರದಕ್ಷಿಣೆ

ಕರೂ ಕೂಡಿ ಕದ ಮುಚ್ಚಿದಂತೆ.

ಆ ಕಲ್ಮಷವನ್ನು ತೆಗೆದುಹಾಕಬೇಕು. ಹಾಗೆ ಮಾಡದೆ ಅದನ್ನು ಬಿಟ್ಟು ಬಿಟ್ಟರೆ ಆ ಮೇಲೆ ವಿಷಬು ಮೊದಲಾದ ಚರ್ಮರೋಗಗಳೆಲ್ಲಾ ಬರುವವು.

ಪ್ರತಿದಿನವು ಪ್ರಾತಃಕಾಲದಲ್ಲಿ ಮಗುವಿಗೆ ತಲೆಗೂ ಮೈಗೂ ನೀರನ್ನು ಹಾಕಿ ಕಂಕುಳ ಸಂದಿ ಮುಂತಾದ ಯಾವ ಭಾಗದಲ್ಲಿಯೂ ಕೊಳೆಯಿಲ್ಲದಂತೆ ತೊಳೆದು, ಮೃದುವಾಗಿಯೂ ಶುದ್ಧವಾಗಿಯೂ ಇರತಕ್ಕ ಬಟ್ಟೆಗಳಲ್ಲಿ ಮಗುವಿಗೆ ಏನೂ ಹಿಂಸೆಯಾಗದಹಾಗೆ ಚನ್ನಾಗಿ ಒರಸಬೇಕು. ಸ್ನಾನವಾದಕೂಡಲೆ ಕಿವೀರಂಧ್ರಗಳನ್ನು ಸ್ವಲ್ಪವೂ ತ್ಯಾವವಿಲ್ಲದಹಾಗೆ ಒರಸಿ ಒಣಗಿಸಬೇಕು. ಹಾಗಿಲ್ಲದಿದ್ದರೆ ಕರ್ಣೇಂದ್ರಿಯಕ್ಕೆ ಬಾಧಕವಾಗುವದು.

ಸಾಯಂಕಾಲದ ಹೊತ್ತು ಮಕ್ಕಳಿಗೆ ಮೇಲೆ ಹೇಳಿದ ವಿಧಾನದಿಂದ ಕಂಠಸ್ನಾನವನ್ನು ಮಾಡಿಸಬೇಕು. ಮಕ್ಕಳು ಪಾಯಿಖಾನೆಗೆ ಹೋದಾಗೆಲ್ಲಾ ಬಿಸಿನೀರಿನಿಂದಲೂ ಸಾಬೂನಿನಿಂದಲೂ ತೊಳೆಯಬೇಕು. ಎರಡು ತಿಂಗಳಾದಮೇಲೆ ಮಗುವು ದುರ್ಬಲವಾಗಿದ್ದಪಕ್ಷದಲ್ಲಿ ಸ್ನಾನದ ನೀರಿಗೆ ಎರಡು ಹಿಡಿ ಉಪ್ಪನ್ನು ಹಾಕಿ ಅದರಲ್ಲಿ ಸ್ನಾನಮಾಡಿಸಬೇಕು. ಮಕ್ಕಳಿಗೆ ಸ್ನಾನಮಾಡಿಸದೆ ಇರುವದರಿಂದ ಅನೇಕ ಚರ್ಮರೋಗಗಳು ಬರುತ್ತವೆ. ಮೇಲೆ ಹೇಳಿದ ರೀತಿಯಲ್ಲಿ ಮಕ್ಕಳ ಶರೀರವನ್ನು ತೊಳೆಯುತ್ತಿದ್ದರೆ ಮಕ್ಕಳು ಆಯು ರಾರೋಗ್ಯ ವುಳ್ಳವುಗಳಾಗುವವು; ರೋಗಗಳು ತಲೆದೋರವು; ನರಗಳು ಬಲವಾಗುವವು; ಶರೀರವು ದೃಢ ವಾಗುವದು. ಎಲ್ಲಾ ಔಷಧಗಳಿಗಿಂತಲೂ ಸ್ನಾನವೇ ಬಹಳ ಬಲಕಾರಿಯಾದ ಔಷಧವು. ಇದರಿಂದ ಅಕಾಲಮರಣವೂ ಅನಾರೋಗ್ಯವೂ ತಪ್ಪುವವು.

ಹೊಕ್ಕಳು ಕುಯ್ಯುವಾಗ್ಯೆ ಮೆತ್ತಗಿರತಕ್ಕ ಶುಭ್ರವಾದ ಬಟ್ಟೆಯನ್ನು ಒಂದುಧಾರಕ್ಕೆ ಸುತ್ತಿ ಅದನ್ನು ಹೊಕ್ಕಳಿಗೆ ಕಟ್ಟಬೇಕು. ಕೆಲವರು ಬಟ್ಟೆಯನ್ನು ಸ್ವಲ್ಪ ಸುಟ್ಟು ಅದನ್ನು ಧಾರಕ್ಕೆ ಸುತ್ತಿ ಅದನ್ನು ಹೊಕ್ಕಳಿಗೆ ಕಟ್ಟುವರು. ಹೀಗೆ ಮಾಡುವದರಿಂದ ಚರ್ಮಕ್ಕೆ ಬಾಧಕವುಂಟು. ಈ ದಾರವನ್ನು

ಕಟ್ಟಿಇದ್ದರೂ ರಕ್ತ ಒರುವದಕ್ಕೆ ಉಪಕ್ರಮಿಸಿದರೆ ಆ ಧಾರದ ಮೇಲೆಯೇ ಪ್ರತ್ಯೇಕ ಧಾರಗಳನ್ನು ಸುತ್ತಿ ರಕ್ತ ಒರುವದನ್ನು ನಿಲ್ಲಿಸಬೇಕು. ಹಾಗಿಲ್ಲ ದಿದ್ದರೆ ಆರೋಗ್ಯ ತಪ್ಪುವದು ಮಾತ್ರವಲ್ಲದೆ ಕೆಲವುವೇಳೆ ಪ್ರಾಣವೇ ಹೋಗುವದು. ಹೀಗೆ ಕಟ್ಟಿದ ಧಾರವು ೭—೩ ದಿನಗಳಲ್ಲಿ ತಾನಾಗಿಯೇ ಬಿದ್ದು ಹೋಗುವದೂ ಉಂಟು, ಕೆಲವುವೇಳೆ ಮೂರುವಾರಗಳವರಿಗೂ ಇರುವದೂ ಉಂಟು. ಆ ಧಾರವು ತಾನೇ ಬೀಳುವವರಿಗೂ ಸುಮ್ಮನಿರಬೇಕು. ಹಾಗಿ ಲ್ಲದಿದ್ದರೆ ಮಕ್ಕಳಿಗೆ ಬಹಳ ಹಿಂಸೆಯಾಗುವದು. ಕೆಲವು ಮಕ್ಕಳು ಇದ ರಿಂದ ಸತ್ತು ಹೋಗುವದೂ ಉಂಟು. ಆ ಹೊಕ್ಕಳ ಧಾರವು ಬಿದ್ದ ಕೂಡಲೆ ಸ್ವಲ್ಪ ಗಾಯವುನಿಂತರೆ ಅದಕ್ಕೆ ಮೇಣದಿಂದ ಮಾಡಿದ ಪ್ಲಾಸ್ತ್ರಿಯನ್ನು ಸೀಮೇ ದೂದಿಯು ಮೇಲೆ ಹಾಕಿ ಪ್ರತಿದಿನದಲ್ಲಿಯೂ ಅದನ್ನು ಆ ಗಾಯದಮೇಲೆ ಹಾಕಬೇಕು. ಪ್ರತಿರಾತ್ರಿಯೂ ಹಿಟ್ಟಿನಲ್ಲಿ ಪೋಲ್ಟೀಸ್ ಮಾಡಿ ಕಟ್ಟಬೇಕು.

೫. ಜ್ಯೋತಿಷ.

ಕಂ॥ ಬರೆದಿಹರೆಮ್ಮಯ ಬುಧರೀ। ಧರಣಿಯು ನಾರವಿಯು ಬಿಡದೆ ಸುತ್ತು
ವನೆನುತಂ ॥ ಪರಿಕಿಸಿ ನೋಡಲು ಧರೆಯೇ। ತರಣಿಯ ಬಲವಪ್ಪು
ದೆಂದು ಪೇಳ್ವರು ಹೂಣರ್ ॥

ಧರೆ ಸೂರ್ಯನ ಸುತ್ತುವುದೋ। ಖರಕರನೀಧರೆಯ ಸುತ್ತುತಿರ್ಪ
ನೊ ನೋಡಲ್ ॥ ಗುರುಸಂದೇಹಾಸ್ಪದ ಮಿದು ಪರಿಹಾರಕ ಮಾವು
ದಿದಕೆ ಪೇಳ್ವುದು ವಿಬುಧರ್ ॥

ಇದುವರಿಗೆ ಬರೆಯಲ್ಪಟ್ಟ ಪ್ರಕರಣಗಳಲ್ಲಿ ನಾವು ವಾಸಮಾಡುತ್ತ ಲಿರುವ ಈ ಭೂಗೋಳವು ಸರ್ವತೋವೃತ್ತಮಾಗಿರುವದೆಂದೂ, ಇದರ ಪರಿ ಧಿಪ್ರಮಾಣವು ಸ್ವಲ್ಪ ಹೆಚ್ಚುಕಡಿಮೆ ೨೫೦೦೦ ಮೈಲಿಗಳಾಗಿರುವದೆಂದೂ, ಇದು ಬುಗುರಿಯಂತೆ ಘರ್ರನೆ ಸುತ್ತುತ್ತಾ ದಿನಕ್ಕೊಂದೊಮ್ಮೆ ಆತ್ಮಪ್ರದಕ್ಷಿಣೆ

ಯನ್ನು ಮಾಡುತ್ತಾ ಇರುವುದೆಂದೂ ಸಂದೇಹಕ್ಕೆ ಆಸ್ಪದವಿಲ್ಲದಂತೆ ಸ್ಪಷ್ಟವಾಗಿ ತೋರಿಸಿದೆವು. ಇದುವರೆಗೂ ಅಷ್ಟವಿಧ ಜ್ಯೋತಿಷ ಸಿದ್ಧಾಂತಗಾರರಾದ ನಮ್ಮ ಆರ್ಯರ ವಾಕ್ಯಗಳೂ ಸಕಲ ಯಂತ್ರತಂತ್ರ ಸಹಾಯಯುಕ್ತರಾದ ನವೀನಹೂಣಜ್ಯೋತಿಷಸಿದ್ಧಾಂತಿಗಳ ವಾಕ್ಯಗಳೂ ಒಂದೇ ಆಗಿದ್ದವೆಂಬದು ಪ್ರತ್ಯಕ್ಷವು. ಈಗ ಹೇಳುವ ವಿಷಯದಲ್ಲಿ ಇಂಗ್ಲೇಷರೂ ನಮ್ಮ ಆರ್ಯರೂ ಬೇರೆಬೇರೆ ಮಾರ್ಗಗಳನ್ನು ಹಿಡಿದಿರುವರಾಗಿರುವರು. ಹ್ಯಾಗೆಂದರೆ—"ಬ್ರಹ್ಮಾಂಡಮಧ್ಯಸ್ಥನಭೋಂತರಾಳೇ ಪೂರ್ವೋಕ್ತಸಂಖ್ಯಾಸಹಿತಸ್ಸುವೃತ್ತಃ | ಆಧಾರಶಕ್ತ್ಯಾ ಧೃತ ಏವ ಧಾತುಃ ಗೋಳಸ್ಸದಾ ತಿಷ್ಠತಿ ಭೂತಧಾತ್ರ್ಯಾಃ ||" ಎಂಬ ದೈವಜ್ಞಾಭರಣದಲ್ಲಿನ ಶ್ಲೋಕರೀತಿಯಾಗಿಯೂ, "ಅಯಸ್ಕಾಂತಾಂತಸ್ಥೋ ಲೋಹ ಇವಾವಸ್ಥಿತೋ ವೃತ್ತಃ |" ಎಂಬ ವರಾಹಮಿಹಿರವಚನ ರೀತಿಯಾಗಿಯೂ, ಈ ಭೂಗೋಳವು ಬ್ರಹ್ಮಾಂಡ ಕಟಾಹದ ಮಧ್ಯಭಾಗದಲ್ಲಿ ಅಯಸ್ಕಾಂತಗಳಿಂದ ಆಕರ್ಷಿಸಲ್ಪಟ್ಟ ಅಯೋಗೋಳದಂತೆ ನಿಶ್ಚಲವಾಗಿರುವದೆಂದೂ, "ಯಥೋಷ್ಣತಾರ್ಕಾನಲಯೋಶ್ಚ ಶೀತತಾ ವಿಧೌ ಧೃತಿಃ ಖೇ ಕಠಿನತ್ವಮಶ್ಮನಿ | ಗುರುಚ್ಚಲೋ ಭೂರಚಲಾಸ್ವಭಾವತೋ ಯತೋವಿಚಿತ್ರಾ ಬತ ವಸ್ತುವಸ್ತಯಃ ||" ಯೆಂಬ ಭಾಸ್ಕರಾಚಾರ್ಯರ ವಚನರೀತ್ಯಾ ಈ ಭೂಗೋಳಕ್ಕೆ ಯಾವ ವಿಧ ಭ್ರಮಣೆಯೂ ಇಲ್ಲವೆಂದೂ, "ಅಯನಾದಯನಂ ಚೈವ ಕಕ್ಷ್ಯಾ ತಿರ್ಯಕ್ ಸ್ಥಿತಾ ಪರಾ| ಕ್ರಾಂತಿ ಸಂಜ್ಞಾತಯಾ ಸೂರ್ಯಸ್ಸದಾ ಪರ್ಯೇತಿ ಭಾಸಯನ್ "ಎಂಬ ಸೂರ್ಯಸಿದ್ಧಾಂತ ವಾಕ್ಯರೀತ್ಯಾ ಈ ಗೋಳವನ್ನು ಸೂರ್ಯನು ಸಂವತ್ಸರಕ್ಕೊಂದೊಮ್ಮೆ ಸುತ್ತುತ್ತಲಿರುವದರಿಂದ ಋತುಭೇದಗಳುಂಟಾಗುವವೆಂದೂ ನಮ್ಮ ಆರ್ಯರಾದ ಜ್ಯೋತಿಷಸಿದ್ಧಾಂತಿಗಳೆಲ್ಲಾ ಒಂದೇ ಮುಖವಾಗಿ ಹೇಳುತ್ತಿರುವರು. ಇಂಗ್ಲಿಷ್ ಜ್ಯೋತಿಷ ಸಿದ್ಧಾಂತಿಗಳಾದರೋ ಈ ಭೂಗೋಳವು ಬ್ರಹ್ಮಾಂಡ ಕಟಾಹದ ಒಂದು ಮೂಲೆಯಲ್ಲಿರುವದೆಂದೂ, ಭೂಮಿಯು ದಿನೇದಿನೇ ಆತ್ಮಪ್ರದಕ್ಷಿಣೆಯನ್ನು ಮಾಡುತ್ತಾ ಸಂವತ್ಸರಕ್ಕೊಂದುಸಾರಿ ಸೂರ್ಯನನ್ನು ಸುತ್ತಿ ಬರುವದರಿಂದ ಋತು ಭೇದಗಳುಂಟಾಗುವವೆಂದೂ

ನಿಷ್ಕರ್ಷೆ ಯಾಗಿಹೇಳಿರುವರು. ಹೀಗೆ ಪರಸ್ಪರ ವಿರೋಧಗಳಾಗಿರುವ ವಾಕ್ಯಗಳಲ್ಲಿ ಸಿದ್ಧಾಂತವಿದೆಂದು ನಿಷ್ಕರ್ಷೆ ಮಾಡಲ್ಪಟ್ಟಿರುವ ರೀತಿಯನ್ನು ಗ್ರಹಿಸುವದು ಗಣಿತಜ್ಞರಿಗಲ್ಲದೆ ಇತರರಿಗೆ ಬಹಳ ಕಷ್ಟತರವಾಗಿರುವದು. ಆದರೂ ಸಾಮಾನ್ಯರಿಗೂ ತಿಳಿಯುವಂತೆ ಸರಳವಾಗಿ ಬರೆಯಲ್ಪಟ್ಟಿರುವ ಗ್ರಂಥಗಳು ಅನೇಕವಿರುವದರಿಂದ ಆಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ಕೆಲವು ವಿಷಯಗಳನ್ನು ಮಾತ್ರ ಮುಂದೆ ಬರೆಯುವವು.

ಗ್ರೀಷ್ಮಋತುವಿಗೂ ಹೇಮಂತಋತುವಿಗೂ ಇರುವ ವ್ಯತ್ಯಾಸವು ಸಕಲರಿಗೂ ಅನುಭವಪೂರ್ವವಷ್ಟೆ. ಗ್ರೀಷ್ಮಕಾಲದಲ್ಲಿ ಸೂರ್ಯನು ಬಹಳಹೊತ್ತು ಕ್ಷಿತಿಜದಮೇಲಿರುವನು, ಹೇಮಂತದಲ್ಲಿ ಬಹಳಬೇಗ ಕ್ಷಿತಿಜದಕೆಳಕ್ಕೆ ಹೋಗಿಬಿಡುವನು ; ಅಂದರೆ ಅಹಸ್ಸು ಗ್ರೀಷ್ಮಕಾಲದಲ್ಲಿ ಹೆಚ್ಚಾಗಿಯೂ, ಹೇಮಂತದಲ್ಲಿ ಕಡಿಮೆಯಾಗಿಯೂ ಇರುವದು. ಗ್ರೀಷ್ಮಕಾಲದಲ್ಲಿ ಝಳಕ್ಕೆ ತಡಿಯಲಾರದೆ ಜನರು ನೆರಳನ್ನೇ ಬಯಸುತ್ತಿರುವರು, ಹೇಮಂತದಲ್ಲಿ ಛಳಿಗೆ ತಡೆಯಲಾರದೆ ಬಿಸಿಲನ್ನು ಬಯಸುವರು. ಗ್ರೀಷ್ಮಕಾಲದಲ್ಲಿ ಬರಬರುತ್ತಾ ಸೂರ್ಯನು ಉಚ್ಚಸ್ಥಾನಗತನಾಗುವನು, ಹೇಮಂತದಲ್ಲಿ ಸೂರ್ಯನು ವಾರೆಯಾಗಿ ಅಂತರಿಕ್ಷದಲ್ಲಿ ಸಂಚರಿಸುವನು. ಗ್ರೀಷ್ಮ ಹೇಮಂತಗಳಲ್ಲಿ ಸೂರ್ಯನಿರತಕ್ಕ ಪ್ರದೇಶಗಳು ಬೇರೆಬೇರೆಯಾಗಿರುವವು. ನಾವು ಪೂರ್ವಾಭಿಮುಖವಾಗಿ ನಿಂತು ನೋಡಲು, ಸೂರ್ಯನು ಗ್ರೀಷ್ಮದಲ್ಲಿ ಉತ್ತರದಕಡೆಗಾಗಿರುವನು, ಹೇಮಂತದಲ್ಲಿ ದಕ್ಷಿಣದಕಡೆಗಾಗಿರುವನು ; ಅಂದರೆ ಸೂರ್ಯನು ಗ್ರೀಷ್ಮದಲ್ಲಿ ಉತ್ತರಮೇರು ಸಮೀಪಗತನಾಗಿಯೂ ಹೇಮಂತದಲ್ಲಿ ದಕ್ಷಿಣಮೇರುಸಮೀಪಗತನಾಗಿಯೂ ಇರುವನು. ಹೀಗಾಗುವದಕ್ಕೆ ಕಾರಣವೇನು?

ಇದಲ್ಲದೆ ಪ್ರತಿತಿಂಗಳಲ್ಲಿಯೂ ಪೂರ್ಣಿಮಾದಿವಸ ರಾತ್ರಿ ೧೦ ಘಂಟೇ ವೇಳೆಯಲ್ಲಿ ನಕ್ಷತ್ರಗಳನ್ನು ನೋಡುತ್ತಾ ಬಂದಲ್ಲಿ ಕೆಲವು ವಿಶೇಷಗಳು ತಿಳಿಯುವವು. ಚೈತ್ರಶುದ್ಧ ಪೂರ್ಣಿಮಾ ರಾತ್ರಿ ೧೦ ಘಂಟೇವೇಳೆಯಲ್ಲಿ ಆಕಾಶವನ್ನು ನೋಡಿದರೆ ಚಿತ್ತಾನಕ್ಷತ್ರವು ಸರಿಯಾಗಿ ಉಚ್ಚಕ್ಕೆ ಬಂದಿರುವದು ; ವೈಶಾಖದಲ್ಲಿ ಅದೇ ದಿನ ೮ನೇ ವೇಳೆಯಲ್ಲಿ ಚಿತ್ತಾನಕ್ಷತ್ರಕ್ಕೆ ಪೂರ್ವದ

ಕಡೆಗಾಗಿರುವ ವಿಶಾಖಾನಕ್ಷತ್ರವು ಉಚ್ಚಕ್ಕೆ ಬಂದಿರುವದು ; ಚಿತ್ತೆಯು ಪಶ್ಚಿಮಕ್ಕೆ ಹೋಗಿರುವದು; ಜ್ಯೇಷ್ಠದಲ್ಲಿ ಜ್ಯೇಷ್ಠಾನಕ್ಷತ್ರವೂ ಆಷಾಢಮಾಸದಲ್ಲಿ ಪೂರ್ವಾಷಾಢವೂ ಭಾದ್ರಪದದಲ್ಲಿ ಪೂರ್ವಾಭಾದ್ರೆಯೂ ಆಶ್ವೀಜದಲ್ಲಿ ಅಶ್ವಿನಿಯೂ ಕಾರ್ತೀಕದಲ್ಲಿ ಕೃತ್ತಿಕೆಯೂ ಮಾರ್ಗಶಿರದಲ್ಲಿ ಮೃಗಶಿರೆಯೂ ಪುಷ್ಯದಲ್ಲಿ ಪುಷ್ಯಮಿಯೂ ಮಾಘದಲ್ಲಿ ಮಘೆಯೂ ಫಾಲ್ಗುಣದಲ್ಲಿ ಉತ್ತರೆಯೂ ಪುನಹಾ ಚೈತ್ರಶುದ್ಧ ಪೂರ್ಣಿಮಾದಿನ ರಾತ್ರಿ ಚಿತ್ತೆಯೂ ಉಚ್ಚಕ್ಕೆ ಬರುವವು. ಹೀಗೆ ತಿಂಗಳತಿಂಗಳಿಗೂ ಬಂದೇನಕ್ಷತ್ರ, ಆ ವೇಳೆಯಲ್ಲಿ ಉಚ್ಚದಲ್ಲಿರದೆ ಪೂರ್ವದಕಡೆಗಾಗಿರುವ ನಕ್ಷತ್ರಗಳು ಉಚ್ಚಕ್ಕೆ ಬರುತ್ತಾ ಹೀಗೆ ಉಚ್ಚಕ್ಕೆ ಬಂದವು ಬರಬರುತ್ತಾ ಪಶ್ಚಿಮದಕಡೆಗಾಗಿಯೂ ಸಂಚರಿಸುವಂತೆ ಕಾಣಬರುವವು.

ಹೀಗೆ ಆಗುವದು ನಕ್ಷತ್ರ ಭ್ರಮಣೆಯಿಂದಲೋ ಇಲ್ಲದೆ ಸೂರ್ಯಗತಿಯಿಂದಲೋ ಅಥವಾ ಭೂಭ್ರಮಣೆಯಿಂದಲೋ ಎಂಬ ಸಂಶಯವನ್ನು ಮುಂದಕ್ಕೆ ತಿಳಿಸುವೆವು. ಈಗ ಕೆಲವು ನಕ್ಷತ್ರಗಳ ನಾಮಧೇಯವನ್ನೂ ಅವುಗಳ ರೂಪವನ್ನೂ ತಿಳಿಸುವೆವು. ಕೋ॥ ಕಂ॥ ಮೆಂ.॥

೬. ಮದುವೆ.

ಸ್ತ್ರೀಪುರುಷರು ಮಾತಾಪಿತೃಗಳಾಗುವದಕ್ಕೆ ಸರಿಯಾದ ಕಾಲವು ಸ್ತ್ರೀಯರಿಗೆ ೨೪ ವರ್ಷವೆಂಬದಾಗಿಯೂ, ಪುರುಷರಿಗೆ ೩೦ ವರ್ಷವೆಂಬದಾಗಿಯೂ ವೈದ್ಯಶಾಸ್ತ್ರನಿಬಂಧನೆ ಇದೆಯೆಂದು ೨ನೇ ಸಂಪುಟದ ೧ನೇ ಸಂಚಿಕೆಯಲ್ಲಿ ಹೇಳಿದ್ದೇವಷ್ಟೆ. ಈ ವೈದ್ಯಶಾಸ್ತ್ರ ಸಿದ್ಧಾಂತವನ್ನು ಪ್ರಾಯಶಃ ಯೂರೋಪ್ ಮತ್ತು ಅಮೆರಿಕಾಖಂಡದಲ್ಲಿನಜನರು ಅನುಸರಿಸುತ್ತಾರೆ. ಹೀಗೆ ನಡೆಯತಕ್ಕ ಸರ್ವರೂ ಅವರ ಮಕ್ಕಳೂ ಕೂಡ ಒಳ್ಳೇ ಆರೋಗ್ಯಭಾಗ್ಯವನ್ನೂ ದಾರ್ಢ್ಯವನ್ನೂ ಪಡೆದು ಇರುತ್ತಾರೆ. ನಮ್ಮ ದೇಶವು ಉಷ್ಣರಾಜ್ಯವಾದ್ದರಿಂದ ವೈದ್ಯಶಾಸ್ತ್ರ ನಿಬಂಧನೆಮೇರೆಗೆ ವಿವಾಹವಾಗತಕ್ಕ ವಯಸ್ಸು

ಕಲ್ಲಪ್ಪನೂ ಗುಂಡಪ್ಪನೂ ಕೂಡಿ ಮೋಸಪ್ಪ ಹುಡಿ.

ಗಿಂತ ಸ್ತ್ರೀಪುರುಷರಿಬ್ಬರಿಗೂ ೪ ವರ್ಷ ಕಡಮೆಯಾಗಿರುವಾಗಲೇ. ಅಂದರೆ ಸ್ತ್ರೀಯರು ೨೦ ವರ್ಷಕ್ಕೂ ಪುರುಷರು ೨೫ ವರ್ಷಕ್ಕೂ ಸಂಸಾರ ಧರ್ಮಕ್ಕೆ ಯೋಗ್ಯರಾಗುವರೆಂದು ಈ ದೇಶದ ವೈದ್ಯಶಾಸ್ತ್ರದಲ್ಲಿ ಅನುಭವವುಳ್ಳ ಅನೇಕ ವಿದ್ವಾಂಸರು ಹೇಳುತ್ತಾರೆ. ಬಾಲ್ಯದಲ್ಲಿಯೇ ಮದುವೆಯಾದರೂ ಈ ವೈದ್ಯಶಾಸ್ತ್ರೋಕ್ತವಾದ ವಯಸ್ಸು ಆಗುವವರೆಗೂ ಸಂಸಾರ ಧರ್ಮದಲ್ಲಿ ಪ್ರವರ್ತಿಸದೆ ಇದ್ದರೆ ನಮ್ಮ ಜನಗಳೂ ಕೂಡ ಯೂರೋಪ್ ಮತ್ತು ಅಮೆರಿಕಾ ಖಂಡದವರ ಹಾಗೆ ಆರೋಗ್ಯಭಾಗ್ಯವನ್ನೂ ದಾರ್ಢ್ಯವನ್ನೂ ಇದರ ಸಹಾಯದಿಂದ ಸಕಲ ಸಂಪತ್ತುಗಳನ್ನೂ ಹೊಂದಬಹುದು. ಲೋಕದಲ್ಲಿ ವಿವಾಹದಿಂದ ದಂಪತಿಗಳಿಗೆ ಯಾವಜ್ಜೀವವೂ ಸುಖವಾಗಿ ಇರುವದು ಮುಖ್ಯವೇ ಹೊರತು ಅನ್ಯಥಾ ಇಲ್ಲ. ಆದರೆ ಅನೇಕರು ದ್ರವ್ಯವನ್ನೂ ಪದವಿಯನ್ನೂ ಮುಖ್ಯವಾಗಿ ಎಣಿಸುತ್ತಾರೆ. ಇಂಥಾವರು ಕ್ರಮೇಣ ಪರಸ್ಪರಾನುರಾಗವನ್ನೂ ಸೌಖ್ಯವನ್ನೂ ಕೂಡ ಕಳೆದುಕೊಳ್ಳುವರು. ಬೇರೆ ಬೇರೆ ಜನಾಂಗಗಳಲ್ಲಿ ವಿವಾಹದ ಕ್ರಮಗಳು ಚಿತ್ರವಿಚಿತ್ರವಾಗಿರುವವು. ಅವುಗಳನ್ನು ಈ ಕೆಳಗೆ ಸಂಕ್ಷೇಪವಾಗಿ ಹೇಳುತ್ತೇವೆ.

ಅಸಿರಿಯಾ ದೇಶದ ಜನಗಳು ವಿವಾಹಕ್ಕೆ ಬದಗಿದ ಹುಡುಗಿಯರನ್ನೆಲ್ಲಾ ಒಂದುಕಡೆ ಸೇರಿಸಿ, ಅದರಲ್ಲಿ ಅತ್ಯಂತ ಸುಂದರಿಯರಾದವರನ್ನು ಹರಾಜು ಹಾಕುತ್ತಿದ್ದರು. ಧನಿಕರೆಲ್ಲರೂ ಇವರನ್ನು ಕೊಂಡುಕೊಳ್ಳುವದಕ್ಕೋಸ್ಕರ ಪೋಟಾಪೋಟಿ ಮಾಡುತ್ತಿದ್ದರು. ಆದ್ದರಿಂದಲೇ ಸುಂದರಿಯಾದ ಪ್ರತಿಯೊಬ್ಬ ಸ್ತ್ರೀಯ ಪ್ರೀತ್ರಿಯು ಲಕ್ಷಾಂತರರೂಪಾಯಿ ಆಗುತ್ತಿತ್ತು. ಹೀಗೆ ಸುಂದರಿಯರನ್ನೆಲ್ಲಾ ಖರೀದಿಮಾಡಿ, ಅದರಿಂದ ಬಂದ ಹಣವನ್ನು ಸರಕಾರದವರು ತಮ್ಮ ಬಳಿಯಲ್ಲಿ ಇಟ್ಟುಕೊಂಡು ಕುರೂಪಿಗಳಾದವರನ್ನು ಅವರ ಜೊತೆಯಲ್ಲಿ ಎಷ್ಟು ಹಣ ಕೊಟ್ಟರೆ ಮದುವೆ ಮಾಡಿಕೊಳ್ಳುತ್ತೀರಿ ಎಂಬದಾಗಿ ಹರಾಜು ಹಾಕುತ್ತಿದ್ದರು. ಅವರಲ್ಲಿ ಎಲ್ಲರಿಗಿಂತಲೂ ಕಡಮೆಯಾಗಿ ಯಾವನು ಕೇಳುತ್ತಿದ್ದನೋ ಅವನಿಗೆ ಅವಳನ್ನು ಆ ಹಣದೊಂದಿಗೆ ಒಪ್ಪಿಸುತ್ತಿದ್ದರು. ಈ ವಿಧಾನದಿಂದ ಕುರೂಪಿಗಳಿಗೂ ರೂಪಿಷ್ಠರಿಗೂ ಸಹ ಗಂಡಂದಿರು

To be Continued

in

NEXT Roll.

To be Continued
in
NEXT Roll.

END

END